ಪರಿವಿಡಿ [Content]:

## ಬಿ. ಎ. ಐದನೇ ಸೆಮಿಸ್ಟರಿನ ರಾಜ್ಯಶಾಸ್ತ್ರ ವಿಷಯದ

# ತೌಲನಿಕ ಸರ್ಕಾರ ಮತ್ತು ರಾಜಕೀಯ

# [Comparative Government and Politics]

ಎಂಬ ಶಿರ್ಷಿಕೆಯುಳ್ಳ ಡಿ. ಎಸ್. ಸಿ. ಸಿ. 10 ಪತ್ರಿಕೆಯ ಪಠ್ಯ ವಸ್ತು:

ಅಧ್ಯಾಯ 1: ತೌಲನಿಕ ಸರ್ಕಾರ ಮತ್ತು ರಾಜಕೀಯ

[Comparative Government and Politics]:

[A.] ತೌಲನಿಕ ಸರ್ಕಾರ ಮತ್ತು ರಾಜಕೀಯದ ಅರ್ಥ.

[B.] ತೌಲನಿಕ ಸರ್ಕಾರ ಮತ್ತು ರಾಜಕೀಯದ ಸ್ವರೂಪ.

[C.] ತೌಲನಿಕ ಸರ್ಕಾರ ಮತ್ತು ರಾಜಕೀಯದ ವ್ಯಾಪ್ತಿ.

[D.] ತೌಲನಿಕ ಸರ್ಕಾರ ಮತ್ತು ರಾಜಕೀಯದ ಮಹತ್ವ.

ಮಾದರಿ ಪ್ರಶ್ನೆಗಳು.

ಅಧ್ಯಾಯ 2: ತೌಲನಿಕ ಸರ್ಕಾರ ಮತ್ತು ರಾಜಕೀಯದ ಅಧ್ಯಯನ ವಿಧಾನಗಳು

[Approaches to the Study of Comparative Government and Politics]:

[I.] ಸಾಂಪ್ರದಾಯಿಕ ವಿಧಾನಗಳು:

A. ತತ್ವಶಾಸ್ತ್ರೀಯ ವಿಧಾನ. B. ಐತಿಹಾಸಿಕ ವಿಧಾನ.

C. ಕಾನೂನಾತ್ಮಕ ವಿಧಾನ. D. ಸಾಂಸ್ಥಿಕ ವಿಧಾನ.

[II.] ಆಧುನಿಕ ವಿಧಾನಗಳು:

A. ವ್ಯವಸ್ಥಾ ವಿಧಾನ. B. ರಚನಾತ್ಮಕ ಹಾಗೂ ಕಾರ್ಯಾತ್ಮಕ ವಿಧಾನ.

C. ಸಂಪರ್ಕ ವಿಧಾನ. D. ನಿರ್ಧಾರ ಕೈಗೊಳ್ಳುವಿಕೆಯ ವಿಧಾನ.

ಮಾದರಿ ಪ್ರಶ್ನೆಗಳು.

ಅಧ್ಯಾಯ 3: ಸರ್ಕಾರ ಮತ್ತು ರಾಜಕೀಯದ ಪ್ರಕಾರಗಳು

[Types of Government and Politics]:

[I.] ಸಂಸದೀಯ ಸರ್ಕಾರ:

A. ಸಂಸದೀಯ ಸರ್ಕಾರದ ಅರ್ಥ

B. ಸಂಸದೀಯ ಸರ್ಕಾರದ ಲಕ್ಷಣಗಳು.

[II.] ಅಧ್ಯಕ್ಷೀಯ ಸರ್ಕಾರ:

A. ಅಧ್ಯಕ್ಷೀಯ ಸರ್ಕಾರದ ಅರ್ಥ. B. ಅಧ್ಯಕ್ಷೀಯ ಸರ್ಕಾರದ ಲಕ್ಷಣಗಳು.

[III.] ಏಕಾತ್ಮಕ ಸರ್ಕಾರ:

A. ಏಕಾತ್ಮಕ ಸರ್ಕಾರದ ಅರ್ಥ B. ಏಕಾತ್ಮಕ ಸರ್ಕಾರದ ಲಕ್ಷಣಗಳು.

[IV.] ಸಂಯುಕ್ತ ಸರ್ಕಾರ:

A. ಸಂಯುಕ್ತ ಸರ್ಕಾರದ ಅರ್ಥ. B. ಸಂಯುಕ್ತ ಸರ್ಕಾರದ ಲಕ್ಷಣಗಳು

ಮಾದರಿ ಪ್ರಶ್ನೆಗಳು.

ಅಧ್ಯಾಯ 4: ಪ್ರಾತಿನಿಧ್ಯದ ವಿಧಾನ
[Method of Representation]:

[I.] ಪ್ರತ್ಯಕ್ಷ ಪ್ರಾತಿನಿಧ್ಯ ವಿಧಾನ:

A. ಪ್ರತ್ಯಕ್ಷ ಪ್ರಾತಿನಿಧ್ಯದ ಅರ್ಥ. B. ಪ್ರತ್ಯಕ್ಷ ಪ್ರಾತಿನಿಧ್ಯದ ಸಾಧನಗಳು.

C. ಪ್ರತ್ಯಕ್ಷ ಪ್ರಾತಿನಿಧ್ಯದ ಗುಣಾವಗುಣಗಳು.

[II.] ಪರೋಕ್ಷ ಪ್ರಾತಿನಿಧ್ಯ ವಿಧಾನ:

A. ಪರೋಕ್ಷ ಪ್ರಾತಿನಿಧ್ಯದ ಅರ್ಥ

B. ಪರೋಕ್ಷ ಪ್ರಾತಿನಿಧ್ಯದ ಗುಣಾವಗುಣಗಳು.

[III.] ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನ:

A. ಪ್ರಮಾಣಾನುಗುಣ ಪ್ರಾತಿನಿಧ್ಯದ ಅರ್ಥ

B. ಪ್ರಮಾಣಾನುಗುಣ ಪ್ರಾತಿನಿಧ್ಯದ ಗುಣಾವಗುಣಗಳು.

[IV.] ವೃತ್ತಿಪರ ಅಥವಾ ಕಾರ್ಯಾತ್ಮಕ ಪ್ರಾತಿನಿಧ್ಯ ವಿಧಾನ:

A. ಕಾರ್ಯಾತ್ಮಕ ಪ್ರಾತಿನಿಧ್ಯದ ಅರ್ಥ.

B. ಕಾರ್ಯಾತ್ಮಕ ಪ್ರಾತಿನಿಧ್ಯದ ಗುಣಾವಗುಣಗಳು.

ಮಾದರಿ ಪ್ರಶ್ನೆಗಳು.

ಅಧ್ಯಾಯ 5: ಸಂವಿಧಾನಾತ್ಮಕತೆ [Constitutionalism]:

A. ಸಂವಿಧಾನಾತ್ಮಕತೆಯ ಅರ್ಥ. B. ಸಂವಿಧಾನಾತ್ಮಕತೆಯ ತತ್ವಗಳು.

C. ಸಂವಿಧಾನಾತ್ಮಕತೆಯ ನಿರೀಕ್ಷೆಗಳು.

ಮಾದರಿ ಪ್ರಶ್ನೆಗಳು.



ಅಧ್ಯಾಯ 6: ರಾಜಕೀಯ ಪಕ್ಷಗಳು ಮತ್ತು ಒತ್ತಡ ಗುಂಪುಗಳು
[Political Party and Pressure Groups]:

[I.] ರಾಜಕೀಯ ಪಕ್ಷಗಳು:

A. ರಾಜಕೀಯ ಪಕ್ಷಗಳ ಅರ್ಥ ಮತ್ತು ವ್ಯಾಖ್ಯೆಗಳು.

B. ರಾಜಕೀಯ ಪಕ್ಷಗಳ ವರ್ಗೀಕರಣ.

[II.] ಒತ್ತಡ ಗುಂಪುಗಳು:

A. ಒತ್ತಡ ಗುಂಪುಗಳ ಅರ್ಥ. B. ಒತ್ತಡ ಗುಂಪುಗಳ ಲಕ್ಷಣಗಳು.

C. ಒತ್ತಡ ಗುಂಪುಗಳ ಪಾತ್ರ.

ಮಾದರಿ ಪ್ರಶ್ನೆಗಳು:

ಅಧ್ಯಾಯ 7: ರಾಜಕೀಯ ಪ್ರಕ್ರಿಯೆ [Political Process]:

I] ರಾಜಕೀಯ ಸಾಮಾಜೀಕರಣ:

A. ರಾಜಕೀಯ ಸಾಮಾಜೀಕರಣದ ಅರ್ಥ.

B. ರಾಜಕೀಯ ಸಾಮಾಜೀಕರಣದ ನಿಯೋಗಿಗಳು.

[II.] ರಾಜಕೀಯ ಸಂಸ್ಕೃತಿ:

A. ರಾಜಕೀಯ ಸಂಸ್ಕೃತಿಯ ಅರ್ಥ.

B. ರಾಜಕೀಯ ಸಂಸ್ಕೃತಿಯ ಪ್ರಕಾರಗಳು.

[III.] ರಾಜಕೀಯ ಪ್ರಾತಿನಿಧ್ಯ:

A. ರಾಜಕೀಯ ಪ್ರಾತಿನಿಧ್ಯದ ಅರ್ಥ.

B. ರಾಜಕೀಯ ಪ್ರಾತಿನಿಧ್ಯದ ಪ್ರಕಾರಗಳು.

ಮಾದರಿ ಪ್ರಶ್ನೆಗಳು.

ಅಧ್ಯಾಯ 8: ಶಾಸಕಾಂಗ [Legislature]:

[I.] ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್ಸಿನ ರಚನೆ ಮತ್ತು ಅಧಿಕಾರ ಕಾರ್ಯಗಳು:

A. ಪ್ರತಿನಿಧಿಗಳ ಸಭೆಯ ರಚನೆ.

B. ಪ್ರತಿನಿಧಿಗಳ ಸಭೆಯ ಅಧಿಕಾರ ಕಾರ್ಯಗಳು.

C. ಸೆನೆಟ್‌ನ ರಚನೆ.

D. ಸೆನೆಟ್‌ನ ಅಧಿಕಾರ ಕಾರ್ಯಗಳು.

[II.] ಬ್ರಿಟಿಷ್ ಸಂಸತ್ತಿನ ರಚನೆ ಮತ್ತು ಅಧಿಕಾರ ಕಾರ್ಯಗಳು:

A. ಸಾಮಾನ್ಯರ ಸದನದ ರಚನೆ.

B. ಸಾಮಾನ್ಯರ ಸಭೆಯ ಅಧಿಕಾರ ಕಾರ್ಯಗಳು.

C. ಶ್ರೀಮಂತರ ಸದನದ ರಚನೆ.

D. ಶ್ರೀಮಂತರ ಸಭೆಯ ಅಧಿಕಾರ ಕಾರ್ಯಗಳು.

[III.] ಚೀನಾದ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ರಚನೆ ಮತ್ತು ಅಧಿಕಾರ ಕಾರ್ಯಗಳು:

A. ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ರಚನೆ.

B. ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಅಧಿಕಾರ ಕಾರ್ಯಗಳು.

ಮಾದರಿ ಪ್ರಶ್ನೆಗಳು.

ಅಧ್ಯಾಯ 9: ಕಾರ್ಯಾಂಗ [Executive]:

[I.] ಅಮೇರಿಕಾದ ಕಾರ್ಯಾಂಗ: ಚುನಾವಣೆ / ಅರ್ಹತೆಗಳು / ಅಧಿಕಾರಾವಧಿ / ಪದಚ್ಯುತಿ / ವೇತನ / ಅಧಿಕಾರ ಕಾರ್ಯಗಳು

[II.] ಬ್ರಿಟನ್ನಿನ ಕಾರ್ಯಾಂಗ:

A. ಬ್ರಿಟಿಷ್ ಅರಸನ ಅಧಿಕಾರ ಕಾರ್ಯಗಳು.

B. ಬ್ರಿಟಿಷ್ ಪ್ರಧಾನ ಮಂತ್ರಿಯ ಅಧಿಕಾರ ಕಾರ್ಯಗಳು.

[III.] ಚೀನಾದ ಜನತಾ ಗಣರಾಜ್ಯದ ಕಾರ್ಯಾಂಗ: ನೇಮಕ / ಅಧಿಕಾರಾವಧಿ / ಉತ್ತರಾಧಿಕಾರತ್ವ / ಅಧಿಕಾರ ಕಾರ್ಯಗಳು.

ಮಾದರಿ ಪ್ರಶ್ನೆಗಳು.

ಅಧ್ಯಾಯ 10: ನ್ಯಾಯಾಂಗ ವ್ಯವಸ್ಥೆ [Judicial System]:

[I.] ಅಮೇರಿಕಾ ಸಂಯುಕ್ತ ಸಂಸ್ಥಾನಗಳ ನ್ಯಾಯಾಂಗ ವ್ಯವಸ್ಥೆ:

A. ಒಕ್ಕೂಟ ನ್ಯಾಯಾಂಗ. B. ರಾಜ್ಯ ಮಟ್ಟದ ನ್ಯಾಯಾಂಗ.

[II.] ಬ್ರಿಟಿಷ್ ನ್ಯಾಯಾಂಗ ವ್ಯವಸ್ಥೆ:

A. ಅಪರಾಧ ನ್ಯಾಯಾಲಯಗಳು. B. ನಾಗರಿಕ ನ್ಯಾಯಾಲಯಗಳು.

C. ಸರ್ವೋಚ್ಚ ನ್ಯಾಯಾಲಯ D. ಪ್ರೀವಿ ಪರಿಷತ್ತಿನ ನ್ಯಾಯಾಂಗೀಯ ಸಮಿತಿ.

[III.] ಚೀನಾದ ನ್ಯಾಯಾಂಗ ವ್ಯವಸ್ಥೆ:

ಮಾದರಿ ಪ್ರಶ್ನೆಗಳು.



ಅಧ್ಯಾಯ 11: ಪಕ್ಷ ಪದ್ಧತಿ [Party System]:

[I.] ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಪಕ್ಷ ಪದ್ಧತಿ:

A.] ಅಮೇರಿಕಾದ ರಾಜಕೀಯ ಪಕ್ಷಗಳ ಉಗಮ ಮತ್ತು ಬೆಳವಣಿಗೆ.

B.] ಅಮೇರಿಕಾದ ರಾಜಕೀಯ ಪಕ್ಷ ಪದ್ಧತಿಯ ಲಕ್ಷಣಗಳು.

[II.] ಬ್ರಿಟನ್ನಿನ ಪಕ್ಷ ಪದ್ಧತಿ:

A.] ಬ್ರಿಟನ್ನಿನಲ್ಲಿ ರಾಜಕೀಯ ಪಕ್ಷಗಳ ಉಗಮ ಮತ್ತು ಬೆಳವಣಿಗೆ.

B.] ಬ್ರಿಟನ್ನಿನ ರಾಜಕೀಯ ಪಕ್ಷಗಳ ಲಕ್ಷಣಗಳು.

[III.] ಚೀನಾದ ಪಕ್ಷ ಪದ್ಧತಿ:

A. ಚೀನಾದ ಜನತಾ ಗಣರಾಜ್ಯದಲ್ಲಿ ರಾಜಕೀಯ ಪಕ್ಷದ ಉಗಮ ಮತ್ತು ಬೆಳವಣಿಗೆ.

[B.] ಚೀನಾದ ರಾಜಕೀಯ ಪಕ್ಷ ಪದ್ಧತಿಯ ಲಕ್ಷಣಗಳು.

ಮಾದರಿ ಪ್ರಶ್ನೆಗಳು.

ಅಧ್ಯಾಯ 12: ಚುನಾವಣಾ ಪ್ರಕ್ರಿಯೆ [Election Process]:

I.] ಅಮೇರಿಕಾದಲ್ಲಿನ ಚುನಾವಣಾ ಪ್ರಕ್ರಿಯೆ:

[A.] ಅಧ್ಯಕ್ಷೀಯ ಚುನಾವಣಾ ಪ್ರಕ್ರಿಯೆ.

[B.] ಕಾಂಗ್ರೆಸ್‌ನ ಸದಸ್ಯರ ಚುನಾವಣಾ ಪ್ರಕ್ರಿಯೆ.

[II.] ಬ್ರಿಟನ್ನಿನಲ್ಲಿನ ಚುನಾವಣಾ ಪ್ರಕ್ರಿಯೆ:

[III.] ಚೀನಾದಲ್ಲಿನ ಚುನಾವಣಾ ಪ್ರಕ್ರಿಯೆ

ಮಾದರಿ ಪ್ರಶ್ನೆಗಳು.

ಅಧ್ಯಾಯ 1:

# ತೌಲನಿಕ ಸರ್ಕಾರ ಮತ್ತು ರಾಜಕೀಯ

## [Comparative Government and Politics]

### ಪ್ರಸ್ತಾವನೆ [Introduction]:

ಭೂಮಿಯ ಮೇಲಿನ ಎಲ್ಲಾ ಜೀವಿಗಳಿಗಿಂತ ಮಾನವ ಶ್ರೇಷ್ಠ ಜೀವಿ. ಇದಕ್ಕೆ ಆತ ಹೊಂದಿರುವ ವಿವೇಚನಾ ಸಾಮರ್ಥ್ಯವು ಪ್ರಧಾನ ಕಾರಣ. ಆರಂಭದಿಂದಲೂ ಮಾನವ ಸ್ವಭಾವದಲ್ಲಿ ಕೆಲವು ವಿಶೇಷ ಪ್ರವೃತ್ತಿಗಳನ್ನು ಮೈಗೂಡಿಸಿಕೊಂಡಿದ್ದು ಇಂದಿಗೂ ಅವುಗಳನ್ನು ಗುರುತಿಸಬಹುದಾಗಿದೆ. ಆ ಪೈಕಿ ಇತರ ಜೀವಿಗಳು ಮತ್ತು ಮಾನವರೊಡನೆ ಪರಸ್ಪರ ತುಲನೆ ಅಥವಾ ಹೋಲಿಕೆ ಮಾಡಿಕೊಳ್ಳುವುದು ಮಹತ್ವವಾದದ್ದು. ಮಾನವ ಇತರ ಜೀವಿ ಅಥವಾ ಮಾನವನೊಡನೆ ತನ್ನನ್ನು ಹೋಲಿಕೆ ಮಾಡಿಕೊಳ್ಳುವ ಮೂಲಕ ಸಾಮ್ಯತೆ ಹಾಗೂ ಭಿನ್ನತೆಗಳನ್ನು ಗುರುತಿಸಿಕೊಳ್ಳಲು ಶಕ್ತನಾದ. ಮುಂದುವರಿದು, ತನ್ನಲ್ಲಿಲ್ಲದ ಉತ್ತಮಾಂಶಗಳನ್ನು ಅಳವಡಿಸಿಕೊಳ್ಳಲು ಮತ್ತು ತನ್ನಲ್ಲಿರುವ ಕೆಟ್ಟ ಅಂಶಗಳನ್ನು ಕೈಬಿಡಲು ಹೋಲಿಕಾ ವಿಧಾನವು ಮಾನವನಿಗೆ ನೆರವಾಯಿತು. ಕಾಲ ಗತಿಸಿದಂತೆ ಮಾನವರಲ್ಲಿನ ಈ ಹೋಲಿಕಾ ಪ್ರವೃತ್ತಿಯು ಸುತ್ತಲಿನ ವಿವಿಧ ಸಾಮಾಜಿಕ ಸಂಸ್ಥೆಗಳ ಸುಧಾರಣೆಗೂ ನೆರವಾಯಿತು. ಮುಂದೆ ಮಾನವ ರಾಜಕೀಯ ಜೀವಿಯಾಗಿ ಪರಿವರ್ತನೆಗೊಂಡಾಗ ರಾಜಕೀಯ ಸಂಸ್ಥೆ ಹಾಗೂ ಚಟುವಟಿಕೆಗಳ ವಿಚಾರದಲ್ಲಿಯೂ ಹೋಲಿಕೆ ಅಥವಾ ತೌಲನಿಕತೆ ಬಳಸಲ್ಪಟ್ಟಿತು. ಹೀಗೆ ಪ್ರಾಚೀನ ಕಾಲದಲ್ಲಿಯೇ ಕಂಡುಬಂದ ಮಾನವರಲ್ಲಿನ ಹೋಲಿಕಾ ಅಥವಾ ತೌಲನಿಕ ಪ್ರವೃತ್ತಿಯು ಸಮಕಾಲೀನ ತೌಲನಿಕ ಸರ್ಕಾರ ಮತ್ತು ರಾಜಕೀಯಕ್ಕೆ ತಳಹದಿಯನ್ನು ಒದಗಿಸಿತು.

ರಾಜಕೀಯ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಲು ಆರಂಭಿಸಿದ ಪ್ರಾಚೀನ ಗ್ರೀಕ್ ಮತ್ತು ರೋಮನ್ನರ ಕಾಲದಲ್ಲಿಯೇ ತೌಲನಿಕ ರಾಜಕೀಯದ ಮೂಲವನ್ನು ಗುರುತಿಸಬಹುದಾಗಿದೆ. ಅಂದಿನ ಜನರು ತಮ್ಮ ಸಂಪರ್ಕಕ್ಕೆ ಬರುವ ಇತರ ಜನರು ಅಥವಾ ಜನ ಸಮೂಹದ ಸಾಮಾಜಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ತೌಲನಿಕ ವಿಧಾನದ ಮೂಲಕ ಅರಿಯಲು ಪ್ರಯತ್ನಿಸುತ್ತಿದ್ದರು. ರಾಜಕೀಯದಲ್ಲಿ ತೌಲನಿಕ ವಿಧಾನವನ್ನು ಪ್ರಥಮ ಬಾರಿಗೆ ವ್ಯವಸ್ಥಿತವಾಗಿ ಬಳಸಿದ ಕೀರ್ತಿ ಅರಿಸ್ಟಾಟಲ್‌ಗೆ ಸಲ್ಲುತ್ತದೆ. ಆತ 158 ಗ್ರೀಕ್ ನಗರ ರಾಜ್ಯಗಳ ಸಂವಿಧಾನಗಳನ್ನು ತೌಲನಿಕ ದೃಷ್ಟಿಕೋನದಲ್ಲಿ ವಿಶ್ಲೇಷಿಸಿ ಅಂದಿನ ರಾಜಕೀಯ ಸಮಸ್ಯೆಗಳಿಗೆ ಪರಿಹಾರ



ಕಂಡುಕೊಳ್ಳಲು ಯತ್ನಿಸಿದ್ದ. ಹೀಗಾಗಿ ಅರಿಸ್ಟಾಟಲ್‌ನನ್ನು ತೌಲನಿಕ ರಾಜಕೀಯದ ಪಿತಾಮಹ ಎನ್ನಲಾಗುತ್ತದೆ. ಈತನಿಂದ ಪ್ರಭಾವಿತರಾದ ಸಿಸಿರೊ, ಪೊಲಿಬಿಯಸ್, ಮೆಕಿವೆಲ್ಲಿ, ಮಾಂಟೆಸ್ಕ್ಯೂ, ಜೆ. ಎಸ್. ಮಿಲ್ ಮುಂತಾದ ರಾಜಕೀಯ ಚಿಂತಕರು ತಮ್ಮ ರಾಜಕೀಯ ಸಿದ್ಧಾಂತಗಳನ್ನು ಮಂಡಿಸಲು ತೌಲನಿಕ ವಿಧಾನವನ್ನು ನಂತರದ ದಿನಗಳಲ್ಲಿ ಬಳಸಿಕೊಂಡರು. ಆಸಕ್ತಿದಾಯಕ ಅಂಶವೇನೆಂದರೆ ತೌಲನಿಕ ವಿಧಾನದ ನಿದರ್ಶನವನ್ನು ಕ್ರಿಶ್ಚಿಯನ್ನರ ಪವಿತ್ರ ಗ್ರಂಥ ಬೈಬಲ್‌ನಲ್ಲಿಯೂ ಕಾಣಬಹುದಾದದ್ದು.

19 ನೇ ಶತಮಾನದ ಹೊತ್ತಿಗೆ ತೌಲನಿಕ ರಾಜಕೀಯವು ತೌಲನಿಕ ಸರ್ಕಾರವೆಂದೇ ಜನಪ್ರಿಯವಾಯಿತು. ಇದಕ್ಕೆ ಜಾರಿಯಲ್ಲಿರುವ ವಿವಿಧ ಮಾದರಿಯ ಸರ್ಕಾರಗಳ ಅಧ್ಯಯನಕ್ಕೆ ಅಂದರೆ ಸರ್ಕಾರದ ಅಂಗಗಳು, ಸಂಘಟನೆ, ಸ್ವರೂಪಗಳ ಅಧ್ಯಯನಕ್ಕೆ ತೌಲನಿಕ ವಿಧಾನ ಹೆಚ್ಚು ಬಳಸಲ್ಪಟ್ಟಿದ್ದುದು ಪ್ರಧಾನ ಕಾರಣ. ಅಂದಿನ ಚಿಂತಕರು ಐತಿಹಾಸಿಕವಾಗಿ ಮತ್ತು ಕಾನೂನಾತ್ಮಕವಾಗಿ ರಾಜಕೀಯ ಸಂಸ್ಥೆಗಳ ಸಾಮ್ಯತೆ ಮತ್ತು ಭಿನ್ನತೆಗಳನ್ನು ಗುರುತಿಸಲು ಮಾತ್ರ ಆದ್ಯತೆ ನೀಡಿದ್ದರು. ಮುಂದುವರಿದು, ಮೌಲ್ಯಾಧಾರಿತ ವಿವರಣಾತ್ಮಕ ತೌಲನಿಕ ವಿಧಾನದ ಮೂಲಕ ಆದರ್ಶ ರಾಜಕೀಯ ಸಂಸ್ಥೆಯನ್ನು ಕಂಡುಕೊಳ್ಳುವುದು ಅವರ ಗುರಿಯಾಗಿತ್ತು. ಈ ತೌಲನಿಕ ಸರ್ಕಾರದಲ್ಲಿನ ಸೀಮಿತ ವ್ಯಾಪ್ತಿ, ಅವಾಸ್ತವಿಕತೆ ಹಾಗೂ ಅವೈಜ್ಞಾನಿಕತೆಗಳು ಅದನ್ನು ಕುರಿತಂತೆ 20 ನೇ ಶತಮಾನದಲ್ಲಿ ಅತೃಪ್ತಿಯನ್ನು ಹುಟ್ಟು ಹಾಕಿದವು. ಎರಡನೇ ಮಹಾ ಯುದ್ಧದ ಬಳಿಕ ತೌಲನಿಕ ವಿಶ್ಲೇಷಣೆಯು ಕ್ರಾಂತಿಕಾರಕ ಬದಲಾವಣೆಯನ್ನು ಕಂಡಿತು. ಅದುವರೆಗೆ ಸರ್ಕಾರದ ಅಥವಾ ರಾಜಕೀಯ ಸಂಸ್ಥೆಗಳಿಗೆ ಸೀಮಿತವಾಗಿದ್ದ ತೌಲನಿಕ ಅಧ್ಯಯನವು ವರ್ತನಾ ಕ್ರಾಂತಿಯ ಫಲವಾಗಿ ಮಾನವರ ಸಮಗ್ರ ರಾಜಕೀಯ ಚಟುವಟಿಕೆಗಳನ್ನು ವ್ಯಾಪಿಸಿತು. ಸಿ. ಎಫ್. ಸ್ಟ್ರಾಂಗ್, ಜಿ. ಎ. ಆಲ್ಮಂಡ್, ಹರ್ಮನ್ ಫೈನರ್, ಮನ್ರೊ, ಕೋಲ್ಮನ್ ಮುಂತಾದ ರಾಜ್ಯಶಾಸ್ತ್ರಜ್ಞರು ವೈಜ್ಞಾನಿಕವಾಗಿ ತೌಲನಿಕ ವಿಶ್ಲೇಷಣೆ ನಡೆಸಿ ಅದರ ಆಧುನೀಕರಣಕ್ಕೆ ಶ್ರಮಿಸಿದರು. ಜೊತೆಗೆ ತೃತೀಯ ಜಗತ್ತಿನ ದೇಶಗಳ ಅನೇಕ ಚಿಂತಕರು ತೌಲನಿಕ ರಾಜಕೀಯದ ಬೆಳವಣಿಗೆಗೆ ಕಾರಣರಾದರು. ಫಲವಾಗಿ ಇಂದು ರಾಜ್ಯಶಾಸ್ತ್ರದ ಅಧ್ಯಯನ ವಿಧಾನವಾಗಿ ಮತ್ತು ಸ್ವತಂತ್ರ ಅಧ್ಯಯನ ಶಾಖೆಯಾಗಿ ತೌಲನಿಕ ವಿಶ್ಲೇಷಣೆಯು ಹೆಮ್ಮರವಾಗಿ ಬೆಳೆದಿದೆ. ಪ್ರಸ್ತುತ ತೌಲನಿಕ ಸರ್ಕಾರ ಮತ್ತು ರಾಜಕೀಯ ಎಂಬುದಾಗಿ ಗುರುತಿಸಲ್ಪಡುತ್ತಿರುವ ತೌಲನಿಕ ಅಥವಾ ತೌಲನಿಕ ವಿಶ್ಲೇಷಣೆಯ ಅರ್ಥ, ಸ್ವರೂಪ, ವ್ಯಾಪ್ತಿ ಮತ್ತು ಮಹತ್ವದ ಮೇಲೆ ಈ ಅಧ್ಯಾಯದಲ್ಲಿ ಬೆಳಕು ಚೆಲ್ಲಲಾಗಿದೆ.

### [A.] ತೌಲನಿಕ ಸರ್ಕಾರ ಮತ್ತು ರಾಜಕೀಯದ ಅರ್ಥ [Meaning of Comparative Government and Politics]:

ತೌಲನಿಕ ಸರ್ಕಾರ ಮತ್ತು ರಾಜಕೀಯದ ಅರ್ಥವನ್ನು ಮನವರಿಕೆ ಮಾಡಿಕೊಳ್ಳುವ ಮುನ್ನ ಅದರ ಭಾಗವಾಗಿರುವ ಸರ್ಕಾರ ಮತ್ತು ರಾಜಕೀಯ ಪರಿಕಲ್ಪನೆಗಳನ್ನು

ಸ್ಪಷ್ಟಪಡಿಸಿಕೊಳ್ಳುವುದು ಅಗತ್ಯ. ಸರ್ಕಾರ ಎಂದರೆ ರಾಜ್ಯವೊಂದರ ನಾಲ್ಕು ಮೂಲಾಂಶಗಳಲ್ಲಿ ಒಂದಾಗಿದ್ದು ರಾಜ್ಯದ ಪ್ರತಿನಿಧಿಯಾಗಿ ಅದರ ಇಚ್ಛೆಗಳನ್ನು ಜಾರಿಗೊಳಿಸುವ ಸಾಧನವಾಗಿದೆ. ಮುಂದುವರಿದು, ಸರ್ಕಾರದಲ್ಲಿ ಹಲವು ಮಾದರಿಗಳಿದ್ದು ಯಾವುದೇ ಮಾದರಿಯ ಸರ್ಕಾರವನ್ನಾಗಲಿ ಒಂದು ರಾಜ್ಯ ಹೊಂದಿರಲೇಬೇಕು. ಮೂರು ಅಂಗಗಳನ್ನು ಹೊಂದಿರುವ ಪ್ರತಿಯೊಂದು ಸರ್ಕಾರದ ರಚನಾತ್ಮಕ ಮತ್ತು ಕಾರ್ಯಾತ್ಮಕ ವ್ಯವಸ್ಥೆಯು ಭಿನ್ನತೆಯನ್ನು ಹೊಂದಿರುತ್ತದೆ. ಅಂತೆಯೇ ರಾಜಕೀಯವು ವ್ಯಕ್ತಿ ತನ್ನ ದೈನಂದಿನ ಜೀವನದಲ್ಲಿ ರಾಜ್ಯ ಅಥವಾ ಅದರ ಪ್ರತಿನಿಧಿಯಾದ ಸರ್ಕಾರದೊಡನೆ ವ್ಯವಹರಿಸುವಾಗ ತೊಡಗುವ ವಿವಿಧ ಚಟುವಟಿಕೆಗಳನ್ನು ಪ್ರತಿನಿಧಿಸುತ್ತದೆ. ಇದರೊಡನೆ ರಾಜಕೀಯವು ದೇಶವೊಂದರ ರಾಜಕೀಯ ವ್ಯವಸ್ಥೆಯಲ್ಲಿ ಸರ್ಕಾರ ಮತ್ತು ವ್ಯಕ್ತಿಗೆ ಸಂಬಂಧಿಸಿದ ಅನುಭವಗಳು, ವರ್ತನೆಗಳು, ಪ್ರಕ್ರಿಯೆಗಳು ಹಾಗೂ ಸಾಂಸ್ಥಿಕ ಕಾರ್ಯಗಳ ಸಮಗ್ರ ಚಟುವಟಿಕೆಗಳನ್ನು ಪ್ರತಿನಿಧಿಸುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಸರ್ಕಾರ ಎಂಬುದು ಸೀಮಿತ ವ್ಯಾಪ್ತಿಯನ್ನುಳ್ಳ ಪರಿಕಲ್ಪನೆಯಾಗಿದ್ದು ರಾಜಕೀಯ ಎಂಬುದು ವಿಶಾಲ ಸ್ವರೂಪದ ಪರಿಕಲ್ಪನೆಯಾಗಿದೆ.

ಆಸಕ್ತಿದಾಯಕ ಅಂಶವೇನೆಂದರೆ ಇಂದು ತೌಲನಿಕ ಸರ್ಕಾರ ಮತ್ತು ರಾಜಕೀಯ ಎಂದು ಕರೆಯಲ್ಪಡುವ ಅಧ್ಯಯನ ಕ್ಷೇತ್ರವು 20 ನೇ ಶತಮಾನದ ಪೂರ್ವಾರ್ಧದವರೆಗೆ ತೌಲನಿಕ ಸರ್ಕಾರ ಎಂದು ಮಾತ್ರವೇ ಗುರುತಿಸಲ್ಪಟ್ಟಿತ್ತು. ಇದಕ್ಕೆ ಅಂದು ಜಗತ್ತಿನ ವಿವಿಧ ದೇಶಗಳ ಸರ್ಕಾರಗಳ ರಚನಾತ್ಮಕ ಮತ್ತು ಕಾರ್ಯಾತ್ಮಕ ವ್ಯವಸ್ಥೆಗಳನ್ನು ಮಾತ್ರ ಹೋಲಿಕೆ ಮಾಡುವ ಮೂಲಕ ಅಧ್ಯಯನವನ್ನು ಕೈಗೊಳ್ಳಲಾಗುತ್ತಿದ್ದುದು ಪ್ರಧಾನ ಕಾರಣವಾಗಿತ್ತು. ಆದರೆ, ಎರಡನೇ ಮಹಾ ಯುದ್ಧದ ನಂತರದ ಕಾಲದಲ್ಲಿ ಸರ್ಕಾರಗಳೊಡನೆ ವ್ಯಕ್ತಿಗಳ ರಾಜಕೀಯ ಅನುಭವ, ವರ್ತನೆಗಳು, ಸ್ಪಂದನೆಗಳು, ಭಾಗವಹಿಸುವಿಕೆ ಮುಂತಾದ ಸಮಗ್ರ ರಾಜಕೀಯ ಚಟುವಟಿಕೆಗಳನ್ನು ತೌಲನಿಕ ವಿಧಾನದ ಮೂಲಕ ತಜ್ಞರು ವೈಜ್ಞಾನಿಕವಾಗಿ ಅಧ್ಯಯನ ಮಾಡತೊಡಗಿದರು. ಈ ಬೆಳವಣಿಗೆಯ ಫಲವಾಗಿ ತೌಲನಿಕ ಸರ್ಕಾರವು ತೌಲನಿಕ ಸರ್ಕಾರ ಮತ್ತು ರಾಜಕೀಯ ಎಂಬುದಾಗಿ ಪರಿವರ್ತನೆಗೊಂಡಿತು.

ಸಾಮಾನ್ಯರ ದೃಷ್ಟಿಯಲ್ಲಿ ತೌಲನಿಕ ವಿಧಾನದ ಮೂಲಕ ಜಗತ್ತಿನ ವಿವಿಧ ಭಾಗಗಳ ರಾಜಕೀಯ ವ್ಯವಸ್ಥೆಯನ್ನು ಅಧ್ಯಯನ ಮಾಡುವುದು ತೌಲನಿಕ ಸರ್ಕಾರ ಮತ್ತು ರಾಜಕೀಯ ಎನಿಸಿಕೊಳ್ಳುತ್ತದೆ. ಇದಕ್ಕೆ ದೇಶವೊಂದರ ರಾಜಕೀಯ ವ್ಯವಸ್ಥೆಯು ಸರ್ಕಾರ ಮತ್ತು ರಾಜಕೀಯ ಪರಿಕಲ್ಪನೆಗಳ ವ್ಯಾಪ್ತಿಗೊಳಪಡುವ ಅಂಶಗಳನ್ನು ಪ್ರತಿನಿಧಿಸುವುದು ಪ್ರಧಾನ ಕಾರಣವಾಗಿರುತ್ತದೆ. ಆದರೆ, ರಾಜ್ಯಶಾಸ್ತ್ರದ ಭಾಷೆಯಲ್ಲಿ ರಾಜಕೀಯ ವಿದ್ಯಮಾನವೊಂದರ ಸ್ಥಳ ಅಥವಾ ಸಮಯವನ್ನು ಆಧರಿಸಿದ ತೌಲನಿಕ ಅಧ್ಯಯನವು ಸರಳಾರ್ಥದಲ್ಲಿ ತೌಲನಿಕ ಸರ್ಕಾರ ಮತ್ತು ರಾಜಕೀಯವೆನಿಸುತ್ತದೆ. ವಿಶಾಲಾರ್ಥದಲ್ಲಿ



ರಾಜಕೀಯ ವಿದ್ಯಮಾನವೊಂದರ ಸಾಮ್ಯತೆ ಹಾಗೂ ಭಿನ್ನತೆ ಗುರುತಿಸುವ ಉದ್ದೇಶಕ್ಕಾಗಿ ನಿರ್ದಿಷ್ಟ ರಾಜಕೀಯ ಘಟಕಗಳನ್ನು ವ್ಯವಸ್ಥಿತವಾಗಿ ಹೋಲಿಕೆಯ ಮೂಲಕ ಅಧ್ಯಯನ ನಡೆಸುವುದು ತೌಲನಿಕ ಸರ್ಕಾರ ಮತ್ತು ರಾಜಕೀಯವೆನಿಸುತ್ತದೆ. ಆಸಕ್ತಿದಾಯಕ ಅಂಶವೇನೆಂದರೆ ಸ್ಥಳಾಧಾರಿತ ಹೋಲಿಕೆಯು ಭಾರತ ಮತ್ತು ಅಮೇರಿಕಾ ಅಥವಾ ಭಾರತ ಮತ್ತು ಶ್ರೀಲಂಕಾ ನಡುವಿನ ರಾಷ್ಟ್ರೀಯ ಮಟ್ಟದ ಹೋಲಿಕೆಯೊಡನೆ ಪಂಜಾಬ್ ಮತ್ತು ಕರ್ನಾಟಕ ಅಥವಾ ಕೇರಳ ಮತ್ತು ತಮಿಳುನಾಡು ರಾಜ್ಯಗಳ ನಡುವಿನ ಪ್ರಾದೇಶಿಕ ಹೋಲಿಕೆಯನ್ನು ಪ್ರತಿನಿಧಿಸುತ್ತದೆ. ಮುಂದುವರಿದು, ಸಮಯಾಧಾರಿತ ಹೋಲಿಕೆಯು ಸ್ವಾತಂತ್ರ್ಯ ಪೂರ್ವದ ಮತ್ತು ನಂತರದ ಮತದಾನದ ಹಕ್ಕು ಅಥವಾ ಕೋವಿಡ್ ಪೂರ್ವದ ಮತ್ತು ನಂತರದ ಆಡಳಿತ ವ್ಯವಸ್ಥೆ ಮುಂತಾದವುಗಳನ್ನು ಪ್ರತಿನಿಧಿಸುತ್ತದೆ. ಒಟ್ಟಾರೆ ದೇಶದೊಳಗಿನ ಮತ್ತು ದೇಶ ದೇಶಗಳ ನಡುವಿನ ರಾಜಕೀಯ ಸಂಸ್ಥೆಗಳು, ವರ್ತನೆಗಳು, ಪ್ರಕ್ರಿಯೆಗಳನ್ನು ವ್ಯವಸ್ಥಿತ ತೌಲನಿಕ ವಿಧಾನದ ನೆರವಿನಿಂದ ಅಧ್ಯಯನ ನಡೆಸುವುದು ತೌಲನಿಕ ಸರ್ಕಾರ ಮತ್ತು ರಾಜಕೀಯ ಎನಿಸಿಕೊಳ್ಳುತ್ತದೆ. ಸರ್ಕಾರ, ಸಂವಿಧಾನ, ರಾಜಕೀಯ ಗುಂಪುಗಳಂತಹ ಸಾಂಸ್ಥಿಕ ಅಂಶಗಳೊಡನೆ ನಿರ್ಧಾರ ಕೈಗೊಳ್ಳುವಿಕೆ, ರಾಜಕೀಯ ಭಾಗವಹಿಸುವಿಕೆ, ಮತದಾನ ನೀಡಿಕೆ ಮುಂತಾದ ರಾಜಕೀಯ ಚಟುವಟಿಕೆಗಳೂ ತೌಲನಿಕ ಸರ್ಕಾರ ಮತ್ತು ರಾಜಕೀಯದ ವಿಷಯ ವಸ್ತುವೆನಿಸಿಕೊಳ್ಳುತ್ತವೆ. ಶೀತಲ ಸಮರೋತ್ತರ ಸಮಕಾಲೀನ ಪ್ರಪಂಚದಲ್ಲಿ ತೌಲನಿಕ ಸರ್ಕಾರ ಮತ್ತು ರಾಜಕೀಯವು ಕ್ರಾಂತಿಕಾರಕ ಬದಲಾವಣೆ ಹೊಂದುತ್ತಾ ಬಂದಿದ್ದು ರಾಜಕೀಯ ಸ್ವರೂಪವನ್ನು ಅರ್ಥೈಸಿಕೊಂಡು, ಸಮರ್ಪಕವಾಗಿ ವಿವರಿಸಿ, ವೈಜ್ಞಾನಿಕ ರಾಜಕೀಯ ಸಿದ್ಧಾಂತವನ್ನು ರೂಪಿಸುವುದೇ ತೌಲನಿಕ ಸರ್ಕಾರ ಮತ್ತು ರಾಜಕೀಯದ ಉದ್ದೇಶವಾಗಿದೆ. ಇದರ ಪರಿಪೂರ್ಣ ತಿಳುವಳಿಕೆಗೆ ರಾಜಕೀಯ ಚಿಂತಕರು ನೀಡಿರುವ ಕೆಳಗಿನ ವ್ಯಾಖ್ಯಾನಗಳು ಸಹಕಾರಿಯಾಗಬಲ್ಲವು.

ಜಾನ್ ಬ್ಲಾಂಡಲ್ ಪ್ರಕಾರ ಸಮಕಾಲೀನ ಜಗತ್ತಿನ ರಾಷ್ಟ್ರೀಯ ಸರ್ಕಾರಗಳ ವಿನ್ಯಾಸವನ್ನು ಅಧ್ಯಯನ ಮಾಡುವುದೇ ತೌಲನಿಕ ಸರ್ಕಾರ ಮತ್ತು ರಾಜಕೀಯ.

ಎಂ. ಜಿ. ಸ್ಮಿತ್ ಪ್ರಕಾರ ರಾಜಕೀಯ ಸಂಸ್ಥೆಗಳ ಮಾದರಿ, ಮಹತ್ವ, ಅಂತರ್ ಸಂಬಂಧ, ವ್ಯತ್ಯಾಸ ಹಾಗೂ ಪರಿವರ್ತನಾ ವಿಧಾನಗಳ ಅಧ್ಯಯನವೇ ತೌಲನಿಕ ಸರ್ಕಾರ ಮತ್ತು ರಾಜಕೀಯ.

ಕುರ್ಟಿಸ್ ಪ್ರಕಾರ ರಾಜಕೀಯ ಸಂಘಟನೆಗಳ ಕಾರ್ಯಾಚರಣೆಯನ್ನು ತೌಲನಿಕ ವಿಧಾನದ ಮೂಲಕ ಅಭ್ಯಸಿಸಿ ಅವುಗಳ ನಡುವಿನ ಸಾಮ್ಯತೆ ಮತ್ತು ಭಿನ್ನತೆಗಳನ್ನು ಅರ್ಥೈಸಿಕೊಳ್ಳಲು ನಡೆಸುವ ಅಧ್ಯಯನವೇ ತೌಲನಿಕ ಸರ್ಕಾರ ಮತ್ತು ರಾಜಕೀಯವಾಗಿದೆ.

ಇ. ಎ. ಫ್ರೀಮನ್ ಪ್ರಕಾರ ವಿಭಿನ್ನ ರಾಜಕೀಯ ಸಂಸ್ಥೆಗಳು ಮತ್ತು ಸರ್ಕಾರದ ಮಾದರಿಗಳ ತೌಲನಿಕ ವಿಶ್ಲೇಷಣೆಯೇ ತೌಲನಿಕ ಸರ್ಕಾರ ಮತ್ತು ರಾಜಕೀಯ.

ಒಟ್ಟಾರೆ ಮೇಲಿನ ವಿವರಣೆ ಮತ್ತು ತಜ್ಞರ ವ್ಯಾಖ್ಯಾನಗಳಿಂದ ತೌಲನಿಕ ಸರ್ಕಾರ ಮತ್ತು ರಾಜಕೀಯವೆಂಬುದು ದೇಶಗಳ ನಡುವಿನ ರಾಜಕೀಯ ವ್ಯವಸ್ಥೆಗಳ ಕ್ರಮಬದ್ಧ ತೌಲನಿಕ ಅಧ್ಯಯನವಾಗಿದೆ. ಕೇವಲ ಸಾಂಸ್ಥಿಕ ರಾಜಕೀಯ ವಿದ್ಯಮಾನಗಳನ್ನು ಮಾತ್ರ ಅಭ್ಯಸಿಸದೇ ಸಾಂಸ್ಥಿಕವಲ್ಲದ ರಾಜಕೀಯ ಅನುಭವ, ಮೌಲ್ಯಗಳು, ಪ್ರಕ್ರಿಯೆಗಳು, ಅಧಿಕಾರ, ವರ್ತನೆಗಳನ್ನೂ ತೌಲನಿಕ ಸರ್ಕಾರ ಮತ್ತು ರಾಜಕೀಯವು ವ್ಯಾಪಿಸಿರುವುದು ಸ್ಪಷ್ಟವಾಗುತ್ತದೆ. ಮುಂದುವರಿದು, ರಚನಾತ್ಮಕ, ಪ್ರಾಯೋಗಿಕ, ಕಾರ್ಯಾತ್ಮಕ ರಾಜಕೀಯ ಅಂಶಗಳು ತೌಲನಿಕ ಸರ್ಕಾರ ಮತ್ತು ರಾಜಕೀಯವನ್ನು ಆವರಿಸಿರುವುದು ತಿಳಿದು ಬರುತ್ತದೆ.

## [B.] ತೌಲನಿಕ ಸರ್ಕಾರ ಮತ್ತು ರಾಜಕೀಯದ ಸ್ವರೂಪ [Nature of Comparative Government and Politics]:

ತೌಲನಿಕ ಸರ್ಕಾರ ಮತ್ತು ರಾಜಕೀಯವು ವಿವಿಧ ಸಮಾಜಗಳ ರಾಜಕೀಯ ವ್ಯವಸ್ಥೆಗಳನ್ನು ತೌಲನಿಕವಾಗಿ ವಿಶ್ಲೇಷಿಸುತ್ತದೆ. ಈ ವೇಳೆಯಲ್ಲಿ ತೌಲನಿಕ ರಾಜಕೀಯವು ರಾಜಕೀಯ ವ್ಯವಸ್ಥೆಯಲ್ಲಿನ ಚಟುವಟಿಕೆಗಳು, ಪ್ರಕ್ರಿಯೆಗಳು ಮತ್ತು ಅಧಿಕಾರವನ್ನು ಕುರಿತು ಅಧ್ಯಯನ ನಡೆಸುತ್ತದೆ. ಚಿಂತಕ ಲಾಸ್‌ವೆಲ್ ವಿವರಿಸಿರುವಂತೆ ರಾಜಕೀಯವು ಪ್ರಸ್ತುತ ಅಧಿಕಾರವನ್ನು ಗಳಿಸುವ ಮತ್ತು ಉಪಯೋಗಿಸುವ ಪ್ರಕ್ರಿಯೆಯಾಗಿದೆ. ಈ ಹಿನ್ನೆಲೆಯಲ್ಲಿ ರಾಜಕೀಯ ಅಧಿಕಾರವು ಸ್ವಾಭಾವಿಕವಾಗಿ ತೌಲನಿಕ ರಾಜಕೀಯದ ಕೇಂದ್ರಬಿಂದುವೆನಿಸಿದೆ. ಫಲವಾಗಿ ವಿವಿಧ ರಾಜಕೀಯ ವ್ಯವಸ್ಥೆಗಳ ರಾಜಕೀಯ ಚಟುವಟಿಕೆ, ಪ್ರಕ್ರಿಯೆ ಮತ್ತು ಅಧಿಕಾರದ ಹೋರಾಟಗಳ ಅಧ್ಯಯನವನ್ನು ತೌಲನಿಕ ರಾಜಕೀಯವು ಒಳಗೊಳ್ಳುವಂತಾಗಿದೆ. ಇದರೊಡನೆ ವಿವಿಧ ರಾಜಕೀಯ ವ್ಯವಸ್ಥೆಗಳ ರಚನೆ, ಕಾರ್ಯಗಳು, ಪ್ರಕ್ರಿಯೆ ಮತ್ತು ಮೂಲಾಧಾರಗಳನ್ನು ತೌಲನಿಕ ರಾಜಕೀಯವು ವಿಶ್ಲೇಷಿಸುವಂತಾಗಿದೆ. ಇದರಿಂದಾಗಿ ತೌಲನಿಕ ರಾಜಕೀಯದ ಸಾಂಪ್ರದಾಯಿಕ ಸ್ವರೂಪದಲ್ಲಿ ವ್ಯಾಪಕ ಬದಲಾವಣೆ ಉಂಟಾಗಿದ್ದು ಪ್ರಸ್ತುತ ತೌಲನಿಕ ರಾಜಕೀಯವು ಕೆಳಗಿನ ಲಕ್ಷಣಗಳನ್ನು ಮೈಗೂಡಿಸಿಕೊಂಡ ಅಧ್ಯಯನವಾಗಿ ಗುರುತಿಸಿಕೊಳ್ಳುತ್ತಿದೆ. ಈ ಕೆಳಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿರುವ ತೌಲನಿಕ ರಾಜಕೀಯದ ಲಕ್ಷಣಗಳ ಬೆಳಕಿನಲ್ಲಿ ಸಮಕಾಲೀನ ತೌಲನಿಕ ರಾಜಕೀಯದ ಸ್ವರೂಪವನ್ನು ನಾವು ಅರ್ಥೈಸಿಕೊಳ್ಳಬಹುದಾಗಿದೆ.

**1. ಪ್ರಾಯೋಗಿಕ ಮತ್ತು ವಿಶ್ಲೇಷಣಾತ್ಮಕ ಅಧ್ಯಯನ [Empirical and Analytical Study]:** ತೌಲನಿಕ ರಾಜಕೀಯವು ಆರಂಭದಲ್ಲಿ ಕೇವಲ ವಿವರಣಾತ್ಮಕ ಅಧ್ಯಯನವಾಗಿತ್ತು. ಸಾಂಪ್ರದಾಯಿಕ ತೌಲನಿಕ ರಾಜಕೀಯವು ದೇಶಗಳ ಸರ್ಕಾರ ಅಥವಾ ಸಂವಿಧಾನಗಳನ್ನು ಹೋಲಿಕೆ ಮಾಡಿ ಸಾಮ್ಯತೆ ಮತ್ತು ಭಿನ್ನತೆಗಳನ್ನು ವಿವರಿಸುವುದಕ್ಕೆ ಮಾತ್ರ ಆದ್ಯತೆ ನೀಡಿತ್ತು. ಆದರೆ ಸಮಕಾಲೀನ ತೌಲನಿಕ ರಾಜಕೀಯವು ರಾಜಕೀಯ ವಿದ್ಯಮಾನಗಳನ್ನು ತೌಲನಿಕ ವಿಧಾನದೊಡನೆ ಅವಲೋಕಿಸಿ ವಿಶ್ಲೇಷಣೆಗೊಳಪಡಿಸಲು ಪ್ರಯತ್ನಿಸುತ್ತದೆ.



ಮುಂದುವರಿದು, ಹೋಲಿಕೆಗೊಳಪಟ್ಟ ರಾಜಕೀಯ ವ್ಯವಸ್ಥೆಗಳಲ್ಲಿನ ಪ್ರಾಯೋಗಿಕ ಚಟುವಟಿಕೆಗಳಲ್ಲಿನ ವ್ಯತ್ಯಾಸಗಳ ಮೇಲೆಯೂ ಬೆಳಕು ಚೆಲ್ಲುತ್ತದೆ. ಈ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ತೌಲನಿಕ ರಾಜಕೀಯಕ್ಕಿಂತ ಪ್ರಸ್ತುತ ತೌಲನಿಕ ರಾಜಕೀಯವು ವಿಶ್ಲೇಷಣಾತ್ಮಕ ಮತ್ತು ಪ್ರಾಯೋಗಿಕ ಸಂಶೋಧನಾ ಸ್ವರೂಪವನ್ನು ಮೈಗೂಡಿಸಿಕೊಂಡಿದೆ ಎನ್ನಬಹುದು.

**2. ರಾಜಕೀಯದ ವಸ್ತು ನಿಷ್ಠ ಹಾಗೂ ಮೌಲ್ಯ ಮುಕ್ತ ಅಧ್ಯಯನ [Study of Objective and Value Free Politics]:** ಸಾಂಪ್ರದಾಯಿಕ ತೌಲನಿಕ ರಾಜಕೀಯವು ವಸ್ತು ನಿಷ್ಠತೆಯನ್ನು ಕಡೆಗಣಿಸಿ ವಿವರಣಾತ್ಮಕ ಅಧ್ಯಯನಕ್ಕೆ ಮಹತ್ವ ನೀಡಿತ್ತು. ಜೊತೆಗೆ ಅಂದಿನ ತೌಲನಿಕ ಅಧ್ಯಯನವು ಮೌಲ್ಯಾಧಾರಿತ ಅಧ್ಯಯನವಾಗಿತ್ತು. ಫಲವಾಗಿ ತೌಲನಿಕ ಅಧ್ಯಯನದಲ್ಲಿ ಅಸ್ಪಷ್ಟತೆ, ಗೊಂದಲ ಅಥವಾ ಸಂದೇಹಗಳು ಕಂಡು ಬರುತ್ತಿದ್ದವು. ಆದರೆ, ಪ್ರಸ್ತುತ ತೌಲನಿಕ ರಾಜಕೀಯದ ಅಧ್ಯಯನವು ಹೋಲಿಕೆ ನಡೆಸುವ ರಾಜಕೀಯ ಚಟುವಟಿಕೆ, ಪ್ರಕ್ರಿಯೆ, ಸಂಸ್ಥೆ ಅಥವಾ ವರ್ತನೆಗಳ ವಸ್ತುನಿಷ್ಠ ಅಂದರೆ ನಿಖರ ಮಾಹಿತಿಯನ್ನು ಪಡೆಯಲು ಪ್ರಯತ್ನಿಸುತ್ತದೆ. ಜೊತೆಗೆ ಮೌಲ್ಯ ಮುಕ್ತ ವೈಜ್ಞಾನಿಕ ತಂತ್ರಗಳನ್ನು ಆಧರಿಸಿ ಅಧ್ಯಯನ ನಡೆಸಲು ಪ್ರಯತ್ನಿಸುತ್ತದೆ. ಹೀಗಾಗಿ ಸಮಕಾಲೀನ ತೌಲನಿಕ ರಾಜಕೀಯವು ರಾಜಕೀಯದ ವಸ್ತುನಿಷ್ಠ ಹಾಗೂ ಮೌಲ್ಯ ಮುಕ್ತ ಅಧ್ಯಯನ ಎಂಬುದಾಗಿ ಪರಿಗಣಿಸಲ್ಪಟ್ಟಿದೆ.

**3.ರಾಜಕೀಯ ವರ್ತನೆಗಳ ಅಧ್ಯಯನ [Study of Political Behaviours]:** ಪ್ರಾಚೀನ ಗ್ರೀಕ್ ಮತ್ತು ರೋಮನ್ನರ ಕಾಲದಿಂದ ತೌಲನಿಕ ರಾಜಕೀಯವು ಸರ್ಕಾರ, ಸಂವಿಧಾನ, ಕಾನೂನು ಮುಂತಾದ ಸಾಂಸ್ಥಿಕ ಅಂಶಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ, ಪ್ರಸ್ತುತ ತೌಲನಿಕ ರಾಜಕೀಯವು ನಿರ್ದಿಷ್ಟ ರಾಜಕೀಯ ವ್ಯವಸ್ಥೆಯ ತಳಹದಿಯಾಗಿರುವ ವರ್ತನೆಗಳನ್ನು ಅಧ್ಯಯನ ಮಾಡುತ್ತದೆ. ಈ ನಿಟ್ಟಿನಲ್ಲಿ ನಿರ್ಧಾರ ಕೈಗೊಳ್ಳುವಿಕೆ, ಮತ ನೀಡಿಕೆ, ಸರ್ಕಾರದ ನೀತಿಗಳಿಗೆ ಸ್ಪಂದಿಸುವಿಕೆ ಸಮಯದಲ್ಲಿನ ವ್ಯಕ್ತಿಗಳ ವರ್ತನೆಗಳು ಪ್ರಧಾನವಾದುವುಗಳಾಗಿವೆ. ಮುಂದುವರಿದು, ರಾಜಕೀಯ ಪಕ್ಷ, ಸಾರ್ವಜನಿಕಾಭಿಪ್ರಾಯ, ಒತ್ತಡ ಗುಂಪುಗಳಂತಹ ರಾಜಕೀಯ ಗುಂಪಿನ ವರ್ತನೆಗಳನ್ನೂ ಸಮಕಾಲೀನ ತೌಲನಿಕ ರಾಜಕೀಯವು ವಿಶ್ಲೇಷಿಸುತ್ತದೆ. ಇದರೊಡನೆ ವಿವಿಧ ರಾಜಕೀಯ ಸಂಸ್ಥೆಗಳ ವರ್ತನೆಗಳನ್ನೂ ಸಹ ತೌಲನಿಕ ರಾಜಕೀಯವು ಪ್ರತಿನಿಧಿಸುತ್ತದೆ. ಈ ಹಿನ್ನೆಲೆಯಲ್ಲಿ ರಾಜಕೀಯ ವ್ಯವಸ್ಥೆಯ ಮೂಲಾಧಾರವಾದ ವರ್ತನೆಗಳ ಅಧ್ಯಯನವು ತೌಲನಿಕ ರಾಜಕೀಯದ ಸ್ವರೂಪವನ್ನು ಬಿಂಬಿಸುತ್ತದೆ.

**4. ಬಹುಶಾಸ್ತ್ರೀಯ ಸ್ವರೂಪವುಳ್ಳ ಅಧ್ಯಯನ [Study of Inter-disciplinary Nature]:** ತೌಲನಿಕ ರಾಜಕೀಯದ ಅಧ್ಯಯನಕ್ಕೆ ಸಮಕಾಲೀನ ತಜ್ಞರು ವಿವಿಧ ಸಮಾಜ ವಿಜ್ಞಾನಗಳನ್ನು ಅವಲಂಬಿಸಿದ್ದಾರೆ. ತೌಲನಿಕ ರಾಜಕೀಯದ ಪರಿಪೂರ್ಣ ಅಧ್ಯಯನವು ಇಂದು ಅರ್ಥಶಾಸ್ತ್ರ, ಮನಶಾಸ್ತ್ರ, ಮಾನವಶಾಸ್ತ್ರ, ಇತಿಹಾಸ, ಭೂಗೋಳಶಾಸ್ತ್ರದಂತಹ ಸಮಾಜ ವಿಜ್ಞಾನಗಳ ನೆರವನ್ನು ಪಡೆಯಬೇಕಾಗಿದೆ. ಉದಾ:

ಬ್ರಿಟಿಷ್ ಆಡಳಿತ ಮತ್ತು ಸ್ವತಂತ್ರ ಭಾರತದ ತೌಲನಿಕ ಅಧ್ಯಯನಕ್ಕೆ ಇತಿಹಾಸದ, ಮುಂದುವರಿದ ಮತ್ತು ಹಿಂದುಳಿದ ರಾಷ್ಟ್ರಗಳ ತೌಲನಿಕ ಅಧ್ಯಯನಕ್ಕೆ ಅರ್ಥಶಾಸ್ತ್ರದ, ಮೊದಲ ಸಾರ್ವತ್ರಿಕ ಚುನಾವಣೆ ಮತ್ತು ಹದಿನೈದನೇ ಸಾರ್ವತ್ರಿಕ ಚುನಾವಣೆಯ ಮತದಾರರ ವರ್ತನೆಯ ತೌಲನಿಕ ಅಧ್ಯಯನಕ್ಕೆ ಸಮಾಜಶಾಸ್ತ್ರದ ಅವಲಂಬನೆ. ಹೀಗೆ ತೌಲನಿಕ ಸರ್ಕಾರ ಮತ್ತು ರಾಜಕೀಯದ ಅಧ್ಯಯನವು ಬಹುಶಾಸ್ತ್ರೀಯ ಅಧ್ಯಯನವಾಗಿ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡಿರುವುದನ್ನು ಗುರುತಿಸಬಹುದಾಗಿದೆ.

**5. ಮುಂದುವರಿದ ಹಾಗೂ ಹಿಂದುಳಿದ ರಾಷ್ಟ್ರಗಳ ಅಧ್ಯಯನ [Study of Developed and Developing Countries]:** 19 ನೇ ಶತಮಾನದಲ್ಲಿ ತೌಲನಿಕ ಸರ್ಕಾರ ಮತ್ತು ರಾಜಕೀಯದ ಅಧ್ಯಯನವು ಯುರೋಪಿಗೆ ಮಾತ್ರ ಸೀಮಿತವಾಗಿತ್ತು. ಏಷ್ಯಾ, ಆಫ್ರಿಕಾ, ಆಸ್ಟ್ರೇಲಿಯಾ ಖಂಡಗಳ ದೇಶಗಳ ತೌಲನಿಕ ಅಧ್ಯಯನ ಅಂದು ಕಡೆಗಣಿಸಲ್ಪಟ್ಟಿತ್ತು. ಆದರೆ, ಪ್ರಸ್ತುತ ತೌಲನಿಕ ರಾಜಕೀಯವು ಜಗತ್ತಿನ ಮುಂದುವರೆದ ಮತ್ತು ಹಿಂದುಳಿದ ದೇಶಗಳನ್ನು ವ್ಯಾಪಿಸಿದೆ. ತೃತೀಯ ಜಗತ್ತಿನ ದೇಶಗಳಲ್ಲಿ ತೌಲನಿಕ ರಾಜಕೀಯದ ಅಧ್ಯಯನವು ವ್ಯಾಪಕವಾಗಿ ಬಳಕೆಯಾಗುತ್ತಿದೆ. ಫಲವಾಗಿ ಯುರೋಪಿನ ಮುಂದುವರಿದ ದೇಶಗಳಷ್ಟೇ ಮಹತ್ವವನ್ನು ತೌಲನಿಕ ರಾಜಕೀಯದ ಅಧ್ಯಯನದಲ್ಲಿ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದ ದೇಶಗಳೂ ಪಡೆದುಕೊಳ್ಳಲು ಶಕ್ತವಾಗಿವೆ.

**6. ಸಿದ್ಧಾಂತ ರಚನೆಯ ಉದ್ದೇಶ [Theory Building Objective]:** ತೌಲನಿಕ ರಾಜಕೀಯದ ಅಧ್ಯಯನದ ಪ್ರಧಾನ ಉದ್ದೇಶ ತೌಲನಿಕ ವಿಧಾನದೊಡನೆ ವಿಭಿನ್ನ ರಾಜಕೀಯ ವ್ಯವಸ್ಥೆಗಳನ್ನು ವಿಶ್ಲೇಷಣೆಗೊಳಪಡಿಸಿ ನೂತನ ಉಪಯುಕ್ತ ಸಿದ್ಧಾಂತಗಳನ್ನು ರಚಿಸುವುದಾಗಿದೆ. ಉದಾ: ಅರಿಸ್ಟಾಟಲ್‌ನು ವಿವಿಧ ನಗರ ರಾಜ್ಯಗಳ ಅಧ್ಯಯನ ನಡೆಸಿ ಮಧ್ಯಮ ವರ್ಗದ ಆಳ್ವಿಕೆಯು ಅತ್ಯುತ್ತಮ ಸರ್ಕಾರ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದ್ದುದು.

ಈ ಮೇಲೆ ಚರ್ಚಿಸಲಾದ ಅಂಶಗಳ ಹಿನ್ನೆಲೆಯಲ್ಲಿ ತೌಲನಿಕ ರಾಜಕೀಯದ ಸ್ವರೂಪವನ್ನು ಮನದಟ್ಟು ಮಾಡಿಕೊಳ್ಳಬಹುದಾಗಿದೆ. ಸಾಂಪ್ರದಾಯಿಕ ತೌಲನಿಕ ರಾಜಕೀಯದಲ್ಲಿನ ಸೀಮಿತತೆ, ವಿವರಣಾತ್ಮಕತೆ ಹಾಗೂ ಸಾಂಸ್ಥಿಕತೆ ಮಾಯವಾಗಿ ಸಮಕಾಲೀನ ತೌಲನಿಕ ರಾಜಕೀಯವು ಸಮಗ್ರತೆ, ವಾಸ್ತವಿಕತೆ ಹಾಗೂ ವೈಜ್ಞಾನಿಕತೆ ಮೈಗೂಡಿಸಿಕೊಂಡಿರುವುದು ಈ ಅಂಶಗಳ ನೆರವಿನಿಂದ ಸ್ಪಷ್ಟವಾಗುತ್ತದೆ.

## [C] ತೌಲನಿಕ ಸರ್ಕಾರ ಮತ್ತು ರಾಜಕೀಯದ ವ್ಯಾಪ್ತಿ [Scope of Comparative Government and Politics]:

ಸಾಂಪ್ರದಾಯಿಕ ಅಂದರೆ ಆರಂಭಿಕ ತೌಲನಿಕ ರಾಜಕೀಯವು ಸೀಮಿತ ಮತ್ತು ಪ್ರಾದೇಶಿಕ ಸ್ವರೂಪ ಹೊಂದಿತ್ತು. ಕೇವಲ ಸರ್ಕಾರ ಮತ್ತು ಸಂವಿಧಾನದಂತಹ ರಾಜಕೀಯ ಸಂಸ್ಥೆಗಳ ರಚನೆ, ಲಕ್ಷಣಗಳು ಅಥವಾ ಸ್ಥಾನಮಾನಕ್ಕೆ ಅಂಟಿಕೊಂಡು ಸೀಮಿತ ಸ್ವರೂಪವನ್ನು ತಾಳಿತ್ತು. ಅಂತೆಯೇ ಅಂದಿನ ತೌಲನಿಕ ರಾಜಕೀಯದ ಅಧ್ಯಯನವು ಕೇವಲ



ಯುರೋಪಿಯನ್ ರಾಷ್ಟ್ರಗಳ ರಾಜಕೀಯ ಸಂಸ್ಥೆಗಳ ಅಧ್ಯಯನದೊಡನೆ ಪ್ರಾದೇಶಿಕ ಸ್ವರೂಪವನ್ನು ಪಡೆದಿತ್ತು. ಆಗ ಬ್ರಿಟಿಷ್ ಸಂವಿಧಾನವೇ ಶ್ರೇಷ್ಠವೆಂದು ಪರಿಗಣಿಸಿ ಉಳಿದೆಲ್ಲ ಸಂವಿಧಾನಗಳ ಅಧ್ಯಯನಕ್ಕೆ ಅದನ್ನೇ ಮಾನದಂಡವನ್ನಾಗಿ ಅಧ್ಯಯನ ಮಾಡಲಾಗುತ್ತಿತ್ತು. ಕಾಲ ಕಳೆದಂತೆ ಆಧುನಿಕ ತೌಲನಿಕ ರಾಜಕೀಯವು ಸೀಮಿತತೆ ಮತ್ತು ಪ್ರಾದೇಶಿಕತೆಯಿಂದ ಹೊರಬರಲು ಯಶಸ್ವಿಯಾಯಿತು.

ಎರಡನೇ ಮಹಾ ಯುದ್ಧದ ನಂತರದ ಸಮಕಾಲೀನ ಜಗತ್ತಿನಲ್ಲಿ ತೌಲನಿಕ ರಾಜಕೀಯವು ಕ್ರಾಂತಿಕಾರಕ ಬದಲಾವಣೆಗೆ ಒಳಪಟ್ಟಿತು. ರಾಜಕೀಯ ಸಂಸ್ಥೆಗಳ ಅಧ್ಯಯನದೊಡನೆ ರಾಜಕೀಯ ಚಟುವಟಿಕೆಗಳು, ವರ್ತನೆಗಳು, ಪ್ರಕ್ರಿಯೆಗಳು ತೌಲನಿಕ ರಾಜಕೀಯದ ಅಧ್ಯಯನ ವ್ಯಾಪ್ತಿಗೆ ಸೇರಿದವು. ಇದರೊಡನೆ ಮುಂದುವರಿದ ಹಾಗೂ ಹಿಂದುಳಿದ ರಾಜಕೀಯ ವ್ಯವಸ್ಥೆಗಳ ರಚನೆಯ ವಿಶ್ಲೇಷಣೆ ಮತ್ತು ಹೋಲಿಕೆಯು ತೌಲನಿಕ ರಾಜಕೀಯದ ವ್ಯಾಪ್ತಿಗೊಳಪಟ್ಟಿತು. ಇದಲ್ಲದೇ ತಜ್ಞರು ಸಾಂಪ್ರದಾಯಿಕ ಚಿಂತಕರಂತೆ ಕೇವಲ ಕಾನೂನಾತ್ಮಕ ಸಂಸ್ಥೆಗಳ ಅಧ್ಯಯನದಲ್ಲಿ ತೊಡಗದೇ ಔಪಚಾರಿಕ ಮತ್ತು ಅನೌಪಚಾರಿಕ ರಾಜಕೀಯ ರಚನೆಗಳನ್ನು ಅಂದರೆ ಹಿತಾಸಕ್ತಿ ಗುಂಪುಗಳು, ಒತ್ತಡ ಗುಂಪುಗಳು, ರಾಜಕೀಯ ಪಕ್ಷಗಳು ಮುಂತಾದವುಗಳ ಅಧ್ಯಯನಕ್ಕೆ ಆಸಕ್ತಿ ತೋರ ತೊಡಗಿದರು. ಜೊತೆಗೆ ರಾಜಕೀಯ ವ್ಯವಸ್ಥೆಯಲ್ಲಿನ ವರ್ತನಾ ಅಧ್ಯಯನಕ್ಕೆ ಆಧುನಿಕ ತಂತ್ರ ಮತ್ತು ವಿಧಾನಗಳನ್ನು ಬಳಸತೊಡಗಿದರು. ಈ ಬೆಳವಣಿಗೆಯಿಂದ ತೌಲನಿಕ ರಾಜಕೀಯದ ವ್ಯಾಪ್ತಿ ಅಗಾಧ ಪರಿವರ್ತನೆಯನ್ನು ಪ್ರಸ್ತುತ ಕಂಡಿದೆ. ರಾಜಕೀಯ ಪರಿಕಲ್ಪನೆಯಡಿ ಗುರುತಿಸಲ್ಪಡುವ ವೈವಿಧ್ಯಮಯ ಚಟುವಟಿಕೆ, ವರ್ತನೆ, ಪ್ರಕ್ರಿಯೆ, ರಚನೆಗಳು ತೌಲನಿಕ ರಾಜಕೀಯದ ವ್ಯಾಪ್ತಿಗೊಳಪಟ್ಟಿವೆ. ಪರಿಣಾಮ ತೌಲನಿಕ ರಾಜಕೀಯದ ವ್ಯಾಪ್ತಿಯು ಕ್ರಾಂತಿಕಾರಕ ಬದಲಾವಣೆಯನ್ನು ತನ್ನದಾಗಿಸಿಕೊಂಡಿದೆ. ಈ ಕೆಳಗೆ ತೌಲನಿಕ ರಾಜಕೀಯದಲ್ಲಿ ಕಂಡು ಬರುವ ಪ್ರಮುಖ ವಿಷಯ ವಸ್ತುಗಳ ಮೇಲೆ ಮಾತ್ರ ಬೆಳಕು ಚೆಲ್ಲಲಾಗಿದ್ದು ಅವುಗಳ ನೆರವಿನಿಂದ ತೌಲನಿಕ ರಾಜಕೀಯದ ವ್ಯಾಪ್ತಿಯನ್ನು ಗುರುತಿಸಬಹುದಾಗಿದೆ.

**1. ಸಮಗ್ರ ರಾಜಕೀಯ ರಚನೆಗಳು [All Political Structures]:** ಪ್ರತಿ ರಾಜಕೀಯ ವ್ಯವಸ್ಥೆಯಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ರಾಜಕೀಯ ರಚನೆಗಳನ್ನು ಗುರುತಿಸಬಹುದಾಗಿದೆ. ಉದಾ: ದೇಶವೊಂದರ ರಾಜಕೀಯ ವ್ಯವಸ್ಥೆಯಲ್ಲಿ ಸಂವಿಧಾನ, ಶಾಸಕಾಂಗ, ಅಧಿಕಾರಶಾಹಿ ವರ್ಗಗಳು ಔಪಚಾರಿಕ ರಚನೆಗಳಾದರೆ ನೈತಿಕ ನಿಯಮಗಳು, ಸಾರ್ವಜನಿಕಾಭಿಪ್ರಾಯ, ಸ್ವಯಂ ಸೇವಕ ವರ್ಗಗಳು ಅನೌಪಚಾರಿಕ ರಚನೆಗಳೆನಿಸುತ್ತವೆ. ಮುಂದುವರೆದು ಸರ್ಕಾರಿ ಹಾಗೂ ಸರ್ಕಾರೇತರ ರಾಜಕೀಯ ರಚನೆಗಳನ್ನು ಪ್ರತಿಯೊಂದು ದೇಶದಲ್ಲಿ ಕಾಣಬಹುದಾಗಿದೆ. ಉದಾ: ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ನಾಗರಿಕ

ಸೇವಾ ವರ್ಗ ಸರ್ಕಾರಿ ರಚನೆಗಳೆನಿಸಿದರೆ ಹಿತಾಸಕ್ತಿ ಗುಂಪುಗಳು, ಒತ್ತಡ ಗುಂಪುಗಳು, ರಾಜಕೀಯ ಪಕ್ಷಗಳು ರಾಜಕೀಯ ವ್ಯವಸ್ಥೆಯೊಂದರ ಸರ್ಕಾರೇತರ ರಚನೆಗಳಾಗಿರುತ್ತವೆ. ಈ ವಿವಿಧ ರಚನೆಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ರಾಜಕೀಯ ಅಧಿಕಾರದ ಹೋರಾಟದಲ್ಲಿ ಪ್ರಭಾವ ಹೊಂದಿರುತ್ತವೆ. ಈ ಎಲ್ಲ ಬಗೆಯ ರಾಜಕೀಯ ರಚನೆಗಳನ್ನು ತೌಲನಿಕ ರಾಜಕೀಯದ ಅಧ್ಯಯನ ವ್ಯಾಪ್ತಿಯು ಪ್ರತಿನಿಧಿಸುತ್ತದೆ.

2. ರಾಜಕೀಯ ಪ್ರಕ್ರಿಯೆಗಳು [Political Processes]: ಸಾಮಾನ್ಯವಾಗಿ ಎಲ್ಲ ರಾಜಕೀಯ ವ್ಯವಸ್ಥೆಗಳಲ್ಲಿ ಹಲವು ರಾಜಕೀಯ ಪ್ರಕ್ರಿಯೆಗಳು ಜರುಗುತ್ತವೆ. ವಾಸ್ತವದಲ್ಲಿ ಈ ಪ್ರಕ್ರಿಯೆಗಳು ವಿವಿಧ ದೇಶಗಳ ರಾಜಕೀಯ ವ್ಯವಸ್ಥೆಯಲ್ಲಿ ಹೇಗೆ ಕಾರ್ಯಗತಗೊಳ್ಳುತ್ತವೆ ಎಂಬುದನ್ನು ತೌಲನಿಕ ರಾಜಕೀಯವು ಅಧ್ಯಯನ ನಡೆಸುತ್ತದೆ. ಫಲವಾಗಿ ಹಿತಾಸಕ್ತಿಗಳ ಈಡೇರಿಕೆ, ರಾಜಕೀಯ ಸಂಪರ್ಕ, ಶಾಸನ ರಚನೆ, ನಿರ್ಧಾರ ಕೈಗೊಳ್ಳುವಿಕೆ, ನೀತಿ ನಿರೂಪಣೆ ಮುಂತಾದ ರಾಜಕೀಯ ಪ್ರಕ್ರಿಯೆಗಳು ತೌಲನಿಕ ರಾಜಕೀಯದ ವ್ಯಾಪ್ತಿಗೊಳಪಟ್ಟಿವೆ. ರಾಜಕೀಯ ಪ್ರಕ್ರಿಯೆಗಳ ಕಾರ್ಯಾಚರಣೆಯಲ್ಲಿ ವ್ಯಕ್ತವಾಗುವ ಕಾರ್ಯಗಳನ್ನಾಧರಿಸಿ ತೌಲನಿಕ ರಾಜಕೀಯವು ತೌಲನಿಕವಾಗಿ ಅಧ್ಯಯನ ನಡೆಸುತ್ತದೆ. ಉದಾ: ಭಾರತ ಹಾಗೂ ಇಂಗ್ಲೆಂಡಿನಲ್ಲಿ ಶಾಸನ ರಚನಾ ಪ್ರಕ್ರಿಯೆ ಅಥವಾ ಅಮೇರಿಕಾದಧ್ಯಕ್ಷ ಹಾಗೂ ಭಾರತದ ಪ್ರಧಾನಿ ನಿರ್ಧಾರ ಕೈಗೊಳ್ಳುವಿಕೆ ಕುರಿತು ಹೋಲಿಕೆ ಮಾಡುವುದು. ಈ ಹಿನ್ನೆಲೆಯಲ್ಲಿ ವೈವಿಧ್ಯಮಯ ರಾಜಕೀಯ ಪ್ರಕ್ರಿಯೆಗಳು ತೌಲನಿಕ ರಾಜಕೀಯದ ವ್ಯಾಪ್ತಿಗೊಳಪಟ್ಟಿವೆ.

3. ರಾಜಕೀಯ ವರ್ತನೆಗಳು [Political Behaviours]: ವಿವಿಧ ರಾಜಕೀಯ ಚಟುವಟಿಕೆಗಳನ್ನು ನಿರ್ವಹಿಸುವಾಗ ಪಾಲುದಾರರು ಹೇಗೆ ವರ್ತಿಸುತ್ತಾರೆ ಎಂಬ ಅಧ್ಯಯನವನ್ನು ತೌಲನಿಕ ಸರ್ಕಾರ ಮತ್ತು ರಾಜಕೀಯವು ನಡೆಸುತ್ತದೆ. ಹೀಗಾಗಿ ಮತದಾರರು, ಜನ ಪ್ರತಿನಿಧಿಗಳು, ನಾಯಕರು, ಗಣ್ಯ ವರ್ಗದ ಸದಸ್ಯರು, ಪ್ರಜೆಗಳು ನಿರ್ದಿಷ್ಟ ರಾಜಕೀಯ ವಿದ್ಯಮಾನ ಅಥವಾ ವಿಚಾರದಲ್ಲಿ ಹೇಗೆ ವರ್ತಿಸುತ್ತಾರೆ ಎಂಬುದನ್ನು ಅಧ್ಯಯಿಸುವ ಮೂಲಕ ತೌಲನಿಕ ರಾಜಕೀಯವು ತನ್ನ ವ್ಯಾಪ್ತಿಯನ್ನು ವಿಸ್ತರಣೆಗೊಳಿಸಿಕೊಂಡಿದೆ.

4. ಸಾಮ್ಯತೆಗಳು ಮತ್ತು ಭಿನ್ನತೆಗಳ ಅಧ್ಯಯನ [Study of Similarities and Differences] : ತೌಲನಿಕ ಸರ್ಕಾರ ಮತ್ತು ರಾಜಕೀಯವು ವಿವಿಧ ರಾಜಕೀಯ ರಚನೆಗಳ ನಡುವಿನ ಸಾಮ್ಯತೆ ಮತ್ತು ಭಿನ್ನತೆಗಳನ್ನು ಒಳಗೊಂಡಿರುತ್ತದೆ. ಉದಾ: ಭಾರತ ಮತ್ತು ಬ್ರಿಟಿಷ್ ಸಂಸತ್ತುಗಳ ನಡುವಿನ, ಭಾರತ ಹಾಗೂ ಅಮೇರಿಕದ ನ್ಯಾಯಾಂಗಗಳ ನಡುವಿನ, ಭಾರತ ಹಾಗೂ ಕೆನಡಾ ಒಕ್ಕೂಟಗಳ ನಡುವಿನ ಸಾಮ್ಯತೆ ಮತ್ತು ಭಿನ್ನತೆಗಳ ಅಧ್ಯಯನ. ಆಸಕ್ತಿದಾಯಕ ಅಂಶವೇನೆಂದರೆ ವೈವಿಧ್ಯಮಯ ರಾಜಕೀಯ ರಚನೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ವಿವರಿಸುವ ಉದ್ದೇಶ ಅವುಗಳ ವಾಸ್ತವಿಕತೆ ಅರಿಯುವುದರೊಡನೆ



ಸಿದ್ಧಾಂತ ರೂಪಿಸುವುದೇ ಹೊರತು ಅತ್ಯುತ್ತಮ ರಾಜಕೀಯ ರಚನೆಯನ್ನು ನಿರ್ಧರಿಸುವುದಲ್ಲ. ಒಟ್ಟಾರೆ ಸಾಮ್ಯತೆ ಮತ್ತು ಭಿನ್ನತೆಗಳ ಅಧ್ಯಯನವು ತೌಲನಿಕ ರಾಜಕೀಯದ ವ್ಯಾಪ್ತಿಯಲ್ಲಿ ಕೇಂದ್ರಬಿಂದು ಅಂಶವೆನಿಸಿದೆ.

5. ರಾಜಕೀಯ ವ್ಯವಸ್ಥೆಗಳು [Political Systems]: ವಿವಿಧ ಪಾಶ್ಚಿಮಾತ್ಯ ಮತ್ತು ಪಾಶ್ಚಿಮಾತ್ಯೇತರ ರಾಜಕೀಯ ವ್ಯವಸ್ಥೆಗಳ ನಿರ್ವಹಣೆಯು ತೌಲನಿಕ ರಾಜಕೀಯದ ಅಧ್ಯಯನದ ವ್ಯಾಪ್ತಿಗೊಳಪಟ್ಟಿರುತ್ತದೆ. ಈ ವೇಳೆಯಲ್ಲಿ ತೌಲನಿಕ ರಾಜಕೀಯವು ತುಲನೆಗೊಳಪಡಿಸುವ ರಾಜಕೀಯ ವ್ಯವಸ್ಥೆಗಳ ವರ್ತನೆಗಳು, ಪ್ರಕ್ರಿಯೆಗಳು, ಸಾಮರ್ಥ್ಯಗಳು ಸೇರಿದಂತೆ ಅದರ ನಿರ್ವಹಣೆಯನ್ನು ಕುರಿತು ಬೆಳಕು ಚೆಲ್ಲುತ್ತದೆ.

6. ರಾಜಕೀಯದ ಮೇಲಿನ ಪ್ರಭಾವಗಳು [Influences on Politics]: ನಿರ್ದಿಷ್ಟ ರಾಜಕೀಯ ವ್ಯವಸ್ಥೆಯ ಮೇಲೆ ಹಲವು ಇತರ ಪರಿಸರಗಳು ಪ್ರಭಾವ ಬೀರಿರುತ್ತವೆ. ಆರ್ಥಿಕ, ಸಾಮಾಜಿಕ, ಭೌಗೋಳಿಕ, ಸಾಂಸ್ಕೃತಿಕ ಪರಿಸರಗಳು ಆಯಾ ರಾಜಕೀಯ ವ್ಯವಸ್ಥೆಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆಕರ್ಷಿಸುತ್ತವೆ. ಈ ನಿಟ್ಟಿನಲ್ಲಿ ತೌಲನಿಕ ರಾಜಕೀಯದ ಅಧ್ಯಯನವು ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರದಂತಹ ಅನ್ಯ ಸಮಾಜ ವಿಜ್ಞಾನಗಳ ನೆರವಿನಿಂದ ರಾಜಕೀಯವನ್ನು ವ್ಯವಸ್ಥಿತವಾಗಿ ಮನದಟ್ಟು ಮಾಡುತ್ತದೆ. ಫಲವಾಗಿ ರಾಜಕೀಯ ಸಂಸ್ಕೃತಿ, ರಾಜಕೀಯ ಅರ್ಥಶಾಸ್ತ್ರ, ರಾಜಕೀಯ ಸಾಮಾಜೀಕರಣ, ಭೌಗೋಳಿಕ ರಾಜಕೀಯದಂತಹ ಪರಿಕಲ್ಪನೆಗಳು ಉಗಮಗೊಂಡು ತೌಲನಿಕ ರಾಜಕೀಯದ ಭಾಗವಾಗಿವೆ. ಈ ಎಲ್ಲ ರಾಜಕೀಯೇತರ ಪರಿಸರಗಳ ಪ್ರಭಾವ ಹೊಂದಿರುವ ಅಂಶಗಳ ಅಧ್ಯಯನವು ತೌಲನಿಕ ರಾಜಕೀಯದ ವ್ಯಾಪ್ತಿಗೊಳಪಡುತ್ತವೆ.

7. ಜಾಗತಿಕ ಸವಾಲುಗಳು [World Challenges]: ಸಮಕಾಲೀನ ಜಗತ್ತು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಈ ಪೈಕಿ ಭಯೋತ್ಪಾದನೆ, ತಾಪಮಾನದ ಏರಿಕೆ, ಶಸ್ತ್ರಾಸ್ತ್ರ ಪೈಪೋಟಿ, ಸಾಂಕ್ರಾಮಿಕ ರೋಗಗಳ ನಿಯಂತ್ರಣ ಪ್ರಮುಖವಾದವುಗಳಾಗಿವೆ. ತೌಲನಿಕ ರಾಜಕೀಯವು ಈ ಜಾಗತಿಕ ಸವಾಲುಗಳನ್ನು ಅಧ್ಯಯನ ಮಾಡಲು ಮುಂದಾಗುವ ಮೂಲಕ ಅವುಗಳೂ ತೌಲನಿಕ ರಾಜಕೀಯದ ವ್ಯಾಪ್ತಿಗೊಳಪಡುವಂತಾಗಿದೆ. ನಿರ್ದಿಷ್ಟ ಸವಾಲೊಂದನ್ನು ಕುರಿತಂತೆ ವಿವಿಧ ದೇಶಗಳ ನಿಲುವುಗಳನ್ನು ತೌಲನಿಕ ರಾಜಕೀಯವು ತೌಲನಿಕವಾಗಿ ಅಭ್ಯಸಿಸುತ್ತದೆ. ಉದಾ: ಕೋವಿಡ್ ನಿಯಂತ್ರಣಕ್ಕೆ ಭಾರತ ಮತ್ತು ಫ್ರಾನ್ಸ್ ಸರ್ಕಾರಗಳು ಕೈಗೊಂಡ ನಿರ್ಧಾರಗಳನ್ನು ಹೋಲಿಸುವುದು.

ಈ ಮೇಲೆ ಚರ್ಚಿಸಲಾಗಿರುವ ಅಂಶಗಳು ತೌಲನಿಕ ರಾಜಕೀಯದ ವಿಶಾಲ ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ಮನದಟ್ಟು ಮಾಡಿಕೊಡುತ್ತವೆ. ಗಮನಾರ್ಹ ಅಂಶವೇನೆಂದರೆ ಆರಂಭದಲ್ಲಿ ರಾಜಕೀಯ ಸಂಸ್ಥೆಗಳಿಗೆ ಸೀಮಿತವಾಗಿದ್ದ ತೌಲನಿಕ ರಾಜಕೀಯವು ಪ್ರಸ್ತುತ ರಾಜಕೀಯ ಚಟುವಟಿಕೆ, ಪ್ರಕ್ರಿಯೆ, ಸಂಸ್ಥೆಗಳು ಸೇರಿದಂತೆ ಸಮಗ್ರ ರಾಜಕೀಯ

ಅಂಶಗಳನ್ನು ಪ್ರತಿನಿಧಿಸುತ್ತಿದೆ. ಆಲ್ಮಂಡ್ ಮತ್ತು ಪಾವೆಲ್ ಮೊದಿಸಿದಂತೆ ತೌಲನಿಕ ರಾಜಕೀಯದ ವ್ಯಾಪ್ತಿಯಲ್ಲಿನ ಕ್ರಾಂತಿಕಾರಕ ಬದಲಾವಣೆಗೆ ಸಮಗ್ರತೆ, ನಿಖರತೆ, ವಾಸ್ತವಿಕತೆ ಮತ್ತು ಬುದ್ಧಿ ಜೀವಿಗಳ ನವ ವ್ಯವಸ್ಥೆಗಳ ಹುಡುಕಾಟವು ಪ್ರಧಾನ ಕಾರಣಗಳಾಗಿವೆ. ಇಂದಿಗೂ ತೌಲನಿಕ ರಾಜಕೀಯದ ವ್ಯಾಪ್ತಿಯಲ್ಲಿ ನೂತನ ಅಂಶಗಳು ಸೇರ್ಪಡೆಯಾಗುತ್ತಲೇ ಸಾಗಿದ್ದು ರಾಜ್ಯಶಾಸ್ತ್ರದ ಪ್ರಧಾನ ಮತ್ತು ಸ್ವತಂತ್ರ ಶಾಖೆಯಾಗಿ ತೌಲನಿಕ ರಾಜಕೀಯವು ಬೆಳವಣಿಗೆ ಹೊಂದುತ್ತಿದೆ.

## [D.] ತೌಲನಿಕ ಸರ್ಕಾರ ಮತ್ತು ರಾಜಕೀಯದ ಮಹತ್ವ [Significance of Comparative Government and Politics]:

ತೌಲನಿಕ ಸರ್ಕಾರ ಮತ್ತು ರಾಜಕೀಯವು ತನ್ನ ಸಾಂಪ್ರದಾಯಿಕ ಸರ್ಕಾರದ ಅಧ್ಯಯನದೊಡನೆ ಆಧುನಿಕವಾಗಿ ಸಮಗ್ರ ರಾಜಕೀಯ ವಿದ್ಯಮಾನಗಳನ್ನು ಅಧ್ಯಯನ ಮಾಡುತ್ತಿದೆ. ಇದರಿಂದ ರಾಜ್ಯಶಾಸ್ತ್ರದ ಪ್ರಧಾನ ಮತ್ತು ಸ್ವತಂತ್ರ ಅಧ್ಯಯನ ಶಾಖೆಯಾಗಿ ತೌಲನಿಕ ಸರ್ಕಾರ ಮತ್ತು ರಾಜಕೀಯವು ಪ್ರಸ್ತುತ ಗುರುತಿಸಿಕೊಂಡಿದೆ. ರಾಜ್ಯಶಾಸ್ತ್ರದ ಅಧ್ಯಯನ ವಿಧಾನ ಅಥವಾ ಅಧ್ಯಯನ ಶಾಖೆಯಾಗಿ ಗುರುತಿಸಿಕೊಂಡಿರುವ ತೌಲನಿಕ ರಾಜಕೀಯವು ಹೊಂದಿರುವ ಮಹತ್ವವನ್ನು ಈ ಕೆಳಗಿನ ಅಂಶಗಳ ನೆರವಿನಿಂದ ಅರ್ಥೈಸಿಕೊಳ್ಳಬಹುದಾಗಿದೆ.

**1. ಮಾನವ ಸ್ವಭಾವದ ಪೋಷಣೆ [Promotion of Human Nature]:** ಮಾನವಕುಲದ ಆರಂಭದೊಡನೆ ವಿವೇಚನಾ ಜೀವಿಯಾದ ಮಾನವ ಸ್ವಾಭಾವಿಕವಾಗಿ ತೌಲನಿಕ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದನು. ತಮ್ಮ ದೇಹ ರಚನೆಯಿಂದ ಮೊದಲುಗೊಂಡು ಸುತ್ತಲಿನ ಸಾಮಾಜಿಕ ಸನ್ನಿವೇಶಗಳನ್ನು ಅರಿಯಲು ಮಾನವರ ಸ್ವಭಾವದಲ್ಲಿನ ತೌಲನಿಕ ಪ್ರವೃತ್ತಿಯು ನೆರವಾಯಿತು. ಕ್ರಮೇಣ ರಾಜಕೀಯ ಸಂಸ್ಥೆಗಳು ಆರಂಭಗೊಂಡು ರಾಜಕೀಯ ಚಟುವಟಿಕೆಗಳು ಅಧಿಕಗೊಂಡಾಗ ಅವುಗಳ ತುಲನೆಗೂ ಮಾನವ ಸ್ವಭಾವದ ತೌಲನಿಕ ಪ್ರವೃತ್ತಿ ಬಳಸಲ್ಪಟ್ಟಿತು. ಆಧುನಿಕ ಯುಗದ ಹೊತ್ತಿಗೆ ಮಾನವರ ಸಮಗ್ರ ರಾಜಕೀಯ ವಿದ್ಯಮಾನಗಳನ್ನು ತೌಲನಿಕ ಸರ್ಕಾರ ಮತ್ತು ರಾಜಕೀಯವು ವ್ಯಾಪಿಸಿದ್ದು ತೌಲನಿಕ ವಿಧಾನ ಪ್ರಾಶಸ್ತ್ಯ ಗಳಿಸಲು ಕಾರಣವಾಯಿತು. ಹೀಗೆ ಮಾನವರಲ್ಲಿನ ಸಹಜ ತೌಲನಿಕ ಪ್ರವೃತ್ತಿ ಬಲವರ್ಧನೆಗೊಳ್ಳುತ್ತಾ ಸಾಗಲು ತೌಲನಿಕ ಸರ್ಕಾರ ಮತ್ತು ರಾಜಕೀಯದ ಅಧ್ಯಯನವು ಸಹಕಾರಿಯಾಗಿದೆ.

**2. ಆಡಳಿತಾತ್ಮಕ ಸವಾಲುಗಳಿಗೆ ಪರಿಹಾರ [Remedy to Adminstrative Challenges]:** ಸಾಮಾನ್ಯವಾಗಿ ಪ್ರತಿಯೊಂದು ದೇಶ ಆಡಳಿತಾತ್ಮಕ ಸವಾಲುಗಳನ್ನು ಎದುರಿಸುತ್ತಿರುತ್ತದೆ. ಆಡಳಿತಾತ್ಮಕ ಅಸ್ಥಿರತೆ, ಅಧಿಕಾರದ ದುರುಪಯೋಗ, ಭ್ರಷ್ಟಾಚಾರ, ಅದಕ್ಷತೆಗಳು ಅವುಗಳಲ್ಲಿ ಪ್ರಧಾನವಾದವುಗಳು. ಅರಿಸ್ಟಾಟಲ್‌ನ ಕಾಲದಿಂದ ಆಧುನಿಕ



ಕಾಲದವರೆಗೆ ಆಳುವವರ ವರ್ತನೆ, ಪ್ರಜೆಗಳೊಡನೆ ಆಳುವವರ ಸಂಬಂಧ, ಕಾನೂನುಗಳ ನಿರ್ಧಾರಕ ಅಂಶ, ಆಡಳಿತಾತ್ಮಕ ಸ್ಥಿರತೆ ಮತ್ತು ಬದಲಾವಣೆ ಕುರಿತಂತೆ ತೌಲನಿಕ ವಿಶ್ಲೇಷಣೆಯ ಮೂಲಕ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗಿತ್ತು. ತೌಲನಿಕ ಸರ್ಕಾರ ಮತ್ತು ರಾಜಕೀಯದ ಅಧ್ಯಯನವು ವಿವಿಧ ದೇಶಗಳಲ್ಲಿನ ಅಥವಾ ನಿರ್ದಿಷ್ಟ ದೇಶದ ವಿವಿಧ ಪ್ರದೇಶಗಳಲ್ಲಿನ ಆಡಳಿತಾತ್ಮಕ ಸಂಸ್ಥೆಗಳನ್ನು ತೌಲನಿಕವಾಗಿ ಅಧ್ಯಯನ ನಡೆಸಲು ಅವಕಾಶವನ್ನು ಆಧುನಿಕವಾಗಿ ಕಲ್ಪಿಸಿತು. ಇದರಿಂದ ಒಂದು ಪ್ರದೇಶದ ಆಡಳಿತಾತ್ಮಕ ಸವಾಲುಗಳಿಗೆ ಯೋಗ್ಯ ಪರಿಹಾರಗಳು ದೊರಕುವಂತಾಗಿದೆ. ಉದಾ: ಬ್ರಿಟಿಷ್ ನಾಗರಿಕ ಸೇವಾ ವರ್ಗ ಮತ್ತು ಭಾರತೀಯ ನಾಗರಿಕ ಸೇವಾ ವರ್ಗದ ತೌಲನಿಕ ಅಧ್ಯಯನದಿಂದ ಆಡಳಿತಾತ್ಮಕ ಪರಿಹಾರ ಕಂಡುಕೊಳ್ಳುವುದು ಮತ್ತು ಭ್ರಷ್ಟಾಚಾರ ನಿಯಂತ್ರಣಕ್ಕೆ ಪರಿಹಾರ ಕಂಡುಕೊಳ್ಳಲು ವಿವಿಧ ರಾಜ್ಯ ಸರ್ಕಾರಗಳ ಕ್ರಮಗಳ ಅಧ್ಯಯನದಿಂದ ಸಾಧ್ಯವಾಗುವುದು. ಹೀಗೆ ತೌಲನಿಕ ರಾಜಕೀಯವು ಆಡಳಿತಾತ್ಮಕ ಸವಾಲುಗಳನ್ನು ಆಳವಾಗಿ ಅರಿಯಲು, ವಿಶ್ಲೇಷಿಸಲು ಮತ್ತು ಸಮರ್ಪಕ ಪರಿಹಾರ ಅಳವಡಿಸಿಕೊಳ್ಳಲು ಉಪಯುಕ್ತವಾಗಿದೆ.

**3. ರಾಜಕೀಯ ಸಂಸ್ಥೆಗಳ ಸುಧಾರಣೆ [Reformation of Political Institutions]:** ತೌಲನಿಕ ರಾಜಕೀಯವು ಒಂದು ದೇಶದ ರಾಜಕೀಯ ಸಂಸ್ಥೆಗಳನ್ನು ಇತರ ದೇಶಗಳ ರಾಜಕೀಯ ಸಂಸ್ಥೆಗಳೊಡನೆ ಹೋಲಿಸುವ ಮೂಲಕ ಅರ್ಥೈಸಿಕೊಳ್ಳಲು ನೆರವಾಗುತ್ತದೆ. ಜೊತೆಗೆ ದೇಶದೊಳಗಿನ ವಿವಿಧ ರಾಜಕೀಯ ಸಂಸ್ಥೆಗಳನ್ನು ತೌಲನಿಕವಾಗಿ ಪರಸ್ಪರ ವಿಶ್ಲೇಷಿಸಲು ಸಹಾಯಕವಾಗಿದೆ. ಇತರ ರಾಜಕೀಯ ಸಂಸ್ಥೆಗಳೊಡನೆ ಹೋಲಿಸಿದಾಗ ಒಂದು ರಾಜಕೀಯ ಸಂಸ್ಥೆಯಲ್ಲಿನ ಅನುಕೂಲಗಳು, ದೋಷಗಳು ಮತ್ತು ಸಾಧ್ಯತೆಗಳು ಮನವರಿಕೆಯಾಗುತ್ತವೆ. ಆಗ ರಾಜಕೀಯ ಸಂಸ್ಥೆಗಳಲ್ಲಿನ ಕೊರತೆಗಳನ್ನು ಸರಿಪಡಿಸಿಕೊಳ್ಳುವುದು ಸುಲಭವಾಗುತ್ತದೆ. ಮುಂದುವರಿದು, ಆಲ್ಮಂಡ್ ಮತ್ತು ಪೊವೆಲ್ ಅಭಿಪ್ರಾಯಪಟ್ಟಂತೆ ನಿರ್ದಿಷ್ಟ ರಾಜಕೀಯ ಸಂಸ್ಥೆಗಳ ಪರ್ಯಾಯ ಸಂಸ್ಥೆಗಳನ್ನು ಕಂಡುಕೊಳ್ಳಲು ತೌಲನಿಕ ಸರ್ಕಾರ ಮತ್ತು ರಾಜಕೀಯವು ಅವಕಾಶ ಒದಗಿಸುತ್ತದೆ. ಹೀಗೆ ತೌಲನಿಕ ರಾಜಕೀಯದ ಅಧ್ಯಯನವು ರಾಜಕೀಯ ಸಂಸ್ಥೆಗಳ ಸುಧಾರಣೆಗೆ ಸಹಕಾರಿಯಾಗುತ್ತದೆ.

**4. ಸರ್ಕಾರದ ಧೋರಣೆಗಳ ರಚನೆಗೆ ಸಹಕಾರಿ [Help to Formulate Government Policies]:** ವಿಶ್ವದ ಪ್ರತಿಯೊಂದು ದೇಶದ ಸರ್ಕಾರಗಳು ತಮ್ಮ ಜನರ ಕಲ್ಯಾಣಕ್ಕಾಗಿ ವೈವಿಧ್ಯಮಯ ಧೋರಣೆಗಳನ್ನು ಪಾಲಿಸುತ್ತವೆ. ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ವ್ಯಾಪಾರಿ ಧೋರಣೆಗಳು ಸರ್ಕಾರದಿಂದ ಸರ್ಕಾರಕ್ಕೆ ಭಿನ್ನವಾಗಿರುತ್ತವೆ. ಕೆಲ ಸರ್ಕಾರಗಳು ರಾಷ್ಟ್ರೀಕರಣದಲ್ಲಿ, ಮತ್ತೆ ಕೆಲ ಸರ್ಕಾರಗಳು ಖಾಸಗೀಕರಣದಲ್ಲಿ, ಇತರ ಹಲವು ದೇಶದ ಸರ್ಕಾರಗಳು ಜಾಗತೀಕರಣದ ಧೋರಣೆಯಲ್ಲಿ

ಆಸಕ್ತಿ ಹೊಂದಿರುತ್ತವೆ. ಈ ಸನ್ನಿವೇಶದಲ್ಲಿ ಸರ್ಕಾರದ ಮುಖ್ಯಸ್ಥರಿಗೆ ವಿವಿಧ ಸರ್ಕಾರಗಳ ಧೋರಣೆಗಳನ್ನು ಅಭ್ಯಸಿಸಿ ಜನಪರವಾದ ಧೋರಣೆಗಳನ್ನು ರಚಿಸಲು ತೌಲನಿಕ ಸರ್ಕಾರ ಮತ್ತು ರಾಜಕೀಯವು ನೆರವಾಗುತ್ತದೆ.

**5. ರಾಜಕೀಯ ವರ್ತನೆಗಳಲ್ಲಿ ಪರಿವರ್ತನೆ** [Change in the Political Behaviours]: ತೌಲನಿಕ ರಾಜಕೀಯದ ನೆರವಿನಿಂದ ವಿವಿಧ ದೇಶಗಳ ಜನರ ರಾಜಕೀಯ ವರ್ತನೆಗಳನ್ನು ಅರಿಯಬಹುದಾಗಿದೆ. ಇದರಿಂದ ನಿರ್ದಿಷ್ಟ ದೇಶದ ಜನರು ತಮ್ಮ ರಾಜಕೀಯ ವರ್ತನೆಗಳಲ್ಲಿನ ದೋಷಗಳನ್ನು ಮನವರಿಕೆ ಮಾಡಿಕೊಂಡು ಅವುಗಳನ್ನು ಪರಿವರ್ತಿಸಿಕೊಳ್ಳಲು ಸಾಧ್ಯವಾಗುತ್ತದೆ. ಫಲವಾಗಿ ದೇಶಗಳ ರಾಜಕೀಯ ವ್ಯವಸ್ಥೆಯ ಗುಣಮಟ್ಟ ಸುಧಾರಿಸುತ್ತದೆ. ಉದಾ: ಚುನಾವಣೆಗಳ ಸಮಯದಲ್ಲಿ ಅಮೇರಿಕಾದ ಮತದಾರರು ಪ್ರಜಾಪ್ರಭುತ್ವದ ರಕ್ಷಣೆ ಮಾಡಬಲ್ಲ ವ್ಯಕ್ತಿಗೆ ಮತ ನೀಡುವ ವರ್ತನೆಯನ್ನು ಅಧ್ಯಯನ ಮಾಡುವ ಮತದಾರ ಸಹಜವಾಗಿ ಭಾರತದ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವ ಪ್ರತಿನಿಧಿಯನ್ನು ಚುನಾಯಿಸಿಕೊಳ್ಳಲು ಮುಂದಾಗುವ ಸಾಧ್ಯತೆ.

**6. ಜಾಗತಿಕ ಸವಾಲುಗಳಿಗೆ ಪರಿಹಾರ** [Remedy for World Challenges]: ತೌಲನಿಕ ರಾಜಕೀಯವು ಪ್ರಸ್ತುತ ವಿಶ್ವದ ಹಲವು ದೇಶಗಳನ್ನು ಕಾಡುತ್ತಿರುವ ಭಯೋತ್ಪಾದನೆ, ಭ್ರಷ್ಟಾಚಾರ, ಮಾನವ ಹಕ್ಕುಗಳ ಉಲ್ಲಂಘನೆ, ಪರಿಸರ ನಾಶದಂತಹ ಅನೇಕ ಸಮಸ್ಯೆಗಳನ್ನು ಪ್ರತಿನಿಧಿಸುತ್ತಿದೆ. ಈ ಸಮಸ್ಯೆಗಳ ತೌಲನಿಕ ಅಧ್ಯಯನವು ಸಮಸ್ಯೆಯ ಆಳವಾದ ವಿವರಗಳನ್ನು ಸಂಗ್ರಹಿಸಿ ಸೂಕ್ತ ಪರಿಹಾರವನ್ನು ಕಂಡುಕೊಳ್ಳಲು ನೆರವಾಗುತ್ತದೆ. ಉದಾ: ಭಯೋತ್ಪಾದನೆ ಕುರಿತಂತೆ ಅದರ ಸ್ವರೂಪ, ಪ್ರಮಾಣ, ಉದ್ದೇಶಗಳನ್ನು ಜಾಗತಿಕವಾಗಿ ತೌಲನಿಕ ತಳಹದಿಯಲ್ಲಿ ಅಧ್ಯಯನ ನಡೆಸುವುದರಿಂದ ಅದಕ್ಕೆ ಸೂಕ್ತ ಪರಿಹಾರವನ್ನು ಗುರುತಿಸಲು ಶಕ್ತರಾಗುವುದು.

**7. ನೂತನ ರಾಷ್ಟ್ರಗಳಿಗೆ ದಾರಿ ದೀಪ:** ಶತಮಾನಗಳವರೆಗೆ ದಾಸ್ಯದಲ್ಲಿ ನಲುಗಿ ಸ್ವಾತಂತ್ರ್ಯ ಗಳಿಸುವ ನೂತನ ರಾಷ್ಟ್ರಗಳಿಗೆ ತೌಲನಿಕ ಸರ್ಕಾರ ಮತ್ತು ರಾಜಕೀಯವು ದಿಕ್ಸೂಚಿ ಎನ್ನಬಹುದಾಗಿದೆ. ನೂತನ ರಾಷ್ಟ್ರಗಳು ತನ್ನಂತೆಯೇ ನವಜಾತ ದೇಶಗಳ ಮತ್ತು ಇತರ ಪುರಾತನ ದೇಶಗಳ ರಾಜಕೀಯ ವ್ಯವಸ್ಥೆಯನ್ನು ತೌಲನಿಕವಾಗಿ ಅಭ್ಯಸಿಸಿ ಸೂಕ್ತವಾದ ಸರ್ಕಾರ, ಸಂವಿಧಾನ, ಆರ್ಥಿಕ ನೀತಿಗಳನ್ನು ಅನುಸರಿಸಲು ಸಾಧ್ಯವಾಗುತ್ತದೆ. ಉದಾ: 1947 ರಲ್ಲಿ ಸ್ವತಂತ್ರಗೊಂಡ ಭಾರತದ ಸಂವಿಧಾನ ರಚನಾ ಸಭೆಯ ಸದಸ್ಯರು ಇತರ ದೇಶಗಳ ಉತ್ತಮಾಂಶಗಳನ್ನು ನಮ್ಮ ದೇಶದ ಸನ್ನಿವೇಶಕ್ಕೆ ತಕ್ಕಂತೆ ಮಾರ್ಪಡಿಸಿ ಅಳವಡಿಸಿಕೊಳ್ಳಲು ತೌಲನಿಕ ರಾಜಕೀಯದ ಜ್ಞಾನವು ಸಹಕಾರಿಯಾದುದು.

**8. ಆದರ್ಶ ರಾಜಕೀಯ ತತ್ವಗಳ ಪಾಲನೆ:** ಜಗತ್ತಿನಲ್ಲಿ ಇಂದು ಹಲವು ರಾಜಕೀಯ ತತ್ವ ಪ್ರಣಾಳಿಕೆಗಳಿವೆ. ಕೆಲ ದೇಶಗಳು ಬಂಡವಾಳಶಾಹಿತ್ವವನ್ನು, ಮತ್ತೆ ಕೆಲ ದೇಶಗಳು



ಸಮಾಜವಾದವನ್ನು, ಹಲವು ದೇಶಗಳು ಪ್ರಜಾಪ್ರಭುತ್ವವನ್ನು, ಇತರ ದೇಶಗಳು ಸರ್ವಾಧಿಕಾರತ್ವವನ್ನು ಅನುಸರಿಸುತ್ತಿವೆ. ಈ ವಿವಿಧ ಸೈದ್ಧಾಂತಿಕ ತತ್ವಾದರ್ಶಗಳ ಪೈಕಿ ಉತ್ತಮವಾದುದನ್ನು ದೇಶವೊಂದು ಅಳವಡಿಸಿಕೊಳ್ಳಲು ತೌಲನಿಕ ರಾಜಕೀಯದ ಅಧ್ಯಯನವು ಸಹಕಾರಿಯಾಗುತ್ತದೆ.

**9. ರಾಜಕೀಯ ಪರಿಕಲ್ಪನೆಯ ಪರಿಪೂರ್ಣ ತಿಳುವಳಿಕೆ:** ತೌಲನಿಕ ರಾಜಕೀಯವು ಪ್ರಸ್ತುತ ಕೇವಲ ರಾಜಕೀಯ ಸಂಸ್ಥೆಗಳ ಅಧ್ಯಯನಕ್ಕೆ ಸೀಮಿತವಾಗಿಲ್ಲ. ವಿವಿಧ ರಾಜಕೀಯ ಚಟುವಟಿಕೆಗಳು, ಪ್ರಕ್ರಿಯೆಗಳು, ವರ್ತನೆಗಳು ಸೇರಿದಂತೆ ಸಮಗ್ರ ರಾಜಕೀಯ ವಿದ್ಯಮಾನಗಳನ್ನು ಪ್ರತಿನಿಧಿಸುತ್ತಿದೆ. ಇದರಿಂದಾಗಿ ತೌಲನಿಕ ರಾಜಕೀಯವನ್ನು ಅಭ್ಯಸಿಸುವ ಅಧ್ಯಯನಾರ್ಥಿಯು ಪರಿಪೂರ್ಣ ರಾಜಕೀಯ ತಿಳುವಳಿಕೆ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.

ಈ ಮೇಲೆ ಸಂಕ್ಷಿಪ್ತವಾಗಿ ವಿವರಿಸಲಾದ ಅಂಶಗಳ ನೆರಳಿನಲ್ಲಿ ತೌಲನಿಕ ಸರ್ಕಾರ ಮತ್ತು ರಾಜಕೀಯದ ಮಹತ್ವವನ್ನು ಅರ್ಥೈಸಿಕೊಳ್ಳಬಹುದಾಗಿದೆ. ಸರ್ಕಾರ ಮತ್ತು ರಾಜಕೀಯ ಪರಿಕಲ್ಪನೆಯಡಿ ಚರ್ಚಿಸಲಾಗುವ ಸಕಲ ಪರಿಕಲ್ಪನೆಗಳೂ ತೌಲನಿಕ ಸರ್ಕಾರ ಮತ್ತು ರಾಜಕೀಯದಡಿ ಗುರುತಿಸಲ್ಪಡುವುದರಿಂದ ಅವೆಲ್ಲವುಗಳ ಹಿನ್ನೆಲೆಯಲ್ಲಿ ಇದರ ಮಹತ್ವ ಮತ್ತಷ್ಟು ಅಧಿಕಗೊಳ್ಳುತ್ತದೆ. ಸರ್ಕಾರಗಳ ಮಾದರಿ, ಪಕ್ಷ ಪದ್ಧತಿ, ಸಂವಿಧಾನಗಳು ಸೇರಿದಂತೆ ನಿರ್ಧಾರ ಕೈಗೊಳ್ಳುವಿಕೆ, ಶಾಸನ ರಚನೆ, ಮತದಾನದಂತಹ ಪ್ರಕ್ರಿಯೆಗಳ ತೌಲನಿಕ ಅಧ್ಯಯನವು ದಿನದಿಂದ ದಿನಕ್ಕೆ ತೌಲನಿಕ ರಾಜಕೀಯದ ಉಪಯುಕ್ತತೆಯನ್ನು ಇಮ್ಮಡಿಗೊಳಿಸುತ್ತಿವೆ ಎಂದರೆ ತಪ್ಪಾಗಲಾರದು. ಮುಂದುವರಿದು, ಅಂತರರಾಷ್ಟ್ರೀಯ ಬೆಳವಣಿಗೆಗಳನ್ನು ತೌಲನಿಕ ರಾಜಕೀಯವು ಒದಗಿಸುವ ಮೂಲಕ ಅಧ್ಯಯನಾರ್ಥಿಗಳನ್ನು ವಿಶ್ವಮಾನವರನ್ನಾಗಿ ರೂಪಿಸುವಲ್ಲಿ ಶಕ್ತವಾಗಿದೆ. ನಿತ್ಯವೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಸಾಗಿರುವ ತೌಲನಿಕ ರಾಜಕೀಯದ ಮಹತ್ವವೂ ಏರುತ್ತಲೇ ಸಾಗಿದುದು ಗಮನಾರ್ಹ ಸಂಗತಿ.

## ಮಾದರಿ ಪ್ರಶ್ನೆಗಳು [Model Questions]:

[A.] ಎರಡು ಅಂಕಗಳ ಪ್ರಶ್ನೆಗಳು:

1. ಮಾನವನ ತೌಲನಿಕ ಸ್ವಭಾವದ ಎರಡು ಪ್ರಯೋಜನಗಳನ್ನು ತಿಳಿಸಿ.
2. ಸರ್ಕಾರ ಎಂದರೇನು?
3. ರಾಜಕೀಯದ ಅರ್ಥವನ್ನು ಬರೆಯಿರಿ.
4. ತೌಲನಿಕ ಸರ್ಕಾರ ಮತ್ತು ರಾಜಕೀಯದ ಅರ್ಥವನ್ನು ತಿಳಿಸಿರಿ.
5. ಎಂ. ಜಿ. ಸ್ಮಿತ್ ನೀಡಿರುವ ತೌಲನಿಕ ಸರ್ಕಾರ ಮತ್ತು ರಾಜಕೀಯದ ವ್ಯಾಖ್ಯಾನವನ್ನು ಬರೆಯಿರಿ.
6. ಸಾಂಪ್ರದಾಯಿಕ ತೌಲನಿಕ ರಾಜಕೀಯವು ಸೀಮಿತವಾಗಿತ್ತು. ಹೇಗೆ?
7. ಯಾವುದಾದರೂ ಮೂರು ಸರ್ಕಾರೇತರ ರಾಜಕೀಯ ರಚನೆಗಳನ್ನು ಹೆಸರಿಸಿ.
8. ಯಾವುದಾದರೂ ನಾಲ್ಕು ರಾಜಕೀಯ ಪ್ರಕ್ರಿಯೆಗಳನ್ನು ಬರೆಯಿರಿ.
9. ಸಮಕಾಲೀನ ಪ್ರಮುಖ ಜಾಗತಿಕ ಸವಾಲುಗಳನ್ನು ತಿಳಿಸಿರಿ.
10. ಆಲ್ಮಂಡ್ ಮತ್ತು ಪೊವೆಲ್ ಪ್ರಕಾರ ತೌಲನಿಕ ರಾಜಕೀಯದ ವ್ಯಾಪ್ತಿಯ ವಿಸ್ತರಣೆಗೆ ಪ್ರಧಾನ ಕಾರಣಗಳಾವುವು?
11. ತೌಲನಿಕ ಸರ್ಕಾರ ಮತ್ತು ರಾಜಕೀಯ ಅಧ್ಯಯನದ ಎರಡು ಅನುಕೂಲಗಳನ್ನು ಬರೆಯಿರಿ.

[B.] ಐದು ಅಂಕಗಳ ಪ್ರಶ್ನೆಗಳು:

1. ತೌಲನಿಕ ಸರ್ಕಾರ ಮತ್ತು ರಾಜಕೀಯದ ಉಗಮ ಮತ್ತು ಬೆಳವಣಿಗೆಯನ್ನು ಕುರಿತು ಟಿಪ್ಪಣಿ ಬರೆಯಿರಿ.
2. ತೌಲನಿಕ ಸರ್ಕಾರ ಮತ್ತು ರಾಜಕೀಯದ ಸ್ವರೂಪವನ್ನು ಸಂಕ್ಷೀಪ್ತವಾಗಿ ವಿವರಿಸಿರಿ.
3. ತೌಲನಿಕ ರಾಜಕೀಯದ ವ್ಯಾಪ್ತಿಯನ್ನು ಚರ್ಚಿಸಿರಿ.
4. ತೌಲನಿಕ ರಾಜಕೀಯದ ಮಹತ್ವವನ್ನು ಸಂಕ್ಷೀಪ್ತವಾಗಿ ವಿವರಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ತೌಲನಿಕ ರಾಜಕೀಯದ ಸ್ವರೂಪ ಮತ್ತು ವ್ಯಾಪ್ತಿಯನ್ನು ಚರ್ಚಿಸಿರಿ.
2. ತೌಲನಿಕ ಸರ್ಕಾರ ಮತ್ತು ರಾಜಕೀಯದ ಅರ್ಥ ಹಾಗೂ ಮಹತ್ವವನ್ನು ವಿವರಿಸಿರಿ



ಅಧ್ಯಾಯ 2:

# ತೌಲನಿಕ ಸರ್ಕಾರ ಮತ್ತು ರಾಜಕೀಯದ ಅಧ್ಯಯನ ವಿಧಾನಗಳು

## [Approaches to the Study of Comparative Government and Politics].

### ಪ್ರಸ್ತಾವನೆ [Introduction]:

(ಅಪ್ರೋಚ್ ಎಂಬ ಆಂಗ್ಲ ಪದಕ್ಕೆ ಸಮಾನಾಂತರವಾಗಿ ಕನ್ನಡದಲ್ಲಿ ಅಧ್ಯಯನ ಮಾರ್ಗ, ಅಧ್ಯಯನ ವಿಧಾನ ಅಥವಾ ಅಧ್ಯಯನ ದೃಷ್ಟಿಕೋನ ಎಂಬ ಪದಗಳನ್ನು ಬಳಸಲಾಗುತ್ತದೆ. ಆಸಕ್ತಿದಾಯಕ ಅಂಶವೇನೆಂದರೆ ದೃಷ್ಟಿಕೋನವು ವಿಶಾಲವಾಗಿದ್ದು ವಿಧಾನವು ದೃಷ್ಟಿಕೋನವೊಂದರ ಭಾಗವಾಗಿರುತ್ತದೆ. ಸಾಮಾನ್ಯವಾಗಿ ಸಮಾಜ ವಿಜ್ಞಾನಗಳಲ್ಲಿ ಅನುಗಮನ ವಿಧಾನ, ನಿಗಮನ ವಿಧಾನ, ತೌಲನಿಕ ವಿಧಾನ, ಐತಿಹಾಸಿಕ ವಿಧಾನ, ವೈಜ್ಞಾನಿಕ ವಿಧಾನಗಳನ್ನು ವಿವಿಧ ಅಧ್ಯಯನ ದೃಷ್ಟಿಕೋನಗಳಡಿಯಲ್ಲಿ ಬಳಸಿಕೊಳ್ಳಲಾಗುತ್ತದೆ. ನಮ್ಮಲ್ಲಿ ಬಹುತೇಕರು ದೃಷ್ಟಿಕೋನ ಮತ್ತು ವಿಧಾನಗಳ ನಡುವೆ ವ್ಯತ್ಯಾಸವನ್ನು ಗುರುತಿಸದೇ ಅವೆರಡನ್ನೂ ಸಮಾನವಾಗಿ ಬಳಸುತ್ತೇವೆ. ಹೀಗಾಗಿ ಸುಲಭ ಅಧ್ಯಯನದ ದೃಷ್ಟಿಯಿಂದ ಅಧ್ಯಯನ ವಿಧಾನ ಎಂಬ ಪದವನ್ನೇ ಇಲ್ಲಿಯೂ ಹೆಚ್ಚಾಗಿ ಬಳಸಲಾಗಿದೆ.

ಸರಳಾರ್ಥದಲ್ಲಿ ರಾಜಕೀಯವನ್ನು ಪರಿಪೂರ್ಣವಾಗಿ ಅರ್ಥೈಸಿಕೊಳ್ಳಲು ರಾಜಕೀಯ ಚಿಂತಕರಿಗೆ ನೆರವಾಗುವ ಸಾಧನಗಳನ್ನು ದೃಷ್ಟಿಕೋನ ಎನ್ನಬಹುದು. ರಾಜಕೀಯ ಸಮಸ್ಯೆಯೊಂದನ್ನು ಗುರುತಿಸಿಕೊಂಡು ಸೂಕ್ತವಾದ ಮಾಹಿತಿಯನ್ನು ಉಪಯೋಗಿಸಿಕೊಂಡು ಅಧ್ಯಯನ ನಡೆಸುವುದೇ ಅಧ್ಯಯನ ಮಾರ್ಗ ಅಥವಾ ದೃಷ್ಟಿಕೋನವೆನಿಸುತ್ತದೆ. ವಿಶಾಲಾರ್ಥದಲ್ಲಿ ನಿರ್ದಿಷ್ಟ ವಿದ್ಯಮಾನವನ್ನು ಅರಿತುಕೊಳ್ಳುವ ಉದ್ದೇಶಕ್ಕಾಗಿ ಏನನ್ನು ಅಧ್ಯಯನ ಮಾಡಬೇಕು ಮತ್ತು ಸೂಕ್ತ ಮಾಹಿತಿಗೆ ಆದ್ಯತೆ ನೀಡಿ ಹೇಗೆ ಅಧ್ಯಯನ ಮಾಡಬೇಕೆಂಬುದನ್ನು ವಿವರಿಸುವುದೇ ದೃಷ್ಟಿಕೋನವಾಗಿದೆ.

ಕಾಲಾಂತರದಲ್ಲಿ ಪರಿವರ್ತನೆಗೊಳ್ಳುತ್ತಾ ಬಂದಿರುವ ರಾಜಕೀಯ ಪರಿಕಲ್ಪನೆಯು ಪ್ರಸ್ತುತ ವಿಶಾಲ ವ್ಯಾಪ್ತಿಯನ್ನು ಆವರಿಸಿದೆ. ರಾಜಕೀಯವು ಹೊಂದಿರುವ ವಿಶಾಲ

ವ್ಯಾಪ್ತಿಯಲ್ಲಿನ ವಿವಿಧ ವಿಷಯಗಳನ್ನು ಪರಿಪೂರ್ಣವಾಗಿ ಅರ್ಥೈಸಿಕೊಳ್ಳಲು ಅನೇಕ ಅಧ್ಯಯನ ದೃಷ್ಟಿಕೋನ ಅಥವಾ ವಿಧಾನಗಳನ್ನು ರಾಜ್ಯಶಾಸ್ತ್ರಜ್ಞರು ಬಳಸಿಕೊಂಡಿರುವರು. ಅರಿಸ್ಟಾಟಲ್‌ನ ಕಾಲದಿಂದ ಮಾನವನ ರಾಜಕೀಯ ಚಟುವಟಿಕೆ, ಪ್ರಕ್ರಿಯೆ ಹಾಗೂ ವಿಚಾರಗಳಂತಹ ಮಜಲುಗಳ ಅಧ್ಯಯನಕ್ಕೆ ಸಹಕಾರಿಯಾಗುವ ವಿವಿಧ ಅಧ್ಯಯನ ವಿಧಾನಗಳನ್ನು ತಜ್ಞರು ಅವಲಂಬಿಸಿರುವರು. ಮುಂದುವರಿದು ತಾವು ಆಯ್ಕೆ ಮಾಡಿಕೊಂಡ ಕ್ಷೇತ್ರ ಅಥವಾ ವಿಷಯಕ್ಕೆ ಅಂದರೆ ಸಾರ್ವಜನಿಕ ಆಡಳಿತ, ಅಂತರರಾಷ್ಟ್ರೀಯ ಸಂಬಂಧಗಳು, ರಾಜಕೀಯ ಸಿದ್ಧಾಂತ ಮುಂತಾದವುಗಳಿಗೆ ತಕ್ಕಂತೆ ರಾಜ್ಯಶಾಸ್ತ್ರಜ್ಞರು ವೈವಿಧ್ಯಮಯ ಅಧ್ಯಯನ ವಿಧಾನಗಳನ್ನು ಬಳಸಿಕೊಳ್ಳುತ್ತಾ ಬಂದಿರುವರು. ಹೀಗೆ ರಾಜಕೀಯದ ಪರಿಪೂರ್ಣ ತಿಳುವಳಿಕೆಗಾಗಿ ಬಳಸಲ್ಪಡುವ ಹಾಗೂ ತೌಲನಿಕ ರಾಜಕೀಯದ ಅಧ್ಯಯನಕ್ಕೆ ಸಹಕಾರಿಯಾಗುವ ಅಧ್ಯಯನದ ವಿಧಾನಗಳನ್ನು ಚಿಂತಕ ಅಲೆನ್ ಬಾಲ್ ತನ್ನ ಆಧುನಿಕ ರಾಜಕೀಯ ಮತ್ತು ಸರ್ಕಾರಗಳು ಎಂಬ ಗ್ರಂಥದಲ್ಲಿ ಸಾಂಪ್ರದಾಯಿಕ ವಿಧಾನಗಳು ಮತ್ತು ಆಧುನಿಕ ವಿಧಾನಗಳು ಎಂಬುದಾಗಿ ವರ್ಗೀಕರಿಸಿರುವರು. ಗಮನಾರ್ಹ ಅಂಶವೇನೆಂದರೆ ರಾಜಕೀಯದ ಅಧ್ಯಯನಕ್ಕೆ ಬಳಸಲ್ಪಡುವ ಅಧ್ಯಯನ ವಿಧಾನಗಳು ತೌಲನಿಕ ರಾಜಕೀಯದ ಅಧ್ಯಯನಕ್ಕೂ ಸಹಕಾರಿಯಾಗಿದ್ದು ಅವುಗಳ ಸಂಕ್ಷಿಪ್ತ ವಿವರಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ನೀಡಲಾಗಿದೆ.

### [I.] ಸಾಂಪ್ರದಾಯಿಕ ವಿಧಾನಗಳು [Traditional Approaches]:

ಸಾಂಪ್ರದಾಯಿಕ ವಿಧಾನಗಳು ಮೌಲ್ಯಾಧಾರಿತವಾಗಿದ್ದು ರಾಜಕೀಯ ವಿದ್ಯಮಾನಗಳ ಅಧ್ಯಯನದಲ್ಲಿ ಮೌಲ್ಯಗಳ ಪ್ರಾಶಸ್ತ್ಯವನ್ನು ಪ್ರತಿಪಾದಿಸುತ್ತವೆ. ಮುಂದುವರಿದು, ವಾಸ್ತವಿಕತೆ ಹಾಗೂ ಮೌಲ್ಯ ಪರಸ್ಪರ ಅಂತರ್‌ಸಂಬಂಧ ಹೊಂದಿರುವುದರಿಂದ ರಾಜಕೀಯದ ಅಧ್ಯಯನವು ಕೇವಲ ವಾಸ್ತವಿಕತೆಯಿಂದ ಕೂಡಿರುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿವೆ. ಹೀಗಾಗಿ ಪ್ಲೇಟೊ ಮತ್ತು ಅರಿಸ್ಟಾಟಲ್ ಕಾಲದಿಂದಲೂ ಸಾಂಪ್ರದಾಯಿಕ ದೃಷ್ಟಿಕೋನಗಳು ಬಳಸಲ್ಪಟ್ಟಿವೆ. ಕಾಲಾನುಕ್ರಮದಲ್ಲಿ ರಾಜಕೀಯ ಚಿಂತಕರು ಅಥವಾ ತಜ್ಞರಿಂದ ಬಳಸಲ್ಪಟ್ಟ ಪ್ರಮುಖ ಸಾಂಪ್ರದಾಯಿಕ ವಿಧಾನಗಳನ್ನು ಕುರಿತು ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

#### A. ತತ್ವಶಾಸ್ತ್ರೀಯ ವಿಧಾನ [Philosophical Approache]:

ತತ್ವಶಾಸ್ತ್ರೀಯ ವಿಧಾನವು ರಾಜಕೀಯ ವಿದ್ಯಮಾನಗಳ ವಿಶ್ಲೇಷಣೆಯ ಅತ್ಯಂತ ಪುರಾತನ ವಿಧಾನವಾಗಿದೆ. ಈ ವಿಧಾನವನ್ನು ವಾನ್ ಡೈಕ್ 'ಚಿಂತನೆಯನ್ನು ಕುರಿತಾದ ಚಿಂತನೆ' ಎಂಬುದಾಗಿ ಬಣ್ಣಿಸಿರುವರು. ಈ ವಿಧಾನವು ಆದರ್ಶಾತ್ಮಕ, ಪರಿಮಾಣಾತ್ಮಕ ಹಾಗೂ ನಿಗಮನಾತ್ಮಕ ಸ್ವರೂಪವನ್ನು ಹೊಂದಿದೆ. ತತ್ವಶಾಸ್ತ್ರೀಯ ವಿಧಾನವು ರಾಜ್ಯವು



ಹೇಗಿದೆ ಎಂಬುವ ಬದಲು ರಾಜ್ಯವು ಹೇಗಿರಬೇಕು ಎಂಬುದನ್ನು ಚಿಂತಿಸುತ್ತದೆ. ರಾಜಕೀಯ ವಿದ್ಯಮಾನಗಳ ಅಧ್ಯಯನಕ್ಕೆ ಮೌಲ್ಯಗಳು ಅನಿವಾರ್ಯ ಎಂಬುದು ಈ ವಿಧಾನದ ತಿರುಳು. ಪ್ಲೇಟೊ, ರೂಸೊ, ಕ್ಯಾಂಟ್, ಬೊಸಾಂಕೆ, ಜೆ. ಎಸ್. ಮಿಲ್, ಸಿಡ್ವಿಕ್ ಈ ವಿಧಾನವನ್ನು ಬಳಸಿದ್ದರೂ ಲಿಯೋ ಸ್ಟ್ರಾಸ್ ಇದರ ಪ್ರಧಾನ ಪ್ರತಿಪಾದಕ. ಸಾಮಾನ್ಯವಾಗಿ ಆದರ್ಶ ರಾಜ್ಯವನ್ನು ಕುರಿತಂತೆ ಚಿಂತಿಸುವ ಸಿದ್ಧಾಂತಿಗಳು ತಾತ್ವಿಕ ವಿಧಾನವನ್ನು ಅನುಸರಿಸುತ್ತಾರೆ. ಒಟ್ಟಾರೆ ನ್ಯಾಯ, ಸ್ವಾತಂತ್ರ್ಯ, ಸಂತೋಷದಂತಹ ಮೌಲ್ಯಗಳನ್ನಾಧರಿಸಿ ಗುಣಾತ್ಮಕ, ಭಾವನಾತ್ಮಕ ಅಥವಾ ಊಹಾತ್ಮಕವಾದ ಸಾಮಾನ್ಯ ತತ್ವಗಳನ್ನು ಪ್ರತಿಪಾದಿಸಲು ಈ ವಿಧಾನವು ತೌಲನಿಕ ರಾಜಕೀಯ ಸಿದ್ಧಾಂತಿಗಳಿಂದ ಬಳಸಲ್ಪಡುತ್ತದೆ. ಈ ವಿಧಾನದ ಪ್ರಮುಖ ಅನುಕೂಲಗಳೆಂದರೆ

1. ಉತ್ತಮವಾದುದನ್ನು ಕೆಟ್ಟದ್ದರಿಂದ ಬೇರ್ಪಡಿಸಲು ಸಹಕಾರಿಯಾಗಿರುವ ತಾತ್ವಿಕ ವಿಧಾನವು ರಾಜಕೀಯದಲ್ಲಿ ನೈತಿಕತೆ ಮತ್ತು ಮೌಲ್ಯಗಳನ್ನು ಪ್ರತಿಪಾದಿಸಲು ಪ್ರೇರಣೆ ಒದಗಿಸುತ್ತದೆ
2. ರಾಜಕೀಯ ವಿದ್ಯಮಾನಗಳ ಮೌಲ್ಯಾಧಾರಿತ ವಿಶ್ಲೇಷಣೆಗೆ ಅಧ್ಯಯನ ನಡೆಸಲು ಸ್ಫೂರ್ತಿದಾಯಕವಾಗಿದೆ.
3. ಸಾರ್ವತ್ರಿಕವಾಗಿ ಪಾಲಿಸಬಹುದಾದ ಸಾರ್ವಜನಿಕ ಗುಣಗಳನ್ನು ಪ್ರತಿಪಾದಿಸುತ್ತದೆ.
4. ಪರಿಪೂರ್ಣ ರಾಜ್ಯದ ಆದರ್ಶಗಳ ಪ್ರತಿಪಾದನೆಗೆ ಸಹಕಾರಿ. ಉದಾ: ತಾತ್ವಿಕ ವಿಧಾನದ ಬೆಳಕಿನಲ್ಲಿಯೇ ಪ್ಲೇಟೊ ಆದರ್ಶ ರಾಜ್ಯದ, ಗಾಂಧಿ ರಾಮ ರಾಜ್ಯದ ಕನಸನ್ನು ಕಂಡಿದುದು.

ಮೇಲೆ ಚರ್ಚಿಸಲಾದ ಗುಣಗಳ ನಡುವೆ ತತ್ವಶಾಸ್ತ್ರೀಯ ವಿಧಾನವು ರಾಜಕೀಯ ವಿದ್ಯಮಾನಗಳಿಗೆ ಬಳಸಲ್ಪಟ್ಟರೆ. ಈ ಕೆಳಗಿನ ನ್ಯೂನ್ಯತೆಗಳನ್ನು ಕಾಣಬಹುದಾಗಿದೆ.

[1.] ಈ ವಿದಾನವು ಊಹಾತ್ಮಕವಾಗಿದ್ದು ಪ್ರಾಯೋಗಿಕ ಸ್ವರೂಪದ ಸಿದ್ಧಾಂತಗಳಿಗೆ ನೆರವಾಗಲಾರದು.

[2.] ಈ ವಿಧಾನವು ಶೈಕ್ಷಣಿಕ ಮೌಲ್ಯಗಳನ್ನು ಮಾತ್ರ ಪ್ರತಿಪಾದಿಸುತ್ತದೆ.

[3.] ಈ ವಿಧಾನವು ಸಂಕೀರ್ಣ ರಾಜಕೀಯ ಸಮಸ್ಯೆಗಳನ್ನು ಪರಿಗಣಿಸಿ ಚಿಕ್ಕ ಪುಟ್ಟ ಸವಾಲುಗಳನ್ನು ನಿರ್ಲಕ್ಷಿಸುತ್ತದೆ.

[4.] ಈ ವಿಧಾನವು ರಾಜಕೀಯ ವಿದ್ಯಮಾನದ ಭಾಗವಾಗಿರುವ ಸಾಮಾಜಿಕ ಸನ್ನಿವೇಶ ಮತ್ತು ವ್ಯಕ್ತಿಗತ ವರ್ತನೆಗಳನ್ನು ಕಡೆಗಣಿಸುತ್ತದೆ.

[5.] ಈ ವಿಧಾನವು ಅಮೂರ್ತ ಸ್ವರೂಪವನ್ನು ಹೊಂದಿದ್ದು ವಾಸ್ತವಿಕತೆಯಿಂದ ದೂರವಿರುತ್ತದೆ.

ಒಟ್ಟಿನಲ್ಲಿ ಸತ್ಯ ಅಥವಾ ಜ್ಞಾನದ ಅನ್ವೇಷಣೆಗೆ ಪ್ರತಿಪಾದಿಸಲ್ಪಟ್ಟ ಊಹೆ ಅಥವಾ ಕಲ್ಪನೆಗಳನ್ನು ಈ ವಿಧಾನವು ಪ್ರತಿನಿಧಿಸುತ್ತದೆ. ಉತ್ತಮ ಹಾಗೂ ಶುದ್ಧ ರಾಜಕೀಯ ವಿಚಾರ ಅಥವಾ ವ್ಯವಸ್ಥೆಗಳ ಪ್ರತಿಪಾದನೆಗೆ ತತ್ವಶಾಸ್ತ್ರೀಯ ವಿಧಾನವು ತೌಲನಿಕ ರಾಜಕೀಯ ಸಿದ್ಧಾಂತಿಗಳಿಗೆ ನೆರವಾಗುತ್ತದೆ. ರಾಜಕೀಯ ವಿದ್ಯಮಾನಗಳ ತೌಲನಿಕ ಅಧ್ಯಯನಕ್ಕೆ ನೈತಿಕ ಹಾಗೂ ಪ್ರಮಾಣಿಕ ತಳಹದಿಯನ್ನು ತಾತ್ವಿಕ ವಿಧಾನ ಒದಗಿಸುತ್ತದೆ. ರಾಜ್ಯದ ಉಗಮ, ರಾಜನ ಕಾರ್ಯಗಳು, ಪೌರತ್ವ, ಪ್ರಜೆಗಳ ಹಕ್ಕು ಮತ್ತು ಕರ್ತವ್ಯಗಳ ಆದರ್ಶ ಸ್ವರೂಪವನ್ನು ಈ ವಿಧಾನವು ಪ್ರತಿನಿಧಿಸುತ್ತದೆ.

### B. ಐತಿಹಾಸಿಕ ವಿಧಾನ [Historical Approache]:

ಇತಿಹಾಸವು ಮಾನವ ಸಮಾಜದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಘಟನೆಗಳ ವಿವರಣೆಯಾಗಿದೆ. ಹೀಗಾಗಿ ಇತಿಹಾಸವನ್ನು ಗತಕಾಲದ ರಾಜಕೀಯ ಎನ್ನಲಾಗುತ್ತದೆ. ಸರ್ಕಾರ ಹಾಗೂ ಇತರ ರಾಜಕೀಯ ಸಂಸ್ಥೆಗಳ ಸಮಕಾಲೀನ ಅಧ್ಯಯನಕ್ಕೆ ಐತಿಹಾಸಿಕ ತಿಳುವಳಿಕೆ ಅಗತ್ಯವೆಂಬುದನ್ನು ರಾಜ್ಯಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ. ಆದ್ದರಿಂದಲೇ ಚಿಂತಕ ಸೀಲೆ 'ಇತಿಹಾಸವಿಲ್ಲದ ರಾಜಕೀಯವು ಬೇರುಗಳಿಲ್ಲದ ಮರ ಹಾಗೂ ರಾಜಕೀಯವಿಲ್ಲದ ಇತಿಹಾಸ ಫಲ ನೀಡದ ಮರ' ಎಂದಿರುವರು. ಮನುಕುಲದ ನಾಗರಿಕತೆಗಳ ಪ್ರಗತಿ ಹಾಗೂ ಅವನತಿಗೆ ಇತಿಹಾಸದಲ್ಲಿ ಸಾಕ್ಷಿಗಳನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿಯೇ ಜಾರ್ಜ್ ಸಬೈನ್ ಎಂಬ ಚಿಂತಕ 'ಇತಿಹಾಸವು ರಾಜಕೀಯ ವಿದ್ಯಮಾನಗಳ ಪ್ರಯೋಗಾಲಯ' ಎಂಬುದಾಗಿ ಅಭಿಪ್ರಾಯ ಪಟ್ಟಿರುವ. ಮಾಂಟೆಸ್ಕ್ಯೂ, ಜಾನ್ ಸೀಲೆ, ಫ್ರೀಮನ್, ಲಾಸ್ಕಿ, ಕಾರ್ಲ್‌ಮಾರ್ಕ್ಸ್ ಮುಂತಾದವರು ಐತಿಹಾಸಿಕ ವಿಧಾನವನ್ನು ಬಳಸಿಕೊಂಡು ತಮ್ಮ ರಾಜಕೀಯ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಚಿಂತಕರು ಐತಿಹಾಸಿಕ ವಿಧಾನವನ್ನು ತೌಲನಿಕ ರಾಜಕೀಯ ವಿಶ್ಲೇಷಣೆಗೆ ಬಳಸುವುದರಿಂದ ಉಂಟಾಗುವ ಪ್ರಮುಖ ಅನುಕೂಲಗಳೆಂದರೆ

1. ರಾಜ್ಯದ ಉಗಮವನ್ನು ಕುರಿತಾದ ಹಲವು ಗೊಂದಲಗಳಿಗೆ ಅಂದರೆ ದೈವಿಕ ಸೃಷ್ಟಿ ಸಾಮಾಜಿಕ ಒಪ್ಪಂದದ ಫಲ, ಶಕ್ತಿಯ ಪರಿಣಾಮವೆಂಬ ತಪ್ಪು ರಾಜಕೀಯ ವಿಚಾರಗಳನ್ನು ಹೋಗಲಾಡಿಸಲು ಐತಿಹಾಸಿಕ ವಿಧಾನ ಸಹಕಾರಿ ಎನಿಸಿದೆ.
2. ಸಮಕಾಲೀನ ರಾಜಕೀಯ ಸಂಸ್ಥೆಗಳ ಐತಿಹಾಸಿಕ ಘಟನೆ ಹಾಗೂ ವಿವರಣೆ ಅಧ್ಯಯಿಸಿ ಅವುಗಳ ಸ್ಪಷ್ಟವಾದ ಭವಿಷ್ಯವನ್ನು ಪ್ರತಿಪಾದಿಸಲು ಐತಿಹಾಸಿಕ ವಿಧಾನವು ನೆರವಾಗಿದೆ. ಐತಿಹಾಸಿಕ ವಿಧಾನವನ್ನು ರಾಜ್ಯಶಾಸ್ತ್ರಜ್ಞ ನಿರ್ಲಕ್ಷಿಸಿದರೆ ರಾಜಕೀಯ ಸಂಸ್ಥೆಗಳ ಹಾಗೂ ರಾಜಕೀಯ ವಿಚಾರಧಾರೆಗಳ ಪರಿಪೂರ್ಣ ತಿಳುವಳಿಕೆ ಸಾಧ್ಯವಾಗದು.
3. ಇತಿಹಾಸದಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಸನ್ನಿವೇಶಕ್ಕೆ ಪ್ರತಿಯಾಗಿ ಚಿಂತಿಸಿದ



ಪರಿಣಾಮ ರಾಜಕೀಯ ಸಿದ್ಧಾಂತಗಳು ಮಂಡಿಸಲ್ಪಡುತ್ತವೆ. ಉದಾ: ಗ್ರೀಕರ ದುರಾಡಳಿತದಿಂದ ಪ್ಲೇಟೊ ತತ್ವಜ್ಞಾನಿ ಅರಸು ಸಿದ್ಧಾಂತವನ್ನು, ಇಂಗ್ಲೆಂಡಿನ ಸನ್ನಿವೇಶವು ಹಾಬ್ಸ್‌ನ ಸಾಮಾಜಿಕ ಒಪ್ಪಂದ ಪ್ರತಿಪಾದಿಸಲು, ಬಂಡವಾಳಶಾಹಿಗಳ ಶೋಷಣೆಯು ಕಾರ್ಲ್‌ಮಾರ್ಕ್ಸ್ ಸಮತಾವಾದಿ ಸಿದ್ಧಾಂತ ಮಂಡಿಸಲು ಸಾಧ್ಯವಾಯಿತು.

4. ಒ. ಪಿ. ಗೋಬಾ ಅಭಿಪ್ರಾಯಪಡುವಂತೆ ಪ್ರಾಚೀನ ರಾಜಕೀಯ ಘಟನೆಗಳ ವಿಶ್ಲೇಷಣೆಯಿಂದ ಕಾನೂನುಗಳ ಆಳ್ವಿಕೆ ತಲುಪಿದ ಪ್ರಕ್ರಿಯೆಯನ್ನು ಮನವರಿಕೆ ಮಾಡಲು ಮತ್ತು ಪ್ರಾಚೀನ ರಾಜಕೀಯ ಚಿಂತನೆಯ ನೆಲೆಗಟ್ಟಿನಲ್ಲಿ ರಾಜಕೀಯವನ್ನು ಅರ್ಥೈಸಿಕೊಳ್ಳಲು ಐತಿಹಾಸಿಕ ವಿಧಾನವು ರಾಜಕೀಯ ಸಿದ್ಧಾಂತಿಗಳಿಗೆ ನೆರವಾಗಿದೆ.
5. ರಾಜಕೀಯ ಸಿದ್ಧಾಂತವೊಂದನ್ನು ಅರ್ಥೈಸಿಕೊಳ್ಳಲು ಪೂರಕವಾಗಿ ಆ ಸಿದ್ಧಾಂತವು ಯಾವ ಸನ್ನಿವೇಶ ಅಥವಾ ಸಂದರ್ಭಗಳಲ್ಲಿ ಪ್ರತಿಪಾದಿಸಲ್ಪಟ್ಟಿತು ಎಂಬುದನ್ನು ಕುರಿತು ಮನವರಿಕೆ ಮಾಡಿಕೊಡಲು ಐತಿಹಾಸಿಕ ವಿಧಾನ ನೆರವಾಗುತ್ತದೆ.

ಮೇಲೆ ಚರ್ಚಿಸಿದಂತೆ ಐತಿಹಾಸಿಕ ವಿಧಾನವು ರಾಜಕೀಯ ವಿದ್ಯಮಾನಗಳ ತೌಲನಿಕ ವಿಶ್ಲೇಷಣೆಗೆ ಉಪಯುಕ್ತ ವಿಧಾನವೆನಿಸಿದ್ದರೂ ದೋಷಗಳಿಂದ ಮುಕ್ತವಾಗಿಲ್ಲ. ಈ ವಿಧಾನದ ಪ್ರಮುಖ ಅನಾನುಕೂಲಗಳೆಂದರೆ

[1.] ಜೇಮ್ಸ್ ಬ್ರೈಸ್ ಎಚ್ಚರಿಸಿದಂತೆ ಐತಿಹಾಸಿಕ ಘಟನೆಗಳ ಬಾಹ್ಯ ಹೋಲಿಕೆಯು ತಪ್ಪು ಗ್ರಹಿಕೆಯನ್ನು ಉಂಟು ಮಾಡುವ ಅವಕಾಶವಿರುತ್ತದೆ.

[2] ಡೆವಿಡ್ ಈಸ್ಟನ್ ಹೇಳುವಂತೆ ರಾಜಕೀಯ ಸಿದ್ಧಾಂತಿಗಳಲ್ಲಿ ಐತಿಹಾಸಿಕತೆಯನ್ನು ಈ ವಿಧಾನವು ನಾಶಗೊಳಿಸುತ್ತದೆ. ಅಂದರೆ ಸಿದ್ಧಾಂತಿಯು ತನ್ನ ಮೌಲ್ಯಗಳನ್ನು ಇತಿಹಾಸದೊಡನೆ ಮಿಶ್ರಣಗೊಳಿಸಿ ಐತಿಹಾಸಿಕ ಘಟನೆಗಳನ್ನು ಆಧರಿಸಿ ತಮ್ಮ ಮೌಲ್ಯಗಳನ್ನು ಎತ್ತಿ ಹಿಡಿಯುವ ಸಾಧ್ಯತೆ ಅಧಿಕವಾಗಿರುತ್ತದೆ.

[3.] ಐತಿಹಾಸಿಕ ವಿಧಾನವು ಕೇವಲ ರಾಜ್ಯಕ್ಕೆ ಮಹತ್ವ ನೀಡಿ ಸಾಮಾಜಿಕ ವ್ಯವಸ್ಥೆಯನ್ನು ಕಡೆಗಣಿಸುತ್ತದೆ.

4. ನಿರಂತರವಾಗಿ ಬದಲಾಗುತ್ತಿರುವ ವಿಶ್ವ ರಾಜಕಾರಣದ ಅಧ್ಯಯನಕ್ಕೆ ಈ ವಿಧಾನವು ಸಹಕಾರಿಯಾಗಲಾರದು.

### [C.] ಕಾನೂನಾತ್ಮಕ ವಿಧಾನ [Legalistic Approache]:

ಕಾನೂನುಗಳ ಅಗತ್ಯದ ಹಿನ್ನೆಲೆಯಲ್ಲಿ ರಾಜ್ಯವೆಂಬ ಸಂಸ್ಥೆ ಉದಯವಾಯಿತು. ರಾಜ್ಯವನ್ನೇ ಕೇಂದ್ರ ಬಿಂದುವಾಗಿ ಹೊಂದಿರುವ ರಾಜ್ಯಶಾಸ್ತ್ರದಲ್ಲಿ ಕಾನೂನು ಅವಿಭಾಜ್ಯ ಅಂಗವಾಗಿದೆ. ರಾಜಕೀಯ ವ್ಯವಸ್ಥೆಯಲ್ಲಿನ ಸರ್ಕಾರ ಹಾಗೂ ಕಾನೂನು ಪರಾವಲಂಬಿಯಾಗಿದ್ದು ಕಾನೂನು ಪ್ರಕ್ರಿಯೆ ಹಾಗೂ ಕಾನೂನಾತ್ಮಕ ಸಂಸ್ಥೆಗಳು

ರಾಜಕೀಯದಲ್ಲಿ ಲೀನವಾಗಿವೆ. ಇದರೊಡನೆ ಲಿಖಿತ ಸಂವಿಧಾನವಿರುವ ಭಾರತದಂತಹ ದೇಶಗಳಲ್ಲಿ ಸರ್ಕಾರ ಸಂವಿಧಾನಾತ್ಮಕ ಕಾನೂನಿನನ್ವಯ ಕಾರ್ಯ ನಿರ್ವಹಿಸಬೇಕಾಗುತ್ತದೆ. ಸಂಸತ್ತು ಹಾಗೂ ರಾಜ್ಯ ಶಾಸಕಾಂಗಗಳು ಭಾರತದಲ್ಲಿ ಕಾನೂನು ರಚಿಸುವ ಅಧಿಕಾರ ಪಡೆದಿದ್ದು ಆ ಕಾನೂನುಗಳ ವಿಮರ್ಶಾಧಿಕಾರ ನ್ಯಾಯಾಲಯಗಳಿಗಿದೆ. ಇಂತಹ ರಾಜಕೀಯ ವ್ಯವಸ್ಥೆಯ ಪರಿಪೂರ್ಣ ತಿಳುವಳಿಕೆಗೆ ಕಾನೂನಾತ್ಮಕ ವಿಧಾನವು ತೌಲನಿಕ ರಾಜಕೀಯ ಚಿಂತಕರಿಗೆ ನೆರವಾಗುತ್ತದೆ. ಆದ್ದರಿಂದ ಡಿ. ಡಿ. ಬಸು, ಎಂ. ವಿ. ಪೈಲಿ, ಎಂ. ಸಿ. ಸೆಟಲ್ವಾಡ್, ಸಿ. ಎಚ್. ಅಲೆಗ್ಸಾಂಡ್ರೋವಿಚ್, ಜಿ. ಸಿ. ರನ್ಕಿನ್ ಮುಂತಾದ ಚಿಂತಕರು ಭಾರತದ ರಾಜಕೀಯ ವಿಶ್ಲೇಷಣೆಯಲ್ಲಿ ಕಾನೂನಾತ್ಮಕ ವಿಧಾನವನ್ನು ಸಮರ್ಪಕವಾಗಿ ಬಳಸಿರುವರು.

ಕಾನೂನಾತ್ಮಕ ವಿಧಾನವು ಸಂಕುಚಿತ ಹಾಗೂ ದೋಷಪೂರ್ಣ ಎಂಬುದಾಗಿ ಗುರುತಿಸಲ್ಪಡುತ್ತದೆ. ಕಾರಣವೇನೆಂದರೆ ರಾಜಕೀಯದ ಸಮಗ್ರ ಚಟುವಟಿಕೆಗಳನ್ನು ಕಾನೂನಾತ್ಮಕ ವಿಧಾನ ಪ್ರತಿನಿಧಿಸಲಾರದು. ನ್ಯಾಯ ಶಾಸ್ತ್ರೀಯ ನೆಲೆಗಟ್ಟಿನಲ್ಲಿ ಎಲ್ಲವನ್ನೂ ನೋಡುವುದರಿಂದ ಅನೇಕ ಸಾಮಾಜಿಕ ಹಾಗೂ ರಾಜಕೀಯ ಪ್ರಶ್ನೆಗಳು ಕಡೆಗಣಿಸಲ್ಪಡುತ್ತವೆ. ಜೊತೆಗೆ ಸಾಮಾಜಿಕ ವರ್ಗಗಳ ಸ್ವರೂಪವನ್ನಾಗಲಿ, ಆರ್ಥಿಕವಾಗಿ ಬಲಶಾಲಿಯಾದ ಗುಂಪುಗಳ ಶೋಷಣೆಯಾಗಲಿ ಅಥವಾ ರಾಜಕೀಯ ವ್ಯವಸ್ಥೆಯಲ್ಲಿನ ಆಂತರಿಕ ವೈರುಧ್ಯವನ್ನಾಗಲಿ ಕಾನೂನಾತ್ಮಕ ವಿಧಾನ ವಿವರಿಸಲಾರದು. ಒಟ್ಟಾರೆ ಸಂವಿಧಾನಾತ್ಮಕತೆ ಉತ್ತುಂಗದಲ್ಲಿರುವ ಸನ್ನಿವೇಶದಲ್ಲಿ ಕಾನೂನಾತ್ಮಕ ವಿಧಾನ ರಾಜ್ಯಶಾಸ್ತ್ರಜ್ಞರ ತೌಲನಿಕ ಅಧ್ಯಯನಕ್ಕೆ ನೆರವಾಗುವುದರಲ್ಲಿ ಸಂದೇಹವಿಲ್ಲ ಎನ್ನಬಹುದು.

### [D.] ಸಾಂಸ್ಥಿಕ ವಿಧಾನ [Institutional Approache]:

ಸಾಂಪ್ರದಾಯಿಕ ಅಧ್ಯಯನ ವಿಧಾನಗಳಲ್ಲಿ ಸಾಂಸ್ಥಿಕ ವಿಧಾನ ಸಹ ಪ್ರಮುಖವಾದದ್ದು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ರಾಜಕೀಯ ಪಕ್ಷಗಳು, ಒತ್ತಡ ಗುಂಪುಗಳು ಇತ್ಯಾದಿ ರಾಜಕೀಯ ಸಂಸ್ಥೆಗಳನ್ನು ಅರಿಯಲು ಸಾಂಸ್ಥಿಕ ವಿಧಾನವನ್ನು ತೌಲನಿಕ ರಾಜ್ಯಶಾಸ್ತ್ರಜ್ಞರು ಬಳಸುತ್ತಾರೆ. ಸಾಮಾನ್ಯವಾಗಿ ರಾಜಕೀಯ ಸಿದ್ಧಾಂತಿಗಳು ರಾಜಕೀಯ ಸಂಸ್ಥೆಗಳಿಗೆ ಮಾತ್ರ ತಮ್ಮ ಗಮನವನ್ನು ಕೇಂದ್ರೀಕರಿಸಿರುತ್ತಾರೆ. ಸರ್ಕಾರಗಳ ಮಾದರಿ ಮತ್ತು ಸರ್ಕಾರದ ಹಂತಗಳನ್ನು ಈ ವಿಧಾನವು ಅವಲಂಬಿಸಿರುತ್ತದೆ. ಪ್ರಾಚೀನ ರಾಜಕೀಯ ಚಿಂತಕರಾದ ಅರಿಸ್ಟಾಟಲ್ ಹಾಗೂ ಪೊಲಿಬಿಯಸ್‌ರಿಂದ ಹಿಡಿದು ಆಧುನಿಕ ಲಾರ್ಡ್ ಬ್ರೈಸ್ ಹಾಗೂ ಹರ್ಮನ್ ಫೈನರ್‌ವರೆಗೆ ರಾಜಕೀಯ ಚಿಂತಕರು ಸಾಂಸ್ಥಿಕ ವಿಧಾನವನ್ನು ತಮ್ಮ ತೌಲನಿಕ ರಾಜಕೀಯ ವಿಚಾರಗಳ ಪ್ರತಿಪಾದನೆಗೆ ಬಳಸಿಕೊಂಡಿದ್ದಾರೆ.

ಆಸಕ್ತಿದಾಯಕ ಅಂಶವೇನೆಂದರೆ ತೌಲನಿಕ ರಾಜಕೀಯ ವಿಶ್ಲೇಷಕರು ರಾಜಕೀಯ ವ್ಯವಸ್ಥೆಯ ನಾಲ್ಕನೇ ಅಂಗವೆಂದು ರಾಜಕೀಯ ಪಕ್ಷಗಳನ್ನು ಪರಿಗಣಿಸಿ ಅದನ್ನು ಕುರಿತಂತೆ



ಹಲವು ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಸಮಕಾಲೀನ ತೌಲನಿಕ ರಾಜಕೀಯ ವಿಶ್ಲೇಷಕರು ವಿವಿಧ ಸಾಮಾಜಿಕ ಗುಂಪುಗಳನ್ನೂ ಸಹ ಅಭ್ಯಸಿಸಲು ಮುಂದಾಗುತ್ತಿದ್ದು ಸಾಂಸ್ಥಿಕ ವಿಧಾನವು ಅವರ ತೌಲನಿಕ ಅಧ್ಯಯನಕ್ಕೆ ಸಹಕಾರಿಯಾಗಿದೆ. ರಾಜಕೀಯ ವ್ಯವಸ್ಥೆಯಲ್ಲಿನ ವಿವಿಧ ಸಂಸ್ಥೆಗಳ ಔಪಚಾರಿಕ ರಚನೆಗೆ ಹೆಚ್ಚಿನ ಮಹತ್ವ ನೀಡುವುದರಿಂದ ಸಾಂಸ್ಥಿಕ ವಿಧಾನವನ್ನು ರಚನಾತ್ಮಕ ವಿಧಾನ ಎಂತಲೂ ಕರೆಯಲಾಗುತ್ತಿದ್ದು ತೌಲನಿಕ ರಾಜಕೀಯ ವಿಶ್ಲೇಷಕರಿಗೆ ಉಪಯುಕ್ತ ವಿಧಾನವೆನಿಸಿದೆ. ಹಲವು ಪ್ರಯೋಜನಗಳಿದ್ದರೂ ಸಾಂಸ್ಥಿಕ ವಿಧಾನವು ಕೆಳಗಿನ ದೋಷಗಳಿಂದ ಮುಕ್ತವಾಗಿಲ್ಲ. ಈ ವಿಧಾನದಲ್ಲಿನ ಪ್ರಧಾನ ದೋಷಗಳೆಂದರೆ

[1.] ಸಾಂಸ್ಥಿಕ ವಿಧಾನವು ರಾಜಕೀಯ ವ್ಯವಸ್ಥೆಯಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ಪಾತ್ರ ನಿರ್ವಹಿಸುವ ವ್ಯಕ್ತಿಗಳನ್ನು ಕಡೆಗಣಿಸಿದೆ.

[2.] ಈ ವಿಧಾನವು ಸಂಸ್ಥೆಗಳು ಸಾಮಾಜಿಕ ಹಿನ್ನೆಲೆಯ ಪರಿಸ್ಥಿತಿಯ ಫಲ ಎಂಬುದನ್ನು ನಿರ್ಲಕ್ಷಿಸಿದೆ.

[3.] ರಾಜಕೀಯ ವ್ಯವಸ್ಥೆಗಳ ಅಧ್ಯಯನಕ್ಕೆ ಪರಿಪೂರ್ಣ ವಿಧಾನವೆಂದು ಪರಿಗಣಿಸುವಷ್ಟು ಉಪಯುಕ್ತವಾಗಿಲ್ಲ.

[4.] ರಾಜಕೀಯ ಚಿಂತಕನೊಬ್ಬ ಸ್ವಯಂಪೂರ್ಣವಾಗಿ ಸಾಂಸ್ಥಿಕ ವಿಧಾನದ ಮೂಲಕವೇ ಸಿದ್ಧಾಂತವನ್ನು ರಚಿಸಲು ಸಾಧ್ಯವಿಲ್ಲ. ಸಾಂಸ್ಥಿಕ ವಿಧಾನದೊಡನೆ ಇತರ ವಿಧಾನಗಳನ್ನು ಅನಿವಾರ್ಯವಾಗಿ ಸಿದ್ಧಾಂತಿಯು ಅವಲಂಬಿಸಬೇಕಾಗುತ್ತದೆ.

[5.] ಈ ವಿಧಾನವು ರಾಷ್ಟ್ರೀಯ ರಾಜಕೀಯ ಸಂಸ್ಥೆಗಳಿಗೆ ಸೀಮಿತವಾಗಿದ್ದು ಅಂತರರಾಷ್ಟ್ರೀಯ ಸಂಸ್ಥೆಗಳನ್ನು ಕಡೆಗಣಿಸುತ್ತದೆ.

ಮೇಲೆ ಚರ್ಚಿಸಲಾಗಿರುವ ಪ್ರಮುಖ ಸಾಂಪ್ರದಾಯಿಕ ಅಧ್ಯಯನ ವಿಧಾನಗಳು ತಮ್ಮ ಮಿತಿಗಳ ನಡುವೆಯೂ ಪ್ರಾಚೀನ ಕಾಲದ ರಾಜಕೀಯ ವಿದ್ಯಮಾನಗಳನ್ನು ತೌಲನಿಕವಾಗಿ ಅರಿಯಲು ನೆರವಾಗಿವೆ. ಜೊತೆಗೆ ಇಂದಿಗೂ ಸರ್ಕಾರ ಮತ್ತು ರಾಜಕೀಯ ಚಟುವಟಿಕೆಗಳ ತುಲನಾತ್ಮಕ ಅಧ್ಯಯನಕ್ಕೆ ಸಂಶೋಧಕರು ಸಾಂಪ್ರದಾಯಿಕ ವಿಧಾನಗಳನ್ನು ಅವಲಂಬಿಸಿದ್ದಾರೆ. ಇದರಿಂದ ರಾಜ್ಯಶಾಸ್ತ್ರದ ತೌಲನಿಕ ಅಧ್ಯಯನದಲ್ಲಿ ಸಾಂಪ್ರದಾಯಿಕ ವಿಧಾನಗಳ ಉಪಯುಕ್ತತೆ ಅಥವಾ ಮಹತ್ವ ಅರಿವಾಗುತ್ತದೆ.

### [II.] ಆಧುನಿಕ ವಿಧಾನಗಳು [Modern Approaches]:

ರಾಜ್ಯಶಾಸ್ತ್ರ ಅಧ್ಯಯನದ ಆಧುನಿಕ ವಿಧಾನಗಳು ವಾಸ್ತವಿಕತೆಯನ್ನಾಧರಿಸಿದ್ದು ರಾಜಕೀಯ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ವೈಜ್ಞಾನಿಕ ಹಾಗೂ ನಿಖರ ತೀರ್ಮಾನವನ್ನು ಪ್ರತಿಪಾದಿಸುತ್ತವೆ, ಕೈಗಾರಿಕೀಕರಣ ಮತ್ತು ವರ್ತನಾ ಕ್ರಾಂತಿಯ ಫಲವಾಗಿ

ರಾಜ್ಯಶಾಸ್ತ್ರದಲ್ಲಿನ ಆಧುನಿಕ ಅಧ್ಯಯನ ವಿಧಾನಗಳು ಭವಿಷ್ಯದಲ್ಲಿ ಏನಿರಬೇಕು ಎಂಬುದರ ಬದಲು ಪ್ರಸ್ತುತ ಏನಿದೆ ಎಂಬುದರೆಡೆ ಒಲವು ಹೊಂದಿದವು. ಈ ನಡುವೆ ಅಮೇರಿಕದ ರಾಜ್ಯಶಾಸ್ತ್ರಜ್ಞರ ಗುಂಪೊಂದು ಸಮಾಜಶಾಸ್ತ್ರ, ಮನಶ್ಶಾಸ್ತ್ರ, ಮಾನವಶಾಸ್ತ್ರಗಳಲ್ಲಿ ಜಾರಿಗೊಂಡ ನವೀನ ತಂತ್ರಗಳಿಂದ ಪ್ರೇರೇಪಣೆಗೊಂಡು ರಾಜ್ಯಶಾಸ್ತ್ರದಲ್ಲಿಯೂ ಆಧುನಿಕ ವಿಧಾನಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿತು. ಪರಿಣಾಮ ವಾಸ್ತವಿಕ ರಾಜಕೀಯ ವಿದ್ಯಮಾನಗಳ ಅಂಕಿಸಂಕೆಗಳ ಮಾಹಿತಿ ಸಂಗ್ರಹಿಸಿ ವೈಜ್ಞಾನಿಕ ಅಧ್ಯಯನಕ್ಕೆ ಚಾಲನೆ ದೊರಕಿತು. ಇದರಿಂದ ರಾಜಕೀಯ ವಿದ್ಯಮಾನ ಕುರಿತಂತೆ ಮಾನವರು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಹೇಗೆ ವರ್ತಿಸುವರೆಂದು ತಿಳಿದು ನಿಖರ ಭವಿಷ್ಯ ನುಡಿಯಲು ರಾಜ್ಯಶಾಸ್ತ್ರಜ್ಞರಿಗೆ ಸಾಧ್ಯವಾಯಿತು. ಈ ಹಿನ್ನೆಲೆಯಲ್ಲಿ ರಾಜ್ಯಶಾಸ್ತ್ರದ ಅಧ್ಯಯನದಲ್ಲಿ ಬಳಸಲ್ಪಟ್ಟ ಮತ್ತು ತೌಲನಿಕ ಸರ್ಕಾರ ಹಾಗೂ ರಾಜಕೀಯದ ಅಧ್ಯಯನಕ್ಕೆ ಉಪಯುಕ್ತವಾದ ಪ್ರಧಾನ ಆಧುನಿಕ ವಿಧಾನಗಳನ್ನು ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

### [A.] ವ್ಯವಸ್ಥಾ ವಿಧಾನ [System Approach]:

ಸಾಂಪ್ರದಾಯಿಕ ವಿಧಾನಗಳಿಗೆ ಪ್ರತಿಯಾಗಿ ಅಸ್ತಿತ್ವಕ್ಕೆ ಬಂದ ಆಧುನಿಕ ರಾಜಕೀಯ ವಿಶ್ಲೇಷಣಾ ವಿಧಾನಗಳಲ್ಲಿ ವ್ಯವಸ್ಥಾ ವಿಧಾನವೂ ಒಂದು. 20 ನೇ ಶತಮಾನದ ಆರಂಭದಲ್ಲಿ ಗಗನ ಶಾಸ್ತ್ರದಲ್ಲಿ ಬಳಕೆಯಾಗುತ್ತಿದ್ದ ವ್ಯವಸ್ಥಾ ವಿಧಾನವು-ಜೀವಶಾಸ್ತ್ರದಲ್ಲಿ ಬಳಸಲ್ಪಟ್ಟಿತು. ಕ್ರಮೇಣ ಸಮಾಜ ವಿಜ್ಞಾನಗಳಲ್ಲಿ ಅದರಲ್ಲೂ ಮಾನವಶಾಸ್ತ್ರದಲ್ಲಿ ವ್ಯವಸ್ಥಾ ವಿಧಾನ ಮೊದಲ ದಾರಿಗೆ ಉಪಯೋಗಿಸಲ್ಪಟ್ಟಿತು. ಈ ಬೆಳವಣಿಗೆಗಳಿಂದ ಪ್ರೇರಿತರಾದ ಡೇವಿಡ ಈಸ್ಟನ್ 1953 ರಲ್ಲಿ ರಚಿಸಿದ ರಾಜಕೀಯ ವ್ಯವಸ್ಥೆ ಎಂಬ ತಮ್ಮ ಕೃತಿಯಲ್ಲಿ ವ್ಯವಸ್ಥಾ ವಿಧಾನವನ್ನು ರಾಜಕೀಯ ವಿದ್ಯಮಾನಗಳಿಗೂ ಅನ್ವಯಿಸಬಹುದೆಂದು ಪ್ರತಿಪಾದಿಸಿದರು. ಜೊತೆಗೆ ವ್ಯವಸ್ಥಾ ವಿಶ್ಲೇಷಣೆಗೆ ರಾಜಕೀಯ ಚೌಕಟ್ಟನ್ನು ಹಾಕಿಕೊಟ್ಟ ಈಸ್ಟನ್ ರಾಜಕೀಯ ವ್ಯವಸ್ಥಾ ವಿಶ್ಲೇಷಣೆಯ ಪಿತಾಮಹ ಎನಿಸಿಕೊಂಡರು. ಮುಂದೆ ಗ್ಯಾಬ್ರಿಯಲ್ ಆಲ್ಮಂಡ್ ವ್ಯವಸ್ಥಾ ವಿಧಾನದ ಬೆಳಕಿನಲ್ಲಿ ರಚನಾತ್ಮಕ ಹಾಗೂ ಕಾರ್ಯಾತ್ಮಕ ಸಿದ್ಧಾಂತವನ್ನು ಮಂಡಿಸಿದರು. ಇದರೊಡನೆ ಮಾರ್ಟಿನ್ ಕಪ್ಲಾನ್, ರಾಬರ್ಟ್ ದಾಲ್, ಕಾರ್ಲ್ ಡ್ಯೂಶ್ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಾಜಕೀಯ ವಿಶ್ಲೇಷಣೆಗೆ ವ್ಯವಸ್ಥಾ ವಿಧಾನವನ್ನು ಬಳಸಿ ತಮ್ಮ ತೌಲನಿಕ ರಾಜಕೀಯ ವಿಚಾರಗಳನ್ನು ಮಂಡಿಸಿದರು.

ವ್ಯವಸ್ಥೆ ಎಂಬುದು ಪರಸ್ಪರ ಉಪಯುಕ್ತತೆ ಹಾಗೂ ಸಂಬಂಧವುಳ್ಳ ಹಲವು ಘಟಕಗಳ ಇಡಿಯಾದ ಘಟಕವನ್ನು ಪ್ರತಿನಿಧಿಸುತ್ತದೆ. ಇದರರ್ಥ, ಹಲವು ಉಪ ವ್ಯವಸ್ಥೆಗಳಿಂದ ಒಂದು ಮೂಲ ವ್ಯವಸ್ಥೆ ರಚನೆಗೊಳ್ಳುತ್ತದೆ. ಉದಾ: ತಾರಾಗಣವೆಂಬ ಮೂಲ ವ್ಯವಸ್ಥೆಯಲ್ಲಿ ಸೌರವ್ಯೂಹ, ಸೌರವ್ಯೂಹದಲ್ಲಿ ಭೂಮಿ, ಭೂಮಿಯಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ವ್ಯವಸ್ಥೆ ಎಂಬ ಉಪ ವ್ಯವಸ್ಥೆಗಳಿರುವುದು. ಈ



ಹಿನ್ನೆಲೆಯಲ್ಲಿ ಪರಸ್ಪರ ಪ್ರಭಾವ ಬೀರುವ ಮತ್ತು ಅವಲಂಬಿಯಾಗಿರುವ ವ್ಯವಸ್ಥೆಗಳ ನೆರವಿನಿಂದ ರಾಜಕೀಯ ವಿದ್ಯಮಾನಗಳ ಅಧ್ಯಯನ ನಡೆಸುವುದು ವ್ಯವಸ್ಥಾ ವಿಧಾನವೆನಿಸುತ್ತದೆ. ಈ ವ್ಯವಸ್ಥಾ ವಿಧಾನವು ರಾಜ್ಯಶಾಸ್ತ್ರದ ತೌಲನಿಕ ರಾಜಕೀಯ, ಸಾರ್ವಜನಿಕ ಆಡಳಿತ, ಅಂತರ್‌ರಾಷ್ಟ್ರೀಯ ಸಂಬಂಧದಂತಹ ಶಾಖೆಗಳ ಅಧ್ಯಯನದಲ್ಲಿ ಹೆಚ್ಚು ಬಳಸಲ್ಪಡುತ್ತಿದೆ. ಫಲವಾಗಿ ರಾಜ್ಯ ಎಂಬ ಪರಿಕಲ್ಪನೆಯ ಬದಲು ರಾಜಕೀಯ ವ್ಯವಸ್ಥೆ ಎಂಬುದು ವ್ಯವಸ್ಥಾ ವಿಧಾನದ ವ್ಯಾಪಕ ಬಳಕೆಯಿಂದ ಜನಪ್ರಿಯವಾಗುತ್ತಿದೆ. ತೌಲನಿಕ ರಾಜಕೀಯ ವಿಶ್ಲೇಷಣೆಗೆ ಕೆಳಕಂಡ ಕ್ಷೇತ್ರಗಳ ಅಧ್ಯಯನಕ್ಕೆ ವ್ಯವಸ್ಥಾ ವಿಧಾನವು ಸಹಕಾರಿ ಎನಿಸಿದೆ.

1. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಆಡಳಿತಾಂಗ ಮುಂತಾದ ಸರ್ಕಾರಿ ವ್ಯವಸ್ಥೆ.
2. ಚುನಾವಣಾ ವ್ಯವಸ್ಥೆ.
3. ಸಮಾಜದಲ್ಲಿನ ಜಾತಿ, ಧರ್ಮ, ಭಾಷೆ ಹಾಗೂ ವರ್ಗ ವ್ಯವಸ್ಥೆ.
4. ಅಂತರ್‌ರಾಷ್ಟ್ರೀಯ ಬಣ ವ್ಯವಸ್ಥೆ.

ಈ ಮೇಲೆ ಚರ್ಚಿಸಿದಂತೆ ವ್ಯವಸ್ಥಾ ವಿಧಾನವು ರಾಜಕೀಯ ವ್ಯವಸ್ಥೆಗಳ ಸ್ವಾರಸ್ಯಕರ ವಿಚಾರ ಸರಣಿಯಾಗಿದೆ. ಆದರೆ ಸಮಾಜ ವಿಜ್ಞಾನವಾದ ರಾಜ್ಯಶಾಸ್ತ್ರದ ತೌಲನಿಕ ಅಧ್ಯಯನಕ್ಕೆ ಈ ವ್ಯವಸ್ಥಾ ವಿಧಾನವು ಹೆಚ್ಚು ಸಹಕಾರಿಯಾಗಲಾರದೆಂದು ವಿಮರ್ಶಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ವ್ಯವಸ್ಥಾ ವಿಶ್ಲೇಷಣೆಯು ಸಮಸ್ಯೆಗಳು ಮತ್ತು ಪರಿಹಾರಕ್ಕೆ ಮಾತ್ರ ಗಮನ ಹರಿಸಿ ರಾಜಕೀಯದ ಅವನತಿ, ಗೊಂದಲಗಳು ಅಥವಾ ಬೆಳವಣಿಗೆ ಕುರಿತು ಮೌನವಾಗಿದೆ. ಜೊತೆಗೆ ರಾಜಕೀಯ ವ್ಯವಸ್ಥೆಯ ಪ್ರಧಾನ ವಿದ್ಯಮಾನಗಳಾದ ಮುಷ್ಕರ, ಪ್ರತಿಭಟನೆ, ಬಂಡಾಯದಂತಹ ಅಂಶಗಳನ್ನು ಅಲಕ್ಷಿಸಿದೆ.

### [B.] ರಚನಾತ್ಮಕ ಹಾಗೂ ಕಾರ್ಯಾತ್ಮಕ ವಿಧಾನ [Structural and Functional Approache]:

ರಾಜಕೀಯ ವಿದ್ಯಮಾನಗಳ ಅಧ್ಯಯನಕ್ಕೆ ಪ್ರತಿಪಾದಿಸಲಾದ ವ್ಯವಸ್ಥಾ ವಿಧಾನದ ಕಳಪದಿಯಲ್ಲಿ ರಚನಾತ್ಮಕ ಹಾಗೂ ಕಾರ್ಯಾತ್ಮಕ ವಿಧಾನವು ಪ್ರತಿಪಾದಿಸಲ್ಪಟ್ಟಿತು. ತೌಲನಿಕ ರಾಜಕೀಯದ ಅಧ್ಯಯನದಲ್ಲಿ ಆಸಕ್ತಿ ಹೊಂದಿದ್ದ ಗ್ಯಾಬ್ರಿಯಲ್ ಆಲ್ಮಂಡ್ ಈ ವಿಧಾನವನ್ನು 1960 ರ ಹೊತ್ತಿಗೆ ರೂಪಿಸಿದರು. ಅಭಿವೃದ್ಧಿಶೀಲ ನೂತನ ರಾಷ್ಟ್ರಗಳ ರಾಜಕೀಯ ವ್ಯವಸ್ಥೆಯನ್ನು ಅಭಿವೃದ್ಧಿ ಹೊಂದಿದ ಪಾಶ್ಚಿಮಾತ್ಯ ರಾಷ್ಟ್ರಗಳ ರಾಜಕೀಯ ವ್ಯವಸ್ಥೆಯೊಡನೆ ಹೋಲಿಕೆ ಮಾಡುವ ಮೂಲಕ ರಾಜಕೀಯ ವ್ಯವಸ್ಥೆಯ ಸಾಮಾನ್ಯ ಲಕ್ಷಣಗಳನ್ನು ಕಂಡುಕೊಳ್ಳಲು ಆಲ್ಮಂಡ್ ಈ ವಿಧಾನವನ್ನು ತಮ್ಮ ತೌಲನಿಕ ಅಧ್ಯಯನದಲ್ಲಿ ವ್ಯಾಪಕವಾಗಿ ಬಳಸಿದರು.

ಪ್ರತಿ ರಾಜಕೀಯ ವ್ಯವಸ್ಥೆಯು ಅಭಿವೃದ್ಧಿ ಆಡಳಿತ ಯಂತ್ರ, ಚುನಾವಣೆ, ರಾಜಕೀಯ ಪಕ್ಷ, ಒತ್ತಡ ಗುಂಪು ಮೊದಲಾದ ವೈವಿಧ್ಯಮಯ ರಾಜಕೀಯ ರಚನೆಗಳನ್ನು ಹೊಂದಿರುತ್ತದೆ. ಎಲ್ಲ ರಚನೆಗಳು ನ್ಯಾಯಯುತ ಕಾರ್ಯಗಳನ್ನು ಮಾಡುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದಿರುತ್ತವೆ. ಇದರೊಡನೆ ಜಗತ್ತಿನ ವಿವಿಧ ರಾಜಕೀಯ ವ್ಯವಸ್ಥೆಗಳು ಏಕರೂಪವಾಗಿಲ್ಲದಿದ್ದರೂ ಅವುಗಳ ರಚನೆಗಳ ಕಾರ್ಯಗಳು ಸಾರ್ವತ್ರಿಕವಾಗಿರುತ್ತವೆ ಎಂದು ಆಲ್ಮಂಡ್ ಪ್ರತಿಪಾದಿಸಿದರು. ಮುಂದುವರಿದು, ರಾಜಕೀಯ ವ್ಯವಸ್ಥೆಗಳ ಪರಿಪೂರ್ಣ ತಿಳುವಳಿಕೆ ಮಾಡಿಕೊಳ್ಳಲು ಅದರ ರಚನಾತ್ಮಕ ಹಾಗೂ ಕಾರ್ಯಾತ್ಮಕ ಅಧ್ಯಯನ ಅನಿವಾರ್ಯವೆಂದು ವಾದಿಸಿದರು. ಉದಾ: ಭಾರತ, ಚೀನಾ, ಅಮೇರಿಕಾ, ಜಪಾನ್ ಮುಂತಾದ ದೇಶಗಳ ರಾಜಕೀಯ ವ್ಯವಸ್ಥೆಗಳಲ್ಲಿನ ಶಾಸಕಾಂಗವೆಂಬ ರಾಜಕೀಯ ರಚನೆಯು ಶಾಸನ ರಚನೆಯ ಕಾರ್ಯವನ್ನು ಹೊಂದಿದ್ದು ಅವುಗಳ ಅಧ್ಯಯನ ನಡೆಸುವುದು. ಇದಲ್ಲದೇ ಕೆಲವೊಮ್ಮೆ ರಾಜಕೀಯ ರಚನೆಯೊಂದರ ಕಾರ್ಯವನ್ನು ಔಪಚಾರಿಕ ಅಂದರೆ ಸರ್ಕಾರ ಅಥವಾ ಅನೌಪಚಾರಿಕ ಅಂದರೆ ಒತ್ತಡ ಗುಂಪು, ರಾಜಕೀಯ ಪಕ್ಷ, ಸ್ವಯಂ ಸೇವಾ ಸಂಸ್ಥೆಗಳಂತಹ ಇತರ ರಚನೆಗಳು ನಿರ್ವಹಿಸಬಹುದೆಂಬ ಅಂಶವನ್ನೂ ಆಲ್ಮಂಡ್ ಪ್ರತಿಪಾದಿಸಿದ್ದರು. ಉದಾ: ನ್ಯಾಯ ದಾನವನ್ನು ನ್ಯಾಯಾಂಗದ ಬದಲು ಕಾರ್ಯಾಂಗ ಒದಗಿಸುವುದು ಅಥವಾ ಜನರಿಗೆ ಸೌಲಭ್ಯಗಳನ್ನು ಸರ್ಕಾರದ ಬದಲು ಒತ್ತಡ ಗುಂಪುಗಳು ಕಲ್ಪಿಸುವುದು. ಈ ಹಿನ್ನೆಲೆಯಲ್ಲಿ ರಾಜಕೀಯ ರಚನೆಯೊಂದರ ರಚನಾತ್ಮಕ ಹಾಗೂ ಕಾರ್ಯಾತ್ಮಕ ವಿಧಾನದ ಅಧ್ಯಯನವು ವ್ಯವಸ್ಥಾ ವಿಧಾನದ ಅಧ್ಯಯನಕ್ಕಿಂತ ಉಪಯುಕ್ತವೆಂಬುದು ಆಲ್ಮಂಡ್‌ರ ನಿಲುವಾಗಿತ್ತು. ಒಳ ಹೂಡುವಿಕೆ ಮತ್ತು ಹೊರ ಮೂಡುವಿಕೆ ಮಾದರಿಯನ್ನೂ ಬಳಸಿಕೊಂಡು ರಾಜಕೀಯ ವ್ಯವಸ್ಥೆಗಳ ರಚನಾತ್ಮಕ ಹಾಗೂ ಕಾರ್ಯಾತ್ಮಕ ತೌಲನಿಕ ಅಧ್ಯಯನವು ಪರಿಣಾಮಕಾರಿ ಅಧ್ಯಯನಕ್ಕೆ ಸಹಕಾರಿ ಎಂಬುದಾಗಿ ಆಲ್ಮಂಡ್ ಪ್ರತಿಪಾದಿಸಿದ್ದರು.

### [C] ಸಂಪರ್ಕ ವಿಧಾನ [Communication Approache]:

20 ನೇ ಶತಮಾನದ ಮಧ್ಯ ಭಾಗದಲ್ಲಿ ಅಂದರೆ ಎರಡನೇ ಮಹಾ ಯುದ್ಧದ ಬಳಿಕ ರಾಜ್ಯಶಾಸ್ತ್ರದ ಅಧ್ಯಯನವು ವೈಜ್ಞಾನಿಕ ತಳಹದಿಯನ್ನು ಪಡೆಯಲಾರಂಭಿಸಿತು. ಈ ನಿಟ್ಟಿನಲ್ಲಿ ವರ್ತನಾ ವಿಧಾನ, ವ್ಯವಸ್ಥಾ ವಿಧಾನ, ರಚನಾತ್ಮಕ ಕಾರ್ಯಾತ್ಮಕ ವಿಧಾನ ಮುಂತಾದವುಗಳ ಅನುಸರಣೆಯೊಡನೆ ರಾಜಕೀಯ ವಿಶ್ಲೇಷಕರು ರಾಜಕೀಯ ವಿದ್ಯಮಾನಗಳನ್ನು ತೌಲನಿಕ, ಪ್ರಾಯೋಗಿಕ ಮತ್ತು ಅನುಭವಾತ್ಮಕ ನೆಲೆಗಟ್ಟಿನಲ್ಲಿ ಅಧ್ಯಯನ ಮಾಡಲು ಮುಂದಾದರು. ಈ ಸನ್ನಿವೇಶದಲ್ಲಿಯೇ ಪ್ರತಿಪಾದಿಸಲ್ಪಟ್ಟ ಮತ್ತೊಂದು ವೈಜ್ಞಾನಿಕ ಸಿದ್ಧಾಂತವೇ ಸಂಪರ್ಕ ಸಿದ್ಧಾಂತ. ಯಂತ್ರಶಾಸ್ತ್ರದಲ್ಲಿ ಬಳಕೆಯಲ್ಲಿದ್ದ ಸಂಪರ್ಕ ಜಾಲ



(Cybernetics) ಪರಿಕಲ್ಪನೆಯ ಪಿತಾಮಹನಾದ ನಾರ್ಬರ್ಟ್ ವೇನರ್ ಸಮಾಜ ವಿಜ್ಞಾನಗಳ ಅಧ್ಯಯನಕ್ಕೆ ಸಂಪರ್ಕ ಜಾಲವು ಸಹಕಾರಿ ಎಂದು ಪ್ರತಿಪಾದಿಸಿದ್ದರು. ಈ ಹಿನ್ನೆಲೆಯಲ್ಲಿ ಕಾರ್ಲ್ ಡ್ಯುಚ್ ಮೊದಲ ಬಾರಿಗೆ ರಾಜಕೀಯ ವಿದ್ಯಮಾನಗಳ ವಿಶ್ಲೇಷಣೆಗೆ ಸಂಪರ್ಕ ಜಾಲ ತತ್ವಗಳನ್ನಾಧರಿಸಿದ ಸಂಪರ್ಕ ವಿಧಾನವನ್ನು ಮಂಡಿಸಿ ತೌಲನಿಕ ರಾಜಕೀಯ ವಿಶ್ಲೇಷಣೆಗೆ ನೆರವಾದರು. 1963 ರಲ್ಲಿ ರಚಿಸಿದ ತಮ್ಮ ನರ್ವ್ಸ್ ಆಫ್ ಗವರ್ನಮೆಂಟ್ (Nerves of Government) ಕೃತಿಯಲ್ಲಿ ಡ್ಯುಚ್ ತಮ್ಮ ಸಂಪರ್ಕ ಸಿದ್ಧಾಂತವನ್ನು ಪ್ರತಿಪಾದಿಸುವ ಮೂಲಕ ವೈಜ್ಞಾನಿಕ ತಳಹದಿಯ ತೌಲನಿಕ ರಾಜಕೀಯ ವಿಶ್ಲೇಷಣೆಗೆ ಶ್ರಮಿಸಿದರು.

ಕಾರ್ಲ್ ಡ್ಯುಚ್ ದೃಷ್ಟಿಯಲ್ಲಿ ಪರಿಣಾಮಕಾರಿ ನಿರ್ಧಾರ ಕೈಗೊಳ್ಳಲು ಪೂರಕವಾದ ಮಾಹಿತಿಯನ್ನು ಸಂಗ್ರಹಿಸುವ, ವರ್ಗಾಯಿಸುವ ಮತ್ತು ಸ್ವೀಕರಿಸುವ ಪ್ರಕ್ರಿಯೆಯು ಸಂಪರ್ಕ ಎನಿಸಿಕೊಳ್ಳುತ್ತದೆ. ರಾಜಕೀಯ ವ್ಯವಸ್ಥೆಯೊಂದು ತನ್ನ ಸಾಮಾಜಿಕ ಗುರಿಗಳನ್ನು ಸಾಧಿಸಲು ಈ ಮಾಹಿತಿ ಪ್ರಕ್ರಿಯೆಯ ಸಂಪರ್ಕವು ಸಹಕಾರಿ ಎಂಬುದು ಡ್ಯುಚ್ ನಂಬಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ವ್ಯವಸ್ಥಿತ ಸಂಪರ್ಕ ಜಾಲವು ರಾಜಕೀಯ ವ್ಯವಸ್ಥೆಯೊಂದರ ಅಸ್ತಿತ್ವ, ಬೆಳವಣಿಗೆ ಮತ್ತು ಅಭಿವೃದ್ಧಿಗೆ ಅತ್ಯಗತ್ಯ ಎಂಬುದಾಗಿ ಡ್ಯುಚ್ ಪ್ರತಿಪಾದಿಸಿದ್ದರು. ಕಾರ್ಲ್ ಡ್ಯುಚ್ ಪ್ರತಿಪಾದಿಸಿದ ಸಂಪರ್ಕ ಸಿದ್ಧಾಂತದ ಚಿಂತನೆಗಳ ನೆರಳಿನಲ್ಲಿ ಅಸ್ತಿತ್ವಕ್ಕೆ ಬಂದ ಸಂಪರ್ಕ ವಿಧಾನವು ಈ ಕೆಳಗಿನ ಲಕ್ಷಣಗಳನ್ನು ಮೈಗೂಡಿಸಿಕೊಂಡಿತು.

1. ಸಂಪರ್ಕ ಜಾಲ ಎಂಬ ಶಾಸ್ತ್ರದ ತಳಹದಿ:
2. ರಾಜಕೀಯ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ಸಾಮರ್ಥ್ಯಗಳಿಗೆ ಪ್ರಾಶಸ್ತ್ಯ.
3. ರಾಜಕೀಯ ವ್ಯವಸ್ಥೆಯನ್ನು ಮುಕ್ತ ವ್ಯವಸ್ಥೆಯಾಗಿ ಪರಿಗಣಿಸುವಿಕೆ.
4. ರಾಜಕೀಯವು ಸಾಮಾಜಿಕ ಗುರಿಗಳಿಗೆ ಸಂಬಂಧಿಸಿದುದು
5. ಸರ್ಕಾರ ಕುರಿತಂತೆ ನವ ದೃಷ್ಟಿಕೋನ.

ಈ ಮೇಲೆ ಪ್ರಸ್ತಾಪಿಸಲಾದ ಲಕ್ಷಣಗಳುಳ್ಳ ಸಂಪರ್ಕ ಸಿದ್ಧಾಂತವನ್ನು ಆಧರಿಸಿರುವ ಅಧ್ಯಯನ ವಿಧಾನವೇ ಸಂಪರ್ಕ ವಿಧಾನವಾಗಿದೆ. ಸಮಾಜವನ್ನು ಯಂತ್ರಗಳಿಗೆ ಹೋಲಿಸಿ ಮಾಹಿತಿಗೆ ಅಧಿಕ ಮಹತ್ವ ನೀಡಿದುದು ಈ ವಿಧಾನದ ವಿಶೇಷತೆಯಾಗಿದೆ. ರಾಜ್ಯಶಾಸ್ತ್ರವನ್ನು ವೈಜ್ಞಾನಿಕಗೊಳಿಸುವ ನಿಟ್ಟಿನಲ್ಲಿ ಪ್ರತಿಪಾದಿಸಲ್ಪಟ್ಟ ಸಂಪರ್ಕ ಸಿದ್ಧಾಂತ ತನ್ನಲ್ಲಿನ ದೋಷಗಳಿಂದಾಗಿ ಚಿಂತಕರಿಂದ ಸಾಕಷ್ಟು ವಿಮರ್ಶೆಗೊಳಗಾದುದು ಗಮನಾರ್ಹ. ಸಂಪರ್ಕ ವಿಧಾನದ ಪ್ರಧಾನ ಟೀಕೆಗಳನ್ನು ಈ ಕೆಳಗೆ ನೀಡಲಾಗಿದೆ.

1. ನಿರ್ಧಾರ ಕೈಗೊಳ್ಳುವಿಕೆಯ ಮೇಲೆ ಮಾಹಿತಿಯ ಒಳ ಹೂಡಿಕೆ ಮತ್ತು ಹೊರ ಮೂಡುವಿಕೆಯ ಪ್ರಭಾವದ ವಿವರಣೆಯು ಸರಿಯಲ್ಲ.

2. ಯಂತ್ರಶಾಸ್ತ್ರದಿಂದ ಎರವಲು ಪಡೆದ ಸಂಪರ್ಕ ಜಾಲ ಆಧರಿಸಿರುವ ಸಂಪರ್ಕ ಸಿದ್ಧಾಂತವನ್ನು ಪರಿಣಾಮಕಾರಿಯಾಗಿ ರಾಜ್ಯಶಾಸ್ತ್ರದಲ್ಲಿ ಅನ್ವಯಿಸಲಾಗದು.
3. ಸಮತಾವಾದದ ತತ್ವಗಳಿಗೆ ಆಸ್ಪದ ಹೊಂದಿರದ ಸಂಪರ್ಕ ಸಿದ್ಧಾಂತವು ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ವಿರುದ್ಧವಾದುದು.
4. ಸಂಪರ್ಕ ಸಿದ್ಧಾಂತವು ಅಪರಿಪೂರ್ಣ ವಿವರಗಳನ್ನು ಒಳಗೊಂಡಿದೆ.

ವಿಮರ್ಶಕರಿಂದ ಹಲವು ಟೀಕೆಗಳನ್ನು ಎದುರಿಸಿದರೂ ಡ್ಯುಚ್ ಪ್ರತಿಪಾದಿಸಿರುವ ಸಂಪರ್ಕ ಸಿದ್ಧಾಂತದ ತಳಹದಿಯುಳ್ಳ ಸಂಪರ್ಕ ವಿಧಾನವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೌಲನಿಕ ರಾಜಕೀಯದ ಅಧ್ಯಯನಕ್ಕೆ ನೆರವಾಗಿದೆ. ಜೊತೆಗೆ ಕ್ರಾಂತಿಕಾರಕ ವೈಚಾರಿಕತೆಯನ್ನು ಚಿಂತಕರಲ್ಲಿ ಉಂಟು ಮಾಡುವಲ್ಲಿ ಸಂಪರ್ಕ ವಿಧಾನವು ಸಹಕಾರಿಯಾಗಿದೆ. ಅಲ್ಲದೇ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಸಮುದಾಯಗಳ ರಚನೆ ಮತ್ತು ಕಾರ್ಯಾಚರಣೆಗೆ ಸಂಪರ್ಕ ವಿಧಾನವು ಪ್ರೇರಣೆಯನ್ನು ಒದಗಿಸಿದೆ. ಈ ಹಿನ್ನೆಲೆಯಲ್ಲಿ ಡ್ಯುಚ್ ಪ್ರತಿಪಾದಿಸಿರುವ ಸಂಪರ್ಕ ಸಿದ್ಧಾಂತವು ಆತ ಆಧುನಿಕ ರಾಜಕೀಯ ವಿಶ್ಲೇಷಣೆಗೆ ನೀಡಿದ ಮಹತ್ವದ ಕೊಡುಗೆ ಎನಿಸಿಕೊಂಡಿದೆ.

## [D.] ನಿರ್ಧಾರ ಕೈಗೊಳ್ಳುವಿಕೆಯ ವಿಧಾನ [Decision Making Approache]

ಆಡಳಿತವೆಂಬ ಪರಿಕಲ್ಪನೆಯ ಮೂಲಾಧಾರವೇ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ. ಕೌಟುಂಬಿಕ ಆಡಳಿತದಿಂದ ಮೊದಲುಗೊಂಡು ರಾಜ್ಯ, ರಾಷ್ಟ್ರ, ಅಂತರರಾಷ್ಟ್ರ ಮಟ್ಟದಲ್ಲಿ ನಿರ್ಧಾರ ಕೈಗೊಳ್ಳುವಿಕೆ ತನ್ನದೇಯಾದ ಮಹತ್ವ ಪಡೆದಿದೆ. ಈ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳುವಿಕೆಯು ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತ ಪರಿಕಲ್ಪನೆ ಎನಿಸಿದೆ. ಇದಕ್ಕೆ ನಿರ್ಧಾರ ಕೈಗೊಳ್ಳುವಿಕೆಯು ರಾಜ್ಯಶಾಸ್ತ್ರದ ಸಾರ್ವಜನಿಕ ಆಡಳಿತ, ಅಂತರ ರಾಷ್ಟ್ರೀಯ ಸಂಬಂಧ, ತೌಲನಿಕ ರಾಜಕೀಯ ಶಾಖೆಗಳಲ್ಲಿ ವ್ಯಾಪಕವಾಗಿ ಬಳಸಲ್ಪಡುತ್ತಿರುವುದು ಪ್ರಧಾನ ಕಾರಣ. ಈ ನಿರ್ಧಾರ ಕೈಗೊಳ್ಳುವಿಕೆಯನ್ನು ಸಾರ್ವಜನಿಕ ಆಡಳಿತದ ಅಧ್ಯಯನದಲ್ಲಿ ವ್ಯವಸ್ಥಿತವಾಗಿ ಹರ್ಬರ್ಟ್ ಸೈಮನ್ ಬಳಸಿದರೆ ಅಂತರ ರಾಷ್ಟ್ರೀಯ ರಾಜಕೀಯದಲ್ಲಿ ರಿಚರ್ಡ್ ಸ್ನೈಡರ್ ಜನಪ್ರಿಯಗೊಳಿಸಿದರು.

ಜಾರ್ಜ್ ಟೆರ್ರಿ ಪ್ರಕಾರ ಎರಡು ಅಥವಾ ಹೆಚ್ಚಿನ ಪರ್ಯಾಯಗಳಲ್ಲಿ ನಿರ್ದಿಷ್ಟ ಅಂಶವನ್ನಾಧರಿಸಿ ಒಂದು ಆಯ್ಕೆ ಮಾಡಿಕೊಳ್ಳುವುದೇ ನಿರ್ಧಾರ ಕೈಗೊಳ್ಳುವಿಕೆಯಾಗಿದೆ. ಸಾಮಾನ್ಯವಾಗಿ ನಿರ್ಧಾರ ಕೈಗೊಳ್ಳುವಿಕೆಯು ಸವಾಲುಗಳಿಗೆ ಪರಿಹಾರವನ್ನು ಪ್ರತಿನಿಧಿಸುತ್ತದೆ. ನಿರ್ಧಾರ ಕೈಗೊಳ್ಳುವಿಕೆಯು ಸಮಸ್ಯೆಯನ್ನು ಗುರುತಿಸುವ, ಮಾಹಿತಿಯನ್ನು ಸಂಗ್ರಹಿಸುವ, ಪರ್ಯಾಯಗಳನ್ನು ಕಂಡುಕೊಳ್ಳುವ ಮತ್ತು ವಿವಿಧ ಪರ್ಯಾಯ ಆಯ್ಕೆಗಳಲ್ಲಿ ಒಂದನ್ನು ಅಂತಿಮಗೊಳಿಸುವ ಹಂತಗಳನ್ನು ಪ್ರತಿನಿಧಿಸುವ



ವ್ಯವಸ್ಥಿತ ಪರಿಕಲ್ಪನೆಯಾಗಿದೆ. ಆದ್ದರಿಂದಲೇ ರಾಬರ್ಟ್ ದಾಲ್ ತಮ್ಮ ಆಧುನಿಕ ರಾಜಕೀಯ ವಿಶ್ಲೇಷಣೆ ಎಂಬ ಕೃತಿಯಲ್ಲಿ ನಿರ್ಧಾರ ಕೈಗೊಳ್ಳುವಿಕೆಯನ್ನು ರಾಜಕೀಯದಲ್ಲಿನ ಶುದ್ಧ ವಿಜ್ಞಾನದ ಸಂಕೇತ ಎಂದಿರುವರು. ಗಮನಿಸಬೇಕಾದ ಅಂಶವೇನೆಂದರೆ, ನಿರ್ಧಾರ ಕೈಗೊಳ್ಳುವಿಕೆ ಪರಿಕಲ್ಪನೆಯನ್ನು ಹರ್ಬರ್ಟ್ ಸೈಮನ್ ನಿರ್ಧಾರ ಮತ್ತು ಅದನ್ನು ಜಾರಿಗೊಳಿಸುವ ಪ್ರಕ್ರಿಯೆ ಎಂಬ ಎರಡು ಭಾಗವಾಗಿ ಪ್ರತ್ಯೇಕಿಸಿ ಅಧ್ಯಯನ ನಡೆಸಲು ಮುಂದಾಗಿರುವರು.

ಸ್ನೈಡರ್ ಅಭಿಪ್ರಾಯದಲ್ಲಿ ನಿರ್ಧಾರ ಕೈಗೊಳ್ಳುವಿಕೆಯು ಚಲನಶೀಲ ಪ್ರಕ್ರಿಯೆಯಾಗಿದೆ. ಇದಕ್ಕೆ ಸಮಾಜವು ಸಂಕೀರ್ಣತೆ ಮತ್ತು ಚಲನಶೀಲತೆ ಮೈಗೂಡಿಸಿಕೊಂಡಿರುವುದು ಪ್ರಧಾನ ಕಾರಣ. ಸಮಾಜವೊಂದು ಹೊಂದಿರುವ ರಾಜಕೀಯ ಕ್ರಿಯೆಯ ಹಿಂದೆ ಮಾನವರ ಚಟುವಟಿಕೆಗಳ ಪಾತ್ರವನ್ನು ಗುರುತಿಸಬಹುದು. ಸಮಾಜವೊಂದು ಹೇಗೆ ಮುನ್ನಡೆಯಬೇಕೆಂಬ ನೀತಿ ನಿರೂಪಣೆಯಲ್ಲಿ ಮಾನವರ ಕ್ರಿಯೆಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಹೊಂದಿರುತ್ತವೆ. ಆದ್ದರಿಂದ ಸಮಾಜವೊಂದರ ಪರಿಪೂರ್ಣ ಅಧ್ಯಯನಕ್ಕೆ ಅಲ್ಲಿನ ನಿರ್ಧಾರ ಕೈಗೊಳ್ಳುವಿಕೆಯನ್ನು ಅಭ್ಯಸಿಸುವುದು ಅಗತ್ಯವೆಂಬುದು ಸ್ನೈಡರ್‌ರವರ ನಿಲುವಾಗಿತ್ತು.

ನಿರ್ಧಾರ ಕೈಗೊಳ್ಳುವವರು ಒಂದು ಸನ್ನಿವೇಶವನ್ನು ಹೇಗೆ ವ್ಯಾಖ್ಯಾನಿಸುತ್ತಾರೆ ಎಂಬುದನ್ನು ಅವರ ನಿರ್ಧಾರ ಕೈಗೊಳ್ಳುವಿಕೆಯು ಆಧರಿಸಿರುತ್ತದೆ ಎಂದು ಸ್ನೈಡರ್ ತಮ್ಮ ಸಿದ್ಧಾಂತದಲ್ಲಿ ಪ್ರತಿಪಾದಿಸಿದರು. ಮುಂದುವರಿದು, ದೇಶ ಅಥವಾ ರಾಜ್ಯವೊಂದರ ನಿರ್ಧಾರಗಳು ನಿಜಾರ್ಥದಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರವುಳ್ಳವರು ರಾಜ್ಯದ ಪರವಾಗಿ ಕೈಗೊಂಡ ನಿರ್ಧಾರಗಳಾಗಿರುತ್ತವೆಯೇ ಹೊರತು ರಾಜ್ಯವೇ ಕೈಗೊಂಡ ನಿರ್ಧಾರಗಳಾಗಿರುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದರು. ಜೊತೆಗೆ ನಿರ್ಧಾರ ಕೈಗೊಳ್ಳುವವರು ಆಂತರಿಕ ಮತ್ತು ಬಾಹ್ಯ ಮೂಲಾಂಶಗಳನ್ನು ಆಧರಿಸಿ ನಿರ್ಧಾರ ಕೈಗೊಳ್ಳಬೇಕಾಗುತ್ತದೆ ಎಂಬುದು ಸ್ನೈಡರ್ ಅಭಿಪ್ರಾಯವಾಗಿತ್ತು. ಸಾರ್ವಜನಿಕಾಭಿಪ್ರಾಯ, ಸಾಮಾಜಿಕ ಸ್ಥಿತಿ, ಆರ್ಥಿಕ ಬೆಳವಣಿಗೆ, ಜನಸಂಖ್ಯಾ ಪ್ರಮಾಣ ಮುಂತಾದವು ನಿರ್ಧಾರ ಕೈಗೊಳ್ಳುವಿಕೆಯ ಮೇಲೆ ಪ್ರಭಾವ ಬೀರುವ ಆಂತರಿಕ ಮೂಲಾಂಶಗಳಾದರೆ ಅಂತರ ರಾಷ್ಟ್ರೀಯ ಸಮುದಾಯಗಳ ಬೆಂಬಲ ಅಥವಾ ತಿರಸ್ಕಾರದಂತಹ ಅಂಶಗಳು ಬಾಹ್ಯ ಮೂಲಾಂಶಗಳಾಗಿರುತ್ತವೆ. ದೇಶವೊಂದು ನಿರ್ಧಾರ ಕೈಗೊಳ್ಳುವ ಸಮಯದಲ್ಲಿ ತನ್ನ ಆಂತರಿಕ ಹಾಗೂ ಬಾಹ್ಯ ಪ್ರಭಾವಗಳಿಗೆ ಸೂಕ್ತ ಪ್ರಾಮುಖ್ಯತೆ ನೀಡದಿದ್ದರೆ ನಿರ್ಧಾರಗಳು ಸರ್ವರ ಸಮ್ಮತಿ ಮತ್ತು ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತವೆ ಎಂಬುದು ಸ್ನೈಡರ್‌ರವರ ನಿಲುವಾಗಿತ್ತು.

ಒಟ್ಟಾರೆ ಆಧುನಿಕ ರಾಜಕೀಯ ವಿಶ್ಲೇಷಣೆಯ ಭಾಗವಾಗಿ ಸ್ನೈಡರ ಪ್ರತಿಪಾದಿಸಿರುವ ನಿರ್ಧಾರ ಕೈಗೊಳ್ಳುವಿಕೆಯ ಸಿದ್ಧಾಂತವು ತೌಲನಿಕ ರಾಜಕಾರಣದ ಅಧ್ಯಯನಕ್ಕೆ ಅತ್ಯಂತ ಉಪಯುಕ್ತವಾಗಿದೆ. ದೇಶ ದೇಶಗಳ ನಡುವಿನ ವ್ಯವಹಾರಗಳಿಗೆ ಅಂದರೆ ವಿದೇಶಾಂಗ ನೀತಿಗಳ ಮನವರಿಕೆಗೆ, ರಾಷ್ಟ್ರಗಳ ಮುಖ್ಯಸ್ಥರ ನಿಲುವುಗಳ ಅರ್ಥೈಸಿಕೊಳ್ಳುವಿಕೆಗೆ, ರಾಜಕೀಯ ಬೆಳವಣಿಗೆಗಳ ಅವಲೋಕನಕ್ಕೆ ಸಹಕಾರಿ ಎನಿಸಿದೆ. ಅಲ್ಲದೇ ದೇಶದೊಳಗಿನ ನಿರ್ಧಾರ ಕೈಗೊಳ್ಳುವಿಕೆಯ ಪ್ರಕ್ರಿಯೆಯನ್ನು ಮನವರಿಕೆ ಮಾಡಿಕೊಳ್ಳಲು ನೆರವಾಗಿದೆ.

## ಮಾದರಿ ಪ್ರಶ್ನೆಗಳು
## [MODEL QUESTIONS]:

### [A.] ಎರಡು ಅಂಕದ ಪ್ರಶ್ನೆಗಳು:

1. ವಿವಿಧ ಅಧ್ಯಯನ ದೃಷ್ಟಿಕೋನಗಳಲ್ಲಿ ಬಳಸುವ ಪ್ರಧಾನ ವಿಧಾನಗಳನ್ನು ತಿಳಿಸಿರಿ.
2. ದೃಷ್ಟಿಕೋನ ಎಂದರೇನು?
3. ಅಲೆನ್ ದಾಲ್ ಅಧ್ಯಯನ ವಿಧಾನಗಳನ್ನು ಎಷ್ಟು ಪ್ರಕಾರಗಳಾಗಿ ವಿಂಗಡಿಸಿದ್ದಾರೆ? ಅವು ಯಾವುವು?
4. ತತ್ವಶಾಸ್ತ್ರೀಯ ವಿಧಾನದ ಪ್ರಮುಖ ಪ್ರತಿಪಾದಕರನ್ನು ಹೆಸರಿಸಿರಿ.
5. ತತ್ವಶಾಸ್ತ್ರೀಯ ವಿಧಾನದ ಎರಡು ದೋಷಗಳನ್ನು ಬರೆಯಿರಿ.
6. ಐತಿಹಾಸಿಕ ವಿಧಾನದ ಎರಡು ಅನುಕೂಲಗಳನ್ನು ತಿಳಿಸಿರಿ.
7. ಸಾಂಸ್ಥಿಕ ವಿಧಾನವು ಯಾವ ರಾಜಕೀಯ ಸಂಸ್ಥೆಗಳನ್ನು ಅರಿಯಲು ಸಹಕಾರಿಯಾಗಿದೆ?
8. ವ್ಯವಸ್ಥೆ ಎಂದರೇನು?
9. ರಚನಾತ್ಮಕ ಕಾರ್ಯಾತ್ಮಕ ವಿಧಾನದ ತಿರುಳೇನು?
10. ಕಾರ್ಲ್ ಡ್ಯುಚ್ ದೃಷ್ಟಿಯಲ್ಲಿ ಸಂಪರ್ಕ ಎಂದರೇನು?
11. ಸಂಪರ್ಕ ವಿಧಾನದ ಮೂರು ಲಕ್ಷಣಗಳನ್ನು ಬರೆಯಿರಿ.
12. ನಿರ್ಧಾರ ಕೈಗೊಳ್ಳುವಿಕೆ ಎಂದರೇನು?
13. ನಿರ್ಧಾರ ಕೈಗೊಳ್ಳುವಿಕೆ ಕುರಿತಂತೆ ರಿಚರ್ಡ್ ಸ್ನೈಡರ್ ಅಭಿಪ್ರಾಯಗಳನ್ನು ಬರೆಯಿರಿ.

### [B.] ಐದು ಅಂಕದ ಪ್ರಶ್ನೆಗಳು:



1. ಐತಿಹಾಸಿಕ ವಿಧಾನವನ್ನು ಕುರಿತು ಟಿಪ್ಪಣಿ ಬರೆಯಿರಿ.
2. ಸಾಂಸ್ಥಿಕ ವಿಧಾನದ ಅಗತ್ಯವನ್ನು ಚರ್ಚಿಸಿರಿ.
3. ಡ್ಯುಚ್ ಪ್ರತಿಪಾದಿಸಿರುವ ಸಂಪರ್ಕ ವಿಧಾನವನ್ನು ಪರಿಶೀಲಿಸಿರಿ.
4. ನಿರ್ಧಾರ ಕೈಗೊಳ್ಳುವಿಕೆ ವಿಧಾನವನ್ನು ವಿವರಿಸಿರಿ.

### [C] ಹತ್ತು ಅಂಕದ ಪ್ರಶ್ನೆಗಳು:

1. ತೌಲನಿಕ ರಾಜಕೀಯದ ಅಧ್ಯಯನಕ್ಕೆ ಉಪಯುಕ್ತವಾದ ಸಾಂಪ್ರದಾಯಿಕ ವಿಧಾನಗಳನ್ನು ಪರಿಶೀಲಿಸಿರಿ.
2. ತೌಲನಿಕ ರಾಜಕೀಯದ ಅಧ್ಯಯನಕ್ಕೆ ಉಪಯುಕ್ತವಾದ ಆಧುನಿಕ ವಿಧಾನಗಳನ್ನು ಸಂಕ್ಷೀಪ್ತವಾಗಿ ವಿವರಿಸಿರಿ.

ಅಧ್ಯಾಯ 3:

# ಸರ್ಕಾರ ಮತ್ತು ರಾಜಕೀಯದ ಪ್ರಕಾರಗಳು

## [Types of Government and Politics]

### ಪ್ರಸ್ತಾವನೆ [Introduction]:

ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಾದ ನಮಗೆ ಈಗಾಗಲೇ ತಿಳಿದಂತೆ ಮಾನವ ಸಮಾಜದಲ್ಲಿನ ಅಶಾಂತಿ, ಅಭದ್ರತೆ ಹಾಗೂ ಅರಾಜಕತೆಯನ್ನು ಹೋಗಲಾಡಿಸಲು ರಾಜ್ಯ (ಸಾಮಾನ್ಯರ ದೃಷ್ಟಿಯಲ್ಲಿನ ದೇಶ) ಎಂಬ ಸಂಸ್ಥೆ ಉದಯವಾಯಿತು. ರಾಜ್ಯದೊಡನೆ ಅದರ ಇಚ್ಛೆಯನ್ನು ಜಾರಿಗೊಳಿಸುವ ಸಾಧನವಾಗಿ ಸರ್ಕಾರವೆಂಬ ಪರಿಕಲ್ಪನೆಯೂ ಜನ್ಮ ತಾಳಿತು. ಫಲವಾಗಿ ಪ್ರಸ್ತುತ ಜಗತ್ತಿನ ಪ್ರತಿಯೊಂದು ದೇಶವೂ ತನ್ನದೇಯಾದ ಸರ್ಕಾರವನ್ನು ಹೊಂದಿದೆ. ಪ್ರಾಚೀನ ಕಾಲದಿಂದಲೂ ಆಯಾ ದೇಶದ ಸನ್ನಿವೇಶಾನುಸಾರ ಸರ್ಕಾರದ ಮಾದರಿ ಭಿನ್ನವಾಗಿರುವುದನ್ನು ಗುರುತಿಸಬಹುದಾಗಿದೆ. ಉದಾ: ಅರಿಸ್ಟಾಟಲ್‌ನು ಆಳುವವರ ಸಂಖ್ಯೆ ಮತ್ತು ಉದ್ದೇಶ ಆಧರಿಸಿ ಆರು ಬಗೆಯ ಸರ್ಕಾರದ ಮಾದರಿಗಳನ್ನು ಪ್ರಾಚೀನ ಕಾಲದಲ್ಲಿ ಪ್ರತಿಪಾದಿಸಿದುದು. ಕಾಲಾನುಕ್ರಮದಲ್ಲಿ ಈ ವೈವಿಧ್ಯಮಯ ಸರ್ಕಾರಗಳ ಸುತ್ತ ಆಯಾ ಸರ್ಕಾರಗಳಿಗೆ ಅನುರೂಪವಾದ ರಾಜಕೀಯ ವ್ಯವಸ್ಥೆ ರೂಪುಗೊಂಡಿತು.

ಆಧುನಿಕ ಯುಗದಲ್ಲಿ ರಾಜ್ಯಶಾಸ್ತ್ರಜ್ಞರು ಅಧಿಕಾರದ ಸ್ಥಾನ, ಹಂಚಿಕೆ ಹಾಗೂ ಪ್ರತ್ಯೇಕತೆಯನ್ನು ಆಧರಿಸಿ ವಿವಿಧ ಮಾದರಿಯ ರಾಜಕೀಯ ವ್ಯವಸ್ಥೆಗಳನ್ನು ಅಂದರೆ ಸರ್ಕಾರಗಳನ್ನು ಗುರುತಿಸಿದ್ದಾರೆ. ಅಧಿಕಾರದ ಸ್ಥಾನವನ್ನಾಧರಿಸಿ ನಿರಂಕುಶ ಸರ್ಕಾರ ಹಾಗೂ ಪ್ರಜಾಪ್ರಭುತ್ವ ಸರ್ಕಾರವೆಂದು, ಅಧಿಕಾರದ ಹಂಚಿಕೆಯನ್ನಾಧರಿಸಿ ಏಕಾತ್ಮಕ ಸರ್ಕಾರ ಹಾಗೂ ಸಂಯುಕ್ತ ಸರ್ಕಾರವೆಂದು ಮತ್ತು ಅಧಿಕಾರದ ಪ್ರತ್ಯೇಕತೆಯನ್ನಾಧರಿಸಿ ಸಂಸದೀಯ ಸರ್ಕಾರ ಹಾಗೂ ಅಧ್ಯಕ್ಷೀಯ ಸರ್ಕಾರವೆಂದು ಚಿಂತಕರು ಸರ್ಕಾರಗಳನ್ನು ವರ್ಗೀಕರಿಸಿರುವರು. ಗಮನಾರ್ಹ ಸಂಗತಿ ಏನೆಂದರೆ, ಪ್ರಜಾಪ್ರಭುತ್ವದಡಿ ಗುರುತಿಸಲ್ಪಡುವ ಸಂಸದಿಯ ಹಾಗೂ ಅಧ್ಯಕ್ಷೀಯ ಪ್ರಜಾಪ್ರಭುತ್ವ ಸರ್ಕಾರಗಳನ್ನು ಸಮಕಾಲೀನ ಜಗತ್ತಿನಲ್ಲಿ ಬಹುತೇಕ ದೇಶಗಳು ಅಳವಡಿಸಿಕೊಂಡಿರುವುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯದ ಮೂಲಕ ಸಂಸದೀಯ, ಅಧ್ಯಕ್ಷೀಯ, ಏಕಾತ್ಮಕ ಹಾಗೂ ಸಂಯುಕ್ತ ರಾಜಕೀಯ ವ್ಯವಸ್ಥೆ ಅಥವಾ ಸರ್ಕಾರಗಳ ಮೇಲೆ ಬೆಳಕು ಚೆಲ್ಲಲಾಗಿದೆ.



### [I.] ಸಂಸದೀಯ ಸರ್ಕಾರ [Parliamentary Government]:

**ಪೀಠಿಕೆ:** ಆಧುನಿಕ ಪ್ರಜಾಸತ್ತಾತ್ಮಕ ಸರ್ಕಾರಗಳಲ್ಲಿ ಸಂಸದೀಯ ಹಾಗೂ ಅಧ್ಯಕ್ಷೀಯ ಮಾದರಿ ಸರ್ಕಾರಗಳು ಪ್ರಧಾನವಾಗಿವೆ. ಸರ್ಕಾರದ ಅಂಗಗಳಾದ ಶಾಸಕಾಂಗ ಮತ್ತು ಕಾರ್ಯಾಂಗಗಳ ನಡುವಿನ ಸಂಬಂಧವನ್ನು ಆಧರಿಸಿ ಈ ಎರಡು ಮಾದರಿಯ ಸರ್ಕಾರಗಳನ್ನು ಚಿಂತಕರು ಗುರುತಿಸಿದ್ದಾರೆ. ಸಂಸದೀಯ ಸರ್ಕಾರವು ಬ್ರಿಟನ್ನಿನಲ್ಲಿ ಮೊದಲು ರೂಪುಗೊಂಡ ಸರ್ಕಾರದ ಮಾದರಿಯಾಗಿದೆ. ಬ್ರಿಟನ್ನಿನ ಶಾಸಕಾಂಗವಾದ ಪಾರ್ಲಿಮೆಂಟು ಮತ್ತು ಅರಸು ಮನೆತನದ ಸ್ಥಾನಮಾನಗಳಲ್ಲಿನ ಹಲವು ಪರಿವರ್ತನೆಯ ಫಲವಾಗಿ ಸಂಸದಿಯ ಸರ್ಕಾರವು ಕಾಲಾಂತರದಲ್ಲಿ ಪ್ರಸಕ್ತ ಸ್ವರೂಪವನ್ನು ತಾಳಿದುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಬ್ರಿಟನ್ನನ್ನು ಸಂಸದಿಯ ಪ್ರಜಾಪ್ರಭುತ್ವದ ತವರೂರು ಎನ್ನಲಾಗುತ್ತದೆ. ಬ್ರಿಟನ್ನಿನ ವಸಾಹತುಗಳೆನಿಸಿದ್ದ ಜಗತ್ತಿನ ಹಲವು ದೇಶಗಳು ಬ್ರಿಟಿಷ್ ಮಾದರಿಯ ಸಂಸದೀಯ ಸರ್ಕಾರವನ್ನೇ ಸ್ವತಂತ್ರ್ಯ ನಂತರ ಅಳವಡಿಸಿಕೊಂಡವು. ಈ ಕಾರಣಕ್ಕೆ ಜಗತ್ತಿನ ಸಂಸದೀಯ ಸರ್ಕಾರಕ್ಕೆ ಬ್ರಿಟನ್ನಿನ ಕಾಣಿಕೆ ಅನನ್ಯ ಎನ್ನಲಾಗುತ್ತದೆ.

#### [A.] ಸಂಸದಿಯ ಸರ್ಕಾರದ ಅರ್ಥ [Meaning of Parliamentary Government]:

ಸರಳಾರ್ಥದಲ್ಲಿ ಕಾರ್ಯಾಂಗವು ಶಾಸಕಾಂಗದಿಂದ ರಚನೆಗೊಂಡಿದ್ದು ಶಾಸಕಾಂಗಕ್ಕೆ ಕಾರ್ಯಾಂಗವು ಜವಾಬ್ದಾರಿಯಾಗಿರುವ ಸರ್ಕಾರ ಪದ್ಧತಿಯನ್ನು ಸಂಸದೀಯ ಮಾದರಿ ಸರ್ಕಾರ ಎನ್ನಲಾಗುತ್ತದೆ. ವಿಶಾಲಾರ್ಥದಲ್ಲಿ ಕಾರ್ಯಾಂಗವು ನಾಮ ಮಾತ್ರ ಹಾಗೂ ನೈಜ ಮುಖ್ಯಸ್ಥರನ್ನು ಹೊಂದಿದ್ದು ನಾಮ ಮಾತ್ರ ಮುಖ್ಯಸ್ಥನ ಹೆಸರಿನಲ್ಲಿ ಅಧಿಕಾರವನ್ನು ಚಲಾಯಿಸುವ ನೈಜ ಕಾರ್ಯಾಂಗವು ಶಾಸಕಾಂಗಕ್ಕೆ ಜವಾಬ್ದಾರಿ ತೋರುವ ಸರ್ಕಾರದ ಮಾದರಿಯೇ ಸಂಸದೀಯ ಸರ್ಕಾರ. ಇಲ್ಲಿ ಸರ್ಕಾರದ ಅಂಗಗಳಾದ ಶಾಸಕಾಂಗ ಮತ್ತು ಕಾರ್ಯಾಂಗಗಳು ಸ್ವತಂತ್ರವಾಗಿರದೇ ಪರಸ್ಪರ ಅವಲಂಬಿಯಾಗಿರುತ್ತವೆ. ಇದರರ್ಥ ಶಾಸಕಾಂಗದಲ್ಲಿ ಬಹುಮತ ಪಡೆದಿರುವ ಪಕ್ಷದವರು ಪ್ರಧಾನಿ ನಾಯಕತ್ವದ ನೈಜ ಕಾರ್ಯಾಂಗವನ್ನು ರಚಿಸಿ ಶಾಸಕಾಂಗದ ವಿಶ್ವಾಸವಿರುವವರೆಗೆ ಅಧಿಕಾರದಲ್ಲಿ ಮುಂದುವರೆಯುತ್ತಾರೆ. ಅಂತೆಯೇ ನೈಜ ಕಾರ್ಯಾಂಗದ ಪ್ರಧಾನ ಮಂತ್ರಿಯು ಶಾಸಕಾಂಗವನ್ನು ವಿಸರ್ಜಿಸಲು ದೇಶದ ನಾಮ ಮಾತ್ರ ಕಾರ್ಯಾಂಗದ ಮುಖ್ಯಸ್ಥನಿಗೆ ಸಲಹೆ ನೀಡಿದರೆ ಶಾಸಕಾಂಗದ ಸದಸ್ಯರು ಅಧಿಕಾರ ಕಳೆದುಕೊಳ್ಳುತ್ತಾರೆ. ಒಟ್ಟಾರೆ ಶಾಸಕಾಂಗ ಮತ್ತು ಕಾರ್ಯಾಂಗ ಪರಸ್ಪರ ನಿಯಂತ್ರಣಕ್ಕೊಳಪಟ್ಟಿರುವ ಸರ್ಕಾರದ ಮಾದರಿಯು ಸಂಸದೀಯ ಸರ್ಕಾರ ಎನಿಸಿಕೊಂಡಿದೆ. ಈ ಬಗೆಯ ಸಂಸದೀಯ ಪ್ರಜಾಪ್ರಭುತ್ವ ಸರ್ಕಾರವನ್ನು ಇಂಗ್ಲೆಂಡ್, ಭಾರತ, ಆಸ್ಟ್ರೇಲಿಯಾ, ಜರ್ಮನಿ, ಜಪಾನ್ ಸೇರಿದಂತೆ ಪ್ರಸ್ತುತ ಜಗತ್ತಿನ ಹಲವು ಪ್ರಜಾಪ್ರಭುತ್ವ ದೇಶಗಳಲ್ಲಿ ಗುರುತಿಸಬಹುದಾಗಿದೆ.

## [B.] ಸಂಸದೀಯ ಸರ್ಕಾರದ ಲಕ್ಷಣಗಳು
## Features of Parliamentary Government]:

**ಸಂಸದೀಯ ಪ್ರಜಾಪ್ರಭುತ್ವದ ಪ್ರಧಾನ ಲಕ್ಷಣಗಳು ಕೆಳಗಿನಂತಿವೆ.**

**[1. ನಾಮ ಮಾತ್ರ ಹಾಗೂ ನೈಜ ಕಾರ್ಯಾಂಗಗಳ ಅಸ್ತಿತ್ವ:** ಸಂಸದಿಯ ಪ್ರಜಾಪ್ರಭುತ್ವ ಸರ್ಕಾರವು ಜಾರಿಯಲ್ಲಿರುವ ದೇಶಗಳಲ್ಲಿ ನಾಮ ಮಾತ್ರ ಹಾಗೂ ನೈಜ ಎಂಬ ಕಾರ್ಯಾಂಗದ ಪ್ರತ್ಯೇಕತೆಯನ್ನು ಗುರುತಿಸಬಹುದಾಗಿದೆ. ನಾಮ ಮಾತ್ರ ಕಾರ್ಯಾಂಗದ ಮುಖ್ಯಸ್ಥನು ದೇಶದ ಮುಖ್ಯಸ್ಥನಾಗಿದ್ದು ಆತನ ಹೆಸರಿನಲ್ಲಿಯೇ ದೇಶದ ಅಧಿಕಾರವೆಲ್ಲ ಚಲಾವಣೆಗೊಳ್ಳುತ್ತದೆ. ಉದಾ: ಬ್ರಿಟಿಷ್ ರಾಜ ಅಥವಾ ರಾಣಿ, ಪಶ್ಚಿಮ ಜರ್ಮನಿಯ ಅಧ್ಯಕ್ಷ, ಭಾರತದ ರಾಷ್ಟ್ರಪತಿ. ಗಮನಾರ್ಹ ಅಂಶವೇನೆಂದರೆ, ಸಂಸದೀಯ ಸರ್ಕಾರದಲ್ಲಿ ದೇಶದ ಶಾಸಕಾಂಗದ ಜನತಾ ಸದನದಲ್ಲಿ ಬಹುಮತವುಳ್ಳ ಪ್ರಧಾನಿ ನಾಯಕತ್ವದ ಮಂತ್ರಿ ಮಂಡಳವು ನೈಜ ಕಾರ್ಯಾಂಗ ಎನಿಸಿಕೊಂಡಿರುತ್ತದೆ. ದೇಶದ ನಾಮ ಮಾತ್ರ ಮುಖ್ಯಸ್ಥನ ಹೆಸರಿನಲ್ಲಿ ಆತನ ಅಧಿಕಾರಗಳನ್ನು ವಾಸ್ತವದಲ್ಲಿ ನೈಜ ಕಾರ್ಯಾಂಗವೇ ಚಲಾಯಿಸುತ್ತದೆ.

**2. ಶಾಸಕಾಂಗದಿಂದ ನೈಜ ಕಾರ್ಯಾಂಗದ ರಚನೆ:** ಸಂಸದೀಯ ಸರ್ಕಾರದಲ್ಲಿನ ನೈಜ ಕಾರ್ಯಾಂಗವಾದ ಪ್ರಧಾನಿಯು ಶಾಸಕಾಂಗದಲ್ಲಿ ಬಹುಮತ ಪಡೆದ ಪಕ್ಷದ ನಾಯಕನಾಗಿರುತ್ತಾನೆ. ಜೊತೆಗೆ ಪ್ರಧಾನಿ ಹಾಗೂ ಆತನ ಮಂತ್ರಿಮಂಡಳದ ಮಂತ್ರಿಗಳು ಕಡ್ಡಾಯವಾಗಿ ಶಾಸಕಾಂಗದ ಸದಸ್ಯತ್ವ ಹೊಂದಿರಬೇಕಾಗುತ್ತದೆ. ನೇಮಕದ ವೇಳೆಯಲ್ಲಿ ಶಾಸಕಾಂಗದ ಸದಸ್ಯನಲ್ಲದ ವ್ಯಕ್ತಿ ಮಂತ್ರಿಮಂಡಳದ ಮಂತ್ರಿಯಾಗಬಹುದಾದರೂ ಆರು ತಿಂಗಳೊಳಗೆ ಶಾಸಕಾಂಗದ ಯಾವುದೇ ಒಂದು ಸದನದ ಸದಸ್ಯತ್ವವನ್ನು ಪಡೆಯಲೇಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಶಾಸಕಾಂಗದಿಂದ ನೈಜ ಕಾರ್ಯಾಂಗದ ರಚನೆ ಎಂಬುದು ಸಂಸದೀಯ ಸರ್ಕಾರದ ಪ್ರಧಾನ ಲಕ್ಷಣವಾಗಿದೆ.

**3. ಶಾಸಕಾಂಗ ಹಾಗೂ ಕಾರ್ಯಾಂಗಗಳ ಅಧಿಕಾರದ ಸಮ್ಮಿಲನ:** ಸಂಸದಿಯ ಪ್ರಜಾಪ್ರಭುತ್ವದಲ್ಲಿ ನ್ಯಾಯಾಂಗವು ಮಾತ್ರ ಸ್ವತಂತ್ರವಾಗಿದ್ದು ಶಾಸಕಾಂಗ ಹಾಗೂ ಕಾರ್ಯಾಂಗಗಳ ನಡುವೆ ಪ್ರತ್ಯೇಕತೆ ಅಥವಾ ಸ್ವತಂತ್ರ ಕಾರ್ಯಾಚರಣೆಯನ್ನು ಕಾಣಲಾಗದು. ಇಲ್ಲಿ ಶಾಸಕಾಂಗದ ಸದಸ್ಯರೇ ನೈಜ ಕಾರ್ಯಾಂಗವಾದ ಮಂತ್ರಿ ಮಂಡಳದಲ್ಲಿ ಸದಸ್ಯತ್ವ ಹೊಂದಿರುತ್ತಾರೆ. ಅಂತೆಯೇ ನೈಜ ಕಾರ್ಯಾಂಗದ ಭಾಗವಾದ ಪ್ರಧಾನಿ ಹಾಗೂ ಮಂತ್ರಿಗಳು ಶಾಸಕಾಂಗದ ಅಧಿವೇಶನದ ವೇಳೆ ಹಾಜರಿದ್ದು ದೇಶದ ನೀತಿ ನಿರೂಪಣೆಯ ಚರ್ಚೆಗಳಲ್ಲಿ ಭಾಗವಹಿಸುತ್ತಾರೆ. ಜೊತೆಗೆ ತಮ್ಮನ್ನು ಸಮರ್ಥಿಸಿಕೊಂಡು ತಾವು ಜಾರಿಗೊಳಿಸಲು ಬಯಸುವ ಮಸೂದೆ ಅಥವಾ ನೀತಿಗಳಿಗೆ ಶಾಸಕಾಂಗದ ಅಂಗೀಕಾರ ಪಡೆಯಲು ಮುಂದಾಗುತ್ತಾರೆ. ಹೀಗೆ ಶಾಸಕಾಂಗ ಹಾಗೂ ಕಾರ್ಯಾಂಗದ



ಸದಸ್ಯತ್ವ ಪಡೆದಿರುವ ಮಂತ್ರಿಗಳ ಕೈಯಲ್ಲಿ ಆದೇಶಗಳನ್ನು ಹೊರಡಿಸುವ ಕಾರ್ಯಾಂಗೀಯ ಮತ್ತು ಮಸೂದೆಗಳನ್ನು ಮಂಡಿಸುವ ಶಾಸನೀಯ ಅಧಿಕಾರಗಳೆರಡೂ ಕೇಂದ್ರೀಕರಣಗೊಂಡಿರುತ್ತವೆ. ಆದ್ದರಿಂದಲೇ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ ಹಾಗೂ ಕಾರ್ಯಾಂಗಗಳ ಅಧಿಕಾರವು ಸಮ್ಮಿಲನಗೊಂಡಿರುತ್ತದೆ ಎನ್ನಬಹುದಾಗಿದೆ.

**4. ಶಾಸಕಾಂಗಕ್ಕೆ ಜವಾಬ್ದಾರಿಯಾಗಿರುವ ಕಾರ್ಯಾಂಗ:** ಸಂಸದೀಯ ಪ್ರಜಾಪ್ರಭುತ್ವದಲ್ಲಿ ನೈಜ ಕಾರ್ಯಾಂಗವು ಶಾಸಕಾಂಗದಿಂದ ರಚನೆಗೊಂಡಿರುತ್ತದೆ. ಜೊತೆಗೆ ಶಾಸಕಾಂಗದ ಜನತಾ ಸದನದಲ್ಲಿ ವಿಶ್ವಾಸ ಅಥವಾ ಬಹುಮತ ಹೊಂದಿರುವವರೆಗೆ ಕಾರ್ಯಾಂಗವು ಅಧಿಕಾರದಲ್ಲಿ ಮುಂದುವರೆಯುತ್ತದೆ. ಹೀಗಾಗಿ ಕಾರ್ಯಾಂಗವು ಶಾಸಕಾಂಗಕ್ಕೆ ಅದರಲ್ಲೂ ಜನತಾ ಸದನಕ್ಕೆ ಜವಾಬ್ದಾರಿ ತೋರುತ್ತಾ ಅದರ ಆಶಯಗಳ ಅಧೀನದಲ್ಲಿ ಕಾರ್ಯಾಚರಿಸುತ್ತದೆ. ಉದಾ: ಬ್ರಿಟನ್ನಿನ ಕಾರ್ಯಾಂಗವು ಪಾರ್ಲಿಮೆಂಟಿನ ಜನತಾ ಸದನವಾದ ಹೌಸ್ ಆಫ್ ಕಾಮನ್ಸ್ ಮತ್ತು ಭಾರತದ ಕೇಂದ್ರ ಕಾರ್ಯಾಂಗವು ಲೋಕಸಭೆಗೆ ಜವಾಬ್ದಾರಿತ್ವ ತೋರುವುದು. ಕಾರ್ಯಾಂಗವಾದ ಮಂತ್ರಿ ಮಂಡಲವು ತನ್ನದೇ ನೀತಿಗಳನ್ನು ರೂಪಿಸುವ, ಆಡಳಿತವನ್ನು ನಿರ್ದೇಶಿಸುವ, ತೆರಿಗೆ ಸಂಗ್ರಹಿಸಿ ವೆಚ್ಚ ಮಾಡುವ ಹಾಗೂ ಇತರ ವಿವಿಧ ಅಧಿಕಾರಗಳನ್ನು ಪಡೆದಿದ್ದರೂ ಶಾಸಕಾಂಗಕ್ಕೆ ಅಂತಿಮವಾಗಿ ಅಧಿವೇಶನಗಳ ಸಮಯದಲ್ಲಿ ಉತ್ತರಿಸಬೇಕಾದ ಜವಾಬ್ದಾರಿಯನ್ನು ಪಡೆದಿರುತ್ತದೆ. ಗಮನಾರ್ಹ ಅಂಶವೇನೆಂದರೆ ಮಂತ್ರಿ ಮಂಡಲದ ಜವಾಬ್ದಾರಿಯು ವೈಯಕ್ತಿಕ ಮತ್ತು ಸಾಮೂಹಿಕ ಸ್ವರೂಪವನ್ನು ಪಡೆದಿರುತ್ತದೆ.

**5. ಪ್ರಧಾನ ಮಂತ್ರಿಗೆ ಮಹತ್ವದ ಸ್ಥಾನ:** ಪ್ರಧಾನ ಮಂತ್ರಿಯು ನೈಜ ಕಾರ್ಯಾಂಗವಾದ ಮಂತ್ರಿಮಂಡಲದ ಸಮಾನಿಗರಲ್ಲಿ ಮೊದಲಿಗನಾದರೂ ಮಂತ್ರಿಮಂಡಲದ ನಾಯಕನಾಗಿ ವಿಫುಲ ಅಧಿಕಾರವನ್ನು ಚಲಾಯಿಸುವ ಮೂಲಕ ದೇಶದಲ್ಲಿ ಗೌರವಕ್ಕೆ ಪಾತ್ರನಾಗುತ್ತಾನೆ. ಆಕರ್ಷಕ ವ್ಯಕ್ತಿತ್ವ ಹಾಗೂ ಅಸಾಮಾನ್ಯ ಸಾಮರ್ಥ್ಯಗಳನ್ನುಳ್ಳ ವ್ಯಕ್ತಿಗಳು ಪ್ರಧಾನ ಮಂತ್ರಿಯಾದಲ್ಲಿ ಪ್ರಶ್ನಾತೀತರಾಗಿ ಸರ್ವಾಧಿಕಾರವನ್ನು ಚಲಾಯಿಸಲು ಅವಕಾಶ ಪಡೆದಿರುತ್ತಾರೆ. ಉದಾ: ಭಾರತದಲ್ಲಿ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು, ಇಂದಿರಾ ಗಾಂಧಿ, ನರೇಂದ್ರ ಮೋದಿ ಪ್ರಶ್ನಾತೀತ ಪ್ರಧಾನ ಮಂತ್ರಿಗಳಾಗಿದ್ದುದು. ಪ್ರಧಾನಿಯು ಮಂತ್ರಿ ಮಂಡಲದ ಮಂತ್ರಿಗಳಿಗೆ ಖಾತೆಗಳನ್ನು ಹಂಚಲು, ಮಂತ್ರಿಗಳ ನಡುವೆ ಹೊಂದಾಣಿಕೆ ತರಲು ಮತ್ತು ಮಂತ್ರಿಗಳಿಂದ ಮಾಹಿತಿ ಅಥವಾ ರಾಜೀನಾಮೆ ಪಡೆಯಲು ಪ್ರಧಾನಿಗೆ ಅಧಿಕಾರವಿರುತ್ತದೆ. ಹೀಗಾಗಿ ಪ್ರಧಾನಿಯನ್ನು ಚಿಂತಕರು ಮಂತ್ರಿಮಂಡಳವೆಂಬ ಸೌರವ್ಯೂಹದ ಸೂರ್ಯನಿಗೆ ಮತ್ತು ತಾರಾಗಣದ ನಡುವಿನ ಚಂದ್ರನಿಗೆ ಹೋಲಿಸಿದ್ದಾರೆ.

**6. ರಾಜಕೀಯ ಸಾಮರಸ್ಯ:** ಸಾಮಾನ್ಯವಾಗಿ ಸಂಸದೀಯ ಪ್ರಜಾಪ್ರಭುತ್ವ ಸರ್ಕಾರದ

ಅಂಗಗಳಾದ ಶಾಸಕಾಂಗ ಹಾಗೂ ಕಾರ್ಯಾಂಗದ ನಡುವೆ ರಾಜಕೀಯ ಹೊಂದಾಣಿಕೆ ಕಂಡು ಬರುತ್ತದೆ. ಶಾಸಕಾಂಗದ ಸದಸ್ಯರ ಬೇಡಿಕೆಯನ್ನಾಧರಿಸಿ ಕಾರ್ಯಾಂಗವು ತನ್ನ ನೀತಿ ಹಾಗೂ ನಿರ್ಧಾರಗಳನ್ನು ರೂಪಿಸುತ್ತದೆ. ಅಂತೆಯೇ ಬಹುಮತ ಪಡೆದ ಕಾರ್ಯಾಂಗದ ನೀತಿ ಅಥವಾ ನಿರ್ಧಾರಗಳನ್ನು ಶಾಸಕಾಂಗವು ಬೆಂಬಲಿಸುತ್ತದೆ. ಮುಂದುವರೆದು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಬಹುಮತ ಪಡೆದ ಒಂದೇ ರಾಜಕೀಯ ಪಕ್ಷದ ಮಂತ್ರಿ ಮಂಡಲವು ರಚನೆಯಾದಲ್ಲಿ ಮಂತ್ರಿಗಳ ನಡುವೆ ಸೈದ್ಧಾಂತಿಕ ಭಿನ್ನತೆಗಳಿಲ್ಲದೇ ಬಲವಾದ ರಾಜಕೀಯ ಸಾಮರಸ್ಯವನ್ನು ಕಾಣಬಹುದಾಗಿದೆ. ಒಂದೊಮ್ಮೆ ಸರ್ಕಾರದ ನೀತಿ ಅಥವಾ ನಿರ್ಧಾರಗಳನ್ನು ಕುರಿತು ಮಂತ್ರಿಮಂಡಳದ ಮಂತ್ರಿಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಮುಚ್ಚಿದ ಬಾಗಿಲೊಳಗೆ ಮಾತ್ರವೇ ಅದನ್ನು ವ್ಯಕ್ತಪಡಿಸಲಾಗುತ್ತದೆ. ಹೀಗೆ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಮಂತ್ರಿಮಂಡಲದ ಸದಸ್ಯರು ರಾಜಕೀಯವಾಗಿ ಏಕಾಭಿಪ್ರಾಯ ಹೊಂದಿ ಸಾಮರಸ್ಯದಿಂದ ಕಾರ್ಯ ನಿರ್ವಹಿಸಬೇಕಾಗುತ್ತದೆ.

**7. ಪರಿಣಾಮಕಾರಿ ವಿರೋಧ ಪಕ್ಷ:** ಸಂಸದೀಯ ಪ್ರಜಾಪ್ರಭುತ್ವದ ಶಾಸಕಾಂಗದಲ್ಲಿ ಅರ್ಧಕ್ಕಿಂತ ಹೆಚ್ಚು ಅಥವಾ ಬಹುಮತ ಪಡೆದ ರಾಜಕೀಯ ಪಕ್ಷವು ನೈಜ ಕಾರ್ಯಾಂಗವಾದ ಮಂತ್ರಿಮಂಡಲವನ್ನು ರಚಿಸಿ ಆಡಳಿತಾರೂಢ ಪಕ್ಷವೆನಿಸುತ್ತದೆ. ಕೆಲವೊಮ್ಮೆ ಎರಡು ಅಥವಾ ಹೆಚ್ಚು ರಾಜಕೀಯ ಪಕ್ಷಗಳು ಸೇರಿ ಮಂತ್ರಿಮಂಡಲ ರಚನೆಯೊಡನೆ ಆಡಳಿತ ಪಕ್ಷವೆನಿಸಿಕೊಳ್ಳುತ್ತವೆ. ಬಹುಮತ ಪಡೆಯಲು ವಿಫಲವಾದ ಪಕ್ಷಗಳು ವಿರೋಧ ಪಕ್ಷವೆಂದು ಪರಿಗಣಿಸಲ್ಪಡುತ್ತವೆ. ವಿರೋಧ ಪಕ್ಷಗಳು ಆಡಳಿತ ಪಕ್ಷದ ನೀತಿ, ನಿರ್ಧಾರ, ಕಾನೂನು ಅಥವಾ ಕಾರ್ಯಕ್ರಮಗಳನ್ನು ಹದ್ದಿನ ಕಣ್ಣಿಟ್ಟು ಪರಿಶೀಲಿಸುತ್ತವೆ. ಸಂಸತ್ತಿನ ಒಳಗೆ ಮತ್ತು ಹೊರಗೆ ಆಡಳಿತ ಪಕ್ಷದ ಜನ ವಿರೋಧಿ ನೀತಿಗಳನ್ನು ಖಂಡಿಸುವುದಲ್ಲದೇ ರಚನಾತ್ಮಕ ಸಲಹೆಯನ್ನು ನೀಡುತ್ತವೆ. ಆಡಳಿತ ಪಕ್ಷವು ಪ್ರಜೆಗಳ ಹಿತವನ್ನು ಕಡೆಗಣಿಸದಂತೆ ಸದಾ ಜಾಗೃತವಾಗಿ ಕಾರ್ಯಾಚರಿಸುವ ವಿರೋಧ ಪಕ್ಷವನ್ನು (ಪ್ರಜಾಪ್ರಭುತ್ವದ ಕಾವಲು ನಾಯಿ) ಎಂದು ಬಣ್ಣಿಸಲಾಗುತ್ತದೆ.

**8. ಪಕ್ಷ ಸರ್ಕಾರ:** ಸಂಸದೀಯ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳು ಅನಿವಾರ್ಯ ಅಂಶವೆನಿಸಿವೆ. ಗಮನಾರ್ಹ ಅಂಶವೇನೆಂದರೆ ರಾಜಕೀಯ ಪಕ್ಷಗಳು ಸಂವಿಧಾನೇತರ ಬೆಳವಣಿಗೆಯಾಗಿರುವುದು. ಬಹುಮತ ಗಳಿಕೆಯೊಡನೆ ಸ್ಥಿರವಾದ ಮಂತ್ರಿಮಂಡಳದ ರಚನೆ, ಮಂತ್ರಿಗಳ ನೇಮಕ, ನೀತಿ ಹಾಗೂ ನಿರ್ಧಾರಗಳ ಜಾರಿ ಮುಂತಾದೆಡೆ ಸಂಸದೀಯ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷದ ಪ್ರಭಾವ ಅಧಿಕವಾಗಿರುತ್ತದೆ. ಸಂಸದೀಯ ಪ್ರಜಾಪ್ರಭುತ್ವವು ಯಶಸ್ವಿಗೊಳ್ಳಲು ಆಡಳಿತ ಮತ್ತು ವಿರೋಧ ಎಂಬ ಎರಡು ಪಕ್ಷಗಳಾದರೂ ಅತ್ಯವಶ್ಯಕ. ಹೀಗಾಗಿ ಸಂಸದೀಯ ಪ್ರಜಾಪ್ರಭುತ್ವ ಸರ್ಕಾರವನ್ನು ಪಕ್ಷ ಸರ್ಕಾರ ಎಂದೇ ಪರಿಗಣಿಸಲಾಗುತ್ತದೆ.



**9. ಅನಿಶ್ಚಿತ ಅಧಿಕಾರವಧಿ:** ಸಂಸದೀಯ ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಅಂಗಗಳಾದ ಶಾಸಕಾಂಗ ಹಾಗೂ ಕಾರ್ಯಾಂಗಗಳ ಅಧಿಕಾರವಧಿಯು ಅನಿಶ್ಚಿತವಾಗಿರುತ್ತದೆ. ಇದಕ್ಕೆ ಕಾರಣವೇನೆಂದರೆ ಆ ಎರಡೂ ಅಂಗಗಳ ನಡುವಿನ ಪರಸ್ಪರಾವಲಂಬನೆ. ಶಾಸಕಾಂಗದಲ್ಲಿ ಬಹುಮತವಿರುವವರೆಗೆ ಮಾತ್ರ ನೈಜ ಕಾರ್ಯಾಂಗದ ಅಧಿಕಾರವಧಿ ಮುಂದುವರೆಯುತ್ತದೆ. ಶಾಸಕಾಂಗದ ವಿಶ್ವಾಸ ಕಳೆದುಕೊಂಡ ಅಂದರೆ ಅವಿಶ್ವಾಸ ಗೊತ್ತುವಳಿಯನ್ನು ಬಹುಮತದೊಡನೆ ಶಾಸಕಾಂಗದ ಕೆಳಮನೆ ಅಂಗೀಕರಿಸಿದೊಡನೆ ಪ್ರಧಾನಿ ನಾಯಕತ್ವದ ಮಂತ್ರಿಮಂಡಲವು ಅಧಿಕಾರವಧಿಯು ಅಂತ್ಯಗೊಳ್ಳುತ್ತದೆ. ಅಂತೆಯೇ ಬಹುಮತದೊಡನೆ ಅಧಿಕಾರಕ್ಕೇರಿದ ಪ್ರಧಾನಿಯು ನಾಮ ಮಾತ್ರ ಕಾರ್ಯಾಂಗದ ಮುಖ್ಯಸ್ಥನಿಗೆ ಶಾಸಕಾಂಗವನ್ನು ವಿಸರ್ಜಿಸಲು ಸಲಹೆ ನೀಡಿದರೆ ಶಾಸಕಾಂಗದ ಕೆಳಮನೆಯ ವಿಸರ್ಜನೆಯೊಡನೆ ಅದರ ಅಧಿಕಾರವಧಿ ಅಂತ್ಯಗೊಳ್ಳುತ್ತದೆ. ಹೀಗೆ ಶಾಸಕಾಂಗ ಹಾಗೂ ಕಾರ್ಯಾಂಗದ ಅಧಿಕಾರವಧಿಯು ಪರಸ್ಪರ ಶಾಸಕಾಂಗ ಹಾಗೂ ಕಾರ್ಯಾಂಗಗಳ ಕೈಯಲ್ಲಿದ್ದು ಅವೆರಡರ ಅಧಿಕಾರವಧಿಯು ಅನಿಶ್ಚಿತತೆಯಿಂದ ಕೂಡಿರುತ್ತದೆ.

ಈ ಮೇಲೆ ಚರ್ಚಿಸಲಾಗಿರುವ ಅಂಶಗಳು ಸಂಸದೀಯ ಸರ್ಕಾರ ಹೊಂದಿರುವ ಪ್ರಧಾನ ಲಕ್ಷಣಗಳಾಗಿವೆ. ಗಮನಾರ್ಹ ಅಂಶವೇನೆಂದರೆ ಸಂಸದೀಯ ಪ್ರಜಾಪ್ರಭುತ್ವವು ದೇಶದಿಂದ ದೇಶಕ್ಕೆ ಭಿನ್ನವಾಗಿರುವುದು. ಆಯಾ ದೇಶಗಳ ರಾಜಕೀಯ ಸನ್ನಿವೇಶಕ್ಕೆ ತಕ್ಕಂತೆ ಕೆಲವು ಮಾರ್ಪಾಟುಗಳೊಡನೆ ಜಗತ್ತಿನ ಬಹುತೇಕ ದೇಶಗಳಲ್ಲಿ ವಿಭಿನ್ನ ಸ್ವರೂಪದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯು ಕಾರ್ಯಾಚರಿಸುತ್ತಿದೆ.

## [II.] ಅಧ್ಯಕ್ಷೀಯ ಸರ್ಕಾರ [Presidential Government]:

**ಪೀಠಿಕೆ:** ಜಗತ್ತಿನ ಉದಾರವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನುಳ್ಳ ದೇಶಗಳ ಸರ್ಕಾರಗಳಲ್ಲಿ ಸಂಸದೀಯ ಮಾದರಿ ಸರ್ಕಾರದಂತೆ ಅಧ್ಯಕ್ಷೀಯ ಮಾದರಿ ಸರ್ಕಾರವನ್ನೂ ಕಾಣಬಹುದಾಗಿದೆ. ಸಂಸದೀಯ ಮಾದರಿ ಸರ್ಕಾರಕ್ಕೆ ಬ್ರಿಟನ್ ಮೂಲವೆನಿಸಿದರೆ ಅಧ್ಯಕ್ಷೀಯ ಮಾದರಿ ಸರ್ಕಾರಕ್ಕೆ ಅಮೇರಿಕಾ ಮೂಲ ದೇಶವೆನಿಸಿದೆ. ಜಗತ್ತಿನಲ್ಲಿಯೇ ಮೊದಲ ಬಾರಿಗೆ ಅಧ್ಯಕ್ಷೀಯ ಮಾದರಿ ಪ್ರಜಾಪ್ರಭುತ್ವವನ್ನು ಅಮೇರಿಕಾ ಅಳವಡಿಸಿಕೊಂಡಿದ್ದು ನಂತರದಲ್ಲಿ ಪರಿವರ್ತಿತ ಅಧ್ಯಕ್ಷೀಯ ಮಾದರಿ ಸರ್ಕಾರಗಳನ್ನು ಇತರ ದೇಶಗಳು ಅಳವಡಿಸಿಕೊಳ್ಳಲು ಬುನಾದಿ ಹಾಕಿತು. ಈ ಕೆಳಗೆ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ ಕಾರ್ಯಾಚರಿಸುವ ಸಂಸದೀಯ ಮಾದರಿ ಸರ್ಕಾರಕ್ಕೆ ವ್ಯತಿರಿಕ್ತವಾಗಿರುವ ಅಧ್ಯಕ್ಷೀಯ ಮಾದರಿ ಸರ್ಕಾರದ ಅರ್ಥ ಮತ್ತು ಲಕ್ಷಣಗಳನ್ನು ಸಂಕ್ಷೀಪ್ತವಾಗಿ ಚರ್ಚಿಸಲಾಗಿದೆ.

[A.] ಅಧ್ಯಕ್ಷೀಯ ಸರ್ಕಾರದ ಅರ್ಥ

[Meaning of Presidential Government]:

ಸರಳಾರ್ಥದಲ್ಲಿ ಶಾಸಕಾಂಗದಿಂದ ಪ್ರತ್ಯೇಕವಾಗಿರುವ ಕಾರ್ಯಾಂಗವನ್ನುಳ್ಳ ಸರ್ಕಾರವನ್ನು ಅಧ್ಯಕ್ಷೀಯ ಮಾದರಿ ಸರ್ಕಾರ ಎನ್ನಬಹುದು. ವಿಶಾಲಾರ್ಥದಲ್ಲಿ ಕಾರ್ಯಾಂಗವು ಶಾಸಕಾಂಗದಿಂದ ರಚನೆಗೊಂಡಿರದೇ ಜನರಿಂದ ರಚನೆಗೊಂಡಿದ್ದು ಕಾರ್ಯಾಂಗವು ಶಾಸಕಾಂಗಕ್ಕೆ ಜವಾಬ್ದಾರಿ ತೋರದಿರುವ ಸರ್ಕಾರವು ಅಧ್ಯಕ್ಷೀಯ ಮಾದರಿ ಸರ್ಕಾರವೆನಿಸುತ್ತದೆ. ಇಲ್ಲಿ ದೇಶದ ಮುಖ್ಯಸ್ಥನೇ ನೈಜವಾಗಿ ಕಾರ್ಯಾಂಗೀಯ ಅಧಿಕಾರಗಳನ್ನು ಸ್ವತಂತ್ರವಾಗಿ ಚಲಾಯಿಸುತ್ತಾನೆ. ಮುಂದುವರಿದು, ಜನರಿಂದ ನೇರವಾಗಿ ಚುನಾಯಿಸಲ್ಪಟ್ಟ ಅಧ್ಯಕ್ಷನು ಶಾಸಕಾಂಗದ ಬದಲಿಗೆ ಜನರಿಗೆ ಜವಾಬ್ದಾರಿತ್ವ ತೋರುತ್ತಾನೆ. ಒಟ್ಟಾರೆ ಸಂಸದೀಯ ಮಾದರಿ ಸರ್ಕಾರದಂತೆ ಶಾಸಕಾಂಗ ಮತ್ತು ಕಾರ್ಯಾಂಗ ಪರಸ್ಪರ ಅವಲಂಬಿಯಾಗಿರದೇ ಪ್ರತ್ಯೇಕವಾಗಿ ಕಾರ್ಯಾಚರಿಸುವ ಸರ್ಕಾರದ ಮಾದರಿ ಎಂಬುದಾಗಿ ಅಧ್ಯಕ್ಷೀಯ ಸರ್ಕಾರ ಪರಿಗಣಿಸಲ್ಪಟ್ಟಿದೆ. ಈ ಮಾದರಿಯ ಸರ್ಕಾರವನ್ನು ಅಮೇರಿಕಾದ ಸಂಯುಕ್ತ ಸಂಸ್ಥಾನಗಳು, ಇಂಡೋನೇಶಿಯಾ, ಇರಾನ್, ನೈಜೀರಿಯಾ, ಟರ್ಕಿ, ಮೆಕ್ಸಿಕೊ, ಬ್ರೆಜಿಲ್ ಇತ್ಯಾದಿ ದೇಶಗಳಲ್ಲಿ ಕಾಣಬಹುದಾಗಿದೆ. ಹಲವೆಡೆ ಭಾಗಶಃ ಅಧ್ಯಕ್ಷೀಯ ಮಾದರಿ ಸರ್ಕಾರವನ್ನು ಅಳವಡಿಸಿಕೊಳ್ಳಲಾಗಿದೆ.

[B.] ಅಧ್ಯಕ್ಷೀಯ ಸರ್ಕಾರದ ಲಕ್ಷಣಗಳು

[Features of Presidential Government]:

ಸಂಸದೀಯ ಮಾದರಿ ಸರ್ಕಾರಕ್ಕೆ ಪರ್ಯಾಯವಾಗಿ ಅಸ್ತಿತ್ವಕ್ಕೆ ಬಂದಿರುವ ಅಧ್ಯಕ್ಷೀಯ ಮಾದರಿ ಸರ್ಕಾರವೂ ತನ್ನದೇಯಾದ ಹಲವು ಲಕ್ಷಣಗಳನ್ನು ಪಡೆದಿದೆ. ಅಧ್ಯಕ್ಷೀಯ ಮಾದರಿ ಸರ್ಕಾರವು ಹೊಂದಿರುವ ವಿವಿಧ ಲಕ್ಷಣಗಳ ನೆರಳಿನಲ್ಲಿ ಅದರ ರಾಜಕೀಯ ವ್ಯವಸ್ಥೆಯನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸೋಣ.

**1. ಕೇವಲ ನೈಜ ಕಾರ್ಯಾಂಗದ ಅಸ್ತಿತ್ವ:** ಅಧ್ಯಕ್ಷೀಯ ಮಾದರಿ ಸರ್ಕಾರದ ಕಾರ್ಯಾಂಗದಲ್ಲಿ ಸಂಸದೀಯ ಮಾದರಿ ಸರ್ಕಾರದಂತೆ ನಾಮ ಮಾತ್ರ ಮತ್ತು ನೈಜ ಕಾರ್ಯಾಂಗವೆಂಬ ವಿಂಗಡಣೆ ಕಂಡು ಬರುವುದಿಲ್ಲ. ಅಧ್ಯಕ್ಷನು ದೇಶದ ಹಾಗೂ ಸರ್ಕಾರದ ಮುಖ್ಯಸ್ಥನಾಗಿದ್ದು ತನಗೆ ಸೇರಿದ ಅಧಿಕಾರಗಳನ್ನು ತಾನೇ ಚಲಾಯಿಸಲು ಅವಕಾಶ ಪಡೆದಿರುತ್ತಾನೆ. ಇದರೊಡನೆ ಅಧ್ಯಕ್ಷ ತನ್ನಿಂದಲೇ ರಚನೆಗೊಂಡ ಮಂತ್ರಿ ಮಂಡಲವನ್ನು ಹೊಂದಿದ್ದು ಆತನ ಅಧಿಕಾರ ಚಲಾವಣೆಗೆ ಮಂತ್ರಿಗಳು ನೆರವಾಗುತ್ತಾರೆ. ಹೀಗಾಗಿ ಅಧ್ಯಕ್ಷೀಯ ಮಾದರಿ ಸರ್ಕಾರದ ಮಂತ್ರಿಗಳನ್ನು ಅಧ್ಯಕ್ಷನ ಅರಮನೆಯ ಸೇವಕರು ಎಂಬುದಾಗಿ ಕರೆಯಲಾಗಿದೆ. ಒಟ್ಟಾರೆ ಸಂವಿಧಾನದತ್ತ ಅಧಿಕಾರಗಳನ್ನು ದೇಶ ಮತ್ತು ಸರ್ಕಾರದ ಮುಖ್ಯಸ್ಥನಾಗಿ ತಾನೇ ಅಧಿಕಾರವನ್ನು ಅಧ್ಯಕ್ಷ ಚಲಾಯಿಸುತ್ತಿದ್ದು ನಾಮ ಮಾತ್ರ ಮುಖ್ಯಸ್ಥ ಅಧ್ಯಕ್ಷೀಯ ಸರ್ಕಾರದಲ್ಲಿ ಕಂಡು ಬರುವುದಿಲ್ಲ.



**2. ಶಾಸಕಾಂಗ ಮತ್ತು ಕಾರ್ಯಾಂಗಗಳ ಸ್ವತಂತ್ರ ಕಾರ್ಯಾಚರಣೆ:** ಅಧ್ಯಕ್ಷೀಯ ಸರ್ಕಾರವು ಅಧಿಕಾರ ಪ್ರತ್ಯೇಕತಾ ಸಿದ್ಧಾಂತವನ್ನು ಆಧರಿಸಿದ್ದು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಸಂವಿಧಾನದಿಂದಲೇ ಅಧಿಕಾರಗಳನ್ನು ಪಡೆದು ಸ್ವತಂತ್ರವಾಗಿ ಕಾರ್ಯಾಚರಿಸುತ್ತವೆ. ಇಲ್ಲಿ ಕಾರ್ಯಾಂಗದಲ್ಲಿನ ಅಧ್ಯಕ್ಷ ಸಂಸದೀಯ ಮಾದರಿಯಂತೆ ಶಾಸಕಾಂಗದ ಸದಸ್ಯನಾಗಿರುವುದಿಲ್ಲ. ಜೊತೆಗೆ ಶಾಸಕಾಂಗದ ಅಧಿವೇಶನಗಳನ್ನು ಕರೆಯುವ, ಮುಂದೂಡುವ ಮತ್ತು ಶಾಸಕಾಂಗದ ಕೆಳಮನೆಯನ್ನು ವಿಸರ್ಜಿಸುವ ಅಧಿಕಾರವನ್ನು ಹೊಂದಿರುವುದಿಲ್ಲ. ಶಾಸನ ರಚನಾ ಪ್ರಕ್ರಿಯೆಯಲ್ಲಿ ಶಾಸಕಾಂಗವು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ. ಅಂತೆಯೇ ಕಾರ್ಯಾಂಗದ ಹಾಗೂ ದೇಶದ ಮುಖ್ಯಸ್ಥನಾಗಿ ಅಧ್ಯಕ್ಷ ವಿವಿಧ ನೀತಿಗಳನ್ನು ಪಾಲಿಸಲು ಮತ್ತು ನಿರ್ಧಾರಗಳನ್ನು ಕೈಗೊಳ್ಳಲು ಸ್ವತಂತ್ರನಾಗಿರುತ್ತಾನೆ. ಈ ಬಗೆಯ ನೀತಿ ಮತ್ತು ನಿರ್ಧಾರಗಳಿಗೆ ಶಾಸಕಾಂಗದ ಅಂಗೀಕಾರದ ಅಗತ್ಯವಿರುವುದಿಲ್ಲ.

**3. ಜನರಿಂದಲೇ ಪ್ರತ್ಯಕ್ಷ ಆಯ್ಕೆ:** ಅಧ್ಯಕ್ಷೀಯ ಮಾದರಿ ಸರ್ಕಾರದಲ್ಲಿ ಅಧ್ಯಕ್ಷ ಜನರಿಂದ ನೇರವಾಗಿ ಚುನಾಯಿತನಾಗುತ್ತಾನೆ. ವಿಶೇಷ ಮತದಾತೃ ವರ್ಗವು ಜನರಿಂದ ಮತ ಪಡೆದು ಅಧ್ಯಕ್ಷೀಯ ಚುನಾವಣೆಯಲ್ಲಿ ಮತದಾನ ಮಾಡುವುದರಿಂದ ಆತನ ಆಯ್ಕೆಯನ್ನು ಪ್ರತ್ಯಕ್ಷ ಚುನಾವಣೆಗೆ ಪರಿಗಣಿಸಲಾಗುತ್ತದೆ. ಫಲವಾಗಿ ಅಧ್ಯಕ್ಷನು ಶಾಸಕಾಂಗದ ಬದಲು ಜನರಿಗೆ ಜವಾಬ್ದಾರಿ ತೋರಿಸುತ್ತಾನೆ.

**4. ನಿಶ್ಚಿತ ಅಧಿಕಾರಾವಧಿ:** ಅಧ್ಯಕ್ಷೀಯ ಮಾದರಿ ಸರ್ಕಾರದಲ್ಲಿ ಅಧ್ಯಕ್ಷ ನಿಶ್ಚಿತ ಅಧಿಕಾರವಧಿಗೆ ಜನರಿಂದ ಚುನಾಯಿತನಾಗಿರುತ್ತಾನೆ. ಉದಾ: ಅಮೇರಿಕಾದ ಅಧ್ಯಕ್ಷ ನಾಲ್ಕು ವರ್ಷಗಳ ಅವಧಿಗೆ ಚುನಾಯಿತಗೊಳ್ಳುವುದು. ಶಾಸಕಾಂಗದಲ್ಲಿ ಸದಸ್ಯತ್ವ ಹೊಂದಿರದ ಅಧ್ಯಕ್ಷನನ್ನು ಆತನ ಅಧಿಕಾರವಧಿ ಪೂರ್ಣಗೊಳ್ಳುವ ಮೊದಲು ಅವಿಶ್ವಾಸ ಗೊತ್ತುವಳಿಯ ಮೂಲಕ ಶಾಸಕಾಂಗವು ಪದಚ್ಯುತಗೊಳಿಸಲಾರದು. ಜೊತೆಗೆ ಅಧ್ಯಕ್ಷನು ಅಧಿಕಾರದಲ್ಲಿ ಮುಂದುವರಿಯಲು ಶಾಸಕಾಂಗದ ಬಹುಮತದ ಬೆಂಬಲವನ್ನು ಹೊಂದಿರಬೇಕಾದ ಅಗತ್ಯವಿಲ್ಲ. ಹೀಗಾಗಿ ಅಧ್ಯಕ್ಷನನ್ನೊಳಗೊಂಡ ಕಾರ್ಯಾಂಗವು ನಿಶ್ಚಿತ ಅಧಿಕಾರವಧಿಯ ವರೆಗೆ ನಿರಾತಂಕವಾಗಿ ಕಾರ್ಯಾಚರಿಸಲು ಅಧ್ಯಕ್ಷೀಯ ಮಾದರಿ ಸರ್ಕಾರದಲ್ಲಿ ಆಸ್ಪದವಿರುತ್ತದೆ. ಸಂಸದೀಯ ಮಾದರಿ ಸರ್ಕಾರದಂತೆ ರಾಜಕೀಯ ಅಸ್ಥಿರತೆಗೆ ಅಧ್ಯಕ್ಷೀಯ ಸರ್ಕಾರದಲ್ಲಿ ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಅಧ್ಯಕ್ಷೀಯ ಮಾದರಿ ಸರ್ಕಾರವನ್ನು ಸ್ಥಿರ ಸರ್ಕಾರವೆಂದೂ ಕರೆಯಲಾಗುತ್ತದೆ.

**5. ಶೀಘ್ರ ನಿರ್ಧಾರಗಳಿಗೆ ಅವಕಾಶ:** ಅಧ್ಯಕ್ಷೀಯ ಮಾದರಿ ಸರ್ಕಾರದಲ್ಲಿ ಕಾರ್ಯಾಂಗೀಯ ಅಧಿಕಾರವೆಲ್ಲ ಅಧ್ಯಕ್ಷನಿಗೆ ಸೇರಿರುತ್ತದೆ. ದೇಶದ ಮುಖ್ಯಸ್ಥನೂ ಆಗಿರುವ ಅಧ್ಯಕ್ಷನು ತನ್ನ ಮಂತ್ರಿ ಮಂಡಲದ ಹಿಡಿತಕ್ಕೊಳಗಾಗದೇ ನೈಜವಾಗಿ ಅಧಿಕಾರವನ್ನು ಚಲಾಯಿಸಲು ಅವಕಾಶ ಪಡೆದಿರುತ್ತಾನೆ. ಜೊತೆಗೆ ತನ್ನ ನಿರ್ಧಾರಗಳನ್ನು ಕುರಿತಂತೆ

ಶಾಸಕಾಂಗಕ್ಕೆ ಅಧ್ಯಕ್ಷ ಜವಾಬ್ದಾರಿ ತೋರಬೇಕಿಲ್ಲ. ಹೀಗಾಗಿ ರಾಷ್ಟ್ರದ ಮತ್ತು ಜನರ ಹಿತಾಸಕ್ತಿಗೆ ಪೂರಕವಾದ ನಿರ್ಧಾರಗಳನ್ನು ಕೈಗೊಳ್ಳಲು ಅಧ್ಯಕ್ಷೀಯ ಮಾದರಿ ಸರ್ಕಾರದಲ್ಲಿ ಅಧ್ಯಕ್ಷನಿಗೆ ಸಾಧ್ಯವಾಗುತ್ತದೆ. ಇದರಿಂದ ಕಾಲ ವಿಳಂಬವಿಲ್ಲದ ಸಮಯೋಚಿತ ನಿರ್ಧಾರಗಳನ್ನು ಅಧ್ಯಕ್ಷೀಯ ಸರ್ಕಾರದಲ್ಲಿ ಕಾಣಬಹುದಾಗಿದ್ದು ದೇಶ ಮತ್ತು ಜನ ಜೀವನ ಪ್ರಗತಿ ಪಥದಲ್ಲಿ ಸಾಗಲು ಅಧ್ಯಕ್ಷೀಯ ಸರ್ಕಾರ ನೆರವಾಗುತ್ತದೆ. ಉದಾ: ಗ್ರಾಮೀಣ ಮತ್ತು ಕೃಷಿ ಹಿನ್ನೆಲೆಯನ್ನು ಹೊಂದಿದ್ದ ಅಮೇರಿಕಾದಲ್ಲಿ ಪ್ರಸ್ತುತ ನಗರೀಕರಣ ಮತ್ತು ಕೈಗಾರೀಕರಣ ಮೈಗೂಡಿಸಿಕೊಂಡು ವಿಶ್ವದ ಪ್ರಬಲ ದೇಶವಾಗಲು ಆ ದೇಶದ ವಿವಿಧ ಅಧ್ಯಕ್ಷರು ಕೈಗೊಂಡ ಸಮಯೋಚಿತ ನಿರ್ಧಾರಗಳು ನೆರವಾದುದು.

**6. ತಡೆ ಮತ್ತು ಸಮತೋಲನದ ತತ್ವಕ್ಕೆ ಆಧ್ಯತೆ:** ಅಧಿಕಾರವಿದ್ದಲ್ಲಿ ಅದರ ದುರುಪಯೋಗ ಸಹಜವಾಗಿರುತ್ತದೆ. ಆದರೆ ಅಧ್ಯಕ್ಷೀಯ ಮಾದರಿ ಸರ್ಕಾರದಲ್ಲಿ ತಡೆ ಮತ್ತು ಸಮತೋಲನ ತತ್ವದ ನೆರವಿನಿಂದ ಸರ್ಕಾರದ ಮೂರು ಅಂಗಗಳು ಪರಸ್ಪರರ ಅಧಿಕಾರವನ್ನು ಆಕ್ರಮಿಸದಂತೆ ಕ್ರಮ ಕೈಗೊಳ್ಳಲಾಗಿರುತ್ತದೆ. ಶಾಸಕಾಂಗವು ತನ್ನ ಶಾಸನ ರಚನೆಯ ವಿಚಾರದಲ್ಲಿ ಜನ ವಿರೋಧಿ ಶಾಸನಗಳನ್ನು ಅಂಗೀಕರಿಸಿದರೆ ಕಾರ್ಯಾಂಗದ ಅಧ್ಯಕ್ಷ ವೀಟೊ ಅಧಿಕಾರವನ್ನು ಬಳಸಿ ಅದನ್ನು ತಡೆಯಬಹುದಾಗಿದೆ. ಅಂತೆಯೇ ಕಾರ್ಯಾಂಗದ ಅಧ್ಯಕ್ಷನು ಸಂವಿಧಾನ, ರಾಷ್ಟ್ರ ಅಥವಾ ಜನ ಹಿತಕ್ಕೆ ವಿರುದ್ಧವಾದ ನೀತಿಗಳನ್ನು ಪಾಲಿಸಲು ಮುಂದಾದರೆ ಅಂತಹ ಕ್ರಮವನ್ನು ತಡೆಯಲು ಶಾಸಕಾಂಗ ಮತ್ತು ನ್ಯಾಯಾಂಗಗಳು ಮುಂದಾಗುತ್ತವೆ. ಮತ್ತೊಂದೆಡೆ ನ್ಯಾಯಾಂಗದ ನ್ಯಾಯಾಧೀಶರು ಅಧಿಕಾರದ ದುರ್ಬಳಕೆಯನ್ನು ತಡೆಯಲು ಶಾಸಕಾಂಗ ಮತ್ತು ಕಾರ್ಯಾಂಗಗಳು ಮಹಾಭಿಯೋಗದ ಮೂಲಕ ಶ್ರಮಿಸುತ್ತವೆ. ಹೀಗೆ ಸರ್ಕಾರದ ಮೂರೂ ಅಂಗಗಳು ತಮ್ಮ ಅಧಿಕಾರವನ್ನು ಚಲಾಯಿಸುವ ಮೂಲಕ ಸಂವಿಧಾನದ ಮತ್ತು ರಾಷ್ಟ್ರದ ಹಿತಾಸಕ್ತಿ ಕಾಪಾಡಲು ಪೂರಕವಾದ ತಡೆ ಮತ್ತು ಸಮತೋಲನ ತತ್ವವು ಅಧ್ಯಕ್ಷೀಯ ಮಾದರಿ ಸರ್ಕಾರದ ಪ್ರಾಮುಖ್ಯತೆಗೆ ಕಾರಣವಾಗಿದೆ.

**7. ತುರ್ತು ಪರಿಸ್ಥಿತಿಗಳ ಪರಿಣಾಮಕಾರಿ ನಿರ್ವಹಣೆ:** ಅಧ್ಯಕ್ಷೀಯ ಮಾದರಿ ಸರ್ಕಾರವು ದೇಶ ಎದುರಿಸುವ ತುರ್ತು ಪರಿಸ್ಥಿತಿಗಳನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲದು. ದೇಶದ ಮುಖ್ಯಸ್ಥನೇ ಕಾರ್ಯಾಂಗೀಯ ಅಧಿಕಾರಗಳನ್ನು ಸ್ವೈಜವಾಗಿ ಹೊಂದಿದ್ದು ತ್ವರಿತ ನಿರ್ಧಾರಗಳು ಸಾಧ್ಯವಾಗುತ್ತವೆ. ಜೊತೆಗೆ ಗಂಭೀರ ಲೋಪವಾದಾಗ ಮಾತ್ರ ಇತರ ಅಂಗಗಳು ಕಾರ್ಯಾಂಗವನ್ನು ನಿಯಂತ್ರಿಸಲು ಅವಕಾಶವಿದ್ದು ಉಳಿದಂತೆ ಅಧ್ಯಕ್ಷ ಯಾವುದೇ ನಿರ್ಧಾರ ಕೈಗೊಳ್ಳಲು ಸ್ವತಂತ್ರನಾಗಿರುತ್ತಾನೆ. ಫಲವಾಗಿ ಸಮಯೋಚಿತ ಹಾಗೂ ತ್ವರಿತ ನಿರ್ಧಾರಗಳು ಜಾರಿಗೊಂಡು ಸ್ವಾಭಾವಿಕ ಮತ್ತು ಕೃತಕ ತುರ್ತು ಪರಿಸ್ಥಿತಿ ಪರಿಣಾಮಕಾರಿಯಾಗಿ ನಿಭಾಯಿಸಲ್ಪಡುತ್ತದೆ.



**8. ಪಕ್ಷ ರಾಜಕೀಯದ ದೋಷಗಳಿಂದ ಮುಕ್ತ:** ಅಧ್ಯಕ್ಷೀಯ ಮಾದರಿ ಸರ್ಕಾರದಲ್ಲಿ ಅಧ್ಯಕ್ಷ ತನ್ನ ಮಂತ್ರಿ ಮಂಡಲಕ್ಕೆ ಮಂತ್ರಿಗಳನ್ನು ಅಂದರೆ ಕಾರ್ಯದರ್ಶಿಗಳನ್ನು ನೇಮಿಸುವಾಗ ಆಡಳಿತಾತ್ಮಕ ಅನುಭವ, ವಿದ್ಯಾರ್ಹತೆ ಹಾಗೂ ನೈಪುಣ್ಯತೆಗೆ ಮಹತ್ವ ನೀಡುತ್ತಾನೆ. ಸಂಸದೀಯ ಮಾದರಿ ಸರ್ಕಾರದಂತೆ ಬಹುಮತ ಪಡೆದ ಪಕ್ಷದ ಪ್ರತಿನಿಧಿಗಳೇ ಮಂತ್ರಿ ಮಂಡಲದ ಮಂತ್ರಿಗಳಾಗಲು ಅಧ್ಯಕ್ಷೀಯ ಮಾದರಿಯಲ್ಲಿ ಅವಕಾಶವಿರುವುದಿಲ್ಲ. ಪಕ್ಷ ರಾಜಕೀಯದಿಂದ ಮುಕ್ತರಾದ ವ್ಯಕ್ತಿಗಳನ್ನು ಅವರ ಅನುಭವವನ್ನಾಧರಿಸಿ ಕಾರ್ಯದರ್ಶಿಗಳನ್ನಾಗಿ ನೇಮಿಸುವುದರಿಂದ ಆಡಳಿತದಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅದಕ್ಷತೆ ಕಂಡು ಬರದೇ ಆಡಳಿತ ಯಂತ್ರವು ಚುರುಕುಗೊಳ್ಳುತ್ತದೆ.

ಈ ಮೇಲೆ ಚರ್ಚಿಸಲಾಗಿರುವ ಅಂಶಗಳ ನೆರವಿನಿಂದ ಅಧ್ಯಕ್ಷೀಯ ಮಾದರಿ ಸರ್ಕಾರದ ಲಕ್ಷಣಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದಾಗಿದೆ. ಸಂಸದೀಯ ಮಾದರಿ ಸರ್ಕಾರಕ್ಕೆ ವ್ಯತಿರಿಕ್ತ ಆಡಳಿತ ವ್ಯವಸ್ಥೆಯಾಗಿ ಅಸ್ತಿತ್ವಕ್ಕೆ ಬಂದಿರುವ ಅಧ್ಯಕ್ಷೀಯ ಮಾದರಿ ಸರ್ಕಾರವನ್ನು ಕುರಿತಂತೆ ವಿಮರ್ಶಕರು ಜವಾಬ್ದಾರಿ ರಹಿತ ಸರ್ಕಾರವೆಂದು ಅಭಿಪ್ರಾಯಪಟ್ಟಿರುವರು. ಮುಂದುವರಿದು ದೇಶದ ವಿವಿಧ ವರ್ಗಗಳಿಗೆ ಅಧ್ಯಕ್ಷೀಯ ಮಾದರಿ ಸರ್ಕಾರದಲ್ಲಿ ರಾಜಕೀಯ ಅಧಿಕಾರ ದೊರೆಯುವುದು ಅಸಾಧ್ಯದ ಸಂಗತಿ ಎಂಬುದಾಗಿಯೂ ಟೀಕಿಸಿರುವರು. ಇದರೊಡನೆ ಅಧ್ಯಕ್ಷ ಸರ್ವಾಧಿಕಾರಿಯಂತೆ ವರ್ತಿಸಬಹುದಾದ ಸಾಧ್ಯತೆಯನ್ನೂ ಚಿಂತಕರು ಗುರುತಿಸಿದ್ದಾರೆ. ಆದರೂ ಅಮೇರಿಕಾದಲ್ಲಿ ಕಳೆದೆರಡು ಶತಮಾನಗಳಿಂದ ಅಧ್ಯಕ್ಷೀಯ ಮಾದರಿ ಸರ್ಕಾರ ಕಾರ್ಯಾಚರಿಸುತ್ತಿದ್ದು ಅನೇಕ ದೇಶಗಳಲ್ಲಿ ಪರಿವರ್ತಿತ ಅಧ್ಯಕ್ಷೀಯ ಆಳ್ವಿಕೆಯನ್ನು ಕಾಣಬಹುದಾಗಿದೆ.

## [III.] ಏಕಾತ್ಮಕ ಸರ್ಕಾರ [Unitary Government]:

ಜಗತ್ತಿನ ಎಲ್ಲ ರಾಷ್ಟ್ರಗಳ ರಾಜಕೀಯ ವ್ಯವಸ್ಥೆ ಅಂದರೆ ಸರ್ಕಾರದ ಮಾದರಿ ಏಕರೂಪವಾಗಿಲ್ಲ. ಆಯಾ ರಾಷ್ಟ್ರಗಳು ತಮ್ಮ ಅಗತ್ಯಾನುಸಾರ ಹಲವು ಮಾರ್ಪಾಟಿನೊಂದಿಗೆ ವಿಭಿನ್ನವಾದ ರಾಜಕೀಯ ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ. ದೇಶದ ಐಕ್ಯತೆ, ಸಮಗ್ರತೆ ಹಾಗೂ ನಿರಂತರತೆಗೆ ಆಯಾ ದೇಶಗಳ ಸಂವಿಧಾನ ರಚನಾಕಾರರು ನಾನಾ ತತ್ವಗಳನ್ನಾಧರಿಸಿದ ವಿಶಿಷ್ಟ ರಾಜಕೀಯ ವ್ಯವಸ್ಥೆಯನ್ನು ಅಳವಡಿಸಲು ಪ್ರಯತ್ನಿಸಿದ್ದಾರೆ. ಫಲವಾಗಿ ಅಧಿಕಾರ ಹಂಚಿಕೆಯ ತತ್ವವನ್ನು ಆಧರಿಸಿದ ಸಂಯುಕ್ತ ಹಾಗೂ ಏಕಾತ್ಮಕ ಸರ್ಕಾರ ವ್ಯವಸ್ಥೆಯ ಅಳವಡಿಕೆಯನ್ನು ಜಗತ್ತಿನಾದ್ಯಂತ ಗುರುತಿಸಬಹುದಾಗಿದೆ. ಪ್ರಸ್ತುತ ಏಕಾತ್ಮಕ ಸರ್ಕಾರದ ಅರ್ಥ ಹಾಗೂ ಅದರ ಪ್ರಧಾನ ಲಕ್ಷಣಗಳ ಮೇಲೆ ಬೆಳಕು ಚೆಲ್ಲಲಾಗಿದೆ.

**[A.] ಏಕಾತ್ಮಕ ಸರ್ಕಾರದ ಅರ್ಥ [Meaning of Unitary Government]:**

ಸರಳಾರ್ಥದಲ್ಲಿ ದೇಶವೊಂದರ ರಾಜಕೀಯ ವ್ಯವಸ್ಥೆಯಲ್ಲಿ ಒಂದೇ ಪ್ರಬಲ ಸರ್ಕಾರವಿದ್ದರೆ ಅದನ್ನು ಏಕಾತ್ಮಕ ಸರ್ಕಾರ ಎನ್ನಲಾಗುತ್ತದೆ. ವಿಶಾಲಾರ್ಥದಲ್ಲಿ ಆಡಳಿತಾಧಿಕಾರವೆಲ್ಲ ರಾಷ್ಟ್ರ ಮಟ್ಟದ ಕೇಂದ್ರ ಸರ್ಕಾರದಲ್ಲಿದ್ದು ಕೇಂದ್ರವು ಆ ಅಧಿಕಾರವನ್ನು ಪ್ರಾದೇಶಿಕ ಮಟ್ಟದ ಸರ್ಕಾರಗಳಿಗೆ ಹಂಚಿಕೆ ಮಾಡದಿದ್ದರೆ ಅದನ್ನು ಏಕಾತ್ಮಕ ವ್ಯವಸ್ಥೆ ಎನ್ನಲಾಗುತ್ತದೆ. ಇಲ್ಲಿ ಪ್ರಾದೇಶಿಕ ಸರ್ಕಾರಗಳಿದ್ದರೂ ಅವು ಸ್ವತಂತ್ರವಾಗಿ ಯಾವ ಅಧಿಕಾರವನ್ನೂ ಚಲಾಯಿಸುವುದಿಲ್ಲ. ಕೇಂದ್ರ ಸರ್ಕಾರದ ಪ್ರತಿನಿಧಿಗಳಂತೆ ಮಾತ್ರವೇ ಕಾರ್ಯ ನಿರ್ವಹಿಸುತ್ತಿದ್ದು ಎಲ್ಲ ಅಧಿಕಾರ ಸಂವಿಧಾನಾತ್ಮಕವಾಗಿ ಕೇಂದ್ರ ಸರ್ಕಾರಕ್ಕೆ ಸೇರಿರುತ್ತವೆ. ಸಮಕಾಲೀನ ಬ್ರಿಟನ್, ಚೀನಾ, ಜಪಾನ್, ಇಟಲಿ, ಫ್ರಾನ್ಸ್, ನಾರ್ವೆ, ಬೆಲ್ಜಿಯಂ ದೇಶಗಳಲ್ಲಿ ಏಕಾತ್ಮಕ ಸರ್ಕಾರ ಪದ್ಧತಿಯನ್ನು ಕಾಣಬಹುದಾಗಿದೆ. ಆಸಕ್ತಿದಾಯಕ ಅಂಶವೇನೆಂದರೆ, ಏಕಾತ್ಮಕ ಸರ್ಕಾರವು ಸಂಯುಕ್ತ ಸರ್ಕಾರ ವ್ಯವಸ್ಥೆಗೆ ವ್ಯತಿರಿಕ್ತವಾದ ಸರ್ಕಾರದ ಮಾದರಿಯಾಗಿದೆ.

**[B.] ಏಕಾತ್ಮಕ ಸರ್ಕಾರದ ಲಕ್ಷಣಗಳು [Features of Unitary Government]:**

ಅಧಿಕಾರದ ಹಂಚಿಕೆಯ ತತ್ವವನ್ನು ಆಧರಿಸಿ ಚಿಂತಕರಿಂದ ಪ್ರತಿಪಾದಿಸಲ್ಪಟ್ಟ ಏಕಾತ್ಮಕ ಸರ್ಕಾರ ಪದ್ಧತಿಯ ಪ್ರಧಾನ ಲಕ್ಷಣಗಳು ಈ ಕೆಳಗಿನಂತಿವೆ.

**1. ಒಂದೇ ಪ್ರಬಲ ಕೇಂದ್ರ ಸರ್ಕಾರ:** ಏಕಾತ್ಮಕ ಸರ್ಕಾರ ವ್ಯವಸ್ಥೆಯಲ್ಲಿ ಇಡೀ ದೇಶಕ್ಕೆ ಒಂದೇ ಸರ್ಕಾರವಿದ್ದು ಅದನ್ನು ಕೇಂದ್ರ ಸರ್ಕಾರ ಎನ್ನಲಾಗುತ್ತದೆ. ದೇಶದ ಸಮಸ್ತ ಆಡಳಿತಾತ್ಮಕ ಅಧಿಕಾರವನ್ನು ಪಡೆದ ಕೇಂದ್ರ ಸರ್ಕಾರವು ಅತ್ಯಂತ ಪ್ರಬಲವಾಗಿರುತ್ತದೆ. ಆಡಳಿತಾತ್ಮಕ ಅನುಕೂಲಕ್ಕಾಗಿ ಪ್ರಾದೇಶಿಕ ಅಥವಾ ಪ್ರಾಂತೀಯ ಸರ್ಕಾರಗಳನ್ನು ರಚಿಸುವ ಅಥವಾ ರದ್ದುಗೊಳಿಸುವ ಅಧಿಕಾರವನ್ನು ಕೇಂದ್ರ ಸರ್ಕಾರವೇ ಪಡೆದಿರುತ್ತದೆ. ಹೀಗೆ ಪ್ರಬಲ, ಸರ್ವಶಕ್ತ ಹಾಗೂ ಏಕೈಕ ಕೇಂದ್ರ ಸರ್ಕಾರವು ಏಕಾತ್ಮಕ ಸರ್ಕಾರ ವ್ಯವಸ್ಥೆಯ ಲಕ್ಷಣವೆನಿಸಿದೆ.

**2. ಅಧಿಕಾರದ ಕೇಂದ್ರೀಕರಣ:** ಏಕಾತ್ಮಕ ಸರ್ಕಾರ ವ್ಯವಸ್ಥೆಯಲ್ಲಿ ದೇಶದ ಸಮಸ್ತ ಅಧಿಕಾರಗಳು ಏಕ ಕೇಂದ್ರ ಸರ್ಕಾರದಲ್ಲಿ ನೆಲೆಸಿರುತ್ತದೆ. ಪ್ರಾದೇಶಿಕ ಅಥವಾ ಪ್ರಾಂತ್ಯ ಸರ್ಕಾರಗಳು ಕೇಂದ್ರ ಸರ್ಕಾರವು ನಿಯೋಜಿಸಿದ ಅಧಿಕಾರವನ್ನು ಮಾತ್ರ ಚಲಾಯಿಸುತ್ತವೆ. ಇಡೀ ದೇಶಕ್ಕೆ ಅಗತ್ಯವಾದ ಕಾನೂನು ರಚಿಸುವ ಅಥವಾ ಅನ್ವಯವಾಗುವ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಮಾತ್ರ ಸೇರಿರುತ್ತದೆ. ಸ್ಥಳೀಯ ಸರ್ಕಾರಗಳು ಕೇಂದ್ರದ ಪ್ರತಿನಿಧಿಯಂತೆ ಮಾತ್ರ ಕಾರ್ಯಾಚರಿಸುತ್ತವೆಯೇ ಹೊರತು ಸ್ವತಂತ್ರ ಕಾರ್ಯಾಚರಿಸಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಏಕಾತ್ಮಕ ಸರ್ಕಾರವು ಅಸ್ತಿತ್ವದಲ್ಲಿರುವ ದೇಶಗಳಲ್ಲಿ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ ನಡುವೆ ಅಧಿಕಾರದ



ಹಂಚಿಕೆಯ ಬದಲು ಅಧಿಕಾರದ ಕೇಂದ್ರೀಕರಣ ಕಂಡುಬರುತ್ತದೆ.

**3. ನಮ್ಯ ಸ್ವರೂಪದ ಒಂದೇ ಸಂವಿಧಾನ:** ಏಕಾತ್ಮಕ ವ್ಯವಸ್ಥೆ ಜಾರಿಯಲ್ಲಿರುವ ದೇಶಗಳಲ್ಲಿ ಕೇಂದ್ರ ಸರ್ಕಾರದ ಶಾಸಕಾಂಗವೇ ಸಮಸ್ತ ದೇಶಕ್ಕೆ ಅಗತ್ಯವಾದ ಕಾನೂನುಗಳನ್ನು ರಚಿಸುತ್ತದೆ. ಸಾಮಾನ್ಯ ಕಾನೂನುಗಳನ್ನು ಬದಲಿಸುವಂತೆ ಕೇಂದ್ರ ಸರ್ಕಾರವು ಸಂವಿಧಾನಾತ್ಮಕ ಕಾನೂನುಗಳನ್ನೂ ಬದಲಿಸಲು ಅವಕಾಶ ಪಡೆದಿರುತ್ತದೆ. ಹೀಗಾಗಿ ನಮ್ಯ ಅಂದರೆ ಸುಲಭ ತಿದ್ದುಪಡಿ ವಿಧಾನವುಳ್ಳ ಸಂವಿಧಾನವನ್ನು ಕಾಣಬಹುದಾಗಿದೆ. ಇದರೊಡನೆ ಏಕಾತ್ಮಕ ಸರ್ಕಾರ ಪದ್ಧತಿಯಲ್ಲಿ ಸ್ವತಂತ್ರವಾಗಿ ಕಾರ್ಯಾಚರಿಸುವ ಸ್ಥಳೀಯ ಸರ್ಕಾರಗಳಿಲ್ಲವಾದ್ದರಿಂದ ಇಡೀ ದೇಶಕ್ಕೆ ಒಂದೇ ಸಂವಿಧಾನ ಅಸ್ತಿತ್ವದಲ್ಲಿರುತ್ತದೆ.

**4. ನ್ಯಾಯಾಂಗಕ್ಕೆ ಕಡಿಮೆ ಮಹತ್ವ:** ಏಕಾತ್ಮಕ ಸರ್ಕಾರ ಅಸ್ತಿತ್ವದಲ್ಲಿರುವ ದೇಶಗಳಲ್ಲಿ ಅಧಿಕಾರವೆಲ್ಲ ಕೇಂದ್ರ ಸರ್ಕಾರದಲ್ಲಿರುತ್ತದೆ. ಕೇಂದ್ರ ಹಾಗೂ ಪ್ರಾಂತ್ಯ ಸರ್ಕಾರಗಳ ನಡುವೆ ಅಧಿಕಾರದ ಗೊಂದಲ ಅಥವಾ ಘರ್ಷಣೆ ಕಂಡು ಬರುವುದಿಲ್ಲ. ಪ್ರಬಲ ಕೇಂದ್ರ ಸರ್ಕಾರವೇ ಸಮಸ್ತ ದೇಶದ ಮೇಲೆ ಹಿಡಿತ ಹೊಂದಿರುತ್ತದೆ. ಹೀಗಾಗಿ ವಿವಾದಗಳ ಇತ್ಯರ್ಥದ ಅಗತ್ಯವಿಲ್ಲದ ಕಾರಣ ನ್ಯಾಯಾಂಗವು ಏಕಾತ್ಮಕ ಸರ್ಕಾರವಿದ್ದಲ್ಲಿ ಕಡಿಮೆ ಪ್ರಾಶಸ್ತ್ಯ ಹೊಂದಿರುತ್ತದೆ.

**5. ಏಕರೂಪದ ಆಡಳಿತ:** ಏಕಾತ್ಮಕ ಸರ್ಕಾರ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರದ ಆಶಯಗಳಿಗೆ ಆದ್ಯತೆ ದೊರಕಿರುತ್ತದೆ. ಪ್ರಾದೇಶಿಕ ಸರ್ಕಾರಗಳಿದ್ದರೂ ಅವು ಕೇಂದ್ರದ ನಿರ್ದೇಶನದಂತೆ ಕಾರ್ಯಾಚರಿಸುತ್ತಿರುತ್ತವೆ. ಹೀಗಾಗಿ ದೇಶದಾದ್ಯಂತ ಏಕರೂಪದ ಕಾನೂನು, ಯೋಜನೆಗಳು, ನಿರ್ಧಾರಗಳು ಸಹಜವಾಗಿ ಕಂಡು ಬರುತ್ತವೆ.

**6. ಚಿಕ್ಕ ಭೂಪ್ರದೇಶ ಅಥವಾ ನವಜಾತ ರಾಷ್ಟ್ರಗಳಿಗೆ ಉಪಯುಕ್ತ:** ಏಕಾತ್ಮಕ ಸರ್ಕಾರವು ಒಂದೇ ಸರ್ಕಾರ ಹಾಗೂ ಸಂವಿಧಾನ ಮೈಗೂಡಿಸಿಕೊಂಡಿದ್ದು ಚಿಕ್ಕ ಭೂಪ್ರದೇಶಗಳಿಗೆ ಹೊಂದಾಣಿಕೆಯಾಗುವ ವ್ಯವಸ್ಥೆ ಎನಿಸಿದೆ. ಚಿಕ್ಕ ಭೂಭಾಗ ಹೊಂದಿರುವ ದೇಶಗಳ ಆಡಳಿತಾತ್ಮಕ ಘಟಕಗಳ ನಿಯಂತ್ರಣದೊಡನೆ ಸರ್ಕಾರ ಯಶಸ್ವಿಯಾಗಿ ಕಾರ್ಯಾಚರಿಸಬಲ್ಲದು. ಅಂತೆಯೇ ಸ್ವಾತಂತ್ರ್ಯ ಪಡೆದ ಆರಂಭದಲ್ಲಿ ದೇಶದ ಸಮಗ್ರತೆ, ಪ್ರಗತಿ, ಸುವ್ಯವಸ್ಥೆಗೆ ಏಕಾತ್ಮಕ ವ್ಯವಸ್ಥೆ ನೆರವಾಗುತ್ತದೆ.

**[IV.] ಸಂಯುಕ್ತ ಸರ್ಕಾರ [Federal Government]:**

**[A.] ಸಂಯುಕ್ತ ಸರ್ಕಾರದ ಅರ್ಥ [Meaning of Federal Government]:** ಕೇಂದ್ರ ಮತ್ತು ರಾಜ್ಯ ಎಂಬ ಎರಡು ಬಗೆಯ ಸರ್ಕಾರಗಳು ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ಸರಳಾರ್ಥದಲ್ಲಿ ಸಂಯುಕ್ತ ಅಥವಾ ಒಕ್ಕೂಟ ಸರ್ಕಾರ

ವ್ಯವಸ್ಥೆ ಎನ್ನಬಹುದು. ರಾಷ್ಟ್ರ ಮಟ್ಟದಲ್ಲಿ ಒಂದೇ ಕೇಂದ್ರ ಸರ್ಕಾರ ಮತ್ತು ಆಯಾ ಪ್ರಾದೇಶಿಕ ಮಟ್ಟದಲ್ಲಿ ಹಲವು ರಾಜ್ಯ ಸರ್ಕಾರಗಳು ಏಕ ಕಾಲದಲ್ಲಿ ಕಾರ್ಯಾಚರಿಸುವ ವ್ಯವಸ್ಥೆಯಾಗಿರುತ್ತದೆ. ವಿಶಾಲಾರ್ಥದಲ್ಲಿ ಸಂವಿಧಾನದಿಂದ ಅಧಿಕಾರವನ್ನು ಹಂಚಲ್ಪಟ್ಟಿರುವ, ಸ್ವತಂತ್ರವಾಗಿ ತಮ್ಮ ಕ್ಷೇತ್ರದಲ್ಲಿ ಕಾರ್ಯಾಚರಿಸುವ, ಕೇಂದ್ರ ಮತ್ತು ರಾಜ್ಯ ಎಂಬ ಎರಡು ಬಗೆಯ ಸರ್ಕಾರಗಳು ಅಸ್ತಿತ್ವದಲ್ಲಿರುವ ರಾಜಕೀಯ ವ್ಯವಸ್ಥೆಯೇ ಸಂಯುಕ್ತ ಸರ್ಕಾರವೆನಿಸಿದೆ. ಇಲ್ಲಿ ಇಡೀ ದೇಶಕ್ಕೆ ರಾಷ್ಟ್ರೀಯ ವ್ಯವಹಾರಗಳನ್ನು ನೋಡಿಕೊಳ್ಳುವ ಒಂದೇ ಕೇಂದ್ರ ಸರ್ಕಾರವಿದ್ದು ಆಯಾ ಪ್ರಾದೇಶಿಕ ವ್ಯವಹಾರಗಳನ್ನು ನಿರ್ವಹಿಸಲು ಹಲವು ರಾಜ್ಯ ಸರ್ಕಾರಗಳು ಸಂವಿಧಾನದಿಂದಲೇ ಅಧಿಕಾರವನ್ನು ಪಡೆದಿರುತ್ತವೆ. ಕೇಂದ್ರ ಸರ್ಕಾರವು ರಾಷ್ಟ್ರ ವ್ಯಾಪಿ ಮತ್ತು ರಾಜ್ಯ ಸರ್ಕಾರಗಳು ಆಯಾ ಪ್ರದೇಶ ವ್ಯಾಪಿ ಸ್ವತಂತ್ರವಾಗಿ ತಮ್ಮ ಅಧಿಕಾರವನ್ನು ಚಲಾಯಿಸುತ್ತವೆ. ಆದ್ದರಿಂದಲೇ ಎ. ವಿ. ಡೈಸಿ 'ರಾಷ್ಟ್ರೀಯ ಐಕ್ಯತೆ ಮತ್ತು ಪ್ರಾದೇಶಿಕ ಹಕ್ಕುಗಳನ್ನು ಸಂಯುಕ್ತ ಸರ್ಕಾರ ವ್ಯವಸ್ಥೆ ರಕ್ಷಿಸಬಲ್ಲದು' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

[B.] ಸಂಯುಕ್ತ ಸರ್ಕಾರದ ಲಕ್ಷಣಗಳು Features of Federal Government]:

**1. ಎರಡು ಬಗೆಯ ಸರ್ಕಾರಗಳು:** ಸಾಮಾನ್ಯವಾಗಿ ಸಂಯುಕ್ತ ಸರ್ಕಾರ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಎಂಬ ಎರಡು ಬಗೆಯ ಸರ್ಕಾರಗಳಿರುತ್ತವೆ. ಇಡೀ ದೇಶಕ್ಕೆ ಒಂದೇ ಕೇಂದ್ರ ಸರ್ಕಾರವಿದ್ದು ಅದನ್ನು ರಾಷ್ಟ್ರೀಯ ಸರ್ಕಾರವೆಂದೂ ಕರೆಯಲಾಗುತ್ತದೆ. ಇನ್ನೊಂದೆಡೆ ಆಯಾ ಭೌಗೋಳಿಕ ಘಟಕಕ್ಕೆ ಅಥವಾ ಪ್ರದೇಶಕ್ಕೆ ಸಂಬಂಧಿಸಿದ ಅನೇಕ ರಾಜ್ಯ ಸರ್ಕಾರವಿದ್ದು ಬೇರೆ ಬೇರೆ ದೇಶಗಳಲ್ಲಿ ಅವುಗಳನ್ನು ಭಿನ್ನವಾದ ಹೆಸರಿನಿಂದ ಗುರುತಿಸಲಾಗುತ್ತದೆ. ಒಟ್ಟಾರೆ ಕೇಂದ್ರ ಮತ್ತು ರಾಜ್ಯ ಎಂಬ ಎರಡು ಬಗೆಯ ಸರ್ಕಾರಗಳು ಸಂಯುಕ್ತ ವ್ಯವಸ್ಥೆಯ ಅಗತ್ಯಾಂಶ ಎನಿಸಿದೆ.

**2 ಅಧಿಕಾರದ ಹಂಚಿಕೆ:** ಸಂಯುಕ್ತ ಸರ್ಕಾರದ ವ್ಯವಸ್ಥೆಯಲ್ಲಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂವಿಧಾನದಿಂದಲೇ ಅಧಿಕಾರ ಹಂಚಿಕೆ ಕಂಡು ಬರುತ್ತದೆ. ಗಮನಾರ್ಹ ಅಂಶವೇನೆಂದರೆ, ಅಧಿಕಾರ ಹಂಚಿಕೆಯ ವಿಧಾನವು ದೇಶದಿಂದ ದೇಶಕ್ಕೆ ಭಿನ್ನವಾಗಿರುವುದು. ಉದಾ: ಅಮೇರಿಕದಲ್ಲಿ ಕೇಂದ್ರ ಸರ್ಕಾರಕ್ಕೆ ಸಂವಿಧಾನದಲ್ಲಿ ನಿಗದಿಯಾದ ಅಧಿಕಾರಗಳಿದ್ದು ಉಳಿದೆಲ್ಲ ಅಧಿಕಾರಗಳನ್ನು ರಾಜ್ಯಗಳು ಪಡೆದಿರುತ್ತವೆ. ಅಂತೆಯೇ ಕೆನಡಾದಲ್ಲಿ ರಾಜ್ಯಗಳ ಅಧಿಕಾರವನ್ನು ನಿಗಧಿಪಡಿಸಲಾಗಿದ್ದು ಉಳಿದೆಲ್ಲ ಅಧಿಕಾರಗಳನ್ನು ಕೇಂದ್ರ ಪಡೆದಿರುತ್ತದೆ. ಮುಂದುವರೆದು ಆಸ್ಟ್ರೇಲಿಯಾದಲ್ಲಿ ಕೇಂದ್ರ ಮತ್ತು ರಾಜ್ಯಗಳು ಸಮಾನಾಧಿಕಾರವನ್ನು ಪಡೆದಿರುವ ಸಮವರ್ತಿ ಪಟ್ಟಿಯನ್ನು ಅಳವಡಿಸಲಾಗಿದ್ದು ಕೇಂದ್ರದ ಅಧಿಕಾರಗಳನ್ನು ಪ್ರತ್ಯೇಕವಾಗಿ ನಿಗಧಿಪಡಿಸಿ ಉಳಿದೆಲ್ಲ ಅಧಿಕಾರಗಳನ್ನು



ರಾಜ್ಯಗಳಿಗೆ ಒದಗಿಸಲಾಗಿದೆ. ಒಟ್ಟಾರೆ ಘರ್ಷಣೆಗೆ ಆಸ್ಪದವಿಲ್ಲದಂತೆ ಕೇಂದ್ರ ಮತ್ತು ರಾಜ್ಯಗಳಿಗೆ ಅಧಿಕಾರ ಹಂಚಿಕೆ ಮಾಡುವುದು ಒಕ್ಕೂಟ ವ್ಯವಸ್ಥೆಯ ಅತ್ಯಗತ್ಯ ಅಂಶವಾಗಿದೆ.

**3. ಲಿಖಿತ ಸಂವಿಧಾನ:** ಎರಡು ಬಗೆಯ ಸರ್ಕಾರಗಳನ್ನು ಹೊಂದಿದ್ದು ಅವುಗಳ ನಡುವೆ ಅಧಿಕಾರಗಳ ಹಂಚಿಕೆ ಮಾಡಲ್ಪಟ್ಟ ಸಂಯುಕ್ತ ವ್ಯವಸ್ಥೆಯಲ್ಲಿ ಬರಹ ರೂಪದ ಸಂವಿಧಾನವು ಪ್ರಧಾನ ಲಕ್ಷಣವೆನಿಸಿದೆ. ಉದಾ: ಭಾರತ ಸಂವಿಧಾನವು ಬರಹ ರೂಪದ ಸಂವಿಧಾನವಾಗಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರಗಳನ್ನು ಪ್ರತ್ಯೇಕವಾದ ಪಟ್ಟಿಯಲ್ಲಿ ಸ್ಪಷ್ಟವಾಗಿ ನಮೂದಿಸಿದುದು. ಅಸ್ತಿತ್ವದಲ್ಲಿರುವ ಎರಡೂ ಸರ್ಕಾರಗಳ ಅಧಿಕಾರ ವ್ಯಾಪ್ತಿಯು ಗೊಂದಲ ಅಥವಾ ಸಂಶಯಗಳಿಂದ ಮುಕ್ತವಾಗಿರಲು ಸಂಯುಕ್ತ ಸರ್ಕಾರ ವ್ಯವಸ್ಥೆಗೆ ಲಿಖಿತ ಸಂವಿಧಾನ ಅತ್ಯಗತ್ಯವೆನಿಸಿದೆ. ಜೊತೆಗೆ ಲಿಖಿತ ಸಂವಿಧಾನವು ಎರಡೂ ಸರ್ಕಾರಗಳ ನಡುವಿನ ಶಾಸನೀಯ, ಆಡಳಿತಾತ್ಮಕ ಮತ್ತು ಹಣಕಾಸಿನ ಸಂಬಂಧಗಳನ್ನು ಬರಹ ರೂಪದಲ್ಲಿ ವಿವರಿಸಬೇಕಾಗಿರುತ್ತದೆ.

**4. ಕಠಿಣ ತಿದ್ದುಪಡಿ ವಿಧಾನ:** ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಅನಿಯಂತ್ರಿತ ಸಂವಿಧಾನ ತಿದ್ದುಪಡಿ ಅಧಿಕಾರವನ್ನು ಪಡೆದರೆ ಸಂಯುಕ್ತ ಸರ್ಕಾರ ವ್ಯವಸ್ಥೆಗೆ ಧಕ್ಕೆಯಾಗುತ್ತದೆ. ಹೀಗಾಗಿ ಕಠಿಣ ತಿದ್ದುಪಡಿಯು ಸಂಯುಕ್ತ ವ್ಯವಸ್ಥೆಯ ಪ್ರಧಾನ ಲಕ್ಷಣವೆನಿಸಿದೆ. ಈ ನಿಟ್ಟಿನಲ್ಲಿ ಸಂಯುಕ್ತ ಸರ್ಕಾರ ವ್ಯವಸ್ಥೆಯನ್ನುಳ್ಳ ಅಮೇರಿಕಾವು ಜಗತ್ತಿನಲ್ಲಿಯೇ ಅತ್ಯಂತ ಕಠಿಣ ಸಂವಿಧಾನ ತಿದ್ದುಪಡಿ ವಿಧಾನವನ್ನು ಅಳವಡಿಸಿಕೊಂಡಿದೆ. ಅಂತೆಯೇ ಭಾರತ ಸಂವಿಧಾನದ 368 ನೇ ವಿಧಿಯಲ್ಲಿ ಸಾಮಾನ್ಯ ನಿಯಮಾವಳಿಗಳನ್ನು ಸಂಸತ್ತು ಸರಳ ಬಹುಮತದೊಡನೆ, ಕಡಿಮೆ ಮಹತ್ವದ ವಿಷಯಗಳನ್ನು ಸಂಸತ್ತಿನ ವಿಶೇಷ ಬಹುಮತದೊಡನೆ ಮತ್ತು ಸಂವಿಧಾನದ ಮೂಲ ಸಂರಚನೆಗೆ ಸಂಬಂಧಿಸಿದ ಮಹತ್ವದ ವಿಷಯಗಳನ್ನು ಸಂಸತ್ತು ಮತ್ತು ಅರ್ಧಕ್ಕಿಂತ ಹೆಚ್ಚಿನ ರಾಜ್ಯಗಳ ಅಂಗೀಕಾರದೊಡನೆ ತಿದ್ದುಪಡಿಗೊಳಿಸಲು ಸೂಚಿಸಿದೆ. ಆದ್ದರಿಂದ ಕಠಿಣ ತಿದ್ದುಪಡಿಯು ಸಂಯುಕ್ತ ವ್ಯವಸ್ಥೆಯ ಲಕ್ಷಣವೆಂದು ಪರಿಗಣಿಸಲಾಗುತ್ತದೆ.

**5. ಸಂವಿಧಾನಿಕ ಶ್ರೇಷ್ಠತೆ:** ಸಂಯುಕ್ತ ಸರ್ಕಾರ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಧಿಕಾರವನ್ನು ಸಂವಿಧಾನದಿಂದಲೇ ಪಡೆದಿರುತ್ತವೆ. ಜೊತೆಗೆ ಸಂವಿಧಾನಬದ್ಧವಾಗಿ ತಾವು ಪಡೆದಿರುವ ಅಧಿಕಾರಗಳನ್ನು ಎರಡೂ ಸರ್ಕಾರಗಳು ಚಲಾಯಿಸುತ್ತವೆ. ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಸಂವಿಧಾನ ಬಾಹಿರವಾಗಿ ಆಡಳಿತ ನಡೆಸಲಾರವು. ಆದ್ದರಿಂದ ಸಂಯುಕ್ತ ವ್ಯವಸ್ಥೆಯು ಬಯಸುವ ಸಂವಿಧಾನಿಕ ಶ್ರೇಷ್ಠತೆಯು ಅದರ ಲಕ್ಷಣವೆನಿಸಿದೆ.

**6. ಸ್ವತಂತ್ರ ನ್ಯಾಯಾಂಗ:** ಸಂಯುಕ್ತ ವ್ಯವಸ್ಥೆಯೊಂದರ ಸಂವಿಧಾನದ ರಕ್ಷಕನಂತೆ ನ್ಯಾಯಾಂಗ ಕಾರ್ಯಾಚರಿಸುತ್ತದೆ. ಜೊತೆಗೆ ಸಂವಿಧಾನವನ್ನು ಅರ್ಥೈಸಿ ಕೇಂದ್ರ ಮತ್ತು

ರಾಜ್ಯಗಳ ನಡುವೆ ಹೊಂದಾಣಿಕೆಯನ್ನು ನ್ಯಾಯಾಂಗವು ಸ್ಥಾಪಿಸಲು ಶ್ರಮಿಸುತ್ತದೆ. ಯಾವುದೇ ಪೂರ್ವಾಗ್ರಹವಿಲ್ಲದ ವಿವಾದಗಳ ಇತ್ಯರ್ಥವು ನ್ಯಾಯಾಂಗದ ಜವಾಬ್ದಾರಿ ಎನಿಸಿರುತ್ತದೆ. ಆದ್ದರಿಂದ ಸಂಯುಕ್ತ ವ್ಯವಸ್ಥೆಯಲ್ಲಿ ಸ್ವತಂತ್ರ ಮತ್ತು ನಿಷ್ಪಕ್ಷಪಾತ ನ್ಯಾಯಾಂಗ ಹೆಚ್ಚು ಪ್ರಸ್ತುತವೆನಿಸುತ್ತದೆ.

**7. ವಿಶಾಲ ರಾಷ್ಟ್ರಗಳಿಗೆ ಸಹಕಾರಿ:** ಅಧಿಕ ಜನಸಂಖ್ಯೆ ಮತ್ತು ವಿಶಾಲ ಭೂಪ್ರದೇಶವುಳ್ಳ ಬೃಹತ್ ರಾಷ್ಟ್ರಗಳಿಗೆ ಸಂಯುಕ್ತ ಸರ್ಕಾರವು ಉಪಯುಕ್ತವೆನಿಸುತ್ತದೆ. ವೈವಿಧ್ಯಮಯ ಆಡಳಿತ ಸವಾಲುಗಳನ್ನು ಎದುರಿಸಲು ಸಂಯುಕ್ತ ವ್ಯವಸ್ಥೆಯು ಸಮರ್ಥವೆನಿಸುತ್ತದೆ. ರಾಷ್ಟ್ರೀಯ ಮಹತ್ವವುಳ್ಳ ವಿಚಾರಗಳನ್ನು ಕೇಂದ್ರ ಸರ್ಕಾರ ಮತ್ತು ಪ್ರಾದೇಶಿಕ ಮಹತ್ವವುಳ್ಳ ವಿಚಾರಗಳನ್ನು ರಾಜ್ಯ ಸರ್ಕಾರಗಳು ನಿರ್ವಹಿಸುವ ಮೂಲಕ ವಿಶಾಲ ರಾಷ್ಟ್ರದ ಆಡಳಿತದ ನಿರ್ವಹಣೆಯನ್ನು ಈ ಸರ್ಕಾರವು ಸುಲಭಗೊಳಿಸುತ್ತದೆ.

## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ಬ್ರಿಟನ್‌ನನ್ನು ಸಂಸದೀಯ ಸರ್ಕಾರದ ತವರೂರು ಎನ್ನಲು ಕಾರಣವೇನು?
2. ಸಂಸದೀಯ ಸರ್ಕಾರ ಎಂದರೇನು?
3. ಸಂಸದೀಯ ಸರ್ಕಾರ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ಪ್ರಧಾನ ದೇಶಗಳನ್ನು ಹೆಸರಿಸಿರಿ.
4. ಸಂಸದೀಯ ಸರ್ಕಾರದ ಮೂರು ಲಕ್ಷಣಗಳನ್ನು ಬರೆಯಿರಿ.
5. ಅಧ್ಯಕ್ಷೀಯ ಸರ್ಕಾರ ಎಂದರೇನು?
6. ಅಧ್ಯಕ್ಷೀಯ ಸರ್ಕಾರವನ್ನು ಅಳವಡಿಸಿಕೊಂಡಿರುವ ಜಗತ್ತಿನ ಪ್ರಮುಖ ದೇಶಗಳನ್ನು ಹೆಸರಿಸಿರಿ.
7. ಅಧ್ಯಕ್ಷೀಯ ಸರ್ಕಾರದ ಮೂರು ಲಕ್ಷಣಗಳನ್ನು ಬರೆಯಿರಿ.
8. ತಡೆ ಮತ್ತು ಸಮತೋಲನ ಎಂದರೇನು?
9. ಏಕಾತ್ಮಕ ಸರ್ಕಾರ ಎಂದರೇನು?
10. ಏಕಾತ್ಮಕ ಸರ್ಕಾರವನ್ನು ಅಳವಡಿಸಿಕೊಂಡ ಜಗತ್ತಿನ ಪ್ರಧಾನ ದೇಶಗಳನ್ನು ಹೆಸರಿಸಿರಿ.
11. ಸಂಯುಕ್ತ ಸರ್ಕಾರ ಎಂದರೇನು?
12. ಸಂಯುಕ್ತ ಸರ್ಕಾರವನ್ನು ಅಳವಡಿಸಿಕೊಂಡ ಜಗತ್ತಿನ ಪ್ರಮುಖ ದೇಶಗಳನ್ನು ಹೆಸರಿಸಿರಿ.
13. ಸಂಯುಕ್ತ ಸರ್ಕಾರದ ಮೂರು ಲಕ್ಷಣಗಳನ್ನು ಬರೆಯಿರಿ.



**[B.] ಐದು ಅಂಕದ ಪ್ರಶ್ನೆಗಳು:**

1. ಸಂಸದೀಯ ಸರ್ಕಾರದ ಲಕ್ಷಣಗಳನ್ನು ವಿವರಿಸಿರಿ.
2. ಸಂಸದೀಯ ಮತ್ತು ಅಧ್ಯಕ್ಷೀಯ ಸರ್ಕಾರಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಿರಿ.
3. ಏಕಾತ್ಮಕ ಸರ್ಕಾರವನ್ನು ಕುರಿತು ಟಿಪ್ಪಣಿ ಬರೆಯಿರಿ.
4. ಸಂಯುಕ್ತ ಸರ್ಕಾರದ ಪ್ರಧಾನ ಲಕ್ಷಣಗಳನ್ನು ಚರ್ಚಿಸಿರಿ.
5. ಏಕಾತ್ಮಕ ಹಾಗೂ ಸಂಯುಕ್ತ ಸರ್ಕಾರಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ಸಂಸದೀಯ ಸರ್ಕಾರ ಎಂದರೇನು? ಅದರ ಲಕ್ಷಣಗಳನ್ನು ವಿವರಿಸಿರಿ.
2. ಸಂಯುಕ್ತ ವ್ಯವಸ್ಥೆಯ ಅರ್ಥವೇನು? ಅದರ ಲಕ್ಷಣಗಳನ್ನು ಪರಿಶೀಲಿಸಿರಿ.

ಅಧ್ಯಾಯ 4:

# ಪ್ರಾತಿನಿಧ್ಯದ ವಿಧಾನ

## [Method of Representation].

### ಪ್ರಸ್ತಾವನೆ [Introduction]:

ಸಮಕಾಲೀನ ಜಗತ್ತನ್ನು ಪ್ರಜಾಪ್ರಭುತ್ವದ ಯುಗ ಎನ್ನಲಾಗುತ್ತದೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಪ್ರಜಾಪ್ರಭುತ್ವದ ಕುರುಹುಗಳನ್ನು ಗುರುತಿಸಬಹುದಾಗಿದೆ. ಕಾಲಾನುಕ್ರಮದಲ್ಲಿ ಪ್ರಜಾಪ್ರಭುತ್ವ ವಿವಿಧ ಸ್ವರೂಪವನ್ನು ತಾಳುತ್ತಾ ಬೆಳೆದು ಬಂದಿದೆ. ಪ್ರಸ್ತುತ ಪ್ರಜಾಪ್ರಭುತ್ವ ಕೇವಲ ಸರ್ಕಾರದ ಮಾದರಿಯಾಗಿ ಮಾತ್ರ ಉಳಿದುಕೊಳ್ಳದೇ ಜೀವನ ವಿಧಾನವಾಗಿ ಮತ್ತು ರಾಜ್ಯದ ಮಾದರಿಯಾಗಿ ಗುರುತಿಸಿಕೊಂಡಿರುವ ವ್ಯವಸ್ಥೆಯಾಗಿದೆ. ಜನರ ಆಶಯ ಹಾಗೂ ನಾನಾ ಆದರ್ಶಗಳ ನೆರವಿನಿಂದ ಸಮಕಾಲೀನ ಜಗತ್ತಿನಲ್ಲಿ ಪ್ರಜಾಪ್ರಭುತ್ವ ಜನಪ್ರಿಯ ಸಿದ್ಧಾಂತವಾಗಿದೆ.

ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯಲ್ಲಿ ಪ್ರಜೆಗಳು ಪಾಲು ಹೊಂದಿರುತ್ತಾರೆ. ಪ್ರಜೆಗಳ ಈ ಪಾಲು ಅಂದರೆ ಭಾಗವಹಿಸುವಿಕೆ ಪ್ರಾತಿನಿಧ್ಯದ ಪರಿಕಲ್ಪನೆಗೆ ಅವಕಾಶ ಒದಗಿಸಿದೆ. ನಾನಾ ಕಾರಣಗಳಿಂದ ಪ್ರಜೆಗಳ ಪ್ರಾತಿನಿಧ್ಯ ಕಾಲದಿಂದ ಕಾಲಕ್ಕೆ ಪರಿವರ್ತನೆಗೊಳ್ಳುತ್ತಾ ಬಂದಿದೆ. ಪ್ರಸ್ತುತ ಅಧ್ಯಾಯದಲ್ಲಿ ಪ್ರಜೆಗಳು ದೇಶದ ಶಾಸಕಾಂಗದಲ್ಲಿ ಪ್ರಾತಿನಿಧ್ಯ ಹೊಂದಲು ಪ್ರತಿಪಾದಿಸಲ್ಪಟ್ಟ ಹಲವು ವಿಧಾನಗಳ ಮೇಲೆ ಬೆಳಕು ಚೆಲ್ಲಲಾಗಿದೆ.

### [I.] ಪ್ರತ್ಯಕ್ಷ ಪ್ರಾತಿನಿಧ್ಯ ವಿಧಾನ [Method of Direct Representation]:

### [A.] ಪ್ರತ್ಯಕ್ಷ ಪ್ರಾತಿನಿಧ್ಯದ ಅರ್ಥ [Meaning of Direct Representation]:

ಸರಳಾರ್ಥದಲ್ಲಿ ಜನರು ರಾಜಕೀಯ ವ್ಯವಹಾರದಲ್ಲಿ ತಮ್ಮನ್ನು ತಾವೇ ಪ್ರತಿನಿಧಿಸುವುದು ಪ್ರತ್ಯಕ್ಷ ಪ್ರಾತಿನಿಧ್ಯ ವಿಧಾನವಾಗಿದೆ. ವಿಶಾಲಾರ್ಥದಲ್ಲಿ ಇತರರ ಸಹಾಯವಿಲ್ಲದೇ ಜನರು ತಾವೇ ನೇರವಾಗಿ ಸರ್ಕಾರವನ್ನು ನಿಯಂತ್ರಿಸಲು ಅಥವಾ ಸಾರ್ವಜನಿಕ ನಿರ್ಧಾರಗಳನ್ನು ಕೈಗೊಳ್ಳಲು ಭಾಗವಹಿಸುವುದನ್ನು ಪ್ರತ್ಯಕ್ಷ ಪ್ರಾತಿನಿಧ್ಯ ವಿಧಾನ ಎನ್ನಬಹುದಾಗಿದೆ. ಮಧ್ಯವರ್ತಿಗಳ ನೆರವಿಲ್ಲದೇ ಜನರು ತಾವೇ ಖುದ್ದಾಗಿ ದೇಶದ ರಾಜಕೀಯ ವ್ಯವಹಾರಗಳಲ್ಲಿ ಭಾಗವಹಿಸುವುದರಿಂದ ಇದನ್ನು ನೇರ ಪ್ರಾತಿನಿಧ್ಯ ವಿಧಾನ



ಎಂತಲೂ ಕರೆಯಲಾಗುತ್ತದೆ. ಸಾಮಾನ್ಯವಾಗಿ ಪ್ರತ್ಯಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತ್ಯಕ್ಷ ಪ್ರಾತಿನಿಧ್ಯ ವಿಧಾನವನ್ನು ಕಾಣಬಹುದಾಗಿದೆ. ಪ್ರತ್ಯಕ್ಷ ಪ್ರಜಾಪ್ರಭುತ್ವ ಜಾರಿಯಲ್ಲಿರುವೆಡೆ ಎಲ್ಲ ಜನರೂ ಒಂದೆಡೆ ಸಮಾವೇಶಗೊಂಡು ಆಡಳಿತಕ್ಕೆ ಸಂಭಂಧಿಸಿದ ನಿರ್ಧಾರ ಕೈಗೊಳ್ಳುವಲ್ಲಿ ಅಥವಾ ಕಾನೂನು ರಚಿಸುವಲ್ಲಿ ಭಾಗವಹಿಸುವರು. ಪ್ರಜೆಗಳು ತಮಗೆ ಸಂಬಂಧಿಸಿದ ನಿರ್ಧಾರ, ನೀತಿ ಅಥವಾ ಕಾನೂನುಗಳ ರಚನೆ ಮತ್ತು ಅನುಷ್ಠಾನದಲ್ಲಿ ತಾವೇ ಭಾಗವಹಿಸಲು ಪ್ರತ್ಯಕ್ಷ ಪ್ರಜಾಪ್ರಭುತ್ವದಲ್ಲಿ ಆಸ್ಪದವಿರುತ್ತದೆ. ಹೀಗಾಗಿ ಚಿಂತಕರಾದ ಗಾರ್ನರ್ ಪ್ರತ್ಯಕ್ಷ ಪ್ರಜಾಪ್ರಭುತ್ವವು ರಾಜ್ಯದ ಇಚ್ಛೆಯು ಜನರ ಮೂಲಕ ನೇರವಾಗಿ ಮತ್ತು ಶೀಘ್ರವಾಗಿ ಚಲಾಯಿಸಲ್ಪಡುವ ಸರ್ಕಾರವಾಗಿದೆ ಎಂದಿರುವರು. ಈ ಮಾದರಿಯ ಪ್ರಜಾಪ್ರಭುತ್ವವನ್ನು ಪ್ರಾಚೀನ ಗ್ರೀಕ್ ನಗರ ರಾಜ್ಯಗಳಲ್ಲಿ ಮತ್ತು ಮಧ್ಯಯುಗದ ಇಟಲಿಯ ನಗರ ರಾಜ್ಯಗಳಲ್ಲಿ ಗುರುತಿಸಬಹುದಾಗಿದೆ.

ಪ್ರತ್ಯಕ್ಷ ಪ್ರಜಾಪ್ರಭುತ್ವ ಜಾರಿಯಲ್ಲಿದ್ದ ನಗರ ರಾಜ್ಯದ ನಾಗರೀಕರು ವಿಶಾಲ ಮೈದಾನವೊಂದರಲ್ಲಿ ಸಮಾವೇಶಗೊಂಡು ನಿರ್ಧಾರ ಕೈಗೊಳ್ಳುವ, ಕಾನೂನು ರಚಿಸುವ, ನಿರ್ಧಾರ ಅಥವಾ ಕಾನೂನು ಜಾರಿಗೊಳಿಸುವ, ರಾಯಭಾರಿಗಳನ್ನು ಸ್ವಾಗತಿಸುವ, ವಿವಾದಗಳ ಇತ್ಯರ್ಥಕ್ಕಾಗಿ ನ್ಯಾಯದಾನ ಮಾಡುವ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಫಲವಾಗಿ ಅಲ್ಲಿನ ಜನರು ರಾಜಕೀಯವಾಗಿ ಪ್ರತ್ಯಕ್ಷ ಪ್ರಾತಿನಿಧ್ಯ ಹೊಂದಿದ್ದರು. ಆಧುನಿಕ ಯುಗದಲ್ಲಿ ಅಧಿಕ ಜನಸಂಖ್ಯೆ ಹಾಗೂ ವಿಶಾಲ ಭೂಪ್ರದೇಶಗಳಿಂದ ಕೂಡಿರುವ ರಾಷ್ಟ್ರ ರಾಜ್ಯಗಳಿಂದಾಗಿ ಪ್ರತ್ಯಕ್ಷ ಪ್ರಜಾಪ್ರಭುತ್ವ ತನ್ಮೂಲಕ ಪ್ರತ್ಯಕ್ಷ ಪ್ರಾತಿನಿಧ್ಯ ಕ್ಷೀಣಿಸಿದೆ. ಆದ್ಯಾಗ್ಯೂ ಸ್ವಿಟ್ಜರ್‌ಲ್ಯಾಂಡಿನ ಅಪ್ಪೆಂಝೆಲ್, ಯೂರಿ, ಅಂಟರ್ವಾಲ್ಡನ್ ಹಾಗೂ ಗ್ಲಾರಸ್ ಎಂಬ ನಾಲ್ಕು ಕ್ಯಾಂಟನ್‌ಗಳಲ್ಲಿ ಪ್ರತ್ಯಕ್ಷ ಪ್ರಜಾಪ್ರಭುತ್ವದ ಕುರುಹುಗಳನ್ನು ಇಂದಿಗೂ ಕಾಣಬಹುದಾಗಿದೆ. ಆಯಾ ಕ್ಯಾಂಟನ್ನಿನ ಅರ್ಹ ಮತದಾರರು ಏಪ್ರಿಲ್ ಅಥವಾ ಮೇ ತಿಂಗಳ ಭಾನುವಾರ ಸಾರ್ವಜನಿಕ ಸ್ಥಳದಲ್ಲಿ ಬಹಿರಂಗವಾಗಿ ಸಮಾವೇಶಗೊಂಡು ಹೊಸ ಕಾನೂನು ರಚನೆ, ಅನುಪಯುಕ್ತ ಕಾಯಿದೆಗಳ ರದ್ಧತಿ, ಆಯವ್ಯಯ ಪತ್ರಕ್ಕೆ ಅಂಗೀಕಾರ, ಆಡಳಿತಾಧಿಕಾರಿಗಳ ನೇಮಕದಂತಹ ತೀರ್ಮಾನಗಳನ್ನು ಕೈಗೊಳ್ಳುತ್ತಾರೆ. ಅಂತೆಯೇ ಭಾರತದಲ್ಲಿನ ಗ್ರಾಮ ಸಭೆ ಮೂಲಕ ಆ ಗ್ರಾಮದ ಜನರು ಪ್ರತ್ಯಕ್ಷ ಪ್ರಾತಿನಿಧ್ಯ ಹೊಂದಲು ಆಸ್ಪದ ಕಲ್ಪಿಸಲಾಗಿದೆ.

### [B.] ಪ್ರತ್ಯಕ್ಷ ಪ್ರಾತಿನಿಧ್ಯದ ಸಾಧನಗಳು [Instruments of Direct Representation]:

ಆಧುನಿಕ ಜಗತ್ತಿನಲ್ಲಿ ಪ್ರತ್ಯಕ್ಷ ಪ್ರಾತಿನಿಧ್ಯದ ಅನುಷ್ಠಾನ ಅತ್ಯಂತ ಕಠಿಣ. ಆದರೂ ನಾಲ್ಕು ಸಾಧನಗಳ ನೆರವಿನಿಂದ ಭಾಗಶಃ ಪ್ರತ್ಯಕ್ಷ ಪ್ರಾತಿನಿಧ್ಯದ ಆಚರಣೆಯನ್ನು ಇಂದಿಗೂ ಸಾಧಿಸಬಹುದಾಗಿದೆ. ಪ್ರತ್ಯಕ್ಷ ಪ್ರಾತಿನಿಧ್ಯದ ನಾಲ್ಕು ಸಾಧನಗಳ ಸಂಕ್ಷಿಪ್ತ ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ.

**1. ಪ್ರಜಾ ನಿರ್ದೇಶನ [People's Initiation]:** ದೇಶವೊಂದರ ನಿರ್ದಿಷ್ಟ ಸಂಖ್ಯೆಯ ಜನರು ಕಾನೂನೊಂದರ ಕರಡನ್ನು ತಯಾರಿಸಿ ಅದನ್ನು ಅಂಗೀಕರಿಸಿ ಅನುಷ್ಠಾನಗೊಳಿಸಬೇಕೆಂದು ಸರ್ಕಾರಕ್ಕೆ ಸಲ್ಲಿಸುತ್ತಾರೆ. ಸರ್ಕಾರದ ನಿರ್ಲಕ್ಷ ಧೋರಣೆ ಜನಹಿತಕ್ಕೆ ತೊಡಕಾದಾಗ ಜನರೇ ಕಾನೂನು ರಚನಾ ಪ್ರಕ್ರಿಯೆಗೆ ಮುಂದಾಗುವ ಈ ಸಾಧನವನ್ನು ಪ್ರಜಾ ನಿರ್ದೇಶನ ಎನ್ನಲಾಗುತ್ತದೆ. ಉದಾ: ಅಣ್ಣಾ ಹಜಾರೆ ನಾಯಕತ್ವದಲ್ಲಿ ಜನಲೋಕಪಾಲ್ ಮಸೂದೆಯನ್ನು ರಚಿಸಿ ಸಂಸತ್ತು ಅನುಮೋದಿಸಲು ಒತ್ತಾಯಿಸಿದ ಘಟನೆ 2012 ರಲ್ಲಿ ಜರುಗಿದ್ದುದು. ಗಮನಿಸಬೇಕಾದ ಅಂಶವೇನೆಂದರೆ ಪ್ರಜಾ ನಿರ್ದೇಶನಕ್ಕೆ ಆಯಾ ದೇಶದ ಸಂವಿಧಾನದಲ್ಲಿ ಅವಕಾಶವಿದ್ದಲ್ಲಿ ಮಾತ್ರ ಅದೊಂದು ಪ್ರತ್ಯಕ್ಷ ಪ್ರಾತಿನಿಧ್ಯದ ಸಾಧನವಾಗುತ್ತದೆ. ಇಲ್ಲವಾದಲ್ಲಿ ರಾಜಕಾರಣಿಗಳ ನಿರ್ಲಕ್ಷ್ಯ ಅಥವಾ ಸ್ವಾರ್ಥ ಸಾಧನೆಯ ಮಧ್ಯೆ ಅರ್ಥಹೀನ ಸಾಧನವಾಗುತ್ತದೆ.

**2. ಪ್ರಜಾ ನಿರ್ಧಾರ [People's Referendum]:** ಸರ್ಕಾರ ಸೂಚಿಸಿದ ಪ್ರಸ್ತಾವವನ್ನು ದೇಶದ ಪ್ರಜೆಗಳೆಲ್ಲ ನೇರವಾಗಿ ಮತದಾನದ ಮೂಲಕ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಾಧನವೇ ಪ್ರಜಾ ನಿರ್ಧಾರ. ಸಾಮಾನ್ಯವಾಗಿ ಹೊಸ ಸಂವಿಧಾನ ಜಾರಿಗೊಳಿಸುವಾಗ, ಸಂವಿಧಾನಾತ್ಮಕ ತಿದ್ದುಪಡಿ ಮಾಡುವಾಗ, ಮಹತ್ವದ ಕಾನೂನು ಅನುಷ್ಠಾನಗೊಳಿಸುವಾಗ, ಚುನಾಯಿತ ಪ್ರತಿನಿಧಿಯನ್ನು ಪದಚ್ಯುತಿಗೊಳಿಸುವಾಗ ಅಥವಾ ಸರ್ಕಾರದ ನೀತಿಯನ್ನು ಪಾಲಿಸುವಾಗ ಕೆಲ ದೇಶಗಳಲ್ಲಿ ಪ್ರತ್ಯಕ್ಷ ಪ್ರಾತಿನಿಧ್ಯದ ಸಾಧನವಾದ ಪ್ರಜಾ ನಿರ್ಧಾರವನ್ನು ಅನುಸರಿಸಲಾಗುತ್ತದೆ. ಪ್ರಜಾ ನಿರ್ಧಾರ ಸಾಧನವು ಕಡ್ಡಾಯ ಪ್ರಜಾ ನಿರ್ಧಾರ ಹಾಗೂ ಸಲಹಾ ಪ್ರಜಾ ನಿರ್ಧಾರ ಎಂಬ ಎರಡು ಸ್ವರೂಪ ಹೊಂದಿರುತ್ತದೆ. ಪ್ರಜಾ ನಿರ್ಧಾರದ ಫಲಿತಾಂಶದಂತೆ ಸರ್ಕಾರ ನಡೆದುಕೊಳ್ಳಲೇಬೇಕಿದ್ದರೆ ಅದನ್ನು ಕಡ್ಡಾಯ ಪ್ರಜಾ ನಿರ್ಧಾರ ಎನ್ನಲಾಗುತ್ತದೆ. ಇದನ್ನು ಸ್ವಿಟ್ಜರ್ಲ್ಯಾಂಡ್ ದೇಶದಲ್ಲಿ ಕಾಣಬಹುದಾಗಿದೆ. ಒಂದುವೇಳೆ ಪ್ರಜಾ ನಿರ್ಧಾರದ ಫಲಿತಾಂಶದ ನಂತರವೂ ಸರ್ಕಾರ ಅಂತಿಮ ತೀರ್ಮಾನ ಕೈಗೊಳ್ಳಲು ಅವಕಾಶವಿದ್ದರೆ ಅದನ್ನು ಸಲಹಾ ಪ್ರಜಾ ನಿರ್ಧಾರ ಎನ್ನಲಾಗುತ್ತದೆ. ಇದನ್ನು ಬ್ರಿಟನ್ನ್ ದೇಶದಲ್ಲಿ ಗುರುತಿಸಬಹುದಾಗಿದೆ. ದೇಶವೊಂದರ ಇತಿಹಾಸ ಹಾಗೂ ಸಂವಿಧಾನ ಆಧರಿಸಿ ಕಡ್ಡಾಯ ಅಥವಾ ಸಲಹಾ ಪ್ರಜಾ ನಿರ್ಧಾರ ಪಾಲನೆ ಕಂಡುಬರುತ್ತದೆ. ಸ್ವಿಟ್ಜರ್ಲ್ಯಾಂಡ್ ಜನರೇ ಆಡಳಿತದ ಅಂತಿಮ ಅಧಿಕಾರ ಹೊಂದಿರುವರೆಂಬ ನಂಬಿಕೆ ಹೊಂದಿದ್ದು ಕಡ್ಡಾಯ ಪ್ರಜಾ ನಿರ್ಧಾರ ಅಳವಡಿಸಿಕೊಂಡಿದೆ. ಆದರೆ ಬ್ರಿಟನ್ನಿನಲ್ಲಿ ಪಾರ್ಲಿಮೆಂಟ್ ಪರಮಾಧಿಕಾರ ಹೊಂದಿದ್ದು ಪ್ರಜಾ ನಿರ್ಧಾರ ಸಲಹಾತ್ಮಕವಾಗಿದೆ.

**3. ಮರು ಕರೆ [Recall]:** ಪ್ರಜೆಗಳು ತಾವೇ ಚುನಾಯಿಸಿದ ಪ್ರತಿನಿಧಿಯನ್ನು ಹಿಂದಕ್ಕೆ ಕರೆಯಿಸಿಕೊಳ್ಳುವ ಅಂದರೆ ಅಧಿಕಾರದಿಂದ ಕೆಳಗಿಳಿಸುವ ಪದ್ಧತಿಯನ್ನು ಮರು ಕರೆ



ಎನ್ನಲಾಗುತ್ತದೆ. ಪ್ರಜೆಗಳು ತಮ್ಮ ಸಮಸ್ಯೆಗಳಿಗೆ ಸ್ಪಂದಿಸದ, ಕಷ್ಟಗಳಿಗೆ ಕಿವಿಯಾಗದ ಅಥವಾ ಅಗತ್ಯಗಳನ್ನು ಈಡೇರಿಸದ ಪ್ರತಿನಿಧಿಯನ್ನು ಹಿಂದಕ್ಕೆ ಕರೆಯಿಸಿಕೊಳ್ಳಲು ಮುಂದಾಗುತ್ತಾರೆ. ಈ ಸಾಧನವು ಜನತಾ ಪ್ರಜಾಪ್ರಭುತ್ವ ವ್ಯವಸ್ಥೆಯ ವಿವಾದಗ್ರಸ್ಥ ಅಂಶವಾಗಿದೆ.

**4. ಪ್ರಜಾ ಸಮ್ಮತಿ [Flebicite]:** ಸಾರ್ವಜನಿಕ ಮಹತ್ವವುಳ್ಳ ಸಮಸ್ಯೆಯೊಂದನ್ನು ಜನರ ತೀರ್ಮಾನಕ್ಕೆ ನೀಡಲಾಗುತ್ತದೆ. ಜನರು ಸಮಸ್ಯೆ ಕುರಿತು ಬಹುಮತದೊಡನೆ ವ್ಯಕ್ತಪಡಿಸುವ ಅಭಿಪ್ರಾಯದಂತೆ ತೀರ್ಮಾನವನ್ನು ಸರ್ಕಾರ ಕೈಗೊಳ್ಳುತ್ತದೆ. ಹೀಗೆ ಜನರ ಅಥವಾ ಪ್ರಜೆಗಳ ಅಭಿಪ್ರಾಯವನ್ನಾಧರಿಸಿ ಸರ್ಕಾರ ಪ್ರಜಾಪರ ನಿರ್ಧಾರ ಕೈಗೊಳ್ಳುವ ಸಾಧನವೇ ಪ್ರಜಾ ಸಮ್ಮತಿ. ಇದನ್ನು ಜನಮತ ಗಣನೆ ಎಂದೂ ಕರೆಯಲಾಗುತ್ತದೆ. ಉದಾ: ಜುನಾಗಡ ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ಸೇರಿಸಿಕೊಳ್ಳುವ ಮೊದಲು ಜನಮತ ಗಣನೆ ಅಥವಾ ಪ್ರಜಾ ಸಮ್ಮತಿ ಸಾಧನವನ್ನು ಬಳಸಲಾಗಿತ್ತು.

### [C.] ಪ್ರತ್ಯಕ್ಷ ಪ್ರಾತಿನಿಧ್ಯದ ಗುಣಾವಗುಣಗಳು

### [Merits and Demerits of Direct Representation]:

ಪ್ರತ್ಯಕ್ಷ ಪ್ರಾತಿನಿಧ್ಯ ತನ್ನದೇಯಾದ ಗುಣಾವಗುಣಗಳನ್ನು ಮೈಗೂಡಿಸಿಕೊಂಡಿದೆ. ಪ್ರತ್ಯಕ್ಷ ಪ್ರಾತಿನಿಧ್ಯ ಜಾರಿಯಲ್ಲಿರುವೆಡೆ ಕಂಡು ಬರುವ ಅದರ ಪ್ರಧಾನ ಗುಣಗಳೆಂದರೆ

1. ಪ್ರಜೆಗಳು ರಾಜಕೀಯ ಆಡಳಿತದಲ್ಲಿ ಅನುಭವ ಪಡೆಯಲು ಅವಕಾಶ ಒದಗಿಸುವುದು.
2. ಆಳುವ ಸರ್ಕಾರಗಳನ್ನು ಪ್ರಜೆಗಳ ಜವಾಬ್ದಾರಿಗೊಳಪಡಿಸುವುದು.
3. ಪ್ರಜೆಗಳಲ್ಲಿ ಜವಾಬ್ದಾರಿ ಮತ್ತು ದೇಶಭಕ್ತಿಯ ಪ್ರಜ್ಞೆಯನ್ನು ಮೂಡಿಸುವುದು.
4. ಪ್ರಜೆಗಳು ರಾಜಕೀಯ ಜಾಗೃತಿ ಹೊಂದಲು ಸಹಕಾರಿಯಾಗುವುದು.
5. ಪ್ರಜೆಗಳು ಸರ್ಕಾರದೊಡನೆ ಸಂಪರ್ಕ ಹೊಂದಲು ನೆರವಾಗುವುದು.

ಪ್ರಸ್ತಾಪಿತ ಗುಣ ಅಥವಾ ಅನುಕೂಲಗಳನ್ನು ಹೊಂದಿರುವ ಪ್ರತ್ಯಕ್ಷ ಪ್ರಾತಿನಿಧ್ಯ ವಿಧಾನವು ಕೆಳಗಿನ ದೋಷಗಳಿಂದ ಕೂಡಿದುದು ಗಮನಾರ್ಹ. ಈ ವಿಧಾನದ ಪ್ರಮುಖ ಅವಗುಣಗಳೆಂದರೆ

1. ಅಧಿಕ ಜನಸಂಖ್ಯೆ ಹಾಗೂ ವಿಶಾಲ ಭೂಪ್ರದೇಶ ಹೊಂದಿರುವ ಆಧುನಿಕ ರಾಷ್ಟ್ರಗಳಿಗೆ ಹೊಂದಿಕೊಳ್ಳಲಾರದು.
2. ಗುಪ್ತ ನಿರ್ಧಾರ ಕೈಗೊಳ್ಳಲು ಸಾಧ್ಯವಾಗದಿರುವುದು.
3. ಅವಕಾಶವಾದಿಗಳ ಕುತಂತ್ರಗಳಿಂದ ಪ್ರಜೆಗಳನ್ನು ದಾರಿ ತಪ್ಪಿಸಲು ಆಸ್ಪದ ಒದಗಿಸುವುದು.
4. ಎಲ್ಲ ಪ್ರಜೆಗಳಿಗೂ ಅಭಿಪ್ರಾಯ ನೀಡುವ ಸಾಮರ್ಥ್ಯವಿದೆ ಎಂಬುದಾಗಿ ಪರಿಗಣಿಸಿರುವುದು.

## [II.] ಪರೋಕ್ಷ ಪ್ರಾತಿನಿಧ್ಯ ವಿಧಾನ [Method of Indirect Representation]:

ಪ್ರತ್ಯಕ್ಷ ಪ್ರಾತಿನಿಧ್ಯವು ಚಿಕ್ಕ ಭೂಪ್ರದೇಶ ಮತ್ತು ಕಡಿಮೆ ಜನಸಂಖ್ಯೆ ಹೊಂದಿರುವ ದೇಶಗಳಲ್ಲಿ ಮಾತ್ರ ಸಾಧ್ಯ. ಚಿಕ್ಕ ಭೂಪ್ರದೇಶದಿಂದ ಜನರೆಲ್ಲ ಒಂದೆಡೆ ಸುಲಭವಾಗಿ ಸೇರಲು ಸಾಧ್ಯವಾಗುತ್ತದೆ. ಜೊತೆಗೆ ಕಡಿಮೆ ಜನಸಂಖ್ಯೆಯಿಂದ ಪರಸ್ಪರ ಸಾಮರಸ್ಯ ಹೊಂದಲು ಹಾಗೂ ತೀರ್ಮಾನ ಕೈಗೊಳ್ಳಲು ಅವಕಾಶವಾಗುತ್ತದೆ. ಆದರೆ, ಆಧುನಿಕ ದೇಶಗಳು ರಾಷ್ಟ್ರ ರಾಜ್ಯಗಳಾಗಿದ್ದು ವಿಶಾಲ ಭೂಪ್ರದೇಶ ಮತ್ತು ಅಧಿಕ ಜನಸಂಖ್ಯೆಯ ಸಂಕೀರ್ಣ ಸಮಾಜ ಹೊಂದಿವೆ. ಹೀಗಾಗಿ ಪ್ರತ್ಯಕ್ಷ ಪ್ರಾತಿನಿಧ್ಯ ವಿಧಾನದ ಪಾಲನೆ ಅಸಾಧ್ಯ ಸಂಗತಿಯಾಗಿದೆ. ಆದ್ದರಿಂದ ಪರೋಕ್ಷ ಪ್ರಾತಿನಿಧ್ಯ ವಿಧಾನವು ಹೆಚ್ಚು ಜನಪ್ರಿಯವಾಗಿದೆ.

**[A.] ಪರೋಕ್ಷ ಪ್ರಾತಿನಿಧ್ಯದ ಅರ್ಥ [Meaning of Indirect Representation]:** ಸರಳಾರ್ಥದಲ್ಲಿ ಪ್ರಜೆಗಳ ಪರವಾಗಿ ಅವರ ಪ್ರತಿನಿಧಿಗಳು ಆಡಳಿತದಲ್ಲಿ ಭಾಗವಹಿಸುವುದನ್ನು ಪರೋಕ್ಷ ಪ್ರಾತಿನಿಧ್ಯ ವಿಧಾನ ಎನ್ನಲಾಗುತ್ತದೆ. ವಿಶಾಲಾರ್ಥದಲ್ಲಿ ಪ್ರಜೆಗಳು ನಿಯತಕಾಲಿಕವಾಗಿ ಜರುಗುವ ಚುನಾವಣೆಗಳಲ್ಲಿ ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಂಡು ಆಡಳಿತ ನಡೆಸಲು ಮತ್ತು ನಿರ್ಧಾರ ಕೈಗೊಳ್ಳಲು ಅನುಮತಿಸುವ ವ್ಯವಸ್ಥೆಯೇ ಪರೋಕ್ಷ ಪ್ರಾತಿನಿಧ್ಯ ವಿಧಾನ. ಇಲ್ಲಿ ಕಾನೂನು ರಚನೆ, ಆಡಳಿತಾತ್ಮಕ ನಿರ್ಣಯ, ಸರ್ಕಾರದ ನೀತಿ ನಿರೂಪಣೆಯಲ್ಲಿ ಪ್ರಜೆಗಳ ಬದಲು ಪ್ರತಿನಿಧಿಗಳೇ ಪ್ರಮುಖ ಪಾತ್ರ ನಿರ್ವಹಿಸುತ್ತಾರೆ. ಪರೋಕ್ಷ ಪ್ರಾತಿನಿಧ್ಯ ವಿಧಾನವು ಜಾರಿಯಲ್ಲಿರುವ ದೇಶಗಳಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ನಿಯತಕಾಲಿಕ ಚುನಾವಣೆ ಜರುಗುತ್ತವೆ. ಉದಾ: ಭಾರತ ಹಾಗೂ ಬ್ರಿಟನ್ನಿನಲ್ಲಿ ಪ್ರತಿ ಐದು ವರ್ಷಗಳಿಗೊಮ್ಮೆ ಸಾರ್ವತ್ರಿಕ ಚುನಾವಣೆಗಳು ಜರುಗುವುದು. ಗಮನಾರ್ಹ ಅಂಶವೇನೆಂದರೆ, ಪರೋಕ್ಷ ಪ್ರಾತಿನಿಧ್ಯ ವಿಧಾನದಲ್ಲಿ ಪರಮಾಧಿಕಾರ ಪ್ರಜೆಗಳಲ್ಲಿದ್ದು ಆಡಳಿತಾತ್ಮಕ ನಿರ್ಧಾರ ಕೈಗೊಳ್ಳುವ ಅವಕಾಶವನ್ನು ಮಾತ್ರವೇ ಅವರು ಚುನಾವಣೆಯ ಮೂಲಕ ತಮ್ಮ ಪ್ರತಿನಿಧಿಗಳಿಗೆ ವರ್ಗಾಯಿಸಿರುತ್ತಾರೆ. ಈ ಹಿನ್ನೆಲೆಯಲ್ಲಿಯೇ ಚಿಂತಕ ಜಾನ್ ಸ್ಟುವರ್ಟ್ ಮಿಲ್ ಪರೋಕ್ಷ ಪ್ರಾತಿನಿಧ್ಯವಿದ್ದಲ್ಲಿ ದೇಶದ ಸಮಸ್ತ ಜನರು ಅಥವಾ ಅದರಲ್ಲಿನ ಬಹುಸಂಖ್ಯಾತ ಜನರು ನಿಯತಕಾಲಿಕವಾಗಿ ಜರುಗುವ ಚುನಾವಣೆಗಳಲ್ಲಿ ತಮ್ಮ ಪ್ರತಿನಿಧಿಗಳ ಆಯ್ಕೆಯ ಮೂಲಕ ಆಡಳಿತಾಧಿಕಾರವನ್ನು ಚಲಾಯಿಸುತ್ತಾರೆ ಎಂದಿರುವರು.

ಪರೋಕ್ಷ ಪ್ರಾತಿನಿಧ್ಯ ವಿಧಾನದ ಪರಿಕಲ್ಪನೆಯನ್ನು ಭಾರತದ ಉದಾಹರಣೆಯ ಮೂಲಕ ಪರಿಪೂರ್ಣವಾಗಿ ಅರಿತುಕೊಳ್ಳುವುದು ಸೂಕ್ತವೆನಿಸುತ್ತದೆ. ತಮಗೆಲ್ಲ ತಿಳಿದಿರುವಂತೆ ಭಾರತ ಸಂವಿಧಾನವು ಸಂಸದೀಯ ಮಾದರಿ ಸರ್ಕಾರವನ್ನು ಕೊಡಮಾಡಿದೆ. ಸರ್ಕಾರ ಎಂದೇ ಜನಸಾಮಾನ್ಯರು ಪರಿಗಣಿಸುವ ಕಾರ್ಯಾಂಗದ



ರಾಷ್ಟ್ರಪತಿ, ಪ್ರಧಾನಿ ಹಾಗೂ ಮಂತ್ರಿಗಳನ್ನು ಸಂಸದೀಯ ಮಾದರಿ ಸರ್ಕಾರದಲ್ಲಿ ನೇರವಾಗಿ ಪ್ರಜೆಗಳು ಆಯ್ಕೆ ಮಾಡುವುದಿಲ್ಲ. ಬದಲಾಗಿ ಭಾರತದ ಪ್ರಜೆಗಳಿಂದ ಚುನಾವಣೆಯಲ್ಲಿ ಆಯ್ಕೆಗೊಂಡಿರುವ ಸಂಸತ್ತು ಅಥವಾ ಕೇಂದ್ರ ಶಾಸಕಾಂಗದ ಕೆಳಮನೆಯಾಗಿರುವ ಲೋಕಸಭಾ ಸದಸ್ಯರನ್ನು ಚುನಾಯಿಸುತ್ತಾರೆ. ಲೋಕಸಭೆಯ ಜನ ಪ್ರತಿನಿಧಿಗಳು ಸರ್ಕಾರ ಅಥವಾ ಕಾರ್ಯಾಂಗದ ಮುಖ್ಯಸ್ಥರಾದ ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಪ್ರಧಾನ ಮಂತ್ರಿಗಳನ್ನು ಆಯ್ಕೆ ಮಾಡುತ್ತಾರೆ. ಪ್ರಜೆಗಳು ಕೇಂದ್ರ ಶಾಸಕಾಂಗದ ಕೆಳಮನೆಯಾಗಿರುವ ಲೋಕಸಭಾ, ರಾಜ್ಯ ಶಾಸಕಾಂಗದ ಕೆಳಮನೆಯಾಗಿರುವ ವಿಧಾನಸಭಾ ಹಾಗೂ ವಿವಿಧ ಸ್ಥಳೀಯ ಸಂಸ್ಥೆಗಳ ಸದಸ್ಯರನ್ನು ತಮ್ಮ ಪರವಾಗಿ ಆಡಳಿತ ನಡೆಸಲು ಪ್ರತಿನಿಧಿಗಳನ್ನಾಗಿ ಚುನಾಯಿಸುತ್ತಾರೆ. ಭಾರತೀಯರು ನಿಶ್ಚಿತ ಅವಧಿಗೆ ಅಂದರೆ ಐದು ವರ್ಷಗಳ ಅವಧಿಗೆ ಮಾತ್ರ ವ್ಯಕ್ತಿಯೊಬ್ಬನನ್ನು ಪ್ರತಿನಿಧಿಯಾಗಿ ಆಯ್ಕೆ ಮಾಡಿಕೊಳ್ಳುವರು. ತಮ್ಮ ಹಿತರಕ್ಷಣೆ ಮಾಡದ ಪ್ರತಿನಿಧಿಯನ್ನು ಮುಂದಿನ ಚುನಾವಣೆಯಲ್ಲಿ ತಿರಸ್ಕರಿಸಲು ಮುಕ್ತ ಅಧಿಕಾರವನ್ನು ಪ್ರಜೆಗಳು ಹೊಂದಿರುವರು.

### [B.] ಪರೋಕ್ಷ ಪ್ರಾತಿನಿಧ್ಯದ ಗುಣಾವಗುಣಗಳು
### [Merits and Demerits of Indirect Representation]:

ಸಮಕಾಲೀನ ಜಗತ್ತಿನಲ್ಲಿ ವ್ಯಾಪಕವಾಗಿ ಅನುಸರಿಸಲಾಗುವ ಪರೋಕ್ಷ ಪ್ರಾತಿನಿಧ್ಯ ವಿಧಾನವೂ ತನ್ನದೇಯಾದ ಗುಣಾವಗುಣಗಳಿಂದ ಕೂಡಿದೆ. ಪ್ರಜೆಗಳ ಬದಲಿಗೆ ಅವರ ಪ್ರತಿನಿಧಿಗಳು ರಾಜಕೀಯವಾಗಿ ಕಾರ್ಯಾಚರಿಸುವ ಪರೋಕ್ಷ ಪ್ರಾತಿನಿಧ್ಯದ ಪ್ರಧಾನ ಅನುಕೂಲಗಳೆಂದರೆ

1. ವಿಶಾಲ ಭೂಪ್ರದೇಶ ಹಾಗೂ ಅಧಿಕ ಜನಸಂಖ್ಯೆಯುಳ್ಳ ದೇಶಗಳಿಗೆ ಮಾತ್ರ ಉಪಯುಕ್ತ.
2. ಅಗತ್ಯವಿದ್ದಲ್ಲಿ ಆಡಳಿತಾತ್ಮಕ ಗೌಪ್ಯತೆಯ ಪಾಲನೆಗೆ ಸಹಕಾರಿ.
3. ಪ್ರಜೆಗಳಿಂದ ಆಯ್ಕೆಗೊಂಡ ಪ್ರತಿನಿಧಿಗಳಿಂದ ಪ್ರಜೆಗಳ ಹಿತರಕ್ಷಣೆಗೆ ಆದ್ಯತೆ.
4. ಅನುಭವಿ, ಪರಿಣಿತ, ಜಾಗೃತ ಪ್ರತಿನಿಧಿಗಳಿಂದ ಸಮರ್ಥ ಆಡಳಿತದ ಸಾಧ್ಯತೆ.

ಪ್ರಸ್ತಾಪಿತ ಗುಣಗಳಿಂದ ಕೂಡಿರುವ ಪರೋಕ್ಷ ಪ್ರಾತಿನಿಧ್ಯ ವಿಧಾನವು ಕೆಲ ದೋಷಗಳಿಂದಲೂ ಕೂಡಿದೆ. ಈ ಕೆಳಗಿನವು ಪರೋಕ್ಷ ಪ್ರಾತಿನಿಧ್ಯದ ಮುಖ್ಯ ಅವಗುಣಗಳೆನಿಸಿವೆ.

1. ರಾಜಕೀಯ ಜಾಗೃತಿಯಿಲ್ಲದ ಪ್ರಜೆಗಳಿಂದ ಅಯೋಗ್ಯ ಆಡಳಿತಗಾರರ ಆಯ್ಕೆಯ ಸಾಧ್ಯತೆ.
2. ಪ್ರಜೆಗಳು ಮತ್ತು ಸರ್ಕಾರದ ನಡುವೆ ನೇರ ಸಂಪರ್ಕದ ಕೊರತೆ.
3. ಪ್ರಜೆಗಳಿಂದ ಪ್ರತಿನಿಧಿಗಳ ಆಯ್ಕೆ ಮತ್ತು ಪ್ರತಿನಿಧಿಗಳಿಂದ ಇತರ ಕಾರ್ಯಾಂಗಿಯ ಮುಖ್ಯಸ್ಥರ ಆಯ್ಕೆ ಫಲವಾಗಿ ಆರ್ಥಿಕ ವೆಚ್ಚಕ್ಕೆ ಹಾದಿ.
4. ಭ್ರಷ್ಟಾಚಾರದ ಹೆಚ್ಚಳಕ್ಕೆ ಆಸ್ಪದ.

## [III.] ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನ

## [Method of Proportional Representation]:

### [A.] ಪ್ರಮಾಣಾನುಗುಣ ಪ್ರಾತಿನಿಧ್ಯದ ಅರ್ಥ

### [Meaning of Proportional Representation]:

ಜನರ ಪ್ರಮಾಣಕ್ಕೆ ತಕ್ಕಂತೆ ಶಾಸಕಾಂಗದಲ್ಲಿ ಪಾಲು ನೀಡುವ ವಿಧಾನವನ್ನು ಸರಳವಾಗಿ ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನವೆನ್ನಬಹುದು. ವಿಶಾಲಾರ್ಥದಲ್ಲಿ ಚುನಾವಣೆಯ ವೇಳೆ ನಿರ್ದಿಷ್ಟ ಪಕ್ಷವೊಂದು ಪಡೆದಿರುವ ಶೇಕಡಾವಾರು ಚಲಾವಣೆಗೊಂಡ ಮತಗಳ ಪ್ರಮಾಣಕ್ಕೆ ತಕ್ಕಂತೆ ದೇಶದ ಶಾಸಕಾಂಗದ ಸ್ಥಾನಗಳನ್ನು ಆ ಪಕ್ಷಕ್ಕೆ ಒದಗಿಸುವುದು ಪ್ರಮಾಣಾನುಗುಣ ಪ್ರಾತಿನಿಧ್ಯವಾಗಿದೆ. ಉದಾ: ಸಾರ್ವತ್ರಿಕ ಚುನಾವಣೆಯಲ್ಲಿ ಒಂದು ಪಕ್ಷವು ಚಲಾವಣೆಯಾದ ಶೇಕಡಾ ಇಪ್ಪತ್ತರಷ್ಟು ಮತಗಳನ್ನು ಗಳಿಸಿದರೆ ಆ ಪಕ್ಷಕ್ಕೆ ಸಂಸತ್ತಿನಲ್ಲಿ ಶೇಕಡಾ ಇಪ್ಪತ್ತು ಸ್ಥಾನಗಳನ್ನು, ಇನ್ನೊಂದು ಪಕ್ಷ ಚಲಾವಣೆಗೊಂಡ ಮತಗಳಲ್ಲಿ ಶೇಕಡಾ ಎಪ್ಪತ್ತು ಮತಗಳಿಸಿದರೆ ಶಾಸನ ಸಭೆಯಲ್ಲಿ ಶೇಕಡಾ ಎಪ್ಪತ್ತರಷ್ಟು ಸ್ಥಾನಗಳನ್ನು, ಬೇರೊಂದು ಪಕ್ಷ ಚಲಾವಣೆಗೊಂಡ ಮತಗಳಲ್ಲಿ ಶೇಕಡಾ ಮೂವತ್ತು ಮತಗಳಿಸಿದ್ದರೆ ಸಂಸತ್ತಿನ ಶೇಕಡಾ ಮೂವತ್ತು ಸ್ಥಾನಗಳನ್ನು ಕಲ್ಪಿಸುವುದು ಪ್ರಮಾಣಾನುಗುಣ ಪ್ರಾತಿನಿಧ್ಯದ ತಿರುಳಾಗಿದೆ. ಈ ಬಗೆಯ ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನವು ಜಾರಿಗೊಂಡರೆ ದೇಶದೊಳಗಿನ ಪ್ರತಿಯೊಂದೂ ವರ್ಗ ತನ್ನ ಮತಗಳಿಕೆಗೆ ತಕ್ಕಂತೆ ಶಾಸನ ಸಭೆಯಲ್ಲಿ ಸ್ಥಾನ ಗಳಿಸಿ ತನ್ನ ಅಲ್ಪಸಂಖ್ಯಾತ ಮತದಾರರ ಪ್ರಗತಿಯನ್ನು ಸಾಧಿಸಬಹುದಾಗಿದೆ. ಹೀಗಾಗಿ ಬಹುಸಂಖ್ಯಾತರನ್ನು ಓಲೈಸುವ ಬಹುಮತ ತತ್ವಾಧಾರಿತ ಪ್ರಾತಿನಿಧ್ಯದ ಬದಲು ಪ್ರಮಾಣಾನುಗುಣ ಪ್ರಾತಿನಿಧ್ಯಕ್ಕೆ ಮಿಲ್‌ನು ತನ್ನ ಚಿಂತನೆಯಲ್ಲಿ ಒಲವು ಹೊಂದಿದ್ದನು.

ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನವನ್ನು ಥಾಮಸ್ ಹೇರ್ ಮೊದಲು ಪ್ರತಿಪಾದಿಸಿದ್ದರೂ ಜೆ. ಎಸ್. ಮಿಲ್ ಇದನ್ನು ಜನಪ್ರಿಯಗೊಳಿಸಿದನು. ಈ ವಿಧಾನದ ಪ್ರತಿಪಾದಕರನ್ವಯ ದ್ವಿ ಪಕ್ಷ ಪದ್ಧತಿ ಅಸ್ತಿತ್ವದಲ್ಲಿರುವೆಡೆ ಬಹುಮತ ಗಳಿಸಿದ ರಾಜಕೀಯ ಪಕ್ಷ ಅಧಿಕಾರವನ್ನು ಗಳಿಸಿದರೆ ಬಹುಮತ ಗಳಿಸಲು ವಿಫಲವಾದ ಪಕ್ಷ ವಿರೋಧ ಪಕ್ಷವೆನಿಸಿಕೊಳ್ಳುತ್ತದೆ. ಅಧಿಕಾರದಲ್ಲಿರುವ ಆಡಳಿತ ಪಕ್ಷವು ತನ್ನ ಬೆಂಬಲಿಗರಿಗೆ ಮಾತ್ರ ಗಮನ ನೀಡಿ ವಿರೋದ ಪಕ್ಷದ ಬೆಂಬಲಿಗರಾದ ಅಲ್ಪಸಂಖ್ಯಾತರನ್ನು ಕಡೆಗಣಿಸಬಹುದಾಗಿದೆ. ಬಹುಮತ ತತ್ವದ ಅನುಸರಣೆಯಿಂದ ಕೆಲ ವರ್ಗಗಳು ಅವಕಾಶ ವಂಚಿತಗೊಳ್ಳುತ್ತವೆ ಎಂಬುದು ಅವರ ನಿಲುವಾಗಿತ್ತು. ಹೀಗಾಗಿ ಆಯಾ ಪಕ್ಷದ ಪ್ರಮಾಣವನ್ನು ಅಂದರೆ ಮತಗಳಿಕೆ ಆಧರಿಸಿ ರಾಜಕೀಯ ಪಕ್ಷಗಳಿಗೆ ಪ್ರಾತಿನಿಧ್ಯ ಕಲ್ಪಿಸಿದರೆ ಪ್ರತಿ ಪಕ್ಷದ ಬೆಂಬಲಿಗರ ಹಿತಾಸಕ್ತಿಯನ್ನು ಕಾಪಾಡಬಹುದೆಂಬುದು ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನದ ಪ್ರತಿಪಾದಕರ ಅಭಿಪ್ರಾಯವಾಗಿತ್ತು.



### [B.] ಪ್ರಮಾಣಾನುಗುಣ ಪ್ರಾತಿನಿಧ್ಯದ ಗುಣಾವಗುಣಗಳು

### [Merits and Demerits of Proportional Representation]:

ಬಹುಮತ ತತ್ವದ ದೋಷಗಳ ನಿವಾರಣೆಗೆ ಪ್ರತಿಪಾದಿಸಲ್ಪಟ್ಟ ಪ್ರಮಾಣಾನುಗುಣ ಪ್ರಾತಿನಿಧ್ಯವು ತನ್ನದೇಯಾದ ಗುಣಾವಗುಣಗಳನ್ನು ಹೊಂದಿದೆ. ಈ ಕೆಳಗಿನವು ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನದ ಪ್ರಮುಖ ಅನುಕೂಲಗಳಾಗಿವೆ.

1. ದೇಶದ ಸರ್ವ ಪ್ರಜೆಗಳ ಪ್ರಾತಿನಿಧ್ಯದ ಸಾಧ್ಯತೆ.
2. ಬಹುಸಂಖ್ಯಾತರ ದಬ್ಬಾಳಿಕೆಯಿಂದ ಅಲ್ಪಸಂಖ್ಯಾತರಿಗೆ ರಕ್ಷಣೆ.
3. ಮತಕ್ಷೇತ್ರಗಳ ರಚನೆ ಅಥವಾ ಪುನರ್‌ರಚನೆಯ ಅಗತ್ಯವಿಲ್ಲದಿರುವುದು.
4. ಬಹುಮತ ತತ್ವದ ದೋಷಗಳನ್ನು ನಿವಾರಿಸಲು.

ಪ್ರಸ್ತಾಪಿತ ಪ್ರಧಾನ ಗುಣಗಳನ್ನು ಮೈಗೂಡಿಸಿಕೊಂಡಿರುವ ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನವು ಕೆಳಗಿನ ಹಲವು ಅವಗುಣಗಳನ್ನು ಹೊಂದಿದೆ.

1. ಸಾಮಾಜಿಕ ವರ್ಗೀಕರಣವು ರಾಜಕೀಯ ವರ್ಗೀಕರಣವಾಗಿ ಪರಿವರ್ತನೆಗೊಳ್ಳುವ ಫಲವಾಗಿ ರಾಷ್ಟ್ರೀಯ ಏಕತೆ ಧಕ್ಕೆಗೊಳಗಾಗುತ್ತದೆ.
2. ಸಾಮಾನ್ಯ ಹಿತಾಸಕ್ತಿಯನ್ನು ಗುರುತಿಸಲು ಅಗತ್ಯವಾದ ಸಹಕಾರದ ಬದಲು ಸಂಘರ್ಷ ಕಂಡು ಬರುತ್ತದೆ.
3. ರಾಜಕೀಯ ಪಕ್ಷಗಳು ರಾಷ್ಟ್ರೀಯ ಹಿತಾಸಕ್ತಿಯ ಬದಲು ತಮ್ಮ ವರ್ಗದ ಹಿತಾಸಕ್ತಿಗೆ ಆಧ್ಯತೆ ನೀಡಲು ಮುಂದಾಗುವವು.
4. ಶಾಸಕಾಂಗದಲ್ಲಿ ಹಲವು ರಾಜಕೀಯ ಪಕ್ಷಗಳ ಪ್ರಾತಿನಿಧ್ಯದಿಂದ ಯಾವುದೇ ಒಂದು ರಾಜಕೀಯ ಪಕ್ಷವು ಬಹುಮತ ಪಡೆಯಲಾರದೇ ರಾಜಕೀಯ ಅಸ್ಥಿರತೆ ತಲೆದೋರಬಹುದು.
5. ವಿಶಾಲ ಮತಕ್ಷೇತ್ರಗಳ ಪರಿಣಾಮ ಮತದಾರ ಮತ್ತು ಪ್ರತಿನಿಧಿಗಳ ನಡುವಿನ ಸಂಪರ್ಕ ಕಠಿಣವಾಗುವುದು.

## [IV.] ವೃತ್ತಿಪರ ಅಥವಾ ಕಾರ್ಯಾತ್ಮಕ ಪ್ರಾತಿನಿಧ್ಯ ವಿಧಾನ

## [Method of Occupational or Functional Representation]:

### [A.] ಕಾರ್ಯಾತ್ಮಕ ಪ್ರಾತಿನಿಧ್ಯದ ಅರ್ಥ

### [Meaning of Functional Representation]:

ಸರಳಾರ್ಥದಲ್ಲಿ ವೃತ್ತಿ ಅಥವಾ ಕಾರ್ಯಗಳ ಆರ್ಥಿಕ ಹಿತಾಸಕ್ತಿಗಳ ಪ್ರಾತಿನಿಧ್ಯವು ಕಾರ್ಯಾತ್ಮಕ ಪ್ರಾತಿನಿಧ್ಯ ವಿಧಾನವಾಗಿದೆ. ದೇಶವೊಂದರ ಶಾಸಕಾಂಗದಲ್ಲಿ ಜನರ ಪ್ರಾತಿನಿಧ್ಯವು ಭೌಗೋಳಿಕ ಮತಕ್ಷೇತ್ರದ ಬದಲು ವಿವಿಧ ವೃತ್ತಿ ಅಥವಾ ಕಾರ್ಯವನ್ನು

ಆಧರಿಸಿರುವುದೇ ವಿಶಾಲಾರ್ಥದಲ್ಲಿ ಕಾರ್ಯಾತ್ಮಕ ಪ್ರಾತಿನಿಧ್ಯವೆನಿಸಿದೆ. ಸಾಮಾನ್ಯವಾಗಿ ನಗರಗಳಲ್ಲಿನ ಉದ್ಯಮಿಗಳು, ವ್ಯಾಪಾರಿಗಳು, ಕಾರ್ಮಿಕರು ಮತ್ತು ಗ್ರಾಮಗಳಲ್ಲಿನ ರೈತರು, ಸಣ್ಣ ವ್ಯಾಪಾರಿಗಳು, ಕರಕುಶಲಕರ್ಮಿಗಳು ಈ ವಿಧಾನದಡಿ ಶಾಸಕಾಂಗದಲ್ಲಿ ಪ್ರಾತಿನಿಧ್ಯ ಪಡೆಯಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಯಾತ್ಮಕ ಪ್ರಾತಿನಿಧ್ಯವನ್ನು ವೃತ್ತಿಪರ [Occupational] ಪ್ರಾತಿನಿಧ್ಯ ಎಂತಲೂ ಕರೆಯಲಾಗುತ್ತದೆ. ಒಟ್ಟಾರೆ ದೇಶದ ಶಾಸಕಾಂಗವು ಸಮಾಜದಲ್ಲಿನ ವಿವಿಧ ವೃತ್ತಿಯ ಅಥವಾ ಕಾರ್ಯಗಳ ಆರ್ಥಿಕ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದು ಕಾರ್ಯಾತ್ಮಕ ಪ್ರಾತಿನಿಧ್ಯದ ತಿರುಳಾಗಿದೆ.

ಬ್ರಿಟನ್ನಿನ ಗಿಲ್ಡ್ ಸಮಾಜವಾದಿಗಳು ವೃತ್ತಿಯಾಧಾರಿತ ಕಾರ್ಯಾತ್ಮಕ ಪ್ರಾತಿನಿಧ್ಯದ ಬೆಳವಣಿಗೆಗೆ ಕಾರಣರಾದರು. ಆಸಕ್ತಿದಾಯಕ ಅಂಶವೇನೆಂದರೆ, ಇಟಲಿಯ ಸರ್ವಾಧಿಕಾರಿ ಮುಸಲೋನಿ ಈ ಪ್ರಾತಿನಿಧ್ಯ ವಿಧಾನದ ಪ್ರಯೋಗಕ್ಕೆ ಆಸಕ್ತಿ ಹೊಂದಿ ವಿವಿಧ ಆರ್ಥಿಕ ಹಿತಾಸಕ್ತಿಗಳಿಗೆ ಪ್ರಾತಿನಿಧ್ಯವುಳ್ಳ ಕಾರ್ಪೊರೇಟಿವ್ ಚೇಂಬರ ಸ್ಥಾಪಿಸಿದ್ದನು. ಮುಂದುವರಿದು, ಹೆಸರಾಂತ ರಾಜಕೀಯ ಸಿದ್ಧಾಂತಿ ಕೋಲ್ ನೈಜ ಪ್ರಜಾಪ್ರಭುತ್ವದ ಜಾರಿಗೆ ಶಾಸಕಾಂಗದಲ್ಲಿ ಸಮಾಜದ ವಿವಿಧ ವರ್ಗಗಳ ಆರ್ಥಿಕ ಹಿತಾಸಕ್ತಿಯ ಪ್ರಾತಿನಿಧ್ಯ ಅನಿವಾರ್ಯ ಎಂದು ಅಭಿಪ್ರಾಯಪಟ್ಟಿದ್ದರು.

**[B.] ಕಾರ್ಯಾತ್ಮಕ ಪ್ರಾತಿನಿಧ್ಯದ ಗುಣಾವಗುಣಗಳು**

**[Merits and Demerits of Functional Representation]:**

ಇತರ ಪ್ರಾತಿನಿಧ್ಯ ವಿಧಾನಗಳಂತೆ ಕಾರ್ಯಾತ್ಮಕ ಪ್ರಾತಿನಿಧ್ಯ ವಿಧಾನವೂ ತನ್ನದೇಯಾದ ಗುಣಾವಗುಣಗಳನ್ನು ಮೈಗೂಡಿಸಿಕೊಂಡಿದೆ. ಈ ಕೆಳಗೆ ಕಾರ್ಯಾತ್ಮಕ ಪ್ರಾತಿನಿಧ್ಯದ ಪ್ರಧಾನ ಅನುಕೂಲಗಳನ್ನು ಪಟ್ಟಿ ಮಾಡಲಾಗಿದೆ.

1. ಸಾಮಾನ್ಯ ಪ್ರಜೆಗಳಿಗಿಂತ ಭಿನ್ನವಾದ ಆರ್ಥಿಕ ವರ್ಗಗಳ ಹಿತಾಸಕ್ತಿಗೆ ಆದ್ಯತೆ.

2. ದೇಶದ ಆರ್ಥಿಕ ಅಭಿವೃದ್ಧಿಗೆ ಪೂರಕ.

3. ತಾಂತ್ರಿಕ ಸವಾಲುಗಳಿಗೆ ಸಮರ್ಪಕ ಪರಿಹಾರಗಳ ಸಾಧ್ಯತೆ.

4. ಅನಾವಶ್ಯಕ ಚರ್ಚೆಗಳಿಗೆ ಕಡಿವಾಣ.

ಪ್ರಸ್ತಾಪಿತ ಗುಣಗಳನ್ನು ಹೊಂದಿರುವ ಕಾರ್ಯಾತ್ಮಕ ಪ್ರಾತಿನಿಧ್ಯವು ವಿವಿಧ ದೋಷಗಳಿಂದ ಕೂಡಿದೆ. ಆರ್ಥಿಕ ಹಿತಾಸಕ್ತಿಯನ್ನು ರಕ್ಷಿಸುವ ಕಾರ್ಯಾತ್ಮಕ ಪ್ರಾತಿನಿಧ್ಯ ವಿಧಾನವು ಕೆಳಗಿನ ದೋಷಗಳ ಹಿನ್ನೆಲೆಯಲ್ಲಿ ವಿಮರ್ಶಿಸಲ್ಪಟ್ಟಿದೆ.

1. ತಮ್ಮ ವೃತ್ತಿಯ ಹಿತಾಸಕ್ತಿಗಳಿಗೆ ಆದ್ಯತೆ ನೀಡುವ ಪ್ರತಿನಿಧಿಗಳು ದೇಶದ ಸಾಮಾನ್ಯ ಸ್ವರೂಪವುಳ್ಳ ಸಂಗತಿಗಳನ್ನು ನಿರ್ಲಕ್ಷಿಸುವ ಸಾಧ್ಯತೆ.

2. ಬಹು ರಾಜಕೀಯ ಪಕ್ಷಗಳಿಗೆ ಕಾರಣವಾಗಿ ರಾಜಕೀಯ ಅಸ್ಥಿರತೆ ತಲೆದೋರುವುದು.



3. ವೃತ್ತಿಪರ ಗುಂಪುಗಳ ಪರಸ್ಪರ ಮೇಲಾಟಗಳಿಂದ ಸರ್ಕಾರವು ಆಡಳಿತಾತ್ಮಕ ಬಿಕ್ಕಟ್ಟಿಗೆ ಸಿಲುಕುವುದು. ಉದಾ: ಉದ್ಯಮಿಗಳಿಗೆ ಪೂರಕವಾದ ನಿರ್ಧಾರ ಕೈಗೊಳ್ಳಲು ಸರ್ಕಾರ ಮುಂದಾದಾಗ ವ್ಯಾಪಾರಿಗಳು ಅಥವಾ ರೈತರು ಅದನ್ನು ವಿರೋಧಿಸಿ ಬಿಕ್ಕಟ್ಟು ಸೃಷ್ಟಿಸುವುದು.

4. ಸಮಾಜದಲ್ಲಿ ಅಸಂಖ್ಯಾ ವೃತ್ತಿಗಳಿದ್ದು ಎಲ್ಲ ವೃತ್ತಿ ಅಥವಾ ಕಾರ್ಯ ನಿರ್ವಹಿಸುವ ಗುಂಪುಗಳಿಗೆ ಪ್ರಾತಿನಿಧ್ಯ ನೀಡುವ ಸಾಧ್ಯತೆ ವಿರಳವಾಗಿದುದು.

## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ಪ್ರತ್ಯಕ್ಷ ಪ್ರಾತಿನಿಧ್ಯ ಎಂದರೇನು?
2. ಪ್ರತ್ಯಕ್ಷ ಪ್ರಾತಿನಿಧ್ಯ ವಿಧಾನ ಜಾರಿಯಲ್ಲಿದ್ದ ಎರಡು ದೇಶಗಳನ್ನು ಹೆಸರಿಸಿರಿ.
3. ಪ್ರಜಾ ನಿರ್ದೇಶನ ಎಂದರೇನು?
4. ಮರುಕರೆಯ ಅರ್ಥವನ್ನು ತಿಳಿಸಿರಿ.
5. ಪರೋಕ್ಷ ಪ್ರಾತಿನಿಧ್ಯದ ಅರ್ಥವನ್ನು ಬರೆಯಿರಿ.
6. ಪರೋಕ್ಷ ಪ್ರಾತಿನಿಧ್ಯದ ಮೂರು ದೋಷಗಳನ್ನು ತಿಳಿಸಿರಿ.
7. ಪ್ರಮಾಣಾನುಗುಣ ಪ್ರಾತಿನಿಧ್ಯ ಎಂದರೇನು?
8. ಪ್ರಮಾಣಾನುಗುಣ ಪ್ರಾತಿನಿಧ್ಯದ ಎರಡು ಅನುಕೂಲಗಳನ್ನು ತಿಳಿಸಿ.
9. ಕಾರ್ಯಾತ್ಮಕ ಪ್ರಾತಿನಿಧ್ಯ ಎಂದರೇನು?
10. ಕಾರ್ಯಾತ್ಮಕ ವಿಧಾನದ ಎರಡು ಅನುಕೂಲಗಳನ್ನು ತಿಳಿಸಿರಿ.

[B.]

1. ಪ್ರತ್ಯಕ್ಷ ಪ್ರಾತಿನಿಧ್ಯ ಎಂದರೇನು? ಅದರ ಗುಣಾವಗುಣಗಳನ್ನು ಬರೆಯಿರಿ.
2. ಪರೋಕ್ಷ ಪ್ರಾತಿನಿಧ್ಯದ ಗುಣಾವಗುಣಗಳನ್ನು ಬರೆಯಿರಿ.
3. ಪ್ರಮಾಣಾನುಗುಣ ಪ್ರಾತಿನಿಧ್ಯ ಕುರಿತು ಟಿಪ್ಪಣಿ ಬರೆಯಿರಿ.
4. ಕಾರ್ಯಾತ್ಮಕ ಪ್ರಾತಿನಿಧ್ಯ ಕುರಿತು ಟಿಪ್ಪಣಿ ಬರೆಯಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಾತಿನಿಧ್ಯ ವಿಧಾನಗಳ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.
2. ವಿವಿಧ ರಾಜಕೀಯ ಪ್ರಾತಿನಿಧ್ಯ ವಿಧಾನಗಳನ್ನು ವಿವರಿಸಿರಿ.

ಅಧ್ಯಾಯ 5:

# ಸಂವಿಧಾನಾತ್ಮಕತೆ

## [Constitutionalism]

### ಪ್ರಸ್ತಾವನೆ [Introduction]:

ಜಗತ್ತಿನ ಪ್ರತಿ ದೇಶ ತನ್ನದೇಯಾದ ಸಂವಿಧಾನವನ್ನು ಹೊಂದಿರುತ್ತದೆ. ಸಂವಿಧಾನವು ಆಯಾ ದೇಶದ ಆಡಳಿತಕ್ಕೆ ಅಗತ್ಯವಾದ ಮೂಲಭೂತ ಕಾನೂನುಗಳನ್ನು ಒಳಗೊಂಡಿರುತ್ತದೆ. ಲಿಖಿತ ಅಥವಾ ಅಲಿಖಿತ ಸ್ವರೂಪದಲ್ಲಿರುವ ಸಂವಿಧಾನಾತ್ಮಕ ಕಾನೂನುಗಳು ದೇಶವೊಂದರ ರಾಜಕೀಯ ವ್ಯವಸ್ಥೆಗೆ ತಳಹದಿಯಾಗಿರುತ್ತವೆ. ಈ ಸಂವಿಧಾನದ ಪರಿಕಲ್ಪನೆಗೆ ಪೂರಕವಾದ, ಭಿನ್ನವಾದ ಹಾಗೂ ಉನ್ನತವಾದ ಮತ್ತೊಂದು ಪರಿಕಲ್ಪನೆಯೇ ಸಂವಿಧಾನಬದ್ಧತೆ ಅಥವಾ ಸಂವಿಧಾನಾತ್ಮಕತೆ. ಸಂವಿಧಾನ ಒಳಗೊಂಡಿರುವ ಕಾನೂನುಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಂವಿಧಾನಾತ್ಮಕತೆಯ ಪರಿಕಲ್ಪನೆ ಬೆಳೆದು ಬಂದಿದೆ. ಸಂವಿಧಾನಾತ್ಮಕತೆಯ ಕುರುಹುಗಳನ್ನು ಪ್ರಾಚೀನ ಕಾಲದಲ್ಲಿ ಗುರುತಿಸಬಹುದಾದರೂ ಪ್ರಜಾಸತ್ತಾತ್ಮಕತೆ, ಅಧಿಕಾರದ ಪ್ರತ್ಯೇಕತೆ, ಕಾನೂನಿನ ಶ್ರೇಷ್ಠತೆ ಬಲಗೊಂಡಂತೆ ಸಂವಿಧಾನಾತ್ಮಕತೆಯು ಹೆಚ್ಚು ಜನಪ್ರಿಯತೆ ಗಳಿಸಿಕೊಂಡಿತು. ಪ್ರಸ್ತುತ ಅಧ್ಯಾಯದಲ್ಲಿ ಸಂವಿಧಾನಾತ್ಮಕತೆಯ ಅರ್ಥ, ತತ್ವಗಳು ಮತ್ತು ನಿರೀಕ್ಷೆಗಳನ್ನು ಕುರಿತಂತೆ ಬೆಳಕು ಚೆಲ್ಲಲಾಗಿದೆ.

### [A.] ಸಂವಿಧಾನಾತ್ಮಕತೆಯ ಅರ್ಥ [Meaning of Constitutionalism]:

ಸರಳಾರ್ಥದಲ್ಲಿ ಸೀಮಿತ ಸರ್ಕಾರವನ್ನು ಬೆಂಬಲಿಸುವ ರಾಜಕೀಯ ಪರಿಕಲ್ಪನೆಯೇ ಸಂವಿಧಾನಾತ್ಮಕತೆ. ಆಳುವ ಸರ್ಕಾರಗಳು ನಿರಂಕುಶವಾಗಿರದೇ ಸಂವಿಧಾನದ ಕಾನೂನುಗಳಂತೆ ಅಧಿಕಾರ ಚಲಾಯಿಸುವುದನ್ನು ಸಂವಿಧಾನಾತ್ಮಕತೆಯು ಪ್ರತಿನಿಧಿಸುತ್ತದೆ. ವಿಶಾಲಾರ್ಥದಲ್ಲಿ ಸಂವಿಧಾನದ ತತ್ವ, ಮೌಲ್ಯ ಹಾಗೂ ಆದರ್ಶಗಳಿಗೆ ಬದ್ಧವಾಗಿ ಸರ್ಕಾರದ ಅಂಗಗಳು ಅಧಿಕಾರ ಪ್ರತ್ಯೇಕತೆಯನ್ನು ಪಾಲಿಸುವುದು ಸಂವಿಧಾನಾತ್ಮಕತೆ ಎನಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ವ್ಯಕ್ತಿಗಳ ಹಕ್ಕು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವ ಉದ್ದೇಶಕ್ಕಾಗಿ ಸಂವಿಧಾನಾತ್ಮಕತೆಯು ನಿರಂಕುಶ ಸರ್ಕಾರದ ಬದಲು ನಿಯಂತ್ರಿತ ಸರ್ಕಾರವನ್ನು ಪ್ರತಿಪಾದಿಸುತ್ತದೆ. ಆದ್ದರಿಂದಲೇ ಚಿಂತಕ ಜಿಯೊವಾನಿ ಸರ್ಟೋರಿ 'ರಾಜ್ಯದ ಅನಿಯಂತ್ರಿತ ಅಧಿಕಾರದ ಮೇಲಿನ ಮಿತಿಗಳಲ್ಲಿ ಸಂವಿಧಾನಾತ್ಮಕತೆ ಕಂಡು ಬರುತ್ತದೆ' ಎಂದಿರುವರು.



ಒಟ್ಟಾರೆ ಸಂವಿಧಾನದ ಆಶಯದಂತೆ ಅಧಿಕಾರವನ್ನು ಚಲಾಯಿಸುವ ಸೀಮಿತ ಸರ್ಕಾರವುಳ್ಳ ರಾಜಕೀಯ ವ್ಯವಸ್ಥೆಯನ್ನು ಸಂವಿಧಾನಾತ್ಮಕತೆಯು ಸೂಚ್ಯವಾಗಿ ಪ್ರತಿನಿಧಿಸುತ್ತದೆ.

ಸಂವಿಧಾನಾತ್ಮಕತೆಯು ನಿರಂಕುಶ ಅಧಿಕಾರದ ಪರಿಹಾರಕ್ಕಾಗಿ ಉದಯಗೊಂಡ ಪರಿಕಲ್ಪನೆಯಾಗಿದೆ. ಕಾನೂನಿನ ಆಳ್ವಿಕೆಯನ್ನು ಬೆಂಬಲಿಸುವ ಮೂಲಕ ಸರ್ಕಾರದ ನಿರಂಕುಶ ವರ್ತನೆಯನ್ನು ಸಂವಿಧಾನಾತ್ಮಕತೆ ನಿಯಂತ್ರಿಸುವುದಲ್ಲದೇ ಸರ್ಕಾರಗಳಲ್ಲಿ ಜವಾಬ್ದಾರಿತ್ವ ತರುತ್ತದೆ. ಇದರೊಡನೆ ಸರ್ಕಾರದ ಅಧಿಕಾರವು ಒಂದೆಡೆ ಕೇಂದ್ರೀಕರಣಗೊಳ್ಳುವುದನ್ನು ಸಂವಿಧಾನಾತ್ಮಕತೆಯು ವಿರೋಧಿಸುತ್ತದೆ. ಫಲವಾಗಿ ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ತಡೆ ಮತ್ತು ಸಮತೋಲನ ತತ್ವದಂತೆ ಕಾರ್ಯಾಚರಿಸುವುದನ್ನು ಸಂವಿಧಾನಾತ್ಮಕತೆ ಬೆಂಬಲಿಸುತ್ತದೆ. ಸರ್ಕಾರವೊಂದು ಆಳುವವರ ಇಚ್ಛೆಯ ಬದಲು ಸಂವಿಧಾನಿಕ ಇಚ್ಛೆಗೆ ಒಳಪಟ್ಟು ಕಾರ್ಯಾಚರಿಸುವುದನ್ನು ಸಂವಿಧಾನಾತ್ಮಕತೆ ಪ್ರತಿನಿಧಿಸುತ್ತದೆ. ಆದ್ದರಿಂದಲೇ ಡೆವಿಡ್ ಹೆಲ್ಮನ್ 'ಕಾನೂನಿನ ಔನತ್ಯಕ್ಕೊಳಪಟ್ಟಿರುವ ಸೀಮಿತ ಸರ್ಕಾರದ ಪರಿಕಲ್ಪನೆಯೇ ಸಂವಿಧಾನಾತ್ಮಕತೆ' ಎಂದಿರುವರು. ಗಮನಾರ್ಹ ಅಂಶವೇನೆಂದರೆ, ಇಂಗ್ಲೆಂಡಿನ ಖ್ಯಾತ ರಾಜ್ಯಶಾಸ್ತ್ರಜ್ಞ ಜಾನ್ ಲಾಕ್‌ನ ರಾಜಕೀಯ ಚಿಂತನೆಯಲ್ಲಿ ಈ ಸಂವಿಧಾನಾತ್ಮಕತೆಯ ಮೂಲವನ್ನು ಗುರುತಿಸಬಹುದಾಗಿದೆ.

### [B.] ಸಂವಿಧಾನಾತ್ಮಕತೆಯ ತತ್ವಗಳು [Principles of Constitutionalism]:

ಸರ್ಕಾರದ ಮೇಲಿನ ಸಕಾರಾತ್ಮಕ ನಿಯಂತ್ರಣವನ್ನು ಪ್ರತಿಪಾದಿಸುವ ಸಂವಿಧಾನಾತ್ಮಕತೆಯ ಪರಿಕಲ್ಪನೆಯು ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತದೆ. ಕೆಲ ದೇಶಗಳಲ್ಲಿ ತೀವ್ರ ಸ್ವರೂಪದ ಮತ್ತು ಇತರ ಕೆಲ ದೇಶಗಳಲ್ಲಿ ಕಡಿಮೆ ಸ್ವರೂಪದ ಸಂವಿಧಾನಾತ್ಮಕತೆಯ ಪಾಲನೆ ಕಂಡು ಬರುತ್ತದೆ. ಈ ಭಿನ್ನತೆಗೆ ಸಂವಿಧಾನಾತ್ಮಕತೆಯನ್ನು ಕುರಿತಂತೆ ನಿರ್ದಿಷ್ಟ ತತ್ವಗಳಿಲ್ಲದಿರುವುದು ಪ್ರಧಾನ ಕಾರಣ. ಸಾಮಾನ್ಯವಾಗಿ ದೇಶವೊಂದು ಮೈಗೂಡಿಸಿಕೊಂಡಿರುವ ಸಂವಿಧಾನಾತ್ಮಕತೆಯನ್ನು ಈ ಕೆಳಗಿನ ತತ್ವಗಳ ಬೆಳಕಿನಲ್ಲಿ ಗುರುತಿಸಲಾಗುತ್ತದೆ.

#### 1. ಅಧಿಕಾರದ ಪ್ರತ್ಯೇಕತೆ [Separation of Power]:

ಸರ್ಕಾರದ ಮೂರೂ ಅಂಗಗಳು ಪ್ರತ್ಯೇಕ ಅಧಿಕಾರದೊಡನೆ ಸ್ವತಂತ್ರವಾಗಿ ಕಾರ್ಯಾಚರಿಸುವುದೇ ಅಧಿಕಾರದ ಪ್ರತ್ಯೇಕತೆಯಾಗಿದೆ. ಈ ಪರಿಕಲ್ಪನೆಯು ಅರಿಸ್ಟಾಟಲ್‌ನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಆಧುನಿಕ ಯುಗದಲ್ಲಿ ಸೈದ್ಧಾಂತಿಕ ತಳಹದಿ ಗಳಿಸಿತು. ತನ್ನ ಸ್ಪಿರಿಟ್ ಆಫ್ ಲಾಸ್ ಎಂಬ ಕೃತಿಯಲ್ಲಿ ಮಾಂಟೆಸ್ಕ್ಯು ವ್ಯವಸ್ಥಿತವಾಗಿ ಅಧಿಕಾರ ಪ್ರತ್ಯೇಕತಾ ಸಿದ್ಧಾಂತವನ್ನು [Doctrine of the Separation of Power] ಪ್ರತಿಪಾದಿಸಿ

ಅದರ ಪಿತಾಮಹ ಎನಿಸಿಕೊಂಡರು. ಈ ಸಿದ್ಧಾಂತದನ್ವಯ ಸರ್ಕಾರದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಸ್ವತಂತ್ರವಾಗಿ ಪರಸ್ಪರಾವಲಂಬನೆಯಿಲ್ಲದೇ . ಸ್ವತಂತ್ರವಾಗಿ ಕಾರ್ಯಾಚರಿಸುವುದು ಅಧಿಕಾರದ ಪ್ರತ್ಯೇಕತೆಯಾಗಿದೆ. ಈ ತತ್ವವನ್ನು ಪಾಲಿಸುವ ದೇಶದ ಸರ್ಕಾರದ ಮೂರೂ ಅಂಗಗಳು ಪರಸ್ಪರ ತಡೆ ಮತ್ತು ಸಮತೋಲನ ವ್ಯವಸ್ಥೆಗೊಳಪಟ್ಟು ಸ್ವತಂತ್ರವಾಗಿ ಕಾರ್ಯಾಚರಿಸುವುದರಿಂದ ಕಾನೂನಿನ ಶ್ರೇಷ್ಠತೆ ಕಂಡು ಬರುತ್ತದೆ. ಜೊತೆಗೆ ಸರ್ಕಾರದ ಯಾವುದೇ ಒಂದು ಅಂಗ ಅಧಿಕಾರದ ಏಕಸ್ವಾಮ್ಯ ಹೊಂದದಂತೆ ನಿಯಂತ್ರಿಸಬಹುದಾಗಿದ್ದು ಸಂವಿಧಾನಾತ್ಮಕತೆ ಸಕ್ರಿಯವಾಗಿರುತ್ತದೆ. ಅಮೇರಿಕಾದ ಸಂವಿಧಾನದಲ್ಲಿ ಜಗತ್ತಿನಲ್ಲಿಯೇ ಮೊಟ್ಟ ಮೊದಲು ಈ ಅಧಿಕಾರದ ಪ್ರತ್ಯೇಕತೆಯ ತತ್ವವನ್ನು ಅನುಷ್ಠಾನಗೊಳಿಸಲಾಗಿದೆ.

ಅಧಿಕಾರ ಪ್ರತ್ಯೇಕತಾ ತತ್ವವನ್ನು. ಅಧ್ಯಕ್ಷೀಯ ಮಾದರಿ ಸರ್ಕಾರವನ್ನುಳ್ಳ ದೇಶಗಳಲ್ಲಿ ವ್ಯಾಪಕವಾಗಿ ಗುರುತಿಸಬಹುದಾಗಿದೆ. ಉದಾ: ಅಧ್ಯಕ್ಷೀಯ ಮಾದರಿ ಸರ್ಕಾರವನ್ನು ಹೊಂದಿರುವ ಅಮೇರಿಕಾದಲ್ಲಿ ಶಾಸಕಾಂಗವಾದ ಕಾಂಗ್ರೆಸ್ಸು ಶಾಸನೀಯ ಕಾರ್ಯವನ್ನು, ಅಧ್ಯಕ್ಷ ಕಾರ್ಯಾಂಗೀಯ ಚಟುವಟಿಕೆಗಳನ್ನು ಮತ್ತು ನ್ಯಾಯಿಕ ಪ್ರಕ್ರಿಯೆಗಳನ್ನು ಸರ್ವೋಚ್ಚ ನ್ಯಾಯಾಲಯವು ಸ್ವತಂತ್ರವಾಗಿ ನಿರ್ವಹಿಸುವ ಮೂಲಕ ಸಂವಿಧಾನಾತ್ಮಕತೆ ಜಾರಿಯಲ್ಲಿರುವುದು. ಆದರೆ, ಸಂಸದೀಯ ಮಾದರಿ ಸರ್ಕಾರವಿದ್ದೆಡೆ ಪರಿಪೂರ್ಣವಾಗಿ ಅಧಿಕಾರ ಪ್ರತ್ಯೇಕತೆಯನ್ನು ಪಾಲಿಸಲಾಗುವುದಿಲ್ಲ. ಉದಾ: ಬ್ರಿಟನ್ನಿನಲ್ಲಿ ರಾಜ ಅಥವಾ ರಾಣಿಯು ಕಾರ್ಯಾಂಗ ಮತ್ತು ನ್ಯಾಯಾಂಗಗಳೆರಡರ ಮುಖ್ಯಸ್ಥರಾಗಿರುತ್ತಾರೆ. ಜೊತೆಗೆ ಶಾಸಕಾಂಗದ ಅವಿಭಾಜ್ಯ ಅಂಗವಾಗಿ ಪರಿಗಣಿಸಲ್ಪಡುತ್ತಾರೆ. ಅಂತೆಯೇ ಕ್ಯಾಬಿನೆಟ್‌ನ ಸದಸ್ಯನಾಗಿರುವ ಲಾರ್ಡ್ ಚಾನ್ಸಲರ್‌ನು ಹೌಸ್ ಆಫ್ ಲಾರ್ಡ್ಸ್‌ನ ಅಧ್ಯಕ್ಷ ಮತ್ತು ನ್ಯಾಯಾಂಗದ ಪ್ರಮುಖನಾಗಿರುತ್ತಾನೆ. ಇದರೊಡನೆ ನೈಜ ಕಾರ್ಯಾಂಗದ ಭಾಗವಾಗಿರುವ ಸಚಿವ ಸಂಪುಟದ ಸದಸ್ಯರು ಸರ್ಕಾರದ ಪ್ರಮುಖ ಇಲಾಖೆಗಳನ್ನು ನಿರ್ವಹಿಸುತ್ತಿದ್ದು ವಾಸ್ತವದಲ್ಲಿ ಅವರು ಸಂಸತ್ತಿನ ಕೆಳಮನೆಯಾದ ಹೌಸ್ ಆಫ್ ಕಾಮನ್ಸ್‌ನ ಸದಸ್ಯರಾಗಿರುತ್ತಾರೆ. ಹೀಗೆ ಬ್ರಿಟಿಷ್ ಸಂವಿಧಾನದಡಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ನಿರಂತರವಾಗಿ ಪರಸ್ಪರ ಸಹಕರಿಸಿ ಕಾರ್ಯಾಚರಿಸುತ್ತಿದ್ದು ಅಧಿಕಾರ ಪ್ರತ್ಯೇಕತೆಯ ಸಿದ್ಧಾಂತ ಕಡೆಗಣಿಸಲ್ಪಟ್ಟಿದೆ.

**2. ಜವಾಬ್ದಾರಿತ್ವ ಮತ್ತು ಹೊಣೆಗಾರಿಕೆ [responsibility and accountability]:**

ಸಮಕಾಲೀನ ಜಗತ್ತಿನ ಪ್ರಜಾಸತ್ತಾತ್ಮಕ ಸರ್ಕಾರಗಳು ಪ್ರಾತಿನಿಧಿಕ ಸರ್ಕಾರಗಳಾಗಿವೆ. ನಿಯತಕಾಲಿಕವಾಗಿ ಜರುಗುವ ಚುನಾವಣೆಗಳಲ್ಲಿ ಪ್ರಜೆಗಳಿಂದ ಚುನಾಯಿತಗೊಂಡ ಪ್ರತಿನಿಧಿಗಳು ತಮ್ಮನ್ನು ಚುನಾಯಿಸಿದ ಪ್ರಜೆಗಳ ಪರವಾಗಿ ಕಾರ್ಯಾಚರಿಸುವುದು ಈ ಪ್ರಾತಿನಿಧಿಕ ಸರ್ಕಾರದ ತಿರುಳಾಗಿದೆ. ಸರ್ಕಾರವನ್ನು ನಡೆಸುವ



ಅಥವಾ ಅಧಿಕಾರವನ್ನು ಚಲಾಯಿಸುವ ಪ್ರತಿನಿಧಿಗಳು ತಮ್ಮನ್ನು ಚುನಾಯಿಸಿದ ಪ್ರಜೆಗಳಿಗೆ ಜವಾಬ್ದಾರರಾಗಿ ಕಾರ್ಯಾಚರಿಸಬೇಕೆಂಬುದು ಪ್ರಾತಿನಿಧಿಕ ಸರ್ಕಾರದ ಆದರ್ಶವಾಗಿರುತ್ತದೆ. ಇದರೊಡನೆ ತಾನು ಅನುಸರಿಸುವ ನೀತಿ, ತೆಗೆದುಕೊಳ್ಳುವ ನಿರ್ಧಾರ, ರಚಿಸುವ ಶಾಸನ, ಹಮ್ಮಿಕೊಳ್ಳುವ ಯೋಜನೆಗಳ ವಿಚಾರದಲ್ಲಿ ಸರ್ಕಾರವು ಹೊಣೆಗಾರಿಕೆ ತೋರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸಂಸದೀಯ ಮಾದರಿ ಸರ್ಕಾರದಲ್ಲಿ ಶಾಸಕಾಂಗದಿಂದ ರಚನೆಗೊಳ್ಳುವ ಕಾರ್ಯಾಂಗವು ಶಾಸಕಾಂಗಕ್ಕೆ ಜವಾಬ್ದಾರಿ ತೋರಿದರೆ ಅಧ್ಯಕ್ಷೀಯ ಮಾದರಿ ಸರ್ಕಾರದಲ್ಲಿ ಅಧ್ಯಕ್ಷ ತನ್ನನ್ನು ಚುನಾಯಿಸಿದ ಜನರಿಗೆ ಹೊಣೆಗಾರಿಕೆ ತೋರುತ್ತಾನೆ. ಈ ಜವಾಬ್ದಾರಿ ಹಾಗೂ ಹೊಣೆಗಾರಿಕೆ ತತ್ವದ ಪಾಲನೆಯು ಆಳುವವರು ಅಥವಾ ಸರ್ಕಾರ ನಿರಂಕುಶವಾಗಿ ವರ್ತಿಸದಂತೆ ಮಾಡಿ ಸಂವಿಧಾನಾತ್ಮಕತೆಯನ್ನು ಬಲಗೊಳಿಸುತ್ತದೆ.

ಜವಾಬ್ದಾರಿ ಹಾಗೂ ಹೊಣೆಗಾರಿಕೆ ಫಲವಾಗಿ ಅಧಿವೇಶನಗಳಲ್ಲಿ ಶಾಸಕಾಂಗದ ಸದಸ್ಯರು ಪ್ರಶ್ನೆ, ಉಪ ಪ್ರಶ್ನೆ, ಚರ್ಚೆ ಮತ್ತು ಇತರ ಸಂಸದೀಯ ಸಾಧನಗಳ ಮೂಲಕ ಸರ್ಕಾರವನ್ನು ಅಂದರೆ ಆಡಳಿತಾಧಿಕಾರ ಚಲಾಯಿಸುವ ಕಾರ್ಯಾಂಗವನ್ನು ಸಂಸದೀಯ ಮಾದರಿ ಸರ್ಕಾರದಲ್ಲಿ ನಿಯಂತ್ರಿಸುತ್ತಾರೆ. ಜೊತೆಗೆ ಕಾರ್ಯಾಂಗವು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಶಾಸಕಾಂಗಕ್ಕೆ ಜವಾಬ್ದಾರಿ ತೋರಬೇಕಾಗುತ್ತದೆ. ಅವಿಶ್ವಾಸ ಸೂಚನೆಯ ತೂಗುಗತ್ತಿಯ ಕಾರಣಕ್ಕೆ ಕಾರ್ಯಾಂಗ ಅಂದರೆ ಸರ್ಕಾರವು ಶಾಸಕಾಂಗಕ್ಕೆ ಸಂವಿಧಾನಾತ್ಮಕ ನಿಯಮದಂತೆ ಜವಾಬ್ದಾರಿ ತೋರುತ್ತದೆ. ಹೀಗೆ ಭಾರತದಲ್ಲಿ ಸಂವಿಧಾನಾತ್ಮಕ ಸಂಸದೀಯ ಮಾದರಿ ಸರ್ಕಾರದಡಿ ಕಾರ್ಯಾಂಗವು ತೋರುವ ಜವಾಬ್ದಾರಿಯಲ್ಲಿ ಸಂವಿಧಾನಾತ್ಮಕತೆಯನ್ನು ಗುರುತಿಸಲಾಗುತ್ತದೆ.

**3. ಜನತಾ ಪರಮಾಧಿಕಾರ [Popular Sovereignty]:** ರಾಜರುಗಳ ವಿರುದ್ಧದ ಹೋರಾಟಗಳಲ್ಲಿ ಜನತಾ ಪರಮಾಧಿಕಾರದ ಮೂಲವನ್ನು ಪ್ರಾಚೀನ ಕಾಲದಿಂದಲೇ ಕಾಣಬಹುದಾಗಿದೆ. 16ನೇ ಶತಮಾನದಲ್ಲಿ ಸರ್ವಾಧಿಕಾರಿಗಳನ್ನು ವಿರೋಧಿಸುವ ಪ್ರಕ್ರಿಯೆಯ ಫಲವಾಗಿ ಜನತಾ ಸಾರ್ವಭೌಮಾಧಿಕಾರ ಮಹತ್ವ ಪಡೆದುಕೊಂಡಿತು. ರೂಸೋ ತನ್ನ ಸಾರ್ವತ್ರಿಕ ಇಚ್ಛೆಯ ಪ್ರತಿಪಾದನೆಯೊಡನೆ ಜನತಾ ಸಾರ್ವಭೌಮಾಧಿಕಾರಕ್ಕೆ ಅಧಿಕ ಮಹತ್ವ ಒದಗಿಸಿ ಆ ಪರಿಕಲ್ಪನೆಯ ಪಿತಾಮಹ ಎನಿಸಿಕೊಂಡ. ಮುಂದೆ ಜನತಾ ಸಾರ್ವಭೌಮತ್ವ ಫ್ರೆಂಚ್ ಹಾಗು ಅಮೇರಿಕಾ ಕ್ರಾಂತಿಗೆ ಪ್ರೇರಣೆ ನೀಡಿತು. ಪ್ರಜೆಗಳಿಂದ, ಪ್ರಜೆಗಳಿಗಾಗಿ ಮತ್ತು ಪ್ರಜೆಗಳೇ ಆಳುವ ಪ್ರಜಾಪ್ರಭುತ್ವ ಹರಡಿಕೆಯಿಂದ ಪ್ರಸ್ತುತ ಜನತಾ ಪರಮಾಧಿಕಾರ ಜಗತ್ತಿನ ಎಲ್ಲೆಡೆ ಅಸ್ತಿತ್ವದಲ್ಲಿದೆ.

ಸರ್ವೋಚ್ಚ ಅಧಿಕಾರವು ಜನರ ಕೈಯಲ್ಲಿರುವುದೇ ಜನತಾ ಪರಮಾಧಿಕಾರ. ಪ್ರಾತಿನಿಧಿಕ ಪ್ರಜಾಪ್ರಭುತ್ವ ದೇಶಗಳಲ್ಲಿ ನಿಯತಕಾಲಿಕ ಚುನಾವಣೆಗಳ ಮೂಲಕ ಜನರು

ತಮ್ಮ ಹಿತಾಸಕ್ತಿ ಕಾಪಾಡುವ ಪ್ರತಿನಿಧಿಗಳನ್ನು ಹೊಂದಲು ಅಥವಾ ಬೇಡವಾದ ಪ್ರತಿನಿಧಿಯನ್ನು ಅಧಿಕಾರದಿಂದ ಕಿತ್ತೊಗೆಯಲು ಈ ಪರಮಾಧಿಕಾರವು ಜನರಿಗೆ ಸಹಕಾರಿಯಾಗಿದೆ. ಜನರು ತಮ್ಮನ್ನು ತಾವೇ ಆಳಿಕೊಳ್ಳುವಲ್ಲಿ ಜನತಾ ಪರಮಾಧಿಕಾರವನ್ನು ಗುರುತಿಸಬಹುದಾಗಿದೆ. ಆದ್ದರಿಂದಲೇ ಚಿಂತಕರಾದ ರಿಚಿ 'ಜನರು ಚುನಾವಣೆಗಳ ವೇಳೆ ತಮ್ಮ ಸಾರ್ವಭೌಮಾಧಿಕಾರವನ್ನು ನೇರವಾಗಿ ಚಲಾಯಿಸುತ್ತಾರೆ' ಎಂದಿರುವರು. ಜನತಾ ಪರಮಾಧಿಕಾರವು ನಿರಂಕುಶವಾಗಿ ಜನ ವಿರೋಧಿ ಆಡಳಿತ ನಡೆಸದಂತೆ ಆಳುವ ಸರ್ಕಾರಗಳ ಮೇಲೆ ನಿಯಂತ್ರಣ ಹೇರುವ ಮೂಲಕ ಸಂವಿಧಾನಾತ್ಮಕತೆಯ ಪ್ರಧಾನ ತತ್ವವೆನಿಸಿದೆ.

**4. ಕಾನೂನಿನ ಆಳ್ವಿಕೆ [Rule of Law]:** ಅರಸ ದೇವರ ಪ್ರತಿನಿಧಿ, ಆತನ ಆಜ್ಞೆಗಳು ದೇವರ ಆಜ್ಞೆಗಳು, ಅರಸ ಕಾನೂನಿಗಿಂತ ಉನ್ನತವಾದವ ಎಂಬುದಾಗಿ ಪ್ರತಿಪಾದಿಸುತ್ತಿದ್ದ ರಾಜ್ಯೋತ್ಕೃಷ್ಟಿಯ ದೈವಿಕ ಸಿದ್ಧಾಂತಕ್ಕೆ ಪ್ರತಿಭಟನಾ ರೂಪದಲ್ಲಿ ಕಾನೂನಿನ ಆಳ್ವಿಕೆ ಜನ್ಮತಾಳಿತು. ಬ್ರಿಟಿಷ್ ಸಂವಿಧಾನದ ಭಾಗವಾಗಿ ಉಗಮಗೊಂಡ ಕಾನೂನಿನ ಆಳ್ವಿಕೆಯ ಪರಿಕಲ್ಪನೆಯು ಕಾಲಾಂತರದಲ್ಲಿ ವಿಕಸಿತಗೊಂಡಿದ್ದು ಕಾನೂನಿನ ಶ್ರೇಷ್ಠತೆಯನ್ನು ಪ್ರತಿನಿಧಿಸುತ್ತದೆ. ಯಾವುದೇ ವ್ಯಕ್ತಿ ಕಾನೂನಿಗಿಂತ ಶ್ರೇಷ್ಠನಲ್ಲ ಎಂಬುದು ಕಾನೂನಿನ ಆಳ್ವಿಕೆಯ ತಿರುಳು. ಅರಸನಾಗಲಿ, ನ್ಯಾಯಾಧೀಶನಾಗಲಿ, ಅಧಿಕಾರಶಾಹಿಯಾಗಲಿ ಅಸ್ತಿತ್ವದಲ್ಲಿರುವ ಕಾನೂನುಗಳ ಮಿತಿಗೊಳಪಡುತ್ತಾರೆ ಎಂಬುದನ್ನು ಕಾನೂನಿನ ಆಳ್ವಿಕೆಯು ಪ್ರತಿನಿಧಿಸುತ್ತದೆ. ಕಾಲಾನುಕ್ರಮದಲ್ಲಿ ಕಾನೂನಿನ ಮುಂದೆ ಸಮಾನತೆ, ಕಾನೂನಿನ ಸಮಾನ ಉಪಚಾರ, ನ್ಯಾಯಾಂಗ ಸ್ವಾತಂತ್ರ್ಯ, ಅಧಿಕಾರ ಪ್ರತ್ಯೇಕತೆ ಮುಂತಾದ ತತ್ವಗಳು ಕಾನೂನಿನ ಆಳ್ವಿಕೆಯ ಪರಿಕಲ್ಪನೆಯ ಭಾಗವಾಗಿ ಅದರ ವ್ಯಾಪ್ತಿಯನ್ನು ವಿಸ್ತಾರಗೊಳಿಸಿದವು.

ಆಸಕ್ತಿದಾಯಕ ಅಂಶವೇನೆಂದರೆ ಕಾನೂನಿನ ಆಳ್ವಿಕೆ ಕುರಿತಾದ ಪ್ರತ್ಯೇಕ ಕಾನೂನು ಅಸ್ತಿತ್ವದಲ್ಲಿರದೇ ಸಂವಿಧಾನಿಕ ಕಾನೂನುಗಳು, ನ್ಯಾಯಾಂಗದ ತೀರ್ಪುಗಳು, ಶಾಸಕಾಂಗದ ಸಾಮಾನ್ಯ ಕಾಯಿದೆಗಳು ಮತ್ತು ಅಲಿಖಿತ ಸಾಂಪ್ರದಾಯಿಕ ನಿಯಮಾವಳಿಗಳ ಪಾಲನೆಯಲ್ಲಿ ಕಾನೂನಿನಾಳ್ವಿಕೆ ವ್ಯಕ್ತವಾಗುತ್ತದೆ. ಉದಾ: ಜನರ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ನಿರ್ದಿಷ್ಟ ಕಾನೂನುಗಳಿಲ್ಲದಿದ್ದರೂ ಅವುಗಳನ್ನು ಕಾನೂನಿನ ಆಳ್ವಿಕೆಯ ತತ್ವದಡಿ ಬ್ರಿಟನ್ನಿನಲ್ಲಿ ರಕ್ಷಿಸಲಾಗುತ್ತಿದೆ. ಎ. ವಿ. ಡೈಸಿ ಎಂಬ ಚಿಂತಕ ಕಾನೂನಿನ ಆಳ್ವಿಕೆಯ ಮೂರು ಆಯಾಮದ ಅರ್ಥ ವಿವರಣೆಯನ್ನು ನೀಡಿದ್ದು ಅವುಗಳ ಮನವರಿಕೆಯೊಡನೆ ಕಾನೂನಿನ ಆಳ್ವಿಕೆಯನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಬಹುದಾಗಿದೆ. ಅವುಗಳೆಂದರೆ.

**ಅ. ಕಾನೂನಿನ ಶ್ರೇಷ್ಠತೆ:** ದೇಶದ ಸಾಮಾನ್ಯ ಕಾನೂನನ್ನು ಉಲ್ಲಂಘಿಸದ ಹೊರತು ಮತ್ತು ಸಾಮಾನ್ಯ ನ್ಯಾಯಾಲಯಗಳಿಂದ ವಿಚಾರಣೆಗೊಳಪಡಿಸದ ಹೊರತು ಯಾವುದೇ



ವ್ಯಕ್ತಿಗೆ ಶಿಕ್ಷೆಯನ್ನು ನೀಡುವಂತಿಲ್ಲ ಎನ್ನುವ ಮೂಲಕ ಕಾನೂನಿಗೆ ಮಹತ್ವ ಒದಗಿಸಿ, ಸರ್ಕಾರದ ನಿರಂಕುಶತೆಯನ್ನು ಖಂಡಿಸಿರುವರು.

**ಆ. ಕಾನೂನಿನ ಮುಂದೆ ಸಮಾನತೆ:** ದೇಶದ ಕಾನೂನಿಗಿಂತ ಯಾವುದೇ ವ್ಯಕ್ತಿ ಶ್ರೇಷ್ಠನಾಗಿಲ್ಲದಿರುವುದು.

**ಇ. ಕಾನೂನು ಪ್ರಕ್ರಿಯೆಗಳಿಗೆ ಪ್ರಾಧಾನ್ಯತೆ:** ನ್ಯಾಯಾಲಯಗಳ ಮೂಲಕ ವ್ಯಕ್ತಿಯ ಹಕ್ಕುಗಳನ್ನು ರಕ್ಷಿಸುವುದು.

**5. ನ್ಯಾಯಾಂಗ ಸ್ವಾತಂತ್ರ್ಯ [Judicial independence]:** ನ್ಯಾಯಾಂಗದ ಭಾಗವಾಗಿರುವ ನ್ಯಾಯಾಧೀಶರು ನ್ಯಾಯದಾನ ಮಾಡುವಾಗ ನಿಷ್ಪಕ್ಷಪಾತವಾಗಿ ನಿರ್ಭೀತಿಯಿಂದ ಕಾರ್ಯ ನಿರ್ವಹಿಸುವ ಸ್ಥಿತಿಯೇ ನ್ಯಾಯಾಂಗ ಸ್ವಾತಂತ್ರ್ಯವೆನಿಸಿದೆ. ಈ ಮಾದರಿಯ ನ್ಯಾಯಾಂಗದ ಸ್ವಾತಂತ್ರ್ಯವನ್ನು ಪೋಷಿಸಲು ಆಯಾ ದೇಶದ ಸಂವಿಧಾನಗಳು ಹಲವು ಅವಕಾಶಗಳನ್ನು ನ್ಯಾಯಾಧೀಶರಿಗೆ ಕಲ್ಪಿಸಿರುತ್ತವೆ. ನ್ಯಾಯಾಧೀಶರುಗಳು ಯಾವ ಪ್ರಭಾವಗಳಿಗೊಳಗಾಗದೇ ಸ್ವತಂತ್ರವಾಗಿ ನ್ಯಾಯದಾನ ಮಾಡಲು ಪೂರಕವಾದ ನೇಮಕಾತಿ ವಿಧಾನ, ವೇತನ, ಪದಚ್ಯುತಿ, ವರ್ಗಾವಣೆ, ನಿವೃತ್ತಿ ಮುಂತಾದ ವಿವರಗಳನ್ನು ಸ್ಪಷ್ಟವಾಗಿ ಸಂವಿಧಾನದಲ್ಲಿಯೇ ವಿವರಿಸಲಾಗಿರುತ್ತದೆ. ಮೊಗದೊಂದು ಅರ್ಥದಲ್ಲಿ ಸರ್ಕಾರದ ಉಳಿದೆರಡು ಅಂಗಗಳಾದ ಶಾಸಕಾಂಗ ಅಥವಾ ಕಾರ್ಯಾಂಗಗಳಿಂದ ನ್ಯಾಯಾಂಗವು ಪ್ರತ್ಯೇಕವಾಗಿದ್ದು ತನ್ನ ಸಂವಿಧಾನಿಕ ಅಧಿಕಾರಗಳನ್ನು ಮುಕ್ತವಾಗಿ ಚಲಾಯಿಸುವುದು ನ್ಯಾಯಾಂಗ ಸ್ವಾತಂತ್ರ್ಯವೆನಿಸಿದೆ. ಈ ಬಗೆಯ ಸ್ವತಂತ್ರ ನ್ಯಾಯಾಂಗಕ್ಕೆ ಸಹಕಾರಿಯಾಗುವ ನಿಬಂಧನೆಗಳನ್ನು ಆಯಾ ಸಂವಿಧಾನಗಳೇ ಅಧಿಕಾರ ಪ್ರತ್ಯೇಕತೆಯ ಬೆಳಕಿನಲ್ಲಿ ಸ್ಪಷ್ಟವಾಗಿ ನಮೂದಿಸಿರುತ್ತವೆ.

ನಿಷ್ಪಕ್ಷಪಾತ ಮತ್ತು ನಿರ್ಭೀತ ನ್ಯಾಯದಾನಕ್ಕೆ ನ್ಯಾಯಾಂಗ ಸ್ವಾತಂತ್ರ್ಯವು ಅವಶ್ಯಕ. ಇಂತಹ ನ್ಯಾಯಾಂಗ ಸ್ವಾತಂತ್ರ್ಯವು ಯಶಸ್ವಿಗೊಳ್ಳಲು ನ್ಯಾಯಾಧೀಶರಿಗೆ ನಿಶ್ಚಿತ ಅಧಿಕಾರಾವಧಿ, ಅಧಿಕ ವೇತನ, ಕಠಿಣ ಪದಚ್ಯುತಿ ವಿಧಾನದ ಭರವಸೆ, ಇತರ ಅಂಗಗಳ ಪ್ರಭಾವ ಮುಕ್ತತೆಗಳು ಅತ್ಯಗತ್ಯ. ಆಗ ನ್ಯಾಯಾಂಗವು ಎಷ್ಟೇ ದೊಡ್ಡವರಾದ ವ್ಯಕ್ತಿಗಳಿದ್ದರೂ ಅವರ ವಿರುದ್ಧ ಸಾಮಾನ್ಯ ಪ್ರಜೆಗಳಿಗೆ ನ್ಯಾಯದ ಭರವಸೆಯನ್ನು ಒದಗಿಸುತ್ತದೆ. ಜೊತೆಗೆ ಸಮಾನ ನ್ಯಾಯದ ರಕ್ಷಣೆಯನ್ನು ಪ್ರಜೆಗಳಿಗೆ ಒದಗಿಸುವ ಮೂಲಕ ಸ್ವತಂತ್ರ ನ್ಯಾಯಾಂಗವು ಅವರಲ್ಲಿ ಸಂವಿಧಾನಾತ್ಮಕತೆಯ ಒಲವನ್ನು ಇಮ್ಮಡಿಗೊಳಿಸುತ್ತದೆ. ಈ ಹಿನ್ನೆಲೆಯಲ್ಲಿ ಸ್ವತಂತ್ರ ನ್ಯಾಯಾಂಗವನ್ನು ಸಂವಿಧಾನಾತ್ಮಕತೆಯ ತತ್ವವೆಂದು ಪರಿಗಣಿಸಲಾಗಿದೆ.

**6. ವೈಯಕ್ತಿಕ ಹಕ್ಕುಗಳು [Individual Rights]:** ದೇಶವೊಂದರ ಪ್ರಜೆಗಳ ಸರ್ವತೋಮುಖ ವ್ಯಕ್ತಿತ್ವದ ವಿಕಾಸಕ್ಕೆ ಅಗತ್ಯವಾದ ಅವಕಾಶಗಳೇ ಹಕ್ಕುಗಳು. ವ್ಯಕ್ತಿಯೊಬ್ಬ ನಾಗರಿಕ ಜೀವನ ನಡೆಸಲು ವೈವಿಧ್ಯಮಯ ಹಕ್ಕುಗಳನ್ನು ಹೊಂದಬೇಕಾಗುತ್ತದೆ. ಚಿಂತಕರು

ವ್ಯಕ್ತಿ ಹೊಂದಬಹುದಾದ ಹಕ್ಕುಗಳನ್ನು ಅವುಗಳ ಸ್ವರೂಪವನ್ನು ಆಧರಿಸಿ, ಮಾನವ ಹಕ್ಕು, ಶಾಸನಬದ್ಧ ಹಕ್ಕು, ಮೂಲಭೂತ ಹಕ್ಕು ಎಂಬುದಾಗಿ ವಿಂಗಡಿಸಿರುವರು. ಪ್ರತಿ ದೇಶದ ಸಂವಿಧಾನವು ತನ್ನ ಪ್ರಜೆಗಳು ಹೊಂದಬಹುದಾದ ವೈಯಕ್ತಿಕ ಹಕ್ಕುಗಳನ್ನು ಮೂಲಭೂತ ಹಕ್ಕುಗಳ ರೂಪದಲ್ಲಿ ಒದಗಿಸಿರುತ್ತದೆ. ಹೀಗೆ ಕೊಡಮಾಡಿದ ಹಕ್ಕುಗಳ ಪೈಕಿ ರಾಜಕೀಯ ಹಕ್ಕುಗಳೂ ಸೇರಿರುತ್ತವೆ. ಉದಾ: ಭಾರತದ ಸಂವಿಧಾನವು ಪ್ರಜೆಗಳಿಗೆ ತನ್ನ ಮೂರನೇ ಭಾಗದಲ್ಲಿ ಪ್ರಸ್ತುತ ಆರು ಮೂಲಭೂತ ಹಕ್ಕುಗಳನ್ನು ಒದಗಿಸಿದೆ. ಇದರೊಡನೆ ಆಯಾ ದೇಶದ ಶಾಸಕಾಂಗಗಳು ಸಮಯಾನುಸಾರ ರಚಿಸುವ ಕಾನೂನುಗಳ ಮೂಲಕ ಹಲವು ವೈಯಕ್ತಿಕ ಹಕ್ಕುಗಳನ್ನು ಪ್ರಜೆಗಳು ಪಡೆದುಕೊಳ್ಳುತ್ತಾರೆ.

ಪ್ರಜೆಗಳು ಸಂವಿಧಾನ ಅಥವಾ ಶಾಸನಗಳ ಮೂಲಕ ಪಡೆದಿರುವ ವೈಯಕ್ತಿಕ ಹಕ್ಕುಗಳನ್ನು ಸರ್ಕಾರವು ಉಲ್ಲಂಘಿಸಲು ಅವಕಾಶವಿರುವುದಿಲ್ಲ. ಒಂದೊಮ್ಮೆ ಸರ್ಕಾರದ ನೀತಿ ಅಥವಾ ನಿರ್ಧಾರಗಳು ಪ್ರಜೆಗಳ ವೈಯಕ್ತಿಕ ಹಕ್ಕುಗಳನ್ನು ಉಲ್ಲಂಘಿಸಿದರೆ ಪ್ರಜೆಗಳು ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡುವ ಮೂಲಕ ರಿಟ್‌ಗಳ ನೆರವಿನಿಂದ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಅವಕಾಶವನ್ನು ಪಡೆದಿರುತ್ತಾರೆ. ಹೀಗೆ ವೈಯಕ್ತಿಕ ಹಕ್ಕುಗಳ ವಿಚಾರದಲ್ಲಿ ಸರ್ಕಾರದ ನಿರಂಕುಶತೆಯನ್ನು ತಡೆಯುವ ನ್ಯಾಯಾಂಗವು ಸಂವಿಧಾನಾತ್ಮಕತೆಯನ್ನು ಎತ್ತಿ ಹಿಡಿಯುತ್ತದೆ. ಇದರೊಡನೆ ಪ್ರಜೆಗಳು ವೈಯಕ್ತಿಕ ಹಕ್ಕುಗಳ ನೆರವಿನಿಂದ ಅಂದರೆ ಟೀಕಿಸುವ, ಪ್ರತಿಭಟಿಸುವ, ಮಾಹಿತಿ ಹೊಂದುವ ಇತ್ಯಾದಿ ಹಕ್ಕುಗಳ ಮೂಲಕ ಸರ್ಕಾರವನ್ನು ನಿಯಂತ್ರಿಸಲು ಮುಂದಾಗುತ್ತಾರೆ. ಈ ಹಿನ್ನೆಲೆಯಲ್ಲಿ ವೈಯಕ್ತಿಕ ಹಕ್ಕುಗಳು ಸಂವಿಧಾನಾತ್ಮಕತೆಯ ಪ್ರಮುಖ ತತ್ವವೆನಿಸಿದೆ.

### 7. ಸೈನಿಕ ವ್ಯವಹಾರಗಳ ಮೇಲೆ ನಾಗರಿಕ ನಿಯಂತ್ರಣ [civilian control over military Affairs]:

ದೇಶವೊಂದರ ಸೈನಿಕ ವ್ಯವಹಾರಗಳನ್ನು ಕುರಿತಂತೆ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ವೃತ್ತಿಪರ ಸೈನಿಕರ ಬದಲಿಗೆ ನಾಗರಿಕ ಸರ್ಕಾರದ ಮುಖ್ಯಸ್ಥ ಹೊಂದಿರುವುದನ್ನು ಸೈನಿಕ ವ್ಯವಹಾರಗಳ ನಾಗರಿಕ ನಿಯಂತ್ರಣ ಎನ್ನಲಾಗುತ್ತದೆ. ಈ ತತ್ವವು ಉದಾರವಾದಿ ಪ್ರಜಾಪ್ರಭುತ್ವ ದೇಶಗಳ ಸಾಮಾನ್ಯ ಲಕ್ಷಣವಾಗಿರುತ್ತದೆ. ದೇಶದ ನಾಗರಿಕರನ್ನು ರಕ್ಷಿಸಲು ಕಾರ್ಯಾಚರಿಸುವ ಸೈನ್ಯದ ಚಟುವಟಿಕೆಗಳು ನಾಗರಿಕ ಸರ್ಕಾರದ ನಿಯಂತ್ರಣದಲ್ಲಿರಬೇಕೆಂಬುದು ಈ ತತ್ವದ ತಿರುಳು. ಉದಾ: ಭಾರತದಲ್ಲಿ ಯುದ್ಧ ಘೋಷಣೆಯ ಅಧಿಕಾರವು ಸೈನಿಕ ಮುಖ್ಯಸ್ಥರಲ್ಲಿರದೇ ನಾಗರಿಕರ ಪ್ರಾತಿನಿಧಿಕ ಸರ್ಕಾರದ ಮುಖ್ಯಸ್ಥ ರಾಷ್ಟ್ರಪತಿಗೆ ಸೇರಿರುವುದು. ಒಂದೊಮ್ಮೆ ಸೈನಿಕ ವ್ಯವಹಾರಗಳನ್ನು ನಾಗರಿಕ ಸರ್ಕಾರ ನಿಯಂತ್ರಿಸದೇ ಹೋದರೆ ಸೈನ್ಯವು ಬಲ ಪ್ರಯೋಗಕ್ಕೆ ಮುಂದಾಗಬಹುದಾಗಿದೆ. ಜೊತೆಗೆ ಅನಾವಶ್ಯಕ ಸೈನಿಕ ಕಾರ್ಯಾಚರಣೆಗಳು ಸಂಭವಿಸಿ ನಾಗರಿಕರ ಹಿತಕ್ಕೆ



ಧಕ್ಕೆಯುಂಟಾಗಬಹುದಾಗಿದೆ. ಮುಂದುವರಿದು, ಸಶಸ್ತ್ರ ದಂಗೆಗಳಾಗಿ ಸೈನಿಕ ಮುಖಂಡರು ನಾಗರಿಕ ಸರ್ಕಾರವನ್ನು ನಿಯಂತ್ರಿಸುವ ಸಾಧ್ಯತೆ ಅಧಿಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸೈನಿಕ ವ್ಯವಹಾರಗಳ ನಾಗರಿಕ ನಿಯಂತ್ರಣ ತತ್ವವು ಸಂವಿಧಾನಾತ್ಮಕತೆಯ ಪ್ರಧಾನ ತತ್ವವಾಗಿ ಪರಿಗಣಿಸಲ್ಪಟ್ಟಿದೆ.

ಸೈನಿಕ ವ್ಯವಹಾರಗಳ ನಾಗರಿಕ ನಿಯಂತ್ರಣದ ಅನುಪಸ್ಥಿತಿಯಲ್ಲಿ ಸೈನಿಕ ಮುಖಂಡರು ರಾಜಕೀಯ ಮುಖಂಡರನ್ನು ನಿಯಂತ್ರಿಸಬಹುದಾಗಿದೆ. ಇದರಿಂದ ಸಂವಿಧಾನಾತ್ಮಕ ಮೌಲ್ಯ, ನಂಬಿಕೆ ಅಥವಾ ಆಶಯಗಳು ಕಡೆಗಣಿಸಲ್ಪಡುತ್ತವೆ. ಸೈನಿಕ ಮುಖಂಡರೇ ನಾಗರಿಕ ಸರ್ಕಾರಗಳನ್ನು ನಿಯಂತ್ರಿಸಲು ಸಾಧ್ಯವಾದರೆ ಅದನ್ನು ಸೈನಿಕ ಸರ್ವಾಧಿಕಾರ ಎನ್ನಲಾಗುತ್ತದೆ. ಉದಾ: ಭಾರತದ ನೆರೆಯ ಪಾಕಿಸ್ತಾನವು ಇಂತಹ ಹಲವು ಪ್ರಕರಣಗಳಿಗೆ ಸಾಕ್ಷಿಯಾಗಿದೆ. ನಾಗರಿಕ ಸರ್ಕಾರಕ್ಕಿಂತ ಸೈನಿಕ ಮುಖಂಡರು ಮೇಲುಗೈ ಪಡೆದರೆ ಸಂವಿಧಾನಾತ್ಮಕತೆ ಧಕ್ಕೆಗೊಳಗಾಗುತ್ತದೆ. ಈ ಹಿನ್ನೆಲೆಯಲ್ಲಿ ಸಂವಿಧಾನಾತ್ಮಕತೆಯ ಬಲವರ್ಧನೆಗೆ ಪಾಲಿಸಬಹುದಾದ ತತ್ವವಾಗಿ ಸೈನಿಕ ವ್ಯವಹಾರಗಳ ನಾಗರಿಕ ನಿಯಂತ್ರಣ ಮಹತ್ವ ಪಡೆದಿದೆ,

## [C.] ಸಂವಿಧಾನಾತ್ಮಕತೆಯ ನಿರೀಕ್ಷೆಗಳು [Prospect of Constitutionalism]:

ಸಂವಿಧಾನಾತ್ಮಕತೆಯು ಪರಿವರ್ತನಾಶೀಲ ಪರಿಕಲ್ಪನೆಯಾಗಿದೆ. ಸಂವಿಧಾನಾತ್ಮಕತೆಯ ಆರಂಭಿಕ ಮೂಲಾಂಶಗಳು ಕಾಲಾಂತರದಲ್ಲಿ ಬದಲಾವಣೆಗೊಳಗಾಗಿವೆ. ಕಳೆದ ಶತಮಾನಕ್ಕೆ ಹೋಲಿಸಿದರೆ ಸಮಕಾಲೀನ ಶತಮಾನದ ಸಂವಿಧಾನಾತ್ಮಕತೆಯ ನಿರೀಕ್ಷೆಗಳು ಸಾಕಷ್ಟು ಪರಿವರ್ತನೆಗೊಂಡಿವೆ. ಈ ಕೆಳಗಿನ ಬೆಳವಣಿಗೆಗಳನ್ನು ಪ್ರಸ್ತುತ ಸಂವಿಧಾನಾತ್ಮಕತೆಯಿಂದ ನಿರೀಕ್ಷಿಸಲಾಗುತ್ತಿದೆ.

**1. ಕಾನೂನಿನ ಆಳ್ವಿಕೆಯ ಪರಿಣಾಮಕಾರಿ ಪಾಲನೆ:** ಅಸ್ತಿತ್ವದಲ್ಲಿರುವ ಕಾನೂನಿಗಿಂತ ಕೆಲವರು ತಮ್ಮನ್ನು ಉನ್ನತವೆಂದು ಭಾವಿಸುವ ಪರಿಪಾಠವಿದೆ. ಈ ಬೆಳವಣಿಗೆ ನಿರಂಕುಶ ರಾಜಕೀಯ ವ್ಯವಸ್ಥೆಯಲ್ಲಿ ಮಾತ್ರವಲ್ಲದೇ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯಲ್ಲಿಯೂ ಹಾಸುಹೊಕ್ಕಾಗಿದೆ. ಸಂವಿಧಾನಾತ್ಮಕತೆಯು ತನ್ನ ತತ್ವವಾದ ಕಾನೂನಿನ ಆಳ್ವಿಕೆಯ ಕಟ್ಟುನಿಟ್ಟಿನ ಜಾರಿಯ ಮೂಲಕ ಪ್ರಸ್ತಾಪಿತ ವಿದ್ಯಮಾನವನ್ನು ನಿರ್ಮೂಲನೆಗೊಳಿಸಬಹುದೆಂಬ ನಿರೀಕ್ಷೆಯಲ್ಲಿ ಮನುಕುಲವಿದೆ.

**2. ನಿರಂಕುಶ ಸರ್ಕಾರದ ಸಮರ್ಪಕ ನಿಯಂತ್ರಣ:** ಸರ್ಕಾರದ ಅಂಗಗಳು ಅಧಿಕಾರ ಪ್ರತ್ಯೇಕತೆಯ ತತ್ವದಂತೆ ಸ್ವತಂತ್ರವಾಗಿ ಸಂವಿಧಾನಿಕ ನಿಯಮಗಳಂತೆ ಕಾರ್ಯಾಚರಿಸಬೇಕು. ಆದರೆ, ಉಳಿದ ಅಂಗಗಳನ್ನು ನಿರ್ಲಕ್ಷಿಸಿ ಪ್ರಬಲಗೊಳ್ಳಲು ಸಹಜವಾಗಿ ಸರ್ಕಾರದ ಪ್ರತಿಯೊಂದೂ ಅಂಗ ಪ್ರಯತ್ನಿಸುತ್ತಿರುತ್ತದೆ. ಇದರೊಡನೆ ಕಾನೂನಿನ ಮಿತಿಗಳನ್ನು

ಬದಿಗಿಟ್ಟು ಸರ್ಕಾರ ನಿರಂಕುಶ ನಿರ್ಧಾರಗಳ ಮೂಲಕ ಅವ್ಯಾಹತವಾಗಿ ವ್ಯಕ್ತಿಗಳ ಹಕ್ಕುಗಳನ್ನು ಉಲ್ಲಂಘಿಸಲು ಪ್ರಯತ್ನಿಸುತ್ತವೆ. ಈ ಬೆಳವಣಿಗೆಗಳನ್ನು ಹೋಗಲಾಡಿಸಲು ಸಂವಿಧಾನಾತ್ಮಕತೆ ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕೆಂಬ ನಿರೀಕ್ಷೆಯಲ್ಲಿ ವಿವಿಧ ದೇಶಗಳ ಪ್ರಜೆಗಳು ಬದುಕುತ್ತಿದ್ದಾರೆ.

3. **ತಡೆ ಮತ್ತು ಸಮತೋಲನದ ಅನುಷ್ಠಾನ:** ಸರ್ಕಾರದ ಒಂದು ಅಂಗದ ಅಧಿಕಾರವು ಮತ್ತೊಂದು ಅಂಗದ ಅಧಿಕಾರದ ದುರುಪಯೋಗವನ್ನು ತಡೆಯಲು ಅವಕಾಶವಿದ್ದು ತನ್ಮೂಲಕ ಮೂರೂ ಅಂಗಗಳು ಸಮತೋಲಿತ ಅಧಿಕಾರವನ್ನು ಚಲಾಯಿಸಲು ನೆರವಾಗುವುದೇ ತಡೆ ಮತ್ತು ಸಮತೋಲನ ತತ್ವವಾಗಿದೆ. ಉದಾ: ಅಮೇರಿಕಾದಲ್ಲಿ ಶಾಸಕಾಂಗವಾದ ಕಾಂಗ್ರೆಸ್ಸು ರಾಷ್ಟ್ರ ವಿರೋಧಿ ಕಾನೂನುಗಳನ್ನು ರಚಿಸಿದರೆ ಕಾರ್ಯಾಂಗದ ಅಧ್ಯಕ್ಷ ತನ್ನ ವೀಟೋ ಅಧಿಕಾರವನ್ನು ಬಳಸಿ ಅದರ ಅನುಷ್ಠಾನವನ್ನು ತಡೆಯಬಹುದಾಗಿದೆ. ಅಂತೆಯೇ ಜನ ವಿರೋಧಿ ನೀತಿಗಳನ್ನು ಕೈಗೊಳ್ಳುವ ಅಧ್ಯಕ್ಷನ ಕ್ರಮವನ್ನು ಆಯವ್ಯಯಕ್ಕೆ ಅಂಗೀಕಾರ ನೀಡದೇ ತಡೆಯುವ ಮತ್ತು ಅಧ್ಯಕ್ಷನನ್ನು ಪದಚ್ಯುತಗೊಳಿಸುವ ಅಧಿಕಾರದ ಮೂಲಕ ಕಾಂಗ್ರೆಸ್ಸು ಅಧ್ಯಕ್ಷನನ್ನು ನಿಯಂತ್ರಿಸುವುದು. ಮುಂದುವರಿದು ನ್ಯಾಯಾಂಗವು ಸಂವಿಧಾನ ವಿರೋಧಿ ಕಾಂಗ್ರೆಸ್ಸಿನ ಶಾಸನ ಮತ್ತು ಅಧ್ಯಕ್ಷನ ಆದೇಶಗಳನ್ನು ಪರಿಶೀಲನೆಗೊಳಪಡಿಸಿ ರದ್ದುಗೊಳಿಸುವ ಅಧಿಕಾರವನ್ನು ಚಲಾಯಿಸಿ ಶಾಸಕಾಂಗ ಮತ್ತು ಕಾರ್ಯಾಂಗವನ್ನು ನಿಯಂತ್ರಿಸಲು ಅವಕಾಶವನ್ನು ಪಡೆದಿದೆ . ಹೀಗೆ ಪ್ರತ್ಯೇಕತೆಯ ನಡುವೆಯೂ ಸರ್ಕಾರದ ಮೂರೂ ಅಂಗಗಳು ಪರಸ್ಪರ ನಿಯಂತ್ರಣಕ್ಕೊಳಪಟ್ಟು ಸಮಾನ ಸಂವಿಧಾನದತ್ತ ಅಧಿಕಾರಗಳನ್ನು ಚಲಾಯಿಸುವ ವಾತಾವರಣವನ್ನು ಸೃಷ್ಟಿಸುವುದು ಸಂವಿಧಾನಾತ್ಮಕತೆಯ ಜವಾಬ್ದಾರಿಯಾಗಿದೆ.

4. **ಮೂಲಭೂತ ಹಕ್ಕುಗಳ ಸಂರಕ್ಷಣೆ:** ಸಂವಿಧಾನವು ತನ್ನ ಪ್ರಜೆಗಳಿಗೆ ಅಗತ್ಯವಾದ ಮೂಲಭೂತ ಹಕ್ಕುಗಳನ್ನು ಒದಗಿಸಿರುತ್ತದೆ. ಪ್ರಜೆಗಳ ನಾಗರಿಕ ಜೀವನಕ್ಕೆ ಪೂರಕವಾದ ವೈಯಕ್ತಿಕ, ಆಸ್ತಿಯ ಮತ್ತು ಸ್ವಾತಂತ್ರ್ಯದ ಹಕ್ಕುಗಳೊಡನೆ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ ಹಕ್ಕುಗಳನ್ನು ಕಲ್ಪಿಸಿರುತ್ತದೆ. ನ್ಯಾಯಾಂಗದ ರಕ್ಷಣೆಯುಳ್ಳ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಸಂವಿಧಾನ ತಿದ್ದುಪಡಿಯ ಹೊರತು ಬೇರ್ಯಾವ ವಿಧಾನದ ಮೂಲಕ ರದ್ದುಗೊಳಿಸಲು ಅವಕಾಶವಿರುವುದಿಲ್ಲ. ಜೊತೆಗೆ ಸರ್ಕಾರ ಹಕ್ಕುಗಳ ಉಲ್ಲಂಘನೆಗೆ ಮುಂದಾದರೆ ನ್ಯಾಯಾಂಗವು ಅವುಗಳ ರಕ್ಷಣೆಗೆ ಧಾವಿಸಬೇಕು. ಹೀಗೆ ಮೂಲಭೂತ ಹಕ್ಕುಗಳ ಸಂರಕ್ಷಣೆಯನ್ನು ಕಾಪಾಡುವಲ್ಲಿ ಸಂವಿಧಾನಾತ್ಮಕತೆಯ ನಿರೀಕ್ಷೆ ಇಮ್ಮಡಿಗೊಂಡಿದೆ.

5. **ಹೊಣೆಗಾರಿಕೆಯ ಹೆಚ್ಚಳ:** ಅಧಿಕಾರ ಚಲಾಯಿಸುವ ಸರ್ಕಾರಗಳು ಮತ್ತು ಅಧಿಕಾರಶಾಹಿ ವರ್ಗ ಪ್ರಜೆಗಳಿಗೆ ಉತ್ತರದಾಯಿಯಾಗಿರಬೇಕೆಂಬುದು ಸಂವಿಧಾನಾತ್ಮಕತೆಯ ಆದರ್ಶ. ಈ ನಿಟ್ಟಿನಲ್ಲಿ ಪ್ರಜೆಗಳಿಗೆ ಆಡಳಿತಗಾರರು ಪಾರದರ್ಶಕ



ಮತ್ತು ಭ್ರಷ್ಟಾಚಾರ ರಹಿತ ಆಡಳಿತದ ಭರವಸೆಯನ್ನೊದಗಿಸಲು ಸಂವಿಧಾನಾತ್ಮಕತೆ ಪ್ರಯತ್ನಿಸುವ ನಿರೀಕ್ಷೆಯನ್ನು ಹೊಂದಲಾಗಿದೆ.

6. **ಆಡಳಿತಾತ್ಮಕ ಸ್ಥಿರತೆ:** ಸಂವಿಧಾನಾತ್ಮಕತೆಯು ಆಳುವವರಿಗಿಂತ ಅಸ್ತಿತ್ವದಲ್ಲಿರುವ ಕಾನೂನುಗಳ ಪಾಲನೆಯನ್ನು ಬೆಂಬಲಿಸುತ್ತದೆ. ಹೀಗಾಗಿ ಆಳುವವರು ಬದಲಾದರೂ ಆಡಳಿತಾತ್ಮಕ ಸ್ಥಿರತೆ ಮುಂದುವರಿಯಲು ಸಂವಿಧಾನಾತ್ಮಕತೆಯಿಂದ ಸಾಧ್ಯವಾಗುತ್ತದೆ.

7. **ನ್ಯಾಯಾಂಗದ ಸ್ವಾತಂತ್ರ್ಯ:** ಸಂವಿಧಾನಾತ್ಮಕತೆಯು ನ್ಯಾಯಾಂಗದ ಸ್ವಾತಂತ್ರ್ಯವನ್ನು ಬೆಂಬಲಿಸುತ್ತದೆ. ಇದರಿಂದ ನಿಷ್ಪಕ್ಷಪಾತ ಹಾಗೂ ನಿರ್ಭೀತ ನ್ಯಾಯದಾನ ಜರುಗಿ ಸೂಕ್ತ ತೀರ್ಪುಗಳು ಹೊರಬೀಳುತ್ತವೆ. ಜೊತೆಗೆ ನಾಗರಿಕರ ಹಕ್ಕುಗಳನ್ನು ರಕ್ಷಿಸಲು ಸಾಧ್ಯವಾಗುತ್ತದೆ.

8. **ಅಂತರರಾಷ್ಟ್ರೀಯ ಘನತೆ:** ಸಂವಿಧಾನಾತ್ಮಕತೆ ಸಮರ್ಪಕವಾಗಿ ಜಾರಿಗೊಂಡಿರುವ ದೇಶವು ಜಾಗತಿಕ ಸಮುದಾಯದಲ್ಲಿ ಜನಪ್ರಿಯಗೊಳ್ಳುತ್ತದೆ. ಜೊತೆಗೆ ಬಂಡವಾಳ ಹೂಡಿಕೆ, ಪ್ರವಾಸೋದ್ಯಮ, ವ್ಯಾಪಾರ ಸಂಬಂಧಗಳು ಬಲಗೊಂಡು ದೇಶವೊಂದು ಪ್ರಗತಿ ಹೊಂದಲು ಸಾಧ್ಯವಾಗುತ್ತದೆ. ಇದರೊಡನೆ ವಿದೇಶಿ ರಾಷ್ಟ್ರಗಳೊಡನೆ ಸುಮಧುರ ಸಂಬಂಧ ವೃದ್ಧಿಗೊಳ್ಳುತ್ತದೆ.

ಈ ಮೇಲೆ ಪ್ರಸ್ತಾಪಿಸಲಾದ ಅಂಶಗಳಲ್ಲದೇ ಪ್ರಜಾಸತ್ತಾತ್ಮಕ ಆಡಳಿತದ ಬಲವರ್ಧನೆ, ಸವಾಲುಗಳ ಸಮರ್ಪಕ ನಿರ್ವಹಣೆ, ಸಾಮಾಜಿಕ ಸಾಮರಸ್ಯದ ಸಾಧನೆ ಮುಂತಾದ ವಿಚಾರಗಳಲ್ಲಿಯೂ ಸಂವಿಧಾನಾತ್ಮಕತೆಯು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಇದರೊಡನೆ ಪ್ರಸ್ತಾಪಿತ ವಿವಿಧ ನಿರೀಕ್ಷೆಗಳ ಬೆಳಕಿನಲ್ಲಿ ನಾವು ಸಂವಿಧಾನಾತ್ಮಕತೆಯ ಅಗತ್ಯ, ಮಹತ್ವ ಅಥವಾ ಪ್ರಸ್ತುತತೆಯನ್ನು ಸ್ಪಷ್ಟಪಡಿಸಿಕೊಳ್ಳಲು ಸಾಧ್ಯವೆಂದರೆ ತಪ್ಪಾಗಲಾರದು.

## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ಸಂವಿಧಾನಾತ್ಮಕತೆ ಎಂದರೇನು?
2. ಸಂವಿಧಾನಾತ್ಮಕತೆಯ ಬಲವರ್ಧನೆಗೆ ಕಾರಣವಾದ ಅಂಶಗಳಾವುವು?
3. ಅಧಿಕಾರ ಪ್ರತ್ಯೇಕತೆಯ ಅರ್ಥವನ್ನು ಬರೆಯಿರಿ.
4. ಜನತಾ ಪರಮಾಧಿಕಾರ ಎಂದರೇನು?
5. ಎ. ವಿ. ಡೈಸಿ ಪ್ರತಿಪಾದಿಸಿರುವ ಕಾನೂನಿನ ಆಳ್ವಿಕೆಯ ತತ್ವಗಳನ್ನು ಬರೆಯಿರಿ.
6. ನ್ಯಾಯಾಂಗ ಸ್ವಾತಂತ್ರ್ಯಕ್ಕೆ ಅಗತ್ಯವಾದ ಕ್ರಮಗಳಾವುವು?

7. ಸೈನಿಕ ವ್ಯವಹಾರಗಳ ನಾಗರಿಕ ನಿಯಂತ್ರಣ ಏಕೆ ಅವಶ್ಯಕ?
8. ತಡೆ ಮತ್ತು ಸಮತೋಲನ ಎಂದರೇನು?
9. ಅಂತರ್‌ರಾಷ್ಟ್ರೀಯ ಘನತೆ ಮತ್ತು ಸಂವಿಧಾನಾತ್ಮಕತೆಗಳ ಸಂಬಂಧವೇನು?
10. ಸಂವಿಧಾನಾತ್ಮಕತೆಯ ಮೂರು ನಿರಿಕ್ಷೆಗಳನ್ನು ಬರೆಯಿರಿ.

**[B.] ಐದು ಅಂಕದ ಪ್ರಶ್ನೆಗಳು:**

1. ಕಾನೂನಿನ ಆಳ್ವಿಕೆ ಕುರಿತು ಟಿಪ್ಪಣಿ ಬರೆಯಿರಿ.
2. ನ್ಯಾಯಾಂಗ ಸ್ವಾತಂತ್ರ್ಯ ಕುರಿತು ಟಿಪ್ಪಣಿ ಬರೆಯಿರಿ.
3. ಸಂವಿಧಾನಾತ್ಮಕತೆ ಎಂದರೇನು? ಅದರ ತತ್ವಗಳನ್ನು ಪಟ್ಟಿ ಮಾಡಿರಿ.
4. ಜನತಾ ಪರಮಾಧಿಕಾರ ಕುರಿತು ಟಿಪ್ಪಣಿ ಬರೆಯಿರಿ.
5. ಸಂವಿಧಾನಾತ್ಮಕತೆಯ ನಿರೀಕ್ಷೆಗಳನ್ನು ಚರ್ಚಿಸಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ಸಂವಿಧಾನಾತ್ಮಕತೆ ಎಂದರೇನು? ಅದರ ತತ್ವಗಳನ್ನು ವಿವರಿಸಿರಿ.



**ಅಧ್ಯಾಯ 6:**

# ರಾಜಕೀಯ ಪಕ್ಷಗಳು ಮತ್ತು ಒತ್ತಡ ಗುಂಪುಗಳು

## [Political Party and Pressure Groups].

**ಪ್ರಸ್ತಾವನೆ [Introduction]:** ಜಗತ್ತಿನಲ್ಲಿ ಇಂದು ಪ್ರಜಾಪ್ರಭುತ್ವವು ಜನಪ್ರಿಯವಾದ ರಾಜಕೀಯ ವ್ಯವಸ್ಥೆಯಾಗಿದೆ. ಸಾಮಾನ್ಯವಾಗಿ ಪ್ರತಿಯೊಂದು ಸಮಕಾಲೀನ ದೇಶವು ಪ್ರಾತಿನಿಧಿಕ ಪ್ರಜಾಪ್ರಭುತ್ವವನ್ನು ಅನುಸರಿಸುತ್ತಿವೆ. ಪ್ರಾತಿನಿಧಿಕ ಪ್ರಜಾಪ್ರಭುತ್ವದ ಯಶಸ್ಸಿಗೆ ರಾಜಕೀಯ ಪಕ್ಷಗಳ ಕಾರ್ಯಾಚರಣೆ ಅನಿವಾರ್ಯ. ಹೀಗಾಗಿ ಪ್ರಜಾಪ್ರಭುತ್ವ ಹಾಗೂ ರಾಜಕೀಯ ಪಕ್ಷಗಳು ಒಂದೇ ನಾಣ್ಯದ ಎರಡು ಮುಖಗಳೆಂದು ಪರಿಗಣಿಸಲ್ಪಟ್ಟಿವೆ. ಆದ್ದರಿಂದಲೇ ಬೆಗ್ಹಾಟ್ ಎಂಬ ಚಿಂತಕ ಪಕ್ಷ ಸರ್ಕಾರವು ಪ್ರಾತಿನಿಧಿಕ ಸರ್ಕಾರದ ಪ್ರಧಾನ ತತ್ವ ಎಂದಿರುವರು. ಪ್ರಜಾಪ್ರಭುತ್ವದಲ್ಲಿ ಸರ್ಕಾರ ಹಾಗೂ ಪ್ರಜೆಗಳ ನಡುವೆ ರಾಜಕೀಯ ಪಕ್ಷಗಳು ಸಂಬಂಧ ಕಲ್ಪಿಸುತ್ತವೆ. ಆಡಳಿತ ಅಥವಾ ವಿರೋಧ ಪಕ್ಷವಾಗಿ ಜನಹಿತ ರಕ್ಷಿಸಲು ರಾಜಕೀಯ ಪಕ್ಷಗಳು ಸಹಕಾರಿಯಾಗುತ್ತವೆ. ಈ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳನ್ನು ಪ್ರಜಾಪ್ರಭುತ್ವದ ಬೆನ್ನೆಲುಬು ಎಂಬುದಾಗಿ ಪರಿಗಣಿಸಲಾಗುತ್ತದೆ.

ರಾಜಕೀಯ ಪಕ್ಷಗಳ ಪರಿಕಲ್ಪನೆಯು ಬ್ರಿಟನ್ ದೇಶವು ಜಗತ್ತಿಗೆ ನೀಡಿರುವ ಕೊಡುಗೆ. ಅಂತೆಯೇ ಅಮೇರಿಕಾವು ಜಗತ್ತಿಗೆ ಒತ್ತಡ ಗುಂಪುಗಳ ಕಾಣಿಕೆ ನೀಡಿದೆ. ಜನರು ತಮ್ಮ ವೈವಿಧ್ಯಮಯ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಸಂಘಟಿತರಾಗಿ ಸರ್ಕಾರವನ್ನು ಪ್ರಭಾವಿಸಲು ಮುಂದಾದಾಗ ಒತ್ತಡ ಗುಂಪು ಕಂಡು ಬರುತ್ತದೆ. ಈ ಗುಂಪುಗಳು ರಾಜಕೀಯ ಪಕ್ಷಗಳಿಗಿಂತ ಭಿನ್ನವಾಗಿದ್ದು ಪರೋಕ್ಷವಾಗಿ ಸರ್ಕಾರವನ್ನು ಪ್ರಭಾವಿಸುತ್ತವೆ. ಕೆಲವೊಮ್ಮೆ ಒತ್ತಡ ಗುಂಪುಗಳು ರಾಜಕೀಯ ಪಕ್ಷವಾಗಿ ಮುನ್ನೆಲೆಗೆ ಬರುತ್ತವೆ. ಈ ಹಿನ್ನೆಲೆಯಲ್ಲಿ ಪರಸ್ಪರ ಅಂತರಸಂಬಂಧವುಳ್ಳ ಹಾಗೂ ವ್ಯತ್ಯಾಸಗಳಿಂದ ಕೂಡಿರುವ ರಾಜಕೀಯ ಪಕ್ಷಗಳು ಮತ್ತು ಒತ್ತಡ ಗುಂಪುಗಳನ್ನು ಕುರಿತಂತೆ ಬೆಳಕು ಚೆಲ್ಲಲಾಗಿದೆ.

### [I.] ರಾಜಕೀಯ ಪಕ್ಷಗಳು [Political Parties]:

#### [a.] ರಾಜಕೀಯ ಪಕ್ಷಗಳ ಅರ್ಥ ಮತ್ತು ವ್ಯಾಖ್ಯೆಗಳು

**[Meaning and Definitions of Political Parties]:** ತಮ್ಮ ರಾಜಕೀಯ ಹಿತಾಸಕ್ತಿ ಈಡೇರಿಸಿಕೊಳ್ಳಲು ಸಂಘಟಿತಗೊಂಡ ಜನರ ಗುಂಪಿಗೆ ಸಾಮಾನ್ಯವಾಗಿ

ರಾಜಕೀಯ ಪಕ್ಷ ಎನ್ನಲಾಗುತ್ತದೆ. ರಾಜಕೀಯವಾಗಿ ಏಕಾಭಿಪ್ರಾಯ ಹೊಂದಿದ್ದು ಕೆಲವು ತತ್ವಗಳ ಆಧಾರದ ಮೇಲೆ ಅಧಿಕಾರವನ್ನು ಪಡೆಯಲು ಸಂಘಟಿತಗೊಂಡ ಜನ ಸಮೂಹವನ್ನು ಸರಳಾರ್ಥದಲ್ಲಿ ರಾಜಕೀಯ ಪಕ್ಷ ಎನ್ನಬಹುದು. ವಿಶಾಲಾರ್ಥದಲ್ಲಿ ಸಮಾನ ರಾಜಕೀಯ ಅಭಿಪ್ರಾಯ ಹೊಂದಿ, ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ, ಸರ್ಕಾರವನ್ನು ನಿಯಂತ್ರಿಸಲು ಬಯಸುವ ಸಂಘಟಿತ ಜನ ಸಮೂಹವನ್ನು ರಾಜಕೀಯ ಪಕ್ಷ ಎನ್ನಲಾಗುತ್ತದೆ. ರಾಜಕೀಯ ಪಕ್ಷಗಳು ನಿರ್ದಿಷ್ಟ ತತ್ವಗಳ ಆಧಾರದ ಮೇಲೆ ಸಾರ್ವಜನಿಕ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅಥವಾ ರೂಪಿಸುವ ಮೂಲಕ ಆಳುವ ಸರ್ಕಾರವನ್ನು ನಿಯಂತ್ರಿಸಲು ಪ್ರಯತ್ನಿಸುತ್ತವೆ. ಜೊತೆಗೆ ಮತದಾರರನ್ನು ತಮ್ಮೆಡೆ ಆಕರ್ಷಿಸಲು ನಿರಂತರ ಕ್ರಿಯಾಶೀಲವಾಗಿರುತ್ತವೆ.

ರಾಜಕೀಯ ಪಕ್ಷಗಳನ್ನು ಕುರಿತಂತೆ ಚಿಂತಕರಲ್ಲಿ ಏಕಾಭಿಪ್ರಾಯವಿಲ್ಲ. ಕೆಳಗಿನ ಹಲವು ಚಿಂತಕರ ವಿವರಣೆಗಳು ರಾಜಕೀಯ ಪಕ್ಷಗಳ ಅರ್ಥವನ್ನು ಕುರಿತಂತೆ ಸ್ಪಷ್ಟ ಪರಿಕಲ್ಪನೆ ಹೊಂದಲು ನೆರವಾಗುತ್ತವೆ.

ಆರ್. ಎಂ. ಮೆಕೈವರ್ ಪ್ರಕಾರ ಸರ್ಕಾರ ರಚಿಸುವ ಉದ್ದೇಶ ಹೊಂದಿದ್ದು ಸಂವಿಧಾನಿಕ ಮಾರ್ಗಗಳ ಮೂಲಕ ಕೆಲವು ತತ್ವಗಳನ್ನವಲಂಬಿಸಿ ಸಂಘಟಿತಗೊಂಡ ಜನರ ಸಂಘಟನೆಯೇ ರಾಜಕೀಯ ಪಕ್ಷ.

ಗಿಲ್ಕ್ರಿಸ್ಟ್ ಪ್ರಕಾರ ಸಮಾನ ರಾಜಕೀಯ ಅಭಿಪ್ರಾಯ ಹೊಂದಿದ್ದು ಸರ್ಕಾರವನ್ನು ನಿಯಂತ್ರಿಸಲು ಪ್ರಯತ್ನಿಸುವ ಪ್ರಜೆಗಳ ಸಮೂಹವೇ ರಾಜಕೀಯ ಪಕ್ಷ.

ಎಡ್ಮಂಡ್ ಬರ್ಕ್ ಪ್ರಕಾರ ರಾಷ್ಟ್ರಿಯ ಹಿತಾಸಕ್ತಿ ಸಾಧಿಸಲು ಸರ್ವ ಸಮ್ಮತ ತತ್ವಗಳ ಆಧಾರದ ಮೇಲೆ ಒಂದುಗೂಡಿರುವ ಜನರ ಸಂಘಟನೆಯೇ ರಾಜಕೀಯ ಪಕ್ಷ.

ಡಿಸ್ರೇಲಿ ಪ್ರಕಾರ ನಿಶ್ಚಿತ ತತ್ವಗಳ ಸಾಧನೆಗೆ ಸಂಘಟಿತರಾದ ಜನ ಸಮೂಹವೇ ರಾಜಕೀಯ ಪಕ್ಷ.

ಸ್ಟೀಫನ್ ಲಿಕಾಕ್ ಪ್ರಕಾರ ಪ್ರತಿಯೊಬ್ಬರೂ ರಾಜಕೀಯ ಅಧಿಕಾರದ ಪಾಲು ಹೊಂದಿರುವ ಕೂಡು ಬಂಡವಾಳ ಸಂಸ್ಥೆಯಂತಹ ವ್ಯವಸ್ಥೆಯೇ ರಾಜಕೀಯ ಪಕ್ಷ.

ರಾಜಕೀಯ ಪಕ್ಷ ಕುರಿತು ಚಿಂತಕರು ನೀಡಿರುವ ಮೇಲಿನ ವೈವಿಧ್ಯಮಯ ವ್ಯಾಖ್ಯಾನಗಳನ್ನಾಧರಿಸಿ ಅದರ ಪ್ರಮುಖ ಲಕ್ಷಣಗಳನ್ನು ಕೆಳಗಿನಂತೆ ಗುರುತಿಸಬಹುದಾಗಿದೆ. ಈ ಲಕ್ಷಣಗಳು ರಾಜಕೀಯ ಪಕ್ಷದ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಮನವರಿಕೆ ಮಾಡಿಕೊಳ್ಳಲು ಸಹಕಾರಿ.

1. ಏಕಾಭಿಪ್ರಾಯ.
2. ಸಂಘಟನೆ.
3. ಸರ್ವ ಸಮ್ಮತ ತತ್ವ ಅಥವಾ ನೀತಿ
4. ಆಕರ್ಷಕ ವ್ಯಕ್ತಿಗಳ ನಾಯಕತ್ವ.



5. ಸಂವಿಧಾನಿಕ ಮಾರ್ಗಗಳಲ್ಲಿ ನಂಬಿಕೆ.
6. ರಾಷ್ಟ್ರೀಯ ಅಥವಾ ಪ್ರಾದೇಶಿಕ ಹಿತಾಸಕ್ತಿಗೆ ಬದ್ಧತೆ

## [B.] ರಾಜಕೀಯ ಪಕ್ಷಗಳ ವರ್ಗಿಕರಣ [Classification of Political Parties]:

ಸಾಂಪ್ರದಾಯಿಕವಾಗಿ ದೇಶವೊಂದರ ರಾಜಕೀಯ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ರಾಜಕೀಯ ಪಕ್ಷಗಳ ಸಂಖ್ಯೆಯನ್ನು ಆಧರಿಸಿ ರಾಜಕೀಯ ಪಕ್ಷಗಳ ವ್ಯವಸ್ಥೆಯನ್ನು ಏಕಪಕ್ಷ ಪದ್ಧತಿ, ದ್ವಿ ಪಕ್ಷ ಪದ್ಧತಿ ಹಾಗೂ ಬಹುಪಕ್ಷ ಪದ್ಧತಿ ಎಂದು ವರ್ಗೀಕರಿಸಲಾಗಿತ್ತು. ಆದರೆ, ರಾಜಕೀಯ ಪಕ್ಷಗಳ ಸಂಖ್ಯೆಯ ಬದಲು ಅವುಗಳ ಇತರ ಅಂಶಗಳನ್ನು ವೈಜ್ಞಾನಿಕ ತಳಹದಿಯಲ್ಲಿ ಪರಿಗಣಿಸಿ ಆಧುನಿಕ ಚಿಂತಕರು ಪಕ್ಷಗಳನ್ನು ವರ್ಗೀಕರಿಸಲು ಮುಂದಾಗಿರುವರು. ಈ ನಿಟ್ಟಿನಲ್ಲಿ ಗ್ಯಾಬ್ರಿಯಲ್ ಆಲ್ಮಂಡರು ರಾಜಕೀಯ ಪಕ್ಷಗಳ ಕಾರ್ಯಗಳನ್ನು ಆಧರಿಸಿ ಸರ್ವಾಧಿಕಾರಿ ಪಕ್ಷ ಪದ್ಧತಿ, ಪ್ರಬಲ ಸರ್ವಾಧಿಕಾರಿಯಲ್ಲದ ಪಕ್ಷ ಪದ್ಧತಿ, ಸ್ಪರ್ಧಾತ್ಮಕ ಎರಡು ಪಕ್ಷ ಪದ್ಧತಿ ಹಾಗೂ ಸ್ಪರ್ಧಾತ್ಮಕ ಬಹು ಪಕ್ಷ ಪದ್ಧತಿಗಳೆಂದು ವಿಂಗಡಿಸಿರುವರು. ಅಂತೆಯೇ ಮೌರಿಸ್ ಡುವರ್ಜರ್ ಪರಿಪೂರ್ಣ ಬಹುಮತವುಳ್ಳ, ಬಹುಮತ ಹೊಂದಬಹುದಾದ, ಮಾಧ್ಯಮಿಕ ಹಾಗೂ ಅಲ್ಪಸಂಖ್ಯಾತ ಪಕ್ಷಗಳೆಂದು ರಾಜಕೀಯ ಪಕ್ಷಗಳನ್ನು ವಿಂಗಡಿಸಿದ್ದಾರೆ. ಆಸಕ್ತಿದಾಯಕ ಅಂಶವೇನೆಂದರೆ, ರಾಜಕೀಯ ಪಕ್ಷಗಳ ಅಂತಿಮ ಗುರಿಯಾದ ಅಧಿಕಾರ ಗಳಿಕೆಗೆ ಅವು ಅನುಸರಿಸುವ ವಿಧಾನ ಮತ್ತು ನಿರ್ವಹಿಸುವ ಕಾರ್ಯಗಳ ರಚನಾತ್ಮಕ ವಿಚಾರದಲ್ಲಿ ಎಲ್ಲ ರಾಜಕೀಯ ಪಕ್ಷಗಳ ನಡುವೆ ಗಮನಾರ್ಹ ವ್ಯತ್ಯಾಸವಿರುವುದಿಲ್ಲ. ಈ ಕೆಳಗೆ ರಾಜಕೀಯ ಪಕ್ಷಗಳವೈವಿಧ್ಯಮಯ ವರ್ಗಿಕರಣದ ಬದಲು ಸಾಂಪ್ರದಾಯಿಕ ವರ್ಗೀಕರಣವನ್ನು ವೈಜ್ಞಾನಿಕ ತಳಹದಿಯಲ್ಲಿ ಸಂಕ್ಷಿಪ್ತವಾಗಿ ವಿವರಿಸಲು ಪ್ರಯತ್ನಿಸಲಾಗಿದೆ.

**1. ಏಕ ಪಕ್ಷ ಪದ್ಧತಿ [Single Party System]:** ದೇಶವೊಂದರ ರಾಜಕೀಯ ವ್ಯವಸ್ಥೆಯಲ್ಲಿ ಒಂದೇ ರಾಜಕೀಯ ಪಕ್ಷವು ಪ್ರಭಾವ ಹೊಂದಿದ್ದರೆ ಅದನ್ನು ಏಕ ಪಕ್ಷ ಪದ್ಧತಿ ಎನ್ನಲಾಗುತ್ತದೆ. ಈ ಮಾದರಿಯ ಪಕ್ಷ ವ್ಯವಸ್ಥೆಯಲ್ಲಿ ಇತರ ರಾಜಕೀಯ ಗುಂಪುಗಳಿದ್ದರೂ ಅವುಗಳನ್ನು ಬದಿಗಿಟ್ಟು ಒಂದೇ ಪಕ್ಷ ತನ್ನ ಪ್ರಾಬಲ್ಯದಿಂದ ಅಧಿಕಾರ ಚಲಾಯಿಸುತ್ತದೆ. ಈ ಬಗೆಯ ರಾಜಕೀಯ ಪಕ್ಷ ವ್ಯವಸ್ಥೆಯು ದೇಶದ ಸಾರ್ವಭೌಮತ್ವವು ಒಬ್ಬ ನಾಯಕ ಅಥವಾ ರಾಜಕೀಯ ಗಣ್ಯರಿಗೆ ಸೇರಿದುದು ಎಂಬ ಪೂರ್ವ ಕಲ್ಪನೆಯೊಡನೆ ಕಾರ್ಯಾಚರಿಸುತ್ತಿರುತ್ತದೆ. ಸಾಮಾನ್ಯವಾಗಿ ಏಕ ಪಕ್ಷ ಪದ್ಧತಿಯು ರಾಜರು, ಸರ್ವಾಧಿಕಾರಿಗಳು, ನಿರಂಕುಶ ಸರ್ಕಾರಗಳು ಅಸ್ತಿತ್ವದಲ್ಲಿರುವೆಡೆ ಕಂಡು ಬರುತ್ತದೆ. ಇಲ್ಲಿ ಒಂದೇ ಪ್ರಬಲ ರಾಜಕೀಯ ಪಕ್ಷವು ಇತರ ರಾಜಕೀಯ ಪಕ್ಷಗಳು ತನ್ನ ಅಧಿಕಾರವನ್ನು ವಿರೋಧಿಸುವುದನ್ನು ಸಹಿಸುವುದಿಲ್ಲ. ಒಂದೊಮ್ಮೆ ಏಕ ರಾಜಕೀಯ ಪಕ್ಷವು ಇತರ ರಾಜಕೀಯ ಪಕ್ಷಗಳ ಸಹಾಯವನ್ನು ಬಯಸಿ ಅಧಿಕಾರ ಚಲಾಯಿಸಿದರೆ ಅದನ್ನು ಪ್ರಜಾಸತ್ತಾತ್ಮಕ ಏಕ ಪಕ್ಷ ಪದ್ಧತಿ ಎನ್ನಲಾಗುತ್ತದೆ. ಜನ ಸಮ್ಮತಿ ಪಡೆಯಬೇಕೆಂಬ

ಕಾರಣಕ್ಕೆ ಏಕ ಪಕ್ಷ ಪದ್ಧತಿಯಲ್ಲಿ ಪ್ರಚಾರ, ಬೆದರಿಕೆ, ಸೈದ್ಧಾಂತಿಕ ವಿಚಾರಗಳನ್ನು ಬಳಸಲಾಗುತ್ತದೆ. ಉದಾ: ಹಿಟ್ಲರ್ ತನ್ನ ನಾಜಿ ಪಕ್ಷದ ಮತ್ತು ಮುಸಲೋನಿ ತನ್ನ ಫ್ಯಾಸಿಸ್ಟ್ ಪಕ್ಷದ ಯಶಸ್ಸಿಗೆ ಬಳಸಿದುದು.

ಜೀನ್ ಬ್ಲಾಂಡಲ್ ಅಭಿಪ್ರಾಯಪಡುವಂತೆ ಏಕ ಪಕ್ಷ ಪದ್ಧತಿಯು ಮೂರು ಕಾರಣಗಳಿಂದ ಅಸ್ತಿತ್ವಕ್ಕೆ ಬರುತ್ತದೆ. ಅವುಗಳೆಂದರೆ ಕಾನೂನಾತ್ಮಕ ಅವಕಾಶ, ಸಂವಿಧಾನೇತರ ಮಾರ್ಗದಿಂದ ವಿರೋಧ ಪಕ್ಷಗಳ ಧಮನ ಮತ್ತು ಸ್ವಾಭಾವಿಕ ಪ್ರಕ್ರಿಯೆ. 1960 ರ ಸುಮಾರಿಗೆ ಪ್ರಪಂಚದ ಮೂರನೇ ಒಂದಕ್ಕಿಂತ ಅಧಿಕ ರಾಷ್ಟ್ರಗಳಲ್ಲಿ ಅಸ್ತಿತ್ವದಲ್ಲಿದ್ದ ಏಕ ಪಕ್ಷ ವ್ಯವಸ್ಥೆಗಳು ಇತ್ತೀಚೆಗೆ ಇಳಿಮುಖಗೊಂಡಿವೆ. ಆದ್ದಾಗ್ಯೂ ಆಫ್ರಿಕಾದ ಗಣರಾಜ್ಯಗಳಲ್ಲಿ, ಚೀನಾ ಮತ್ತು ರಷ್ಯಾದಂತಹ ಸಮಾಜವಾದಿ ರಾಷ್ಟ್ರಗಳಲ್ಲಿ ಏಕ ಪಕ್ಷ ಪದ್ಧತಿ ಅಸ್ತಿತ್ವದಲ್ಲಿರುವುದು ಗಮನಾರ್ಹ ಸಂಗತಿ. ಒಟ್ಟಾರೆ ಏಕ ಪಕ್ಷ ಪದ್ಧತಿಯು ಸಾಮಾನ್ಯವಾಗಿ ಸರ್ವಾಧಿಕಾರಿ ಮನೋಧೋರಣೆಯನ್ನು ಹೊಂದಿದ್ದು ಅಭಿವೃದ್ಧಿಶೀಲ ದೇಶಗಳ ಪ್ರಬಲ ಸರ್ಕಾರಗಳ ಅಗತ್ಯವನ್ನು ಪೂರೈಸಲು ಇಂದಿಗೂ ಕಾರ್ಯಾಚರಿಸುತ್ತಿವೆ.

**2. ದ್ವಿ ಪಕ್ಷ ಪದ್ಧತಿ [Two Party System]:** ದೇಶವೊಂದರ ರಾಜಕೀಯ ವ್ಯವಸ್ಥೆಯಲ್ಲಿ ಹಲವು ಪಕ್ಷಗಳಿದ್ದರೂ ಕೇವಲ ಎರಡೇ ಪಕ್ಷಗಳು ಪ್ರಭಾವ ಹೊಂದಿದ್ದರೆ ಅದನ್ನು ದ್ವಿ ಪಕ್ಷ ಪದ್ಧತಿ ಎನ್ನಲಾಗುತ್ತದೆ. ಈ ಬಗೆಯ ಪಕ್ಷ ಪದ್ಧತಿಯಲ್ಲಿ ಸರ್ಕಾರದ ನಿಯಂತ್ರಣ ಹಾಗೂ ಮತಗಳ ಗಳಿಕೆಯಲ್ಲಿ ಎರಡೇ ಪಕ್ಷಗಳು ಉಳಿದ ಪಕ್ಷಗಳಿಗಿಂತ ಮಹತ್ವ ಪಡೆದಿರುತ್ತವೆ. ಇತರ ರಾಜಕೀಯ ಪಕ್ಷಗಳು ಬೆರಳೆಣಿಕೆಯಷ್ಟು ಸ್ಥಾನಗಳನ್ನು ಪಡೆದಿರುವುದರಿಂದ ಎರಡೇ ರಾಜಕೀಯ ಪಕ್ಷಗಳು ಅಧಿಕಾರ ಚಲಾವಣೆಗೆ ಸ್ಪರ್ಧಿಸುತ್ತಿರುತ್ತವೆ. ದ್ವಿ ಪಕ್ಷ ಪದ್ಧತಿಯಲ್ಲಿಯೂ ಕೆಲವೊಮ್ಮೆ ಚಿಕ್ಕ ಪಕ್ಷಗಳ ಸಹಕಾರವನ್ನು ಸರ್ಕಾರದ ರಚನೆ ಅಥವಾ ಬಲವರ್ಧನೆಗೆ ಪಡೆದುಕೊಳ್ಳಬಹುದಾಗಿದೆ. ಈ ದ್ವಿ ಪಕ್ಷ ಪದ್ಧತಿಗೆ ಜಾಗತಿಕವಾಗಿ ಇಂಗ್ಲೆಂಡ್ ಹಾಗೂ ಅಮೇರಿಕಾಗಳು ಉತ್ತಮ ಉದಾಹರಣೆಗಳಾಗಿವೆ.

ಚಿಂತಕರು ದ್ವಿ ಪಕ್ಷ ಪದ್ಧತಿಯಲ್ಲಿ ವಿಶಿಷ್ಟ ಹಾಗೂ ವಿಶಿಷ್ಟವಲ್ಲದ ಸ್ವರೂಪವನ್ನು ಗುರುತಿಸಿದ್ದಾರೆ. ಎರಡೂ ರಾಜಕೀಯ ಪಕ್ಷಗಳು ಭಿನ್ನ ಸೈದ್ಧಾಂತಿಕ ನಂಬಿಕೆ, ಕಾರ್ಯಕ್ರಮ, ನೀತಿಗಳೊಡನೆ ಅಧಿಕಾರಕ್ಕಾಗಿ ಸ್ಪರ್ಧಿಸುವುದು ವಿಶಿಷ್ಟ ದ್ವಿ ಪಕ್ಷ ಪದ್ಧತಿಯಾದರೆ ಸೈದ್ಧಾಂತಿಕವಾಗಿ ಏಕರೂಪತೆಯನ್ನು ಮೈಗೂಡಿಸಿಕೊಂಡು ವಿಷಯಾಧಾರಿತ ಭಿನ್ನತೆಯೊಡನೆ ಅಧಿಕಾರಕ್ಕಾಗಿ ಸೆಣಸುವುದು ವಿಶಿಷ್ಟವಲ್ಲದ ದ್ವಿ ಪಕ್ಷ ಪದ್ಧತಿ ಎನಿಸುತ್ತದೆ. ಬ್ರಿಟನ್ನಿನ ಲೇಬರ್ ಹಾಗೂ ಕಂಜರ್ವೇಟಿವ್ ಪಕ್ಷಗಳು ವಿಶಿಷ್ಟ ದ್ವಿಪಕ್ಷ ಪದ್ಧತಿಗೆ ಮತ್ತು ಅಮೇರಿಕಾದ ಡೆಮಾಕ್ರಟಿಕ್ ಹಾಗೂ ರಿಪಬ್ಲಿಕ್ ಪಕ್ಷಗಳು ವಿಶಿಷ್ಟವಲ್ಲದ ದ್ವಿಪಕ್ಷ ಪದ್ಧತಿಗೆ ನಿದರ್ಶನವಾಗಿವೆ. ದ್ವಿ ಪಕ್ಷಗಳು ಪ್ರಭಾವ ಹೊಂದಿರುವ ರಾಜಕೀಯ ವ್ಯವಸ್ಥೆಯು ಸ್ಥಿರತೆ, ನಿರಂತರತೆ, ಸ್ಪರ್ಧಾತ್ಮಕತೆ ಮುಂತಾದ ಗುಣಗಳನ್ನು ಹೊಂದಿದ್ದು ನ್ಯೂಜಿಲೆಂಡ್, ಆಸ್ಟ್ರೇಲಿಯಾ, ಉರುಗ್ವೆ ಲಕ್ಸಂಬರ್ಗ್ ದೇಶಗಳಲ್ಲಿ ಪಾಲಿಸಲ್ಪಡುತ್ತಿದೆ.



**3. ಬಹು ಪಕ್ಷ ಪದ್ಧತಿ [Multy Party System]:** ದೇಶವೊಂದರ ರಾಜಕೀಯ ವ್ಯವಸ್ಥೆಯಲ್ಲಿ ಎರಡಕ್ಕಿಂತ ಅಧಿಕ ರಾಜಕೀಯ ಪಕ್ಷಗಳು ಪ್ರಭಾವ ಹೊಂದಿದ್ದರೆ ಅದನ್ನು ಬಹು ಪಕ್ಷ ಪದ್ಧತಿ ಎನ್ನಲಾಗುತ್ತದೆ. ಈ ವ್ಯವಸ್ಥೆಯಲ್ಲಿ ಯಾವುದೇ ಒಂದು ಪಕ್ಷ ಬಹುಮತ ಗಳಿಸಲು ಸಾಧ್ಯವಾಗದೇ ಜನರ ಮತಗಳು ವಿವಿಧ ರಾಜಕೀಯ ಪಕ್ಷಗಳಲ್ಲಿ ಹಂಚಲ್ಪಟ್ಟಿರುತ್ತವೆ. ಈ ಹಿನ್ನೆಲೆಯಲ್ಲಿ ಬ್ಲಾಂಡಲ್ ಮತ್ತು ವಾಲೆಂಟೈನ್ ನಾಲ್ಕು ಅಥವಾ ಐದು ರಾಜಕೀಯ ಪಕ್ಷಗಳು ಸಮಾನ ಬಲವುಳ್ಳ ರಾಜಕೀಯ ವ್ಯವಸ್ಥೆಯು ಬಹು ಪಕ್ಷ ಪದ್ಧತಿ ಎಂಬುದಾಗಿ ಅಭಿಪ್ರಾಯಪಟ್ಟಿರುವರು. ಅಂತೆಯೇ ಮೋಹಿತ್ ಭಟ್ಟಾಚಾರ್ಯ ಎಂಬ ಚಿಂತಕರು 13 ಪಕ್ಷಗಳನ್ನುಳ್ಳ ಫ್ರಾನ್ಸ್, 7 ಪಕ್ಷಗಳಿರುವ ಪಶ್ಚಿಮ ಜರ್ಮನಿ, 8 ಪಕ್ಷವುಳ್ಳ ಇಟಲಿ, 7 ಪಕ್ಷಗಳು ಅಸ್ತಿತ್ವದಲ್ಲಿರುವ ಸ್ವಿಟ್ಜರ್‌ಲ್ಯಾಂಡ್ ಬಹು ಪಕ್ಷ ಪದ್ಧತಿಗೆ ಉತ್ತಮ ನಿದರ್ಶನವೆಂದು ವಾದಿಸಿದ್ದಾರೆ.

ಸಿಗ್ಮಂಡ್ ನ್ಯೂಮನ್ ಪ್ರತಿಪಾದಿಸಿರುವಂತೆ ವೈವಿಧ್ಯಮಯ ರಾಷ್ಟ್ರೀಯತೆ ಹಾಗೂ ಧಾರ್ಮಿಕ ಪ್ರಭಾವಗಳು ಬಹು ಪಕ್ಷ ಪದ್ಧತಿಗೆ ಪ್ರಧಾನ ಕಾರಣ. ಜೊತೆಗೆ ದೇಶದ ಹೊರಗಿನ ಕ್ರಾಂತಿಗಳ ಪ್ರಭಾವ, ಸಾಧಿಸಬೇಕಾದ ಗುರಿ ತಲುಪಲು ನಂಬಿರುವ ವಿವಿಧ ಮಾರ್ಗಗಳು, ಸರ್ಕಾರ ಒಡೆದು ಆಳುವ ನೀತಿ, ಪ್ರಜಾಸತ್ತಾತ್ಮಕ ತತ್ವಗಳಲ್ಲಿನ ನಂಬಿಕೆ ಮುಂತಾದವು ಕಾಲಾನುಕ್ರಮದಲ್ಲಿ ಬಹು ಪಕ್ಷ ಪದ್ಧತಿಯನ್ನು ಸಾಕಾರಗೊಳಿಸುವ ಅಂಶಗಳೆನಿಸಿವೆ. ಬಹು ಪಕ್ಷ ಪದ್ಧತಿ ಅಸ್ತಿತ್ವದಲ್ಲಿರುವ ರಾಜಕೀಯ ವ್ಯವಸ್ಥೆಯು ಈ ಕೆಳಗಿನ ಲಕ್ಷಣಗಳನ್ನು ಸಾಮಾನ್ಯವಾಗಿ ಮೈಗೂಡಿಸಿಕೊಂಡಿರುತ್ತದೆ.

ಅ. ಸಮಿಶ್ರ ರಾಜಕೀಯ.

ಆ. ಅಸ್ಥಿರ ಸರ್ಕಾರ.

ಇ. ರಾಜಕೀಯ ಜವಾಬ್ದಾರಿ ಕುರಿತಂತೆ ಗೊಂದಲ.

ಈ. ಮತದಾರರಿಗೆ ಆಯ್ಕೆಯ ಸಮಸ್ಯೆ.

ಉ. ಸಂಕೀರ್ಣ ಚುನಾವಣೆಗಳು.

ಊ. ಅಪ್ರಾಯೋಗಿಕ ಚರ್ಚೆ.

ಆಸಕ್ತಿದಾಯಕ ಅಂಶವೇನೆಂದರೆ, ಬಹು ಪಕ್ಷ ಪದ್ಧತಿಯಲ್ಲಿ ಸ್ಥಿರ ಮತ್ತು ಅಸ್ಥಿರ ಬಹು ಪಕ್ಷ ಪದ್ಧತಿಗಳೆಂಬ ಪ್ರಕಾರಗಳಿವೆ. ಸ್ವಿಟ್ಜರ್‌ಲ್ಯಾಂಡ್, ಇಸ್ರೇಲ್, ಜಪಾನ್ ಬಹು ಪಕ್ಷಗಳನ್ನು ಹೊಂದಿದ್ದರೂ ಸ್ಥಿರ ಸರ್ಕಾರ ಒದಗಿಸುವ ರಾಜಕೀಯ ಪಕ್ಷಗಳಿಂದ ಕೂಡಿದ್ದರೆ ಇಟಲಿ, ಭಾರತ, ಫ್ರಾನ್ಸ್ ಬಹು ಪಕ್ಷಗಳಿಂದ ಅಸ್ಥಿರ ಸರ್ಕಾರಗಳನ್ನು ಹೊಂದಿರುವ ದೇಶಗಳೆನಿಸಿವೆ.

**[II.] ಒತ್ತಡ ಗುಂಪುಗಳು [Pressure Groups]:**

ಪೀಠಿಕೆ: ಆಧುನಿಕ ಸಮಾಜವು ವೈವಿಧ್ಯಮಯ ಜನರಿಂದ ಕೂಡಿರುವ ಸಂಕೀರ್ಣ ವ್ಯವಸ್ಥೆಯಾಗಿದೆ. ಇದರಿಂದಾಗಿ ಜನರು ಹೊಂದಿರುವ ವೈಯಕ್ತಿಕ ಹಿತಾಸಕ್ತಿಗೆ ಮಹತ್ವ

ದೊರೆಯದಾಗುತ್ತದೆ. ಹೀಗಾಗಿ ಸಮಾನ ಹಿತಾಸಕ್ತಿಯುಳ್ಳ ಜನರು ತಮ್ಮ ಹಿತಾಸಕ್ತಿ ಈಡೇರಿಸಿಕೊಳ್ಳಲು ಮುಂದಾಗುತ್ತಾರೆ. ಪರಿಣಾಮ, ಸಮಾಜದಲ್ಲಿ ಹಿತಾಸಕ್ತಿ ರಕ್ಷಣೆಗಾಗಿ ಸಂಘಟಿತಗೊಂಡ ಜನರ ಗುಂಪುಗಳು ಕಂಡು ಬರತೊಡಗುತ್ತವೆ. ಅಮೇರಿಕಾದಲ್ಲಿ ಇಂತಹ ಹಿತಾಸಕ್ತಿ ಗುಂಪುಗಳು ಸರ್ಕಾರವನ್ನು ಪ್ರಭಾವಿಸಲು ಮುಂದಾದಾಗ ಒತ್ತಡ ಗುಂಪು ಎನಿಸಿಕೊಂಡವು. ಸಾಮಾನ್ಯವಾಗಿ ಜಗತ್ತಿನ ಎಲ್ಲ ಉದಾರವಾದಿ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯುಳ್ಳ ದೇಶಗಳಲ್ಲಿ ಪ್ರಜೆಗಳಿಗೆ ಸಂಘಟಿತ ಗುಂಪುಗಳನ್ನು ಹೊಂದಲು ಅವಕಾಶ ಕಲ್ಪಿಸಿದುದು ಈ ಗುಂಪುಗಳ ಅಸ್ತಿತ್ವಕ್ಕೆ ಕಾರಣವಾಗಿದೆ. ಗಮನಾರ್ಹ ಅಂಶವೇನೆಂದರೆ, ಒತ್ತಡ ಗುಂಪುಗಳು ರಾಜಕೀಯ ಪಕ್ಷಗಳಿಗಿಂತ ಸಾಕಷ್ಟು ಭಿನ್ನವಾಗಿರುತ್ತವೆ. ಆದರೂ ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಪರೋಕ್ಷ ಪ್ರಭಾವವನ್ನು ಒತ್ತಡ ಗುಂಪುಗಳು ಬೀರುತ್ತವೆ. ಆದ್ದರಿಂದಲೇ ಪರ್ಮನ್ ಫೈನರ್ ಒತ್ತಡ ಗುಂಪುಗಳನ್ನು ಅಗೋಚರ ಸಾಮ್ರಾಜ್ಯ ಎಂದು ಕರೆದಿರುವರು.

## [A.] ಒತ್ತಡ ಗುಂಪುಗಳ ಅರ್ಥ [Meaning of Pressure Groups]:

ತಮ್ಮ ಸಮಾನ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಒಂದುಗೂಡಿರುವ ಜನ ಸಮೂಹವನ್ನು ಹಿತಾಸಕ್ತಿ ಗುಂಪು ಎನ್ನಲಾಗುತ್ತದೆ. ಸಾಮಾನ್ಯವಾಗಿ ಜನರು ತಮ್ಮ ಆರ್ಥಿಕ, ಧಾರ್ಮಿಕ, ಔದ್ಯೋಗಿಕ, ಸಾಮಾಜಿಕ ಹಿತಾಸಕ್ತಿ ರಕ್ಷಣೆಗಾಗಿ ಗುಂಪುಗಳನ್ನು ರಚಿಸಿಕೊಳ್ಳಲು ಮುಂದಾದಾಗ ಹಿತಾಸಕ್ತಿ ಗುಂಪು ರಚನೆಗೊಳ್ಳುತ್ತದೆ. ಉದಾ: ಆರ್ಥಿಕ ಸಂಕಷ್ಟದಲ್ಲಿದ್ದಾಗ ತಮ್ಮ ಹಿತ ರಕ್ಷಿಸಿಕೊಳ್ಳಲು ಸ್ತ್ರೀ ಶಕ್ತಿ ಸಂಘ, ಸಾಮಾಜಿಕ ಸಾಮರಸ್ಯ ಕಾಪಾಡಲು ಭಜನಾ ಸಂಘ, ಗಣೇಶೋತ್ಸವದ ಹಿತಕ್ಕಾಗಿ ಗಜಾನನ ಮಂಡಳಿಗಳು, ಯುವಕರ ಹಿತಾಸಕ್ತಿ ರಕ್ಷಣೆಗಾಗಿ ಯುವಕ ಮಂಡಳಿಗಳು ನಮ್ಮ ಭಾರತೀಯ ಸಮಾಜದಲ್ಲಿ ಕಂಡು ಬರುವ ಸಾಮಾನ್ಯ ಹಿತಾಸಕ್ತಿ ಗುಂಪುಗಳಾಗಿವೆ. ಮುಂದುವರಿದು, ರೈತರ ಆರ್ಥಿಕ ಹಿತಕ್ಕಾಗಿ ಕರ್ನಾಟಕ ರಾಜ್ಯ ರೈತ ಸಂಘ. ವಿದ್ಯಾರ್ಥಿಗಳ ಹಿತಕ್ಕಾಗಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್. ಶಿಕ್ಷಕ ವೃತ್ತಿಯ ಹಿತಾಸಕ್ತಿಗಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮುಂತಾದ ವೈವಿಧ್ಯಮಯ ಹಿತಾಸಕ್ತಿ ಗುಂಪುಗಳನ್ನು ನಮ್ಮ ಪ್ರಸ್ತುತ ಸಮಾಜದಲ್ಲಿ ಕಾಣಬಹುದಾಗಿದೆ.

ಆಸಕ್ತಿದಾಯಕ ಅಂಶವೇನೆಂದರೆ, ತನ್ನ ನಿರ್ದಿಷ್ಟ ಹಿತಾಸಕ್ತಿಗೆ ಪೂರಕವಾದ ಶಾಸನ ರಚಿಸಲು ಅಥವಾ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳಲು ಸರ್ಕಾರವನ್ನು ಪ್ರಭಾವಿಸಿದಾಗ ಹಿತಾಸಕ್ತಿ ಗುಂಪು ಒತ್ತಡ ಗುಂಪು ಎನಿಸಿಕೊಳ್ಳುತ್ತದೆ. ಒತ್ತಡ ಗುಂಪುಗಳು ಆಳುವ ಸರ್ಕಾರ ಮತ್ತು ಆಳಿಸಿಕೊಳ್ಳುವ ಜನ ಸಮುದಾಯದ ನಡುವೆ ಸಂಪರ್ಕ ಕಲ್ಪಿಸುತ್ತವೆ. ತಮ್ಮ ಪಾತ್ರ ಮತ್ತು ಉದ್ದೇಶಗಳಲ್ಲಿ ರಾಜಕೀಯ ಪಕ್ಷಗಳಿಗೆ ಸಮಾನವಾಗಿದ್ದರೂ ಒತ್ತಡ ಗುಂಪುಗಳು ರಾಜಕೀಯ ಪಕ್ಷೇತರ ಗುಂಪುಗಳಾಗಿವೆ. ಸರ್ಕಾರದ ಮೇಲೆ ಪ್ರಭಾವ ಬೀರಲು



ಮುಂದಾಗುವ ಒತ್ತಡ ಗುಂಪುಗಳೆಲ್ಲ ಹಿತಾಸಕ್ತಿ ಗುಂಪುಗಳೇ ಆಗಿದ್ದು ಎಲ್ಲ ಹಿತಾಸಕ್ತಿ ಗುಂಪುಗಳು ಒತ್ತಡ ಗುಂಪಾಗಿರುವುದಿಲ್ಲ. ಉದಾ: ತಾವು ಬೆಳೆದ ಕಬ್ಬಿಗೆ ಉತ್ತಮ ಬೆಲೆ ನೀಡಲು ಸರ್ಕಾರವನ್ನು ಪ್ರಭಾವಿಸುವ ಕಬ್ಬು ಬೆಳೆಗಾರರ ಸಂಘ ಹಿತಾಸಕ್ತಿ ಗುಂಪು ಹಾಗೂ ಒತ್ತಡ ಗುಂಪೂ ಆಗಿದೆ. ಆದರೆ ಸ್ವ ಸಹಾಯ ಗುಂಪುಗಳು ಕೇವಲ ಹಿತಾಸಕ್ತಿ ಗುಂಪುಗಳೇ ಹೊರತು ಒತ್ತಡ ಗುಂಪುಗಳಲ್ಲ.

**ವ್ಯಾಖ್ಯೆಗಳು:** ಒತ್ತಡ ಗುಂಪುಗಳನ್ನು ಹಲವು ಚಿಂತಕರು ತಮ್ಮ ಅನುಭವಾನುಸಾರ ಭಿನ್ನವಾಗಿ ವ್ಯಾಖ್ಯಾನಿಸಿದ್ದು ಪ್ರಮುಖವಾದವುಗಳನ್ನು ಕೆಳಗೆ ನೀಡಲಾಗಿದೆ.

ವಿ. ವೊ. ಕಿ. ಪ್ರಕಾರ ಸಾರ್ವಜನಿಕ ನೀತಿಯನ್ನು ಪ್ರಭಾವಿಸಲು ರಚಿಸಿಕೊಂಡ ಖಾಸಗಿ ವ್ಯಕ್ತಿಗಳ ಸಂಘಟನೆಗಳೇ ಒತ್ತಡ ಗುಂಪುಗಳು.

ಐರಿಶ್ ಹಾಗೂ ಪ್ರತೊ ಪ್ರಕಾರ ಔಪಚಾರಿಕವಾಗಿ ಚುನಾವಣೆಗೆ ಸ್ಪರ್ಧಿಸದೇ ಸರ್ಕಾರದ ನೀತಿ ನಿರ್ಧಾರಗಳನ್ನು ಪ್ರಭಾವಿಸುವ ಸಂಘಟಿತ ಪ್ರಯತ್ನವೇ ಒತ್ತಡ ಗುಂಪು.

ಮೈಕೆಲ್ ಕರ್ಟೀಸ್ ಪ್ರಕಾರ ಒತ್ತಡ ಗುಂಪುಗಳು ರಾಜಕೀಯ ಪಕ್ಷೇತರ ಸಂಸ್ಥೆಗಳಾಗಿದ್ದು ತಮ್ಮ ಉಳಿವಿಗೆ ಅಗತ್ಯವೆನಿಸಿದ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಒಂದುಗೂಡಿರುವ ಜನ ಸಮೂಹವಾಗಿವೆ.

ಅಲನ್ ಆರ್. ಬಾಲ್ಲ್ ಪ್ರಕಾರ ಸರ್ಕಾರದ ಭಾಗವಾಗಲು ಬಯಸದೇ ಸರ್ಕಾರದ ನಿರ್ಧಾರಗಳ ಮೇಲೆ ಪ್ರಭಾವ ಬೀರಬಲ್ಲ ಸಂಸ್ಥೆಗಳೇ ಒತ್ತಡ ಗುಂಪುಗಳು.

## [B.] ಒತ್ತಡ ಗುಂಪುಗಳ ಲಕ್ಷಣಗಳು [Characteristics of Pressure Groups:

ಒತ್ತಡ ಗುಂಪುಗಳು ಆಧುನಿಕ ರಾಜಕೀಯ ವ್ಯವಸ್ಥೆಯ ಅವಿಭಾಜ್ಯ ಅಂಗವೆನಿಸಿವೆ. ಸರ್ಕಾರದ ಮಾದರಿ ಯಾವುದಾದರೂ ಗೌಪ್ಯವಾಗಿ ಅಥವಾ ಮುಕ್ತವಾಗಿ ಪ್ರತಿ ರಾಜಕೀಯ ವ್ಯವಸ್ಥೆಯಲ್ಲಿ ಇಂದು ಒತ್ತಡ ಗುಂಪುಗಳ ಕಾರ್ಯಾಚರಣೆಯನ್ನು ಗುರುತಿಸಬಹುದಾಗಿದೆ. ಆಯಾ ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಪ್ರಧಾನ ಪಾತ್ರ ನಿರ್ವಹಿಸುವ ಒತ್ತಡ ಗುಂಪುಗಳ ಸಾಮಾನ್ಯ ಲಕ್ಷಣಗಳನ್ನು ಈ ಕೆಳಗೆ ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

**1. ಸಾರ್ವತ್ರಿಕತೆ:** ಒತ್ತಡ ಗುಂಪುಗಳು ಆಧುನಿಕ ರಾಜಕೀಯ ವ್ಯವಸ್ಥೆಯ ಸಾಮಾನ್ಯ ಲಕ್ಷಣವೆನಿಸಿದೆ. ಹೀಗಾಗಿ ಸಮಕಾಲೀನ ಎಲ್ಲ ದೇಶಗಳ ರಾಜಕೀಯ ವ್ಯವಸ್ಥೆಯಲ್ಲಿ ಇವು ಕಂಡು ಬರುತ್ತಿವೆ. ಸರ್ವಾಧಿಕಾರಿ ರಾಜಕೀಯ ವ್ಯವಸ್ಥೆಯಲ್ಲಿ ಗುಪ್ತವಾಗಿ ಕಾರ್ಯಾಚರಿಸುವ ಒತ್ತಡ ಗುಂಪುಗಳು ಉದಾರವಾದಿ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯಲ್ಲಿ ಮುಕ್ತವಾಗಿ ಕಾರ್ಯ ನಿರ್ವಹಿಸುತ್ತವೆ. ಹೀಗೆ ದೇಶವೊಂದು ಯಾವ ಮಾದರಿಯ ರಾಜಕೀಯ ವ್ಯವಸ್ಥೆಯನ್ನು ಅಳವಡಿಸಿಕೊಂಡಿರಲಿ ಒತ್ತಡ ಗುಂಪುಗಳು ಪ್ರಪಂಚದಾದ್ಯಂತ ಕಾರ್ಯಾಚರಿಸುತ್ತಿವೆ.

**2. ಔಪಚಾರಿಕ ಅಥವಾ ಅನೌಪಚಾರಿಕ ಸ್ವರೂಪ:** ಜಗತ್ತಿನ ಪ್ರತಿ ದೇಶದಲ್ಲಿ ಒತ್ತಡ ಗುಂಪುಗಳು ಔಪಚಾರಿಕ ಅಂದರೆ ಕಾನೂನಿನನ್ವಯ ಮತ್ತು ಅನೌಪಚಾರಿಕ ಅಂದರೆ ಕಾನೂನಿನ ತಳಹದಿಯಿಲ್ಲದೇ ಅಸ್ತಿತ್ವಕ್ಕೆ ಬಂದು ಕಾರ್ಯಾಚರಿಸುತ್ತಿರುತ್ತವೆ. ಸಂಘ ಅಥವಾ ಟ್ರಸ್ಟ್ ರೂಪದಲ್ಲಿ ನೊಂದಾಯಿತ ಗುಂಪುಗಳು ಔಪಚಾರಿಕ ಸ್ವರೂಪ ತಾಳಿರುತ್ತವೆ. ಕೆಲ ಒತ್ತಡ ಗುಂಪುಗಳು ತಮ್ಮ ಹಿತಾಸಕ್ತಿಗಳ ಈಡೇರಿಕೆಗಾಗಿ ಅನೌಪಚಾರಿಕವಾಗಿ ಸಂಘಟಿತಗೊಂಡು ಕಾರ್ಯಾಚರಿಸುತ್ತವೆ. ಇಂತಹ ಅನೌಪಚಾರಿಕ ಒತ್ತಡ ಗುಂಪುಗಳನ್ನು ಮೈರಾನ್ ವೀನರ್ ಸರ್ಕಾರದ ಚೌಕಟ್ಟಿನ ಹೊರಗೆ ಸ್ವಯಂ ಪ್ರೇರಿತವಾಗಿ ರಚನೆಗೊಂಡ ಸಂಘಟಿತ ಜನರ ಗುಂಪು ಎಂದಿರುವರು.

**3. ಸಂವಿಧಾನಿಕ ಅಥವಾ ಸಂವಿಧಾನೇತರ ಮಾರ್ಗಗಳ ಅನುಸರಣೆ:** ಒತ್ತಡ ಗುಂಪುಗಳು ಕಾನೂನು ಕಲ್ಪಿಸಿರುವ ಅಥವಾ ಸಮ್ಮತಿಸುವ ಮಾರ್ಗಗಳನ್ನು ಅಂದರೆ ಮನವಿ ಸಲ್ಲಿಕೆ, ದೂರು ನೀಡಿಕೆ, ಪ್ರತಿಭಟಿಸುವಿಕೆ, ಟೀಕಿಸುವಿಕೆ ಮುಂತಾದ ಮಾರ್ಗಗಳನ್ನು ಅನುಸರಿಸುವುದು ಸಂವಿಧಾನಿಕ ಮಾರ್ಗಗಳ ಅನುಸರಣೆಯಾಗುತ್ತದೆ. ಸಾಮಾನ್ಯವಾಗಿ ಬಹುತೇಕ ಒತ್ತಡ ಗುಂಪುಗಳು ಈ ಸಂವಿಧಾನಿಕ ಮಾರ್ಗಗಳನ್ನು ಪಾಲಿಸಿ ತಮ್ಮ ಉದ್ದೇಶ ಸಾಧನೆಗೆ ಪ್ರಯತ್ನಿಸುತ್ತವೆ. ಮುಂದುವರಿದು, ತಮ್ಮ ಉದ್ದೇಶ ಸಾಧನೆಗಾಗಿ ಕೆಲ ಒತ್ತಡ ಗುಂಪುಗಳು ಬೆದರಿಕೆ, ಹಿಂಸಾಚಾರ, ಆಮಿಷ್ಯಗಳ ಒಡ್ಡುವಿಕೆಯಂತಹ ವಿಧಾನಗಳನ್ನು ಅನುಸರಿಸುತ್ತಿದ್ದು ಅವು ಸಂವಿಧಾನೇತರ ಮಾರ್ಗಗಳೆನಿಸುತ್ತವೆ. ಹೀಗೆ ಅಸಂವಿಧಾನಿಕ ಮಾರ್ಗಗಳನ್ನು ಪಾಲಿಸುವ ಒತ್ತಡ ಗುಂಪುಗಳನ್ನು ಸಾಮಾನ್ಯವಾಗಿ ಸರ್ಕಾರಗಳು ನಿಷೇಧಿಸಲು ಮುಂದಾಗುತ್ತವೆ.

**4. ನಿಶ್ಚಿತ ಹಿತಾಸಕ್ತಿಯ ಆಧಾರ:** ಪ್ರತಿಯೊಂದೂ ಒತ್ತಡ ಗುಂಪುಗಳ ರಚನೆಯು ನಿಖರ ಹಿತಾಸಕ್ತಿಯನ್ನು ಅವಲಂಬಿಸಿರುತ್ತದೆ. ಒತ್ತಡ ಗುಂಪುಗಳ ಹೆಸರುಗಳಿಂದಲೇ ಸಾಮಾನ್ಯವಾಗಿ ನಿರ್ದಿಷ್ಟ ಗುಂಪಿನ ಹಿತಾಸಕ್ತಿಯನ್ನು ಗುರುತಿಸಬಹುದಾಗಿದೆ. ನಿರ್ದಿಷ್ಟ ಹಿತಾಸಕ್ತಿಯನ್ನು ಸಾಧಿಸುವ ಉದ್ದೇಶದಿಂದಲೇ ಜನರು ಸಂಘಟಿತರಾಗುವುದರಿಂದ ಒತ್ತಡ ಗುಂಪೊಂದು ಸದಸ್ಯರಿಗಿಂತ ಹಿತಾಸಕ್ತಿಯನ್ನು ಬಲವಾಗಿ ಆಧರಿಸಿರುತ್ತದೆ. ಆದ್ದರಿಂದಲೇ ಮಿಲ್ಲರ್ ಒತ್ತಡ ಗುಂಪುಗಳು ಹಿತಾಸಕ್ತಿಯನ್ನು ಪ್ರತಿನಿಧಿಸುತ್ತದೆಯೇ ಹೊರತು ವ್ಯಕ್ತಿಗಳನ್ನಲ್ಲ ಎಂದು ಅಭಿಪ್ರಾಯಪಟ್ಟಿರುವರು.

**5. ಅನಿಶ್ಚಿತ ಕಾಲಾವಧಿ:** ಒತ್ತಡ ಗುಂಪುಗಳ ಕಾರ್ಯಾಚರಣೆಯು ನಿಶ್ಚಿತ ಅವಧಿಯನ್ನು ಹೊಂದಿರುವುದಿಲ್ಲ. ತನ್ನ ಹಿತಾಸಕ್ತಿ ಈಡೇರುವವರೆಗೆ ಒತ್ತಡ ಗುಂಪೊಂದು ಕ್ರಿಯಾಶೀಲವಾಗಿರುತ್ತದೆ. ಅಂತೆಯೇ ಜಗತ್ತಿನ ಕೆಲ ಒತ್ತಡ ಗುಂಪುಗಳು ಶಾಶ್ವತ ಸ್ವರೂಪವನ್ನು ಹೊಂದಿರುತ್ತವೆ. ಉದಾ: ಲೈನ್ಸ್, ರೊಟರಿ, ರೆಡ್ ಕ್ರಾಸ್ ಮುಂತಾದವು. ಬಹುತೇಕ ಗುಂಪುಗಳು ತಮ್ಮ ಹಿತಾಸಕ್ತಿ ಪೂರೈಸಿದ ಬಳಿಕ ಕಣ್ಮರೆಯಾಗುತ್ತವೆ.



**6. ರಾಜಕೀಯ ಪಕ್ಷಗಳಿಂದ ಭಿನ್ನ:** ಒತ್ತಡ ಗುಂಪುಗಳು ರಾಜಕೀಯ ಪಕ್ಷಗಳಿಗಿಂತ ಭಿನ್ನ ಸ್ವರೂಪ ಪಡೆದಿರುತ್ತವೆ. ರಾಜಕೀಯ ಪಕ್ಷಗಳಂತೆ ಚುನಾವಣೆಗೆ ಸ್ಪರ್ಧಿಸುವುದಾಗಲಿ ಅಥವಾ ಅಧಿಕಾರ ಗಳಿಸುವುದಾಗಲಿ ಒತ್ತಡ ಗುಂಪುಗಳ ಉದ್ದೇಶವಾಗಿರುವುದಿಲ್ಲ. ಆದರೆ, ರಾಜಕೀಯ ಪಕ್ಷಗಳನ್ನು ಪ್ರಭಾವಿಸುವ ಮೂಲಕ ಒತ್ತಡ ಗುಂಪು ತಮ್ಮ ಹಿತಾಸಕ್ತಿ ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತವೆ. ಒಟ್ಟಾರೆ ರಾಜಕೀಯವಾಗಿ ಪರೋಕ್ಷ ಪಾತ್ರವನ್ನು ನಿರ್ವಹಿಸುವ ಒತ್ತಡ ಗುಂಪುಗಳು ರಾಜಕೀಯ ಪಕ್ಷದಂತೆ ಪ್ರತ್ಯಕ್ಷವಾಗಿ ರಾಜಕೀಯ ಪ್ರಕ್ರಿಯೆಗಳಲ್ಲಿ ಭಾಗಿಯಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಡಾ. ಜೆ. ಸಿ. ಜೊಹಾರಿ ರಾಜಕೀಯ ವ್ಯವಸ್ಥೆಯಲ್ಲಿ ಒತ್ತಡ ಗುಂಪುಗಳು ಅಡಗುವ ಹಾಗೂ ಹುಡುಕುವ ಪಾತ್ರವನ್ನು ನಿರ್ವಹಿಸುತ್ತವೆ ಎಂದಿರುವರು.

**7. ಮುಕ್ತ ಮತ್ತು ಬಹು ಸದಸ್ಯತ್ವ:** ಒತ್ತಡ ಗುಂಪುಗಳ ಸದಸ್ಯತ್ವ ಎಲ್ಲರಿಗೂ ಮುಕ್ತವಾಗಿರುತ್ತದೆ. ಯಾವ ತಾರತಮ್ಯ ತೋರದೇ ಸರ್ವರಿಗೂ ಒತ್ತಡ ಗುಂಪು ಸದಸ್ಯತ್ವ ಒದಗಿಸುತ್ತದೆ. ಜೊತೆಗೆ ವ್ಯಕ್ತಿಯೊಬ್ಬ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚಿನ ಒತ್ತಡ ಗುಂಪಿನ ಸದಸ್ಯತ್ವ ಪಡೆಯಲು ಅವಕಾಶವಿರುತ್ತದೆ. ಈ ಅವಕಾಶ ರಾಜಕೀಯ ಪಕ್ಷದಲ್ಲಿ ಕಂಡು ಬರುವುದಿಲ್ಲ.

**8. ಪರಸ್ಪರ ಸಹಕಾರ:** ಒತ್ತಡ ಗುಂಪುಗಳು ಸಮಾನ ಹಿತಾಸಕ್ತಿ ಅಥವಾ ಉದ್ದೇಶ ಹೊಂದಿರುವ ಇತರ ಗುಂಪುಗಳೊಡನೆ ಸಹಕರಿಸಲು ಸದಾ ಸಿದ್ಧವಾಗಿರುತ್ತವೆ. ಒತ್ತಡ ಗುಂಪುಗಳ ಈ ಸಹಕಾರಕ್ಕೆ ಸರ್ಕಾರದ ನೀತಿ ನಿರ್ಧಾರಗಳ ಮೇಲೆ ಪ್ರಭಾವ ಅಧಿಕಗೊಳಿಸುವುದು ಪ್ರಧಾನ ಕಾರಣವಾಗಿರುತ್ತದೆ.

ಈ ಮೇಲೆ ಸಂಕ್ಷೇಪ್ತವಾಗಿ ಪ್ರಸ್ತಾಪಿಸಲಾದ ಲಕ್ಷಣಗಳನ್ನು ಒತ್ತಡ ಗುಂಪುಗಳು ಪ್ರತಿನಿಧಿಸುತ್ತವೆ. ದೇಶದಿಂದ ದೇಶಕ್ಕೆ ಒತ್ತಡ ಗುಂಪುಗಳ ಪ್ರಸ್ತಾಪಿತ ಲಕ್ಷಣಗಳಲ್ಲಿ ವ್ಯತ್ಯಾಸವಾಗಲಿದ್ದು ಬಹುತೇಕ ಮೇಲಿನ ಅಂಶಗಳನ್ನು ಒತ್ತಡ ಗುಂಪು ಮೈಗೂಡಿಸಿಕೊಂಡಿರುತ್ತದೆ. ವಿಶೇಷವಾಗಿ ಭಾರತದಂತಹ ವಿಶಾಲ ಜನಸಂಖ್ಯೆ ಹಾಗೂ ವೈವಿಧ್ಯತೆಯಿಂದ ಕೂಡಿರುವ ದೇಶಗಳ ಒತ್ತಡ ಗುಂಪುಗಳು ತಮ್ಮದೇಯಾದ ಇನ್ನಿತರ ಲಕ್ಷಣಗಳನ್ನು ತನ್ನದಾಗಿಸಿಕೊಂಡಿರುತ್ತವೆ.

## [C] ಒತ್ತಡ ಗುಂಪುಗಳ ಪಾತ್ರ [Role of Pressure Groups]:

ಪಕ್ಷ ಸಂಘಟನೆ, ಚುನಾವಣಾ ಸ್ಪರ್ಧೆ, ಸರ್ಕಾರ ರಚನೆ, ಅಧಿಕಾರ ಚಲಾವಣೆ ಮುಂತಾದ ಚಟುವಟಿಕೆಗಳು ದೇಶವೊಂದರ ರಾಜಕೀಯ ಎನಿಸಿಕೊಳ್ಳುತ್ತದೆ. ದೇಶವೊಂದರ ರಾಜಕೀಯ ಪ್ರಕ್ರಿಯೆಯಲ್ಲಿ ಒತ್ತಡ ಗುಂಪುಗಳು ರಾಜಕೀಯ ಪಕ್ಷದಂತೆ ಪ್ರಮುಖ ಪಾತ್ರ ವಹಿಸುತ್ತವೆ. ಆದರೆ, ರಾಜಕೀಯದಲ್ಲಿ ಒತ್ತಡ ಗುಂಪುಗಳು ನೇರವಾಗಿ ಭಾಗವಹಿಸುವುದಿಲ್ಲ.

ನಿರ್ಧಾರಗಳ ಬದಲಾವಣೆಯಲ್ಲಿ ವಿವಿಧ ಆದ್ಯಾಗ್ಯೂ ಸಾರ್ವಜನಿಕ ನೀತಿ ಹಾಗೂ ನಿರ್ಧಾರಗಳ ಬದಲಾವಣೆಯಲ್ಲಿ ವಿವಿಧ ರಾಜಕೀಯ ಘಟಕಗಳ ಮೇಲೆ ಪರೋಕ್ಷ ಪ್ರಭಾವವನ್ನು ಒತ್ತಡ ಗುಂಪುಗಳು ಬೀರುತ್ತವೆ. ಕೆಳಗಿನ ವಿವಿಧ ರಾಜಕೀಯ ಪ್ರಕ್ರಿಯೆಗಳಲ್ಲಿ ಒತ್ತಡ ಗುಂಪುಗಳು ನಿರ್ವಹಿಸುವ ಕಾರ್ಯಗಳ ಮೂಲಕ ಅವುಗಳ ಪಾತ್ರವನ್ನು ಅರಿತುಕೊಳ್ಳಬಹುದಾಗಿದೆ.

**1. ರಾಜಕೀಯ ಪಕ್ಷಗಳ ಪ್ರಕ್ರಿಯೆ:** ಆಯಾ ದೇಶದ ರಾಜಕೀಯ ಪಕ್ಷಗಳಿಗೆ ಅಲ್ಲಿನ ಒತ್ತಡ ಗುಂಪುಗಳು ಬೆನ್ನೆಲುಬಾಗಿ ಕಾರ್ಯ ನಿರ್ವಹಿಸುತ್ತವೆ. ಉದಾ: ಭಾರತೀಯ ಜನತಾ ಪಕ್ಷಕ್ಕೆ ರಾಷ್ಟ್ರಿಯ ಸ್ವಯಂ ಸೇವಕ ಸಂಘ, ಜಾತ್ಯಾತೀತ ಜನತಾ ದಳಕ್ಕೆ ಒಕ್ಕಲಿಗರ ಸಂಘ, ಬಹುಜನ ಸಮಾಜವಾದಿ ಪಕ್ಷಕ್ಕೆ ದಲಿತ ಸಂಘಟನೆಗಳು ಭಾರತದಲ್ಲಿ ಬೆನ್ನೆಲುಬಾಗಿದುದು. ಮುಂದುವರಿದು, ಕೆಲ ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ಸಾಧನೆಗೆ ಪೂರಕವಾಗಿರಲು ತಮ್ಮದೇ ಒತ್ತಡ ಗುಂಪುಗಳನ್ನು ಹೊಂದಿರುತ್ತವೆ. ಉದಾ: ಭಾರತೀಯ ಜನತಾ ಪಕ್ಷ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಭಾರತೀಯ ಕಮ್ಯುನಿಸ್ಟ್ ಪಕ್ಷ ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ, ಕಾಂಗ್ರೆಸ್ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಸಂಘದೊಡನೆ ಸಂಪರ್ಕದಲ್ಲಿದುದು. ಮಾತ್ರವಲ್ಲ, ಪಕ್ಷ ರಾಜಕಾರಣದಲ್ಲಿ ಜಾತಿ ಹಾಗೂ ಧಾರ್ಮಿಕ ಒತ್ತಡ ಗುಂಪುಗಳೂ ಪ್ರಮುಖ ಪಾತ್ರವನ್ನು ಹೊಂದಿರುತ್ತವೆ. ವ್ಯಾಪಾರಿ ಒತ್ತಡ ಗುಂಪುಗಳು ಅಧಿಕಾರಕ್ಕೇರುವ ಭರವಸೆಯುಳ್ಳ ಪಕ್ಷಗಳಿಗೆ ಅಥವಾ ಬಹುಮತ ದೊರೆಯಲಾರದ ಸನ್ನಿವೇಶದಲ್ಲಿ ವಿವಿಧ ರಾಜಕೀಯ ಪಕ್ಷಗಳಿಗೆ ಅಪಾರ ಮೊತ್ತದ ದೇಣಿಗೆ ನೀಡಿ ಪಕ್ಷಗಳನ್ನು ನಿಯಂತ್ರಿಸಲು ಪ್ರಯತ್ನಿಸುತ್ತವೆ. ಒಟ್ಟಾರೆ ರಾಜಕೀಯ ವ್ಯವಸ್ಥೆಯಲ್ಲಿನ ರಾಜಕೀಯ ಪಕ್ಷಗಳನ್ನು ಪ್ರಭಾವಿಸುವ ಮೂಲಕ ಒತ್ತಡ ಗುಂಪುಗಳು ಪರೋಕ್ಷವಾಗಿ ರಾಜಕೀಯದಲ್ಲಿ ಪ್ರಧಾನ ಪಾತ್ರ ನಿರ್ವಹಿಸುತ್ತವೆ.

**2. ಚುನಾವಣಾ ಪ್ರಕ್ರಿಯೆ:** ಚುನಾವಣೆಗಳು ದೇಶವೊಂದರ ರಾಜಕೀಯ ವ್ಯವಸ್ಥೆಯ ಅವಿಭಾಜ್ಯ ಅಂಗಗಳಾಗಿವೆ. ಚುನಾವಣಾ ಸಮಯದಲ್ಲಿ ಒತ್ತಡ ಗುಂಪುಗಳು ತಮ್ಮ ಹಿತಾಸಕ್ತಿಗೆ ಪೂರಕವಾದ ಅಂಶಗಳನ್ನು ರಾಜಕೀಯ ಪಕ್ಷಗಳ ಪ್ರಣಾಳಿಕೆಗಳಲ್ಲಿ ಸೇರಿಸಿಕೊಳ್ಳಲು ಪ್ರಭಾವ ಬೀರುತ್ತವೆ. ಉದಾ: ಹಿಂದೂ ಪರ ಒತ್ತಡ ಗುಂಪುಗಳು ಭಾರತೀಯ ಜನತಾ ಪಕ್ಷದ ಪ್ರಣಾಳಿಕೆಯಲ್ಲಿ ರಾಮ ಮಂದಿರ ನಿರ್ಮಾಣ ಸೇರಲು ಪ್ರಭಾವ ಬೀರಿದುದು. ಜಾತಿ, ಧರ್ಮ ಅಥವಾ ಪ್ರಾದೇಶಿಕ ಒತ್ತಡ ಗುಂಪುಗಳು ತಮ್ಮ ಸದಸ್ಯರ ಹಿತಾಸಕ್ತಿ ಈಡೇರಿಸಬಲ್ಲ ವ್ಯಕ್ತಿಗೆ ಚುನಾವಣೆಯಲ್ಲಿ ಟಿಕೆಟ್ ಹಂಚಲು ಪಕ್ಷಗಳ ಮೇಲೆ ಪ್ರಭಾವ ಬೀರುತ್ತವೆ. ಅಲ್ಲದೇ ತಾವು ಬೆಂಬಲಿಸುವ ವ್ಯಕ್ತಿ ಅಥವಾ ರಾಜಕೀಯ ಪಕ್ಷದ ಗೆಲುವಿಗೆ ಶ್ರಮಿಸುತ್ತವೆ. ಒತ್ತಡ ಗುಂಪುಗಳ ಹಿತಾಸಕ್ತಿಗೆ ಗಮನ ನೀಡದ ಸ್ಪರ್ಧಾಳು ಚುನಾವಣೆಯಲ್ಲಿ ಜಯಶಾಲಿಯಾಗದಂತೆ ನೋಡಿಕೊಳ್ಳುತ್ತವೆ. ವ್ಯಾಪಾರಿ ಒತ್ತಡ ಗುಂಪುಗಳು ಚುನಾವಣಾ ಪ್ರಚಾರಕ್ಕೆ ಅಗತ್ಯವಾದ ಹಣದ ಹೊಳೆಯನ್ನೇ ಹರಿಸಿ ತಮ್ಮ



ಹಿತಾಸಕ್ತಿ ರಕ್ಷಣೆಗೆ ಪ್ರಯತ್ನಿಸುತ್ತವೆ. ಹೀಗೆ ಒತ್ತಡ ಗುಂಪುಗಳು ರಾಜಕೀಯ ಪ್ರಕ್ರಿಯೆಯಾದ ಚುನಾವಣೆಯಲ್ಲಿ ಪ್ರಧಾನ ಪಾತ್ರ ನಿರ್ವಹಿಸುವುದನ್ನು ಗಮನಿಸಬಹುದಾಗಿದೆ.

**3. ಶಾಸನ ರಚನಾ ಪ್ರಕ್ರಿಯೆ:** ಒತ್ತಡ ಗುಂಪುಗಳು ಚುನಾವಣೆಯಲ್ಲಿ ತಮಗೆ ಸ್ನೇಹಪರ ವ್ಯಕ್ತಿಯನ್ನು ಗೆಲ್ಲಿಸಿ ಶಾಸಕಾಂಗಕ್ಕೆ ಕಳುಹಿಸಿರುತ್ತವೆ. ತಮ್ಮ ಹಿತಾಸಕ್ತಿಗೆ ಪೂರಕವಾದ ಪ್ರಶ್ನೆ ಕೇಳಲು, ಚರ್ಚೆ ನಡೆಸಲು, ಗಮನ ಸೆಳೆಯುವ ಸೂಚನೆ ಮಂಡಿಸಲು ಅಗತ್ಯವಾದ ಮಾಹಿತಿಯನ್ನು ಶಾಸಕರಿಗೆ ಒತ್ತಡ ಗುಂಪುಗಳು ಒದಗಿಸುತ್ತವೆ. ಶಾಸಕನೊಬ್ಬ ಶಾಸಕಾಂಗದಲ್ಲಿ ಸಮರ್ಥವಾಗಿ ತನ್ನ ಆಶಯಗಳನ್ನು ಮಂಡಿಸಲು ಒತ್ತಡ ಗುಂಪುಗಳು ಆತನ ಮೇಲೆ ಪ್ರಭಾವ ಬೀರುತ್ತವೆ. ಇದಲ್ಲದೇ ವಿರೋಧ ಪಕ್ಷಗಳಿಂದ ತಮ್ಮ ಹಿತಾಸಕ್ತಿಗಳ ಮೇಲೆ ಸದನದಲ್ಲಿ ಬೆಳಕು ಚೆಲ್ಲಿ ಸರ್ಕಾರದಿಂದ ಸೂಕ್ತ ಭರವಸೆ ಪಡೆಯಲು ಯತ್ನಿಸುತ್ತವೆ. ಜೊತೆಗೆ ತಮಗೆ ಪೂರಕವಾದ ಶಾಸನ ಅಂಗೀಕಾರಗೊಳ್ಳಲು ಶಾಸಕಾಂಗದ ಮೇಲೆ ಪ್ರಭಾವ ಬೀರುತ್ತವೆ. ಉದಾ: ಮಹಿಳಾ ಒತ್ತಡ ಗುಂಪುಗಳ ಒತ್ತಡದಿಂದ ತ್ರಿವಳಿ ತಲಾಕ್ ರದ್ದತಿ ಕಾಯಿದೆ ಶಾಸಕಾಂಗವಾದ ಸಂಸತ್ತಿನಲ್ಲಿ ಅಂಗೀಕಾರಗೊಂಡು ಜಾರಿಯಾದುದು. ಅಲ್ಲದೇ ತಮ್ಮ ಹಿತಾಸಕ್ತಿ ಅಡಕವಾಗಿರುವ ವಿಷಯಕ್ಕೆ ಸಂಬಂಧಿಸಿದ ಸದನ ಸಮೀತಿಗಳಿಗೆ ಅಗತ್ಯ ಮಾಹಿತಿ ಅಥವಾ ಧಾಕಲೆಗಳನ್ನು ನೀಡಿ ಪೂರಕ ನಿರ್ಧಾರ ಕೈಗೊಳ್ಳಲು ಪ್ರಭಾವ ಬೀರುತ್ತವೆ.

**4. ಕಾರ್ಯಾಂಗಿಯ ಪ್ರಕ್ರಿಯೆ:** ಒಬ್ಬ ವ್ಯಕ್ತಿ ಕಾರ್ಯಾಂಗದ ಉನ್ನತ ಸ್ಥಾನವಾದ ಪ್ರಧಾನ ಮಂತ್ರಿ ಅಥವಾ ಮುಖ್ಯ ಮಂತ್ರಿ ಸ್ಥಾನಕ್ಕೆ ನೇಮಕಗೊಳ್ಳಲು ಒತ್ತಡ ಗುಂಪುಗಳ ಪಾತ್ರ ಅಧಿಕವಾಗಿರುತ್ತದೆ. ವಿವಿಧ ಒತ್ತಡ ಗುಂಪುಗಳು ತಮ್ಮ ಹಿತಾಸಕ್ತಿಗೆ ಮಹತ್ವ ನೀಡಬಲ್ಲ ವ್ಯಕ್ತಿ ಕಾರ್ಯಾಂಗದ ಭಾಗವಾದ ಮಂತ್ರಿ ಮಂಡಳದಲ್ಲಿ ಸ್ಥಾನ ಪಡೆಯಲು ಪ್ರಭಾವ ಬೀರುತ್ತವೆ. ಸಾಮಾನ್ಯವಾಗಿ ಧಾರ್ಮಿಕ ಅಥವಾ ಜಾತೀಯ ಒತ್ತಡ ಗುಂಪುಗಳು ತಮ್ಮ ಹಿತಾಸಕ್ತಿಗೆ ಪ್ರಾತಿನಿಧ್ಯ ದೊರೆಯದಿದ್ದಾಗ ಒತ್ತಡ ತಂತ್ರಗಳನ್ನು ಬಳಸುತ್ತವೆ. ಇದರೊಡನೆ ಗುಂಪುಗಳು ತಮ್ಮ ಹಿತಾಸಕ್ತಿಗೆ ಪೂರಕವಾದ ನಿರ್ಧಾರ ಕೈಗೊಳ್ಳುವಂತೆ ಹಾಗೂ ಕಾರ್ಯಕ್ರಮ ರೂಪಿಸುವಂತೆ ಕಾರ್ಯಾಂಗವನ್ನು ಪ್ರಭಾವಿಸುತ್ತವೆ. ತಮ್ಮ ಸದಸ್ಯರ ಹಿತಕ್ಕೆ ಪೂರಕವಾಗಬಲ್ಲ ಮೀಸಲಾತಿ ದೊರಕಿಸಲು ಕಾರ್ಯಾಂಗವನ್ನು ಪ್ರಭಾವಿಸುತ್ತವೆ. ಉದಾ: ಜಾಟ್ ಸಮುದಾಯಕ್ಕೆ ಮೀಸಲಾತಿ ನೀಡಲು ಜಾಟ್ ಸಂಘಟನೆ ಗುಜರಾತ್ನಲ್ಲಿ ನಡೆಸಿದ ಹೋರಾಟ.

**5. ಅಧಿಕಾರಶಾಹಿ ವರ್ಗದ ಪ್ರಕ್ರಿಯೆ:** ಅಧಿಕಾರಶಾಹಿ ಅಥವಾ ನಾಗರಿಕ ಸೇವಾ ವರ್ಗ ಸರ್ಕಾರದ ನಾಲ್ಕನೇ ಅಂಗವೆಂದು ಪರಿಗಣಿಸಲಾಗುತ್ತದೆ. ಅಧಿಕಾರಶಾಹಿ ವರ್ಗವು ಶಾಶ್ವತ ಕಾರ್ಯಾಂಗವೆಂದೂ ಗುರುತಿಸಲ್ಪಡುತ್ತದೆ. ಹೀಗಾಗಿ ಒತ್ತಡ ಗುಂಪುಗಳು ತಮ್ಮ ಹಿತಾಸಕ್ತಿ ರಕ್ಷಣೆಗೆ ಸರ್ಕಾರದ ನೀತಿ ನಿರೂಪಣೆಯಲ್ಲಿ ಭಾಗಿಯಾಗುವ ಅಧಿಕಾರಶಾಹಿ ವರ್ಗವನ್ನು ಓಲೈಸಲು ಮುಂದಾಗುತ್ತವೆ. ಅಧಿಕಾರಿಗಳಿಗೆ ಬೆಲೆ ಬಾಳುವ ಕೊಡುಗೆ, ವಿದೇಶಿ ಪ್ರವಾಸದ

ವ್ಯವಸ್ಥೆ, ಖಾಸಗಿ ಕಾರ್ಯಕ್ರಮಗಳಿಗೆ ನೆರವು ಮುಂತಾದ ತಂತ್ರಗಳ ಮುಖೇನ ಅವರನ್ನು ತಮ್ಮ ಬೇಡಿಕೆಗಳನ್ನು ಪೂರೈಸುವಂತೆ ಒತ್ತಡ ಗುಂಪುಗಳು ಪ್ರಭಾವಿಸುತ್ತವೆ.

[6. **ನ್ಯಾಯದಾನ ಪ್ರಕ್ರಿಯೆ:** ದೇಶವೊಂದರ ಸ್ವತಂತ್ರ ನ್ಯಾಯಾಂಗದ ಮೇಲೂ ಒತ್ತಡ ಗುಂಪುಗಳು ತಮ್ಮ ಪ್ರಭಾವ ಬೀರಲು ಯತ್ನಿಸುತ್ತವೆ. ಪ್ರಜೆಗಳ ಹಕ್ಕು ಮತ್ತು ಸ್ವಾತಂತ್ರ್ಯಗಳ ರಕ್ಷಕನೆಂದು ಪರಿಗಣಿಸಲ್ಪಡುವ ನ್ಯಾಯಾಂಗದ ವಿವಿಧ ನ್ಯಾಯಾಲಯಗಳಲ್ಲಿ ಸರ್ಕಾರದ ನೀತಿ ಹಾಗೂ ನಿರ್ಧಾರಗಳ ವಿರುದ್ಧ ಪ್ರಕರಣ ಹೂಡುವ ಮೂಲಕ ಗುಂಪಿನ ಸದಸ್ಯರ ಹಿತರಕ್ಷಣೆಗೆ ಪ್ರಯತ್ನಿಸುತ್ತವೆ. ಜೊತೆಗೆ ಶಾಸಕಾಂಗ ಅಂಗೀಕರಿಸಿರುವ ಶಾಸನಗಳು ತಮ್ಮ ಹಿತಾಸಕ್ತಿಗೆ ವ್ಯತಿರಿಕ್ತವಾಗಿದ್ದಲ್ಲಿ ನ್ಯಾಯಾಂಗ ವಿಮರ್ಶಾಧಿಕಾರ ಬಳಸಿ ಅವುಗಳನ್ನು ರದ್ದುಗೊಳಿಸಲು ಯತ್ನಿಸುತ್ತವೆ. ಮುಂದುವರೆದು ನ್ಯಾಯಾಧೀಶರ ನೇಮಕ ಹಾಗೂ ವರ್ಗಾವಣೆಗಳ ಮೇಲೆ ಒತ್ತಡ ಗುಂಪುಗಳು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ. ಅಲ್ಲದೇ ಮಾಧ್ಯಮಗಳನ್ನು ಬಳಸಿಕೊಂಡು ನ್ಯಾಯಾಧೀಶರ ತೀರ್ಪುಗಳ ಮೇಲೆ ಪ್ರಭಾವ ಬೀರುತ್ತವೆ. ಹೀಗೆ ನ್ಯಾಯಾಂಗ ವ್ಯವಸ್ಥೆಯಲ್ಲಿ ಒತ್ತಡ ಗುಂಪುಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ.

7. **ವಿವಿಧ ರಾಜಕೀಯ ಪ್ರಕ್ರಿಯೆಗಳ ಮಧ್ಯವರ್ತಿ:** ಒತ್ತಡ ಗುಂಪುಗಳು ಆಯಾ ದೇಶದ ರಾಜಕೀಯ ವ್ಯವಸ್ಥೆಯಲ್ಲಿನ ರಾಜಕೀಯ ಸಾಮಾಜೀಕರಣ, ಭಾಗವಹಿಸುವಿಕೆ, ಸಂಪರ್ಕ, ನೇಮಕಾತಿ ಮುಂತಾದ ಪ್ರಕ್ರಿಯೆಗಳ ಬಲವರ್ಧನೆಗೆ ಮಹತ್ವದ ಪಾತ್ರ ನಿರ್ವಹಿಸುತ್ತಿವೆ. ಜನರ ಗಮನವನ್ನು ರಾಜಕೀಯ ಪ್ರಕ್ರಿಯೆಯತ್ತ ಸೆಳೆದು ರಾಜಕೀಯ ಸಾಮಾಜೀಕರಣಕ್ಕೆ ಒತ್ತಡ ಗುಂಪುಗಳು ನೆರವಾಗಿವೆ. ಜೊತೆಗೆ ಜನರ ರಾಜಕೀಯ ಸಂಸ್ಕೃತಿ ಮತ್ತು ವರ್ತನೆಗಳನ್ನು ಬದಲಾಯಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿವೆ. ಉದಾ: ಭಾರತದಲ್ಲಿ ಏಕ ಪಕ್ಷ ಪ್ರಾಬಲ್ಯ ಮಾಯವಾಗಿ ಪ್ರಾದೇಶಿಕ ರಾಜಕಾರಣ ಮುನ್ನೆಲೆಗೆ ಬಂದಿರುವುದು. ಒತ್ತಡ ಗುಂಪುಗಳ ಮಧ್ಯಸ್ಥಿಕೆಯು ರಾಜಕೀಯ ವ್ಯವಸ್ಥೆಯೊಂದರ ಸಾಮಾಜಿಕ ಹಾಗೂ ಮಾನಸಿಕ ಪರಿಸರವನ್ನು ಕಟ್ಟಿಕೊಡುತ್ತದೆ. ಒತ್ತಡ ಗುಂಪುಗಳಲ್ಲಿನ ಭಾಗವಹಿಸುವಿಕೆಯು ಜನರು ರಾಜಕೀಯ ಭಾಗವಹಿಸುವಿಕೆಗೆ ಪ್ರೇರೇಪಿಸುತ್ತದೆ. ಅಲ್ಲದೇ ಒತ್ತಡ ಗುಂಪುಗಳು ಸಾರ್ವಜನಿಕರು ಮತ್ತು ಸರ್ಕಾರದ ನಡುವೆ ಸಂಪರ್ಕ ಬೆಸೆಯಲು ಸಹಾಯಕವಾಗಿವೆ.

ಈ ಮೇಲೆ ಚರ್ಚಿಸಲಾದ ರಾಜಕೀಯ ಪಕ್ಷಗಳ ವರ್ಗೀಕರಣವು ಮೇಲ್ನೋಟಕ್ಕೆ ಸಾಂಪ್ರದಾಯಿಕ ವಿಂಗಡಣೆಯನ್ನು ಪ್ರತಿನಿಧಿಸುತ್ತದೆ. ಆದರೆ, ಈ ವಿಂಗಡಣೆಯು ವ್ಯತ್ಯಾಸಿತ ಅಂಶಗಳನ್ನು ಮೈಗೂಡಿಸಿಕೊಂಡ ವರ್ಗೀಕರಣವಾಗಿದೆ. ಫಲವಾಗಿ ಪ್ರಸ್ತಾಪಿತ ಪ್ರಧಾನ ವರ್ಗೀಕರಣದೊಡನೆ ದ್ವಿ ಪಕ್ಷ ಹಾಗೂ ಅರ್ಧ ಪಕ್ಷ ಪದ್ಧತಿಯಂತಹ ಉಪ ವಿಂಗಡಣೆಯನ್ನೂ ನಾವು ಗುರುತಿಸಬಹುದಾಗಿದೆ.



## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ರಾಜಕೀಯ ಪಕ್ಷ ಎಂದರೇನು?
2. ರಾಜಕೀಯ ಪಕ್ಷವನ್ನು ವ್ಯಾಖ್ಯಾನಿಸಿರಿ.
3. ರಾಜಕೀಯ ಪಕ್ಷದ ಮೂರು ಲಕ್ಷಣಗಳನ್ನು ಬರೆಯಿರಿ.
4. ಏಕಪಕ್ಷ ಪದ್ಧತಿ ಎಂದರೇನು? ಉದಾಹರಣೆ ನೀಡಿ.
5. ದ್ವಿ ಪಕ್ಷ ಪದ್ಧತಿ ಎಂದರೇನು? ಉದಾಹರಣೆ ನೀಡಿ.
6. ಬಹು ಪಕ್ಷ ಪದ್ಧತಿ ಎಂದರೇನು? ಉದಾಹರಣೆ ನೀಡಿ.
7. ಒತ್ತಡ ಗುಂಪಿನ ಅರ್ಥವನ್ನು ಬರೆಯಿರಿ.
8. ಒತ್ತಡ ಗುಂಪನ್ನು ವ್ಯಾಖ್ಯಾನಿಸಿರಿ.
9. ಯಾವುದಾದರೂ ನಾಲ್ಕು ಒತ್ತಡ ಗುಂಪುಗಳನ್ನು ಹೆಸರಿಸಿರಿ.
10. ಒತ್ತಡ ಗುಂಪಿನ ಮೂರು ಲಕ್ಷಣಗಳನ್ನು ಬರೆಯಿರಿ.

**[B.] ಐದು ಅಂಕದ ಪ್ರಶ್ನೆಗಳು:**

1. ರಾಜಕೀಯ ಪಕ್ಷಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
2. ದ್ವಿ ಪಕ್ಷ ಪದ್ಧತಿಯನ್ನು ಚರ್ಚಿಸಿರಿ.
3. ಬಹು ಪಕ್ಷ ಪದ್ಧತಿಯನ್ನು ವಿವರಿಸಿರಿ.
4. ಒತ್ತಡ ಗುಂಪಿನ ಲಕ್ಷಣಗಳನ್ನು ಪರಿಶೀಲಿಸಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ರಾಜಕೀಯ ಪಕ್ಷ ಪದ್ಧತಿಯ ವರ್ಗೀಕರಣವನ್ನು ಸಂಕ್ಷೇಪವಾಗಿ ವಿವರಿಸಿರಿ.
2. ಒತ್ತಡ ಗುಂಪುಗಳ ಪಾತ್ರವನ್ನು ಚರ್ಚಿಸಿರಿ.

ಅಧ್ಯಾಯ 7:

# ರಾಜಕೀಯ ಪ್ರಕ್ರಿಯೆ

## [Political Process].

**ಪ್ರಸ್ತಾವನೆ [Introduction]:**

ರಾಷ್ಟ್ರ ಮತ್ತು ಅದರ ನಿಯೋಗಿಯಾದ ಸರ್ಕಾರಕ್ಕೆ ಸಂಬಂಧಿಸಿದ ದೈನಂದಿನ ಚಟುವಟಿಕೆಗಳೆಲ್ಲ ರಾಜಕೀಯ ಎನಿಸಿಕೊಂಡಿದೆ. ರಾಜಕೀಯ ಪರಿಕಲ್ಪನೆಯು ದೇಶವೊಂದರ ಪ್ರಜೆಗಳು ನಿರ್ವಹಿಸುವ ವಿಶಾಲ ಹಾಗೂ ವೈವಿಧ್ಯಮಯ ರಾಜಕೀಯ ಚಟುವಟಿಕೆಗಳನ್ನೂ ಪ್ರತಿನಿಧಿಸುತ್ತದೆ. ನಿರ್ದಿಷ್ಟ ಉದ್ದೇಶ ಸಾಧಿಸಲು ಈ ರಾಜಕೀಯ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಕೈಗೊಳ್ಳುವುದು ರಾಜಕೀಯ ಪ್ರಕ್ರಿಯೆ ಎಂದು ಗುರುತಿಸಲ್ಪಡುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಇತ್ತೀಚೆಗೆ ಮಹತ್ವ ಪಡೆದಿರುವ ಪ್ರಧಾನ ರಾಜಕೀಯ ಪ್ರಕ್ರಿಯೆಗಳ ಮೇಲೆ ಬೆಳಕು ಚೆಲ್ಲಲಾಗಿದೆ.

**[I.] ರಾಜಕೀಯ ಸಾಮಾಜೀಕರಣ [Political Socialization]:**

**[A.] ರಾಜಕೀಯ ಸಾಮಾಜೀಕರಣದ ಅರ್ಥ**

**[Meaning of Political Socialization]:**

ಸಾಮಾಜೀಕರಣ ಎಂಬುದು ವ್ಯಕ್ತಿಗಳಲ್ಲಿ ಮೌಲ್ಯ, ನಂಬಿಕೆ ಅಥವಾ ವರ್ತನೆಗಳ ನಿರ್ವಹಣೆಗೆ ಸಂಬಂಧಿಸಿದ ಸಮಾಜಶಾಸ್ತ್ರೀಯ ಪರಿಕಲ್ಪನೆ. ಸಾಮಾಜೀಕರಣವು ಸಮಾಜದಲ್ಲಿ ಪರಸ್ಪರರಿಗೆ ಅನ್ವಯವಾಗುವ ಗುಂಪಿನ ನಿಯಮಗಳನ್ನು ಪಾಲಿಸಲು ವ್ಯಕ್ತಿಯನ್ನು ಸಿದ್ಧಗೊಳಿಸುವ ಪ್ರಕ್ರಿಯೆಯಾಗಿದೆ. ಸಾಮಾಜೀಕರಣ ಎಂಬ ಪರಿಕಲ್ಪನೆಯನ್ನು ಎಚ್. ಎಚ್. ಹೈಮನ್ ಎಂಬಾತ ಮೊದಲು ಬಳಸಿದುದು ಗಮನಾರ್ಹ ಸಂಗತಿ. ವ್ಯಕ್ತಿಗಳಲ್ಲಿ ವಿವಿಧ ಮೌಲ್ಯ, ನಂಬಿಕೆ ಅಥವಾ ವರ್ತನೆಗಳನ್ನು ನೆಲೆಗೊಳಿಸಿ ಪೀಳಿಗೆಯಿಂದ ಪೀಳಿಗೆಗೆ ಅವುಗಳನ್ನು ವರ್ಗಾಯಿಸುವ ಪ್ರಕ್ರಿಯೆಯು ಸಾಮಾಜೀಕರಣವೆನಿಸುತ್ತದೆ. ಸಾಮಾಜೀಕರಣ ಪ್ರಕ್ರಿಯೆಯು ಯಶಸ್ವಿಯಾಗಲು ನಿರಂತರವಾಗಿ ಕಾರ್ಯಾಚರಿಸುವ ಕುಟುಂಬ, ಶಾಲೆ, ರಾಜಕೀಯ ಪಕ್ಷಗಳಂತಹ ಸಾಮಾಜಿಕ ರಚನೆಗಳ ಕೊಡುಗೆ ಮಹತ್ವದ್ದಾಗಿರುತ್ತದೆ. ಸಾಮಾಜೀಕರಣ ಕುರಿತಾದ ಈ ಪೂರ್ವ ತಿಳುವಳಿಕೆಯ ಬೆಳಕಿನಲ್ಲಿ ರಾಜಕೀಯ ಸಾಮಾಜೀಕರಣವನ್ನು ನಾವು



ಅರ್ಥೈಸಿಕೊಳ್ಳಬಹುದಾಗಿದೆ.

ಸಮಾಜವೊಂದರ ವ್ಯಕ್ತಿಗಳಲ್ಲಿ ರಾಜಕೀಯ ಮೌಲ್ಯ, ದೃಷ್ಟಿಕೋನ ಅಥವಾ ಭಾವನೆಗಳನ್ನು ನೆಲೆಗೊಳಿಸುವ ಮಾನಸಿಕ ಪ್ರಕ್ರಿಯೆಯೇ ರಾಜಕೀಯ ಸಾಮಾಜೀಕರಣವಾಗಿದೆ. ರಾಜಕೀಯ ನಿಯಮಾವಳಿಗಳ ನ್ಯಾಯ ಸಮ್ಮತತೆಯನ್ನು ಪ್ರಶ್ನಿಸದೇ ವ್ಯಕ್ತಿಗಳು ತಮಗೆ ಅರಿವಿಲ್ಲದಂತೆ ಅವುಗಳನ್ನು ಪಾಲಿಸುತ್ತಾ ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುವುದನ್ನು ರಾಜಕೀಯ ಸಾಮಾಜಿಕರಣ ಪ್ರತಿನಿಧಿಸುತ್ತದೆ. ರಾಜಕೀಯ ಸಾಮಾಜೀಕರಣವು ವ್ಯಕ್ತಿಗಳು ಕುಟುಂಬ, ಶಾಲೆ, ಮಾಧ್ಯಮದಂತಹ ವಿವಿಧ ಸಾಮಾಜಿಕ ರಚನೆಗಳ ನೆರವಿನಿಂದ ರಾಜಕೀಯ ಮೌಲ್ಯ, ದೃಷ್ಟಿಕೋನ ಅಥವಾ ಭಾವನೆಗಳನ್ನು ರಾಜಕೀಯವಾಗಿ ಭಾಗವಹಿಸುವಿಕೆಗೆ ಮುಂಚಿನ ಅವಧಿಯಲ್ಲಿಯೇ ಮೈಗೂಡಿಸಿಕೊಳ್ಳುವ ಪ್ರಕ್ರಿಯೆಯಾಗಿದೆ. ಮುಂದುವರಿದು, ರಾಜಕೀಯ ಸಾಮಾಜೀಕರಣವೆಂಬುದು ಕಲಿಕಾ ಪ್ರಕ್ರಿಯೆಯಾಗಿದ್ದು ಇದರ ನೆರವಿನಿಂದ ವ್ಯಕ್ತಿಗಳು ಸಾಮಾಜಿಕವಾಗಿ ಸ್ವೀಕಾರಾರ್ಹವಾದ ರಾಜಕೀಯ ಮೌಲ್ಯ, ದೃಷ್ಟಿಕೋನ, ಭಾವನೆ ಅಥವಾ ವರ್ತನೆಗಳನ್ನು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುವುದಾಗಿದೆ. ಒಟ್ಟಾರೆ ವಿವಿಧ ಸಾಮಾಜಿಕ ರಚನೆಗಳ ನೆರವಿನಿಂದ ರಾಜಕೀಯ ಮೌಲ್ಯ, ನಂಬಿಕೆ, ಭಾವನೆ ಅಥವಾ ವರ್ತನೆಗಳನ್ನು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುವ ಪ್ರಕ್ರಿಯೆಯನ್ನೇ ರಾಜಕೀಯ ಸಾಮಾಜೀಕರಣ ಎನ್ನಬಹುದು.

ಗಮನಾರ್ಹ ಅಂಶವೇನೆಂದರೆ, ರಾಜಕೀಯ ಸಾಮಾಜೀಕರಣವು ರಾಷ್ಟ್ರವೊಂದು ತನ್ನದೇಯಾದ ರಾಜಕೀಯ ಸಂಸ್ಕೃತಿಯನ್ನು ರಚಿಸಿಕೊಳ್ಳಲು, ವರ್ಗಾಯಿಸಲು, ನಿರ್ವಹಿಸಲು ಹಾಗೂ ಪರಿವರ್ತಿಸಲು ಕಾರಣವಾಗುತ್ತದೆ. ವ್ಯಕ್ತಿಗಳನ್ನು ರಾಜಕೀಯ ಸಮುದಾಯವೊಂದರ ಸಕ್ರಿಯ ಸದಸ್ಯರನ್ನಾಗಿಸುವುದು ರಾಜಕೀಯ ಸಾಮಾಜೀಕರಣದ ಗುರಿಯಾಗಿದೆ. ಸ್ವೀಕಾರಾರ್ಹ ವರ್ತನೆ ಅಥವಾ ಮೌಲ್ಯಗಳನ್ನು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುವ ಮೂಲಕ ದೇಶದಲ್ಲಿ ರಾಜಕೀಯ ಸ್ಥಿರತೆಯನ್ನು ಮೂಡಿಸುವುದು ರಾಜಕೀಯ ಸಾಮಾಜಿಕರಣದ ತಿರುಳಾಗಿದೆ. ಆಸಕ್ತಿದಾಯಕ ಅಂಶವೇನೆಂದರೆ, ಬಾಲ್ಯದಿಂದಲೇ ರಾಜಕೀಯ ವರ್ತನೆ ಅಥವಾ ನಿಯಮಗಳನ್ನು ವಿವಿಧ ಸಾಮಾಜಿಕ ರಚನೆಗಳ ಸಹಾಯದಿಂದ ವ್ಯಕ್ತಿಗಳಲ್ಲಿ ಬೆಳೆಸಿ ಸಮರ್ಥ ಪ್ರಜೆಗಳನ್ನು ಸೃಷ್ಟಿಸುವುದು ರಾಜಕೀಯ ಸಾಮಾಜೀಕರಣದ ಆಶಯ.

**[B.] ರಾಜಕೀಯ ಸಾಮಾಜೀಕರಣದ ನಿಯೋಗಿಗಳು**

**[Agents of Political Socialization]:**

ಸಮಾಜದಲ್ಲಿ ಸಾಮಾಜೀಕರಣಕ್ಕೆ ನೆರವಾಗುವ ಹಲವು ರಚನೆಗಳಿರುತ್ತವೆ. ಈ ರಚನೆಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ವ್ಯಕ್ತಿಗಳನ್ನು ಪ್ರಭಾವಿಸುವ ಮೂಲಕ ಸಾಮಾಜೀಕರಣ ಪ್ರಕ್ರಿಯೆಗೆ ನೆರವಾಗುತ್ತವೆ. ನಿರಂತರವಾಗಿ ಕಾರ್ಯಾಚರಿಸುವ

ಸಾಮಾಜಿಕ ರಚನೆಗಳು ಬಹು ಆಯಾಮದ ಸಾಮಾಜೀಕರಣಕ್ಕೆ ಕಾರಣವಾಗುತ್ತವೆ. ಆಲ್ಮಂಡ್ ಮತ್ತು ಪೊವೆಲ್ ಎಂಬ ಚಿಂತಕರು ರಾಜಕೀಯ ಸಾಮಾಜಿಕರಣವನ್ನು ಉಂಟು ಮಾಡುವ ಸಮಾಜದಲ್ಲಿನ ಹಲವು ಸಾಮಾಜಿಕ ರಚನೆಗಳನ್ನು ಗುರುತಿಸಿದ್ದು ಅವುಗಳನ್ನೇ ರಾಜಕೀಯ ಸಾಮಾಜೀಕರಣದ ನಿಯೋಗಿಗಳು ಎನ್ನಲಾಗುತ್ತದೆ. ಪ್ರಧಾನ ರಾಜಕೀಯ ಸಾಮಾಜೀಕರಣದ ನಿಯೋಗಿಗಳೆಂದರೆ

**1. ಕುಟುಂಬ [Family]:** ಕುಟುಂಬವು ವ್ಯಕ್ತಿಯೊಬ್ಬನ ಜೀವನದಲ್ಲಿ ಅತ್ಯಂತ ಪ್ರಭಾವಶಾಲಿಯಾದ ಸಾಮಾಜಿಕ ರಚನೆಯಾಗಿದೆ. ವ್ಯಕ್ತಿಗೆ ಬಾಲ್ಯದಲ್ಲಿಯೇ ಹೊರ ಜಗತ್ತನ್ನು ಪರಿಚಯಿಸುವ ಪ್ರಥಮ ತಾಣವೇ ಕುಟುಂಬ. ಕುಟುಂಬದ ಹಿರಿಯ ಸದಸ್ಯರ ಮೂಲಕ ವ್ಯಕ್ತಿ ಬಾಲ್ಯದಲ್ಲಿ ರಾಜಕೀಯ ಮೌಲ್ಯ, ವರ್ತನೆ, ನಿಯಮಾವಳಿಗಳನ್ನು ಪರಿಚಯಿಸಿಕೊಳ್ಳುತ್ತಾನೆ. ಕಾಲಾಂತರದಲ್ಲಿ ಕೌಟುಂಬಿಕವಾಗಿ ಕಲಿತ ರಾಜಕೀಯ ವರ್ತನೆ, ಮೌಲ್ಯ ಅಥವಾ ನಿಯಮಾವಳಿಗಳನ್ನು ಕ್ರಮೇಣ ಸ್ಪಷ್ಟಪಡಿಸಿಕೊಳ್ಳುತ್ತಾ ಸಾಗುತ್ತಾನೆ. ವಯಸ್ಕನಾದ ಬಳಿಕ ತಾನು ಮೈಗೂಡಿಸಿಕೊಂಡ ರಾಜಕೀಯ ಮೌಲ್ಯ, ವರ್ತನೆ ಅಥವಾ ನಿಯಮಗಳನ್ನು ಸ್ವತಂತ್ರವಾಗಿ ಪಾಲಿಸುತ್ತಾ ಪೀಳಿಗೆ ಯುದ್ಧಕಕ್ಕೂ ನಿರ್ವಹಿಸುತ್ತಾನೆ. ಉದಾ: ಮತ ನೀಡುವಾಗ ಆಮಿಷ್ಯಗಳಿಗೆ ಒಳಗಾಗಬಾರದು ಎಂಬ ಹಿರಿಯರ ನಂಬಿಕೆಯನ್ನು ತನ್ನ ಬಾಲ್ಯದಲ್ಲಿ ಕಲಿತ ವ್ಯಕ್ತಿ ಜೀವನವಿಡೀ ಪಾಲಿಸುವುದು. ಹೀಗೆ ಸಾಮಾಜಿಕ ರಚನೆಯಾದ ಕುಟುಂಬವು ವ್ಯಕ್ತಿಯ ರಾಜಕೀಯ ಸಾಮಾಜಿಕರಣಕ್ಕೆ ಪ್ರಧಾನ ಸಾಧನವಾಗಿ ಪರಿಗಣಿಸಲ್ಪಟ್ಟಿದೆ.

**2. ಶೈಕ್ಷಣಿಕ ಸಂಸ್ಥೆಗಳು:** ವ್ಯಕ್ತಿಯ ಜೀವನದಲ್ಲಿ ಕುಟುಂಬದ ಬಳಿಕ ಪ್ರಭಾವ ಬೀರುವ ಪ್ರಧಾನ ಸಾಮಾಜಿಕ ರಚನೆಗಳೆಂದರೆ ಶಿಕ್ಷಣ ಸಂಸ್ಥೆಗಳು. ವ್ಯಕ್ತಿ ವಯಸ್ಕನಾಗಿ ರಾಜಕೀಯ ವ್ಯವಹಾರದಲ್ಲಿ ಭಾಗವಹಿಸುವ ಮೊದಲೇ ಶಿಕ್ಷಣ ಸಂಸ್ಥೆಗಳು ಆತನಲ್ಲಿ ರಾಜಕೀಯ ಮೌಲ್ಯ, ವರ್ತನೆ ಅಥವಾ ನಿಯಮಾವಳಿಗಳ ಬಗೆಗೆ ಸ್ಪಷ್ಟ ಅರಿವನ್ನು ಒದಗಿಸುತ್ತವೆ. ಪಠ್ಯಕ್ರಮದ ಭಾಗವಾಗಿ ರಾಷ್ಟ್ರೀಯ ಚಳುವಳಿ, ಹಕ್ಕುಗಳ ಮಹತ್ವ, ಸಂವಿಧಾನದ ಉಪಯುಕ್ತತೆ, ಪ್ರಜೆಗಳ ಜವಾಬ್ದಾರಿ, ಸರ್ಕಾರದ ಗುರಿಗಳಂತಹ ರಾಜಕೀಯ ವಿಚಾರಗಳನ್ನು ವ್ಯಕ್ತಿಗೆ ಮನವರಿಕೆ ಮಾಡಿಕೊಳ್ಳುವ ಅವಕಾಶವನ್ನು ಶಿಕ್ಷಣ ಸಂಸ್ಥೆಗಳು ಒದಗಿಸುತ್ತವೆ. ಜೊತೆಗೆ ಪಠ್ಯೇತರ ಚಟುವಟಿಕೆಗಳ ರೂಪದಲ್ಲಿಯೂ ತ್ಯಾಗ, ಸೇವಾ ಮನೋಭಾವ, ಅಹಿಂಸೆ ಮೊದಲಾದ ರಾಜಕೀಯ ವರ್ತನೆಗಳನ್ನು ವ್ಯಕ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಮೈಗೂಡಿಸಿಕೊಳ್ಳುತ್ತಾನೆ. ಹೀಗೆ ವ್ಯಕ್ತಿಯೊಬ್ಬ ಶೈಕ್ಷಣಿಕ ಸಂಸ್ಥೆಗಳಲ್ಲಿ ತಾನು ಕಲಿತುಕೊಂಡ ರಾಜಕೀಯ ಮೌಲ್ಯ ಅಥವಾ ವರ್ತನೆಗಳನ್ನು ನಾಗರಿಕನಾಗಿ ಪಾಲಿಸಲು ಸಿದ್ಧನಾಗುತ್ತಾನೆ. ಹೀಗೆ ಶೈಕ್ಷಣಿಕ ಸಂಸ್ಥೆಗಳು ರಾಜಕೀಯ ಸಾಮಾಜೀಕರಣದ ಸಾಧನವಾಗಿ ಗುರುತಿಸಿಕೊಳ್ಳುತ್ತವೆ.

**3. ಸಮಾನ ವಯಸ್ಕ ಗುಂಪುಗಳು [Peer Groups]:** ವಿದ್ಯಾರ್ಥಿಗಳು ತಮ್ಮ



ಯೌವನಾವಸ್ಥೆಗೆ ಕಾಲಿಟ್ಟೊಡನೆ ಸಮಾನ ಮನಸ್ಕ ಮತ್ತು ವಯಸ್ಕ ಗುಂಪುಗಳಿಂದ ಸಹಜವಾಗಿ ಪ್ರಭಾವಿತರಾಗುತ್ತಾರೆ. ಸಮಾನ ವಯಸ್ಕ ಗುಂಪಿನ ಚರ್ಚೆ, ಕಾರ್ಯಾಗಾರ, ಸ್ಪರ್ಧೆ, ವಿಚಾರ ಮಂಡನಾ ವೇದಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ರಾಜಕೀಯ ಮೌಲ್ಯ, ನಿಯಮಾವಳಿ, ವರ್ತನೆಗಳ ವಿಮರ್ಶಾತ್ಮಕ ಮನವರಿಕೆಗೆ ವ್ಯಕ್ತಿಯೊಬ್ಬ ಮುಂದಾಗುತ್ತಾನೆ. ಜೊತೆಗೆ ಕಾಲೇಜು ಅಥವಾ ವಿಶ್ವ ವಿದ್ಯಾಲಯಗಳಲ್ಲಿ ಎನ್. ಎಸ್. ಎಸ್ ಮತ್ತು ಎನ್. ಸಿ. ಸಿಗಳಲ್ಲಿ ಸಕ್ರಿಯರಾಗಿ ವಿವಿಧ ವಿದ್ಯಮಾನಗಳನ್ನು ಮೈಗೂಡಿಸಿಕೊಳ್ಳಲು ಸಮಾನ ವಯಸ್ಕ ಗುಂಪುಗಳು ನೆರವಾಗುತ್ತವೆ. ಇದರೊಡನೆ ಸಮಾನ ಸವಾಲುಗಳ ಪರಿಹಾರಕ್ಕಾಗಿ ಸಮಾನ ವಯಸ್ಕ ಗುಂಪುಗಳು ಕೈಗೊಳ್ಳುವ ಪ್ರತಿಭಟನೆ ಮತ್ತು ವಿದ್ಯಾರ್ಥಿ ಚುನಾವಣೆಗಳ ಸ್ಪರ್ಧೆಯಂತಹ ಅನುಭವಗಳನ್ನು ವ್ಯಕ್ತಿ ಸಮಾನ ವಯಸ್ಕ ಗುಂಪುಗಳಲ್ಲಿ ಪಡೆದುಕೊಳ್ಳುವನು. ಈ ಮೂಲಕ ಜೀವನದಾದ್ಯಂತ ಪಾಲಿಸಬೇಕಾದ ರಾಜಕೀಯ ಮೌಲ್ಯಗಳು ಅಥವಾ ವರ್ತನೆಗಳನ್ನು ಅಂತರ್ಗತಗೊಳಿಸಿಕೊಂಡು ರಾಜಕೀಯ ಸಾಮಾಜೀಕರಣಗೊಳ್ಳಲು ಸಮಾನರ ಗುಂಪು ಸಾಧನವೆನಿಸಿದೆ.

**4. ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು [Unions and Political Parties]:** ವ್ಯಕ್ತಿ ತನ್ನ ಔದ್ಯೋಗಿಕ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ನಾನಾ ಸಂಘಟನೆಯ ಸದಸ್ಯತ್ವ ಪಡೆದಿರುತ್ತಾನೆ. ಜೊತೆಗೆ ತನಗೆ ಸರಿ ಹೊಂದುವ ರಾಜಕೀಯ ಪಕ್ಷವೊಂದರ ಬೆಂಬಲಿಗನಾಗಿರುತ್ತಾನೆ. ಸಾಮಾಜಿಕ ರಚನೆಯಾಗಿರುವ ಈ ವಿವಿಧ ಸಂಘಟನೆಗಳು ಅಥವಾ ರಾಜಕೀಯ ಪಕ್ಷಗಳು ವ್ಯಕ್ತಿಯ ರಾಜಕೀಯ ಮೌಲ್ಯ, ವರ್ತನೆ ಅಥವಾ ಭಾವನೆಗಳನ್ನು ಪ್ರಭಾವಿಸುತ್ತವೆ. ನಾನಾ ಸಂಘಟನೆಗಳು ಬೇಡಿಕೆಗಳ ರಚನೆ, ಅವುಗಳ ಈಡೇರಿಕೆಗೆ ಅನುಸರಿಸುವ ವಿಧಾನ, ಪರಿಹಾರಗಳು ಮುಂತಾದ ಅನುಭವಗಳನ್ನು ಹೊಂದಲು ವ್ಯಕ್ತಿಗಳಿಗೆ ಸಹಕಾರಿಯಾಗುತ್ತವೆ. ಅಂತೆಯೇ ರಾಜಕೀಯ ಪಕ್ಷಗಳು ಅಧಿಕಾರದ ಮಹತ್ವ, ಚುನಾವಣಾ ಸ್ಪರ್ಧೆ, ಅಧಿಕಾರ ಉಳಿಸಿಕೊಳ್ಳುವಿಕೆ ಮುಂತಾದ ಅಂಶಗಳಲ್ಲಿ ಸ್ಪಷ್ಟ ನಿಲುವು ತಾಳಲು ವ್ಯಕ್ತಿಗಳಿಗೆ ನೆರವಾಗುತ್ತವೆ. ಹೀಗೆ ವ್ಯಕ್ತಿ ಸದಸ್ಯತ್ವ ಹೊಂದುವ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ರಾಜಕೀಯ ಸಾಮಾಜೀಕರಣಕ್ಕೆ ನಿಯೋಗಿಗಳಾಗಿ ಪರಿಗಣಿಸಲ್ಪಟ್ಟಿವೆ.

**5. ಸಮೂಹ ಮಾಧ್ಯಮಗಳು [Mass Medias]:** ಸಮಾಜವೊಂದರ ವ್ಯಕ್ತಿಗಳು ತಮ್ಮ ರಾಜಕೀಯ ವ್ಯವಸ್ಥೆಯನ್ನು ಕುರಿತಂತೆ ಪ್ರಭಾವಕ್ಕೊಳಗಾಗಲು ಸಮೂಹ ಮಾಧ್ಯಮಗಳು ನೆರವಾಗುತ್ತವೆ. ಆಕಾಶವಾಣಿ, ದೂರದರ್ಶನ, ಪತ್ರಿಕೆಗಳು ವ್ಯಕ್ತಿಗಳಿಗೆ ರಾಜಕೀಯ ವ್ಯವಸ್ಥೆಯ ವಿದ್ಯಮಾನಗಳನ್ನು ಅರಿತುಕೊಳ್ಳಲು ಅಗತ್ಯವಾದ ವಿವರಗಳನ್ನು ಪೂರೈಸುತ್ತವೆ. ವಿವಿಧ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುವ ಸರ್ಕಾರಿ ಸೇವೆಗಳು, ಸಾಧನೆಗಳು ಮತ್ತು ವಿಫಲತೆಗಳು ವ್ಯಕ್ತಿ ತನ್ನದೇಯಾದ ರಾಜಕೀಯ ಭಾವನೆಗಳನ್ನು ಹೊಂದಲು

ನೆರವಾಗುತ್ತವೆ. ಇದರೊಡನೆ ರಾಜಕೀಯವಾಗಿ ಜನರ ಸಹಕಾರ, ಭಾಗವಹಿಸುವಿಕೆ, ಪ್ರತಿಭಟನೆಗಳನ್ನು ಮನವರಿಕೆ ಮಾಡಿಕೊಂಡು ರಾಜಕೀಯ ವರ್ತನೆಗಳನ್ನು ಮೈಗೂಡಿಸಿಕೊಳ್ಳಲು ವ್ಯಕ್ತಿಗಳು ಮುಂದಾಗುತ್ತಾರೆ. ಹೀಗೆ ಸಮೂಹ ಮಾಧ್ಯಮಗಳು ರಾಜಕೀಯ ಸಾಮಾಜೀಕರಣಕ್ಕೆ ಸಹಕಾರಿಯಾಗಿದ್ದು ಸಮಕಾಲೀನ ಸಾಮಾಜಿಕ ಜಾಲ ತಾಣಗಳು ಈ ನಿಟ್ಟಿನಲ್ಲಿ ಹೆಚ್ಚು ಪರಿಣಾಮಕಾರಿಯಾಗಿದುದು ಗಮನಾರ್ಹ.

6. ರಾಜಕೀಯ ಸಂಸ್ಥೆಗಳು [Political Institutions]: ವ್ಯಕ್ತಿಗಳು ತಮ್ಮ ರಾಜಕೀಯ ವ್ಯವಸ್ಥೆಯೊಳಗಿನ ವಿವಿಧ ರಾಜಕೀಯ ಸಂಸ್ಥೆಗಳೊಡನೆ ನೇರ ಸಂಪರ್ಕಕ್ಕೆ ಒಳಗಾದಾಗ ರಾಜಕೀಯ ಸಾಮಾಜೀಕರಣ ಉಂಟಾಗುತ್ತದೆ. ಮತದಾನಕ್ಕಾಗಿ ಚುನಾವಣೆಗಳೊಡನೆ, ಸದಸ್ಯತ್ವಕ್ಕಾಗಿ ರಾಜಕೀಯ ಪಕ್ಷಗಳೊಡನೆ, ಮೊಕದ್ದಮೆಗಳಿಗಾಗಿ ನ್ಯಾಯಾಲಯಗಳೊಡನೆ, ಹಿತಾಸಕ್ತಿಗಳ ರಕ್ಷಣೆಗಾಗಿ ಒತ್ತಡ ಗುಂಪುಗಳೊಡನೆ ವ್ಯಕ್ತಿಗಳು ನೇರ ಸಂಪರ್ಕಕ್ಕೆ ಬರುತ್ತಾರೆ. ಈ ವಿವಿಧ ರಾಜಕೀಯ ಸಂಸ್ಥೆಗಳ ಅನುಭವಗಳು ವ್ಯಕ್ತಿಗಳಲ್ಲಿ ರಾಜಕೀಯ ವರ್ತನೆ, ಮೌಲ್ಯ ಅಥವಾ ಭಾವನೆಗಳನ್ನು ಬಲಗೊಳಿಸುತ್ತವೆ. ಹೀಗೆ ರಾಜಕೀಯ ಸಂಸ್ಥೆಗಳು ರಾಜಕೀಯ ಸಾಮಾಜೀಕರಣದ ಪ್ರಧಾನ ನಿಯೋಗಿಗಳೆನಿಸಿವೆ.

7. ಸರ್ಕಾರ [Government]: ಸರ್ಕಾರಕ್ಕೆ ಸಂಬಂಧಿಸಿದ ದೈನಂದಿನ ವ್ಯವಹಾರಗಳು ವ್ಯಕ್ತಿಗಳ ರಾಜಕೀಯ ಸಾಮಾಜೀಕರಣದ ರಹದಾರಿಯಾಗಿದೆ. ಜನರು ತಮ್ಮ ಪ್ರತಿನಿಧಿಗಳ ಮೂಲಕ ಸರ್ಕಾರವನ್ನು ಪ್ರಭಾವಿಸುತ್ತಾರೆ. ಅಂತೆಯೇ ಸರ್ಕಾರಗಳು ಜನತಾ ಪ್ರತಿನಿಧಿಗಳ ಮೂಲಕ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತವೆ. ಈ ಸಮಯದಲ್ಲಿ ವ್ಯಕ್ತಿ ಮತ್ತು ಸರ್ಕಾರದ ನಡುವಿನ ಸಂಬಂಧ ವೃದ್ಧಿಗೊಂಡು ರಾಜಕೀಯ ಸಾಮಾಜೀಕರಣ ಬಲಗೊಳ್ಳುತ್ತದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ವ್ಯಕ್ತಿಗಳು ಸರ್ಕಾರವನ್ನು ತಮ್ಮದೆಂಬ ಭಾವನೆ ಮೂಡಿಸಿಕೊಳ್ಳಲು ರಾಜಕೀಯ ಸಾಮಾಜೀಕರಣದ ಪಾತ್ರ ಅಗಾಧವಾಗಿರುತ್ತದೆ. ಹೀಗೆ ಸರ್ಕಾರವು ರಾಜಕೀಯ ಸಂಸ್ಥೆಯಾಗಿದ್ದರೂ ರಾಜಕೀಯ ಸಾಮಾಜೀಕರಣಕ್ಕೆ ಶ್ರಮಿಸುವುದರಿಂದ ಅದನ್ನೂ ಸಹ ರಾಜಕೀಯ ಸಾಮಾಜೀಕರಣದನಿಯೋಗಿಯಾಗಿ ಪರಿಗಣಿಸಲಾಗಿದೆ.

ಈ ಮೇಲೆ ಪ್ರಸ್ತಾಪಿಸಲಾದ ಹಲವು ನಿಯೋಗಿಗಳು ರಾಜಕೀಯ ಸಾಮಾಜಿಕರಣದ ಪ್ರಮುಖ ಸಾಧನಗಳಾಗಿವೆ. ಕೆಲ ಚಿಂತಕರು ಧರ್ಮ ಹಾಗೂ ಜಾತಿಗಳಂತಹ ಪರಿಕಲ್ಪನೆಗಳೂ ಸಹ ರಾಜಕೀಯ ಸಾಮಾಜಿಕರಣದಲ್ಲಿ ಮಹತ್ವದ ನಿಯೋಗಿಗಳೆಂದು ಪ್ರತಿಪಾದಿಸಿರುವರು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಧರ್ಮ ಮತ್ತು ಜಾತಿಗಳು ರಾಜಕೀಯ ಸಾಮಾಜಿಕರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸದಿದ್ದರೂ ಭಾರತದ ರಾಜಕೀಯ ಸಾಮಾಜಿಕರಣದಲ್ಲಿ ಧರ್ಮ ಹಾಗೂ ಜಾತಿ ಮಹತ್ವದ ಪಾತ್ರ ನಿರ್ವಹಿಸುತ್ತಿರುವುದು ಗಮನಾರ್ಹ. ಒಟ್ಟಾರೆ ರಾಜಕೀಯ ಸಮುದಾಯವೊಂದರ ವ್ಯಕ್ತಿಗಳು ಯಾವ ಅಡೆ ತಡೆಗಳಿಲ್ಲದೇ ರಾಜಕೀಯ ಮೌಲ್ಯ, ವರ್ತನೆ ಅಥವಾ ಭಾವನೆಗಳನ್ನು ಬೆಳೆಸಿಕೊಂಡು



ರಾಜಕೀಯ ಸಾಮಾಜಿಕರಣಕ್ಕೊಳಗಾಗಲು ಪ್ರಸ್ತಾಪಿತ ನಿಯೋಗಿಗಳ ಕಾಣಿಕೆ ಅಪಾರವೆನ್ನಬಹುದು.

## [II.] ರಾಜಕೀಯ ಸಂಸ್ಕೃತಿ [Political Culture]:

ರಾಜ್ಯಶಾಸ್ತ್ರದ ನೂತನ ಪರಿಕಲ್ಪನೆಗಳಲ್ಲಿ ರಾಜಕೀಯ ಸಂಸ್ಕೃತಿಯೂ ಒಂದು. ಬಹುತೇಕ ಚಿಂತಕರು ಅಭಿಪ್ರಾಯಪಡುವಂತೆ 1960 ರ ಬಳಿಕ ಆಧುನಿಕ ರಾಜಕೀಯ ವಿಶ್ಲೇಷಣೆಯಲ್ಲಿ ರಾಜಕೀಯ ಸಂಸ್ಕೃತಿ ವ್ಯಾಪಕವಾಗಿ ಬಳಸಲ್ಪಟ್ಟಿತು. ಆದರೆ, ಗ್ಯಾಬ್ರಿಯಲ್ ಅಲ್ಮಂಡ್ ಹಾಗೂ ಸಿಗ್ನಿ ವರ್ಬಾ ಇತರ ರಾಜಕೀಯ ಪರಿಕಲ್ಪನೆಗಳಂತೆ ರಾಜಕೀಯ ಸಂಸ್ಕೃತಿಯೂ ಸಹ ಎರಡು ವಿಶ್ವ ಯುದ್ಧಗಳ ನಡುವಿನ ಕಾಲಾವಧಿಯಲ್ಲಿ ಉಗಮಗೊಂಡಿರುವ ಪರಿಕಲ್ಪನೆ ಎಂದಿರುವರು. ಗಮನಾರ್ಹ ಅಂಶವೇನೆಂದರೆ, ಗ್ಯಾಬ್ರಿಯಲ್ ಆಲ್ಮಂಡ್ 1956 ರಲ್ಲಿ ತನ್ನ ರಾಜಕೀಯ ವ್ಯವಸ್ಥೆಗಳ ತೌಲನಿಕ ಅಧ್ಯಯನವೆಂಬ ಶೀರ್ಷಿಕೆಯ ಪತ್ರಿಕೆಯಲ್ಲಿ ರಾಜಕೀಯ ಸಂಸ್ಕೃತಿ ಎಂಬ ಪದವನ್ನು ಮೊದಲು ಬಳಸಿದರು. ಆ ನಂತರದಲ್ಲಿ ರಾಜಕೀಯ ವ್ಯವಸ್ಥೆಗಳ ತೌಲನಿಕ ಅಧ್ಯಯನದಲ್ಲಿ ರಾಜಕೀಯ ಸಂಸ್ಕೃತಿ ವ್ಯಾಪಕವಾಗಿ ಬಳಸಲ್ಪಟ್ಟಿತು. ಪ್ರಸ್ತುತ ತೌಲನಿಕ ರಾಜಕೀಯ ವ್ಯವಸ್ಥೆಗಳ ಅಧ್ಯಯನದಲ್ಲಿ ಸ್ಥಾನ ಪಡೆದಿರುವ ವಿವಿಧ ರಾಜಕೀಯ ಪ್ರಕ್ರಿಯೆಗಳಲ್ಲಿ ರಾಜಕೀಯ ಸಂಸ್ಕೃತಿಯು ಪ್ರಧಾನವೆನಿಸಿದೆ.

**[A.] ರಾಜಕೀಯ ಸಂಸ್ಕೃತಿಯ ಅರ್ಥ [Meaning of Political Culture]:** ಸಮಾಜವೊಂದರ ಜನರು ತಮ್ಮದೇಯಾದ ನಿಯಮ ಹಾಗೂ ಮೌಲ್ಯಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಅವುಗಳ ಆಧಾರದಲ್ಲಿ ಜನರು ತಮ್ಮ ರಾಜಕೀಯ ವ್ಯವಸ್ಥೆಹೇಗೆ ಕಾರ್ಯಾಚರಿಸಬೇಕು, ಸರ್ಕಾರದ ಪಾತ್ರವೇನಾಗಿರಬೇಕು, ಸರ್ಕಾರವನ್ನು ಯಾರು ಮುನ್ನಡೆಸಬೇಕು ಎಂಬ ಇತ್ಯಾದಿ ರಾಜಕೀಯ ನಿಲುವುಗಳನ್ನು ರೂಪಿಸಿಕೊಳ್ಳುತ್ತಾರೆ. ಜೊತೆಗೆ ರಾಜಕೀಯ ವ್ಯವಸ್ಥೆಯಲ್ಲಿ ತಮ್ಮ ಹಕ್ಕು ಮತ್ತು ಬಾಧ್ಯತೆಗಳೇನೆಂಬ ವಿಚಾರಗಳಿಗೆ ಮುಂದಾಗುತ್ತಾರೆ. ಹೀಗೆ ಸಮಾಜವೊಂದರ ಜನರು ತಮ್ಮ ರಾಜಕೀಯ ವ್ಯವಸ್ಥೆ ಕುರಿತಂತೆ ರೂಪಿಸಿಕೊಳ್ಳುವ ನಂಬಿಕೆ, ಸಂಕೇತ ಅಥವಾ ಮೌಲ್ಯಗಳು ರಾಜಕೀಯ ಸಂಸ್ಕೃತಿ ಎನಿಸಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ರಾಜಕೀಯ ವ್ಯವಸ್ಥೆಯನ್ನು ಕುರಿತಂತೆ ರಾಷ್ಟ್ರವೊಂದರ ಮಾನಸಿಕತೆಯು ರಾಜಕೀಯ ಸಂಸ್ಕೃತಿ ಎನಿಸುತ್ತದೆ.

ಸರಳಾರ್ಥದಲ್ಲಿ ರಾಷ್ಟ್ರವೊಂದರ ಜನರು ತಮ್ಮ ರಾಜಕೀಯ ವ್ಯವಸ್ಥೆಯನ್ನು ಕುರಿತಂತೆ ಬೆಳೆಸಿಕೊಂಡಿರುವ ನಂಬಿಕೆ, ಆಶಯ ಅಥವಾ ವರ್ತನೆಗಳನ್ನು ರಾಜಕೀಯ ಸಂಸ್ಕೃತಿ ಎನ್ನಬಹುದು. ಜನರು ರಾಜಕೀಯ ಚಟುವಟಿಕೆಗಳನ್ನು ಕುರಿತಂತೆ ಮೈಗೂಡಿಸಿಕೊಂಡಿರುವ ಮಾನಸಿಕ ಸ್ಥಿತಿಯನ್ನು ರಾಜಕೀಯ ಸಂಸ್ಕೃತಿಯು ಪ್ರತಿನಿಧಿಸುತ್ತದೆ. ಸಮಾಜದ ವರ್ತನೆ, ಮೌಲ್ಯ ಅಥವಾ ನಂಬಿಕೆಗಳಿಂದ ರಚನೆಗೊಂಡು ರಾಜಕೀಯ ವ್ಯವಸ್ಥೆ

ಮತ್ತು ವಿದ್ಯಮಾನಗಳ ನಡುವೆ ಸಂಬಂಧ ಕಲ್ಪಿಸುವ ಪರಿಕಲ್ಪನೆಯು ವಿಶಾಲಾರ್ಥದಲ್ಲಿ ರಾಜಕೀಯ ಸಂಸ್ಕೃತಿ ಎನಿಸಿಕೊಳ್ಳುತ್ತದೆ. ರಾಜಕೀಯ ಸಂಸ್ಕೃತಿಯು ಜನರ ರಾಜಕೀಯ ಅನುಭವಗಳನ್ನಾಧರಿಸಿ ನಿಧಾನವಾಗಿ ರೂಪುಗೊಳ್ಳುವ, ಬದಲಾಗುವ, ನಾಶಗೊಳ್ಳುವ ಪರಿಕಲ್ಪನೆಯಾಗಿದೆ. ಈ ಹಿನ್ನೆಲೆಯಲ್ಲಿ ರಾಜಕೀಯ ಸಂಸ್ಕೃತಿ ಶಾಶ್ವತ ಅಂಶಗಳುಳ್ಳ ರಾಜಕೀಯ ಪ್ರಕ್ರಿಯೆ ಎಂದು ಪರಿಗಣಿಸಲ್ಪಟ್ಟಿದೆ.

ಜಗತ್ತಿನ ಪ್ರತಿ ರಾಷ್ಟ್ರ ತನ್ನದೇಯಾದ ರಾಜಕೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುತ್ತದೆ. ಆಯಾ ದೇಶದ ಸರ್ಕಾರದ ಮಾದರಿಯನ್ನು ಆಧರಿಸಿ ರಾಜಕೀಯ ಸಂಸ್ಕೃತಿಯು ವ್ಯತ್ಯಾಸಗೊಳ್ಳುತ್ತದೆ. ಉದಾ: ಸಾಂಪ್ರದಾಯಿಕತೆಯು ಬ್ರಿಟನ್ನಿನ, ಪ್ರತಿಭಟನೆಯು ಫ್ರಾನ್ಸಿನ, ದೇಶ ಭಕ್ತಿಯು ಅಮೇರಿಕಾದ ರಾಜಕೀಯ ಸಂಸ್ಕೃತಿ ಎನಿಸಿದುದು. ಇದರೊಡನೆ ಏಕರೂಪದ ಸಂವಿಧಾನ ಹಾಗೂ ರಾಜಕೀಯ ವ್ಯವಸ್ಥೆ ಹೊಂದಿದ್ದರೂ ಎರಡು ರಾಷ್ಟ್ರಗಳ ರಾಜಕೀಯ ಸಂಸ್ಕೃತಿ ಭಿನ್ನವಾಗಿರುತ್ತದೆ. ಉದಾ: ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನುಳ್ಳ ಬ್ರಿಟನ್ ಮತ್ತು ಅಮೇರಿಕಾಗಳ ರಾಜಕೀಯ ಸಂಸ್ಕೃತಿ ಭಿನ್ನವಾಗಿರುವುದು. ಸಾಮಾನ್ಯವಾಗಿ ದೇಶವೊಂದರ ಇತಿಹಾಸ, ಭೌಗೋಳಿಕತೆ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯು ರಾಜಕೀಯ ಸಂಸ್ಕೃತಿಯ ನಿರ್ಧಾರಕ ಅಂಶಗಳಾಗಿರುತ್ತವೆ.

**[B.] ರಾಜಕೀಯ ಸಂಸ್ಕೃತಿಯ ಪ್ರಕಾರಗಳು [Types of Political Culture]:** ಜಗತ್ತಿನ ವಿವಿಧ ರಾಷ್ಟ್ರಗಳು ಹೊಂದಿರುವ ವೈವಿಧ್ಯಮಯ ರಾಜಕೀಯ ಸಂಸ್ಕೃತಿಗಳನ್ನು ಚಿಂತಕರು ವಿಂಗಡಿಸಲು ಪ್ರಯತ್ನಿಸಿದ್ದಾರೆ. ಜನರು ರಾಜಕೀಯ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವ ಮಾದರಿಗಳು ರಾಜಕೀಯ ಸಂಸ್ಕೃತಿಯ ವಿಂಗಡಣೆಗೆ ಆಧಾರವಾಗಿವೆ. ಅಲೆನ್ ಆರ್. ಬಾಲ್ ಸಮಾಜವೊಂದರ ರಾಜಕೀಯದಲ್ಲಿ ಜನರ ಸಕ್ರಿಯ ಭಾಗವಹಿಸುವಿಕೆ, ಸರ್ಕಾರಿ ಚಟುವಟಿಕೆಗಳಲ್ಲಿ ಜನರ ನಿರೀಕ್ಷೆ ಹಾಗೂ ನಿರ್ಧಾರ ಕೈಗೊಳ್ಳುವಿಕೆಯ ಪ್ರಕ್ರಿಯೆಗಳನ್ನಾಧರಿಸಿ ರಾಜಕೀಯ ಸಂಸ್ಕೃತಿಗಳನ್ನು ವಿಂಗಡಿಸಲು ಮುಂದಾಗಿದ್ದರು. ಆದರೆ, ಆಲ್ಮಂಡ್ ಮತ್ತು ವರ್ಬಾ ರಾಜಕೀಯ ವ್ಯವಸ್ಥೆಯಲ್ಲಿನ ಒಳ ಹೂಡುವಿಕೆ ಮತ್ತು ಹೊರ ಮೂಡುವಿಕೆ ಪ್ರಕ್ರಿಯೆಗಳನ್ನಾಧರಿಸಿ ಐದು ರಾಷ್ಟ್ರಗಳ ತೌಲನಿಕ ಅಧ್ಯಯನದ ನಂತರ 1963 ರ ತಮ್ಮ ಸಿವಿಕ್ ಕಲ್ಚರ್ [Civic Culture] ಕೃತಿಯಲ್ಲಿ ರಾಜಕೀಯ ಸಂಸ್ಕೃತಿಯನ್ನು ವರ್ಗೀಕರಿಸಿದ್ದಾರೆ. ಈ ಕೆಳಗಿನ ಮೂರು ಪ್ರಕಾರದ ರಾಜಕೀಯ ಸಂಸ್ಕೃತಿಗಳನ್ನು ಆಲ್ಮಂಡ್ ಹಾಗೂ ವರ್ಬಾ ಪ್ರತಿಪಾದಿಸಿದ್ದು ಸರ್ವ ಮಾನ್ಯ ವಿಂಗಡಣೆ ಎನಿಸಿಕೊಂಡಿದೆ.

**1. ಪರೋಕಿಯಲ್ ರಾಜಕೀಯ ಸಂಸ್ಕೃತಿ [Parochial political culture]:** ತಮ್ಮ ರಾಜಕೀಯ ವ್ಯವಸ್ಥೆಯನ್ನು ಕುರಿತಂತೆ ಏನನ್ನೂ ತಿಳಿದಿರದ ಅಥವಾ ಅತ್ಯಂತ ಕಡಿಮೆ ತಿಳಿದಿರುವ ಜನರು ಈ ಪರೋಕಿಯಲ್ ರಾಜಕೀಯ ಸಂಸ್ಕೃತಿಗೆ ಸೇರುತ್ತಾರೆ. ಇಲ್ಲಿ



ಜನರಿಗೆ ತಮ್ಮ ಹಕ್ಕುಗಳು ಅಥವಾ ಕರ್ತವ್ಯಗಳ ಬಗೆಗೆ ಜಾಗೃತಿ ಇಲ್ಲವಾಗಿದ್ದು ರಾಜಕೀಯ ಭಾಗವಹಿಸುವಿಕೆಗೆ ನಿರಾಸಕ್ತಿ ಕಂಡು ಬರುತ್ತದೆ. ಸರ್ಕಾರದ ಕಾರ್ಯಾಚರಣೆಯನ್ನು ಅರಿತಿರದ ಈ ಸಂಸ್ಕೃತಿಯ ಜನರು ಬೇಡಿಕೆ ಅಥವಾ ಬೆಂಬಲಗಳ ಮೂಲಕ ಒಳ ಹೂಡುವಿಕೆ ಅಥವಾ ಸರ್ಕಾರದ ನಿರ್ಧಾರಗಳ ರೂಪದಲ್ಲಿನ ಹೊರ ಮೂಡುವಿಕೆ ಪ್ರಕ್ರಿಯೆಗಳನ್ನು ಕುರಿತಂತೆ ಆಸಕ್ತರಾಗಿರುವುದಿಲ್ಲ. ಈ ಪ್ರಕಾರದ ಸಂಸ್ಕೃತಿಗೆ ಸೇರಿದ ಜನರು ಪ್ರತಿ ದೇಶಗಳಲ್ಲಿದ್ದರೂ ಸಾಂಪ್ರದಾಯಿಕ ದೇಶಗಳಲ್ಲಿ ಅಧಿಕ ಪ್ರಮಾಣದಲ್ಲಿ ಮತ್ತು ಪಾಶ್ಚಿಮಾತ್ಯ ಮುಂದುವರಿದ ದೇಶಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಕಂಡು ಬರುತ್ತಾರೆ. ಈ ಬಗೆಯ ಸಂಸ್ಕೃತಿಯನ್ನುಳ್ಳ ಸಮಾಜದಲ್ಲಿ ಮುಖ್ಯಸ್ಥರೇ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪ್ರಕ್ರಿಯೆಗಳಲ್ಲಿ ಪ್ರಧಾನ ಪಾತ್ರ ನಿರ್ವಹಿಸುತ್ತಾರೆ. ಒಟ್ಟಿನಲ್ಲಿ ರಾಜಕೀಯ ಜಾಗೃತಿ ಹೊಂದಿರದ, ರಾಷ್ಟ್ರ ರಾಜಕೀಯಕ್ಕೆ ಸ್ಪಂದಿಸದ, ರಾಜಕೀಯವಾಗಿ ಹಿಂದುಳಿದ ಜನರ ಸಂಸ್ಕೃತಿಯನ್ನು ಪರೋಕಿಯಲ್ ರಾಜಕೀಯ ಸಂಸ್ಕೃತಿ ಎಂದು ಕರೆಯಲಾಗಿದೆ. ಪರೋಕಿಯಲ್ ರಾಜಕೀಯ ಸಂಸ್ಕೃತಿಯನ್ನು ಸಾಂಪ್ರದಾಯಿಕ ರಚನೆಗಳುಳ್ಳ ಆಫ್ರಿಕಾದ ಬುಡಕಟ್ಟುಗಳಲ್ಲಿ ಮತ್ತು ಎಸ್ಕಿಮೊಗಳಲ್ಲಿ ಗುರುತಿಸಬಹುದಾಗಿದೆ.

**2. ವಿಷಯ ರಾಜಕೀಯ ಸಂಸ್ಕೃತಿ [Subject Political Culture]:** ಈ ಪ್ರಕಾರದ ರಾಜಕೀಯ ಸಂಸ್ಕೃತಿಯಲ್ಲಿ ಜನರು ರಾಜಕೀಯ ವ್ಯವಹಾರದಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಾರೆ. ಜೊತೆಗೆ ತಮ್ಮ ರಾಜಕೀಯ ವ್ಯವಸ್ಥೆ ಅಥವಾ ಸರ್ಕಾರ ಕುರಿತು ಜಾಗೃತರಾಗಿರುತ್ತಾರೆ. ಸರ್ಕಾರದ ನಿರ್ಧಾರಗಳು ತಮ್ಮ ಜೀವನದ ಮೇಲೆ ಬೀರುವ ಪರಿಣಾಮಗಳ ಬಗೆಗೆ ಜನರು ಅರಿವು ಹೊಂದಿರುತ್ತಾರೆ. ಗಮನಾರ್ಹ ಅಂಶವೇನೆಂದರೆ, ಜನರು ರಾಜಕೀಯ ವ್ಯವಸ್ಥೆಯ ಒಳ ಹೂಡುವಿಕೆಯಲ್ಲಿ ಪಾತ್ರ ಹೊಂದಿದರೂ ಹೊರ ಮೂಡುವಿಕೆಯಲ್ಲಿ ಪ್ರಭಾವ ಬೀರಲು ಮುಂದಾಗುವುದಿಲ್ಲ. ಸರ್ಕಾರದ ನಿರ್ಧಾರಗಳನ್ನು ಪ್ರಶ್ನಿಸಲು ಅಥವಾ ನಿಯಂತ್ರಿಸಲು ಮುಂದಾಗದೇ ಅವುಗಳನ್ನು ಪಾಲಿಸುತ್ತಾರೆ. ಕೇಂದ್ರಿಕೃತ ಮತ್ತು ಏಕಮುಖ ಪ್ರಕಾರದ ರಾಜಕೀಯ ಸಂಸ್ಕೃತಿಯನ್ನು ಅರಸೊತ್ತಿಗೆ ಹಾಗೂ ಸರ್ವಾಧಿಕಾರತ್ವ ಜಾರಿಯಲ್ಲಿರುವ ದೇಶಗಳಲ್ಲಿ ಗುರುತಿಸಬಹುದಾಗಿದೆ.

**3. ಭಾಗವಹಿಸುವಿಕೆಯ ರಾಜಕೀಯ ಸಂಸ್ಕೃತಿ [Participant Political Culture]:** ಈ ಪ್ರಕಾರದ ರಾಜಕೀಯ ಸಂಸ್ಕೃತಿಯಲ್ಲಿ ಜನರು ರಾಜಕೀಯ ವ್ಯವಸ್ಥೆಯ ರಚನಾತ್ಮಕ ಮತ್ತು ಆಡಳಿತಾತ್ಮಕ ಅರಿವನ್ನು ಹೊಂದಿರುತ್ತಾರೆ. ಜೊತೆಗೆ ರಾಜಕೀಯ ವ್ಯವಸ್ಥೆಯ ಒಳ ಹೂಡುವಿಕೆ ಮತ್ತು ಹೊರ ಮೂಡುವಿಕೆಯ ಪ್ರಕ್ರಿಯೆಗಳಲ್ಲಿ ಜನರು ಸಕ್ರಿಯವಾಗಿ ಪಾಲು ಹೊಂದಿರುತ್ತಾರೆ. ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ರಾಜಕೀಯ ವ್ಯವಸ್ಥೆಯ ವಿವಿಧ ಪ್ರಕ್ರಿಯೆಗಳಲ್ಲಿ ಜನರು ಪ್ರಭಾವ ಬೀರುತ್ತಾರೆ. ಈ ಬಗೆಯ

ಸಂಸ್ಕೃತಿಯಲ್ಲಿ ಜನರು ತಮ್ಮ ಹಕ್ಕು ಮತ್ತು ಕರ್ತವ್ಯಗಳ ಸಂಪೂರ್ಣ ಅರಿವನ್ನು ಹೊಂದಿರುತ್ತಾರೆ. ಬ್ರಿಟನ್ ಮತ್ತು ಅಮೇರಿಕಾಗಳು ಈ ಬಗೆಯ ರಾಜಕೀಯ ಸಂಸ್ಕೃತಿಯ ಉತ್ತಮ ನಿದರ್ಶನಗಳೆನಿಸಿವೆ.

ಈ ಮೇಲೆ ಪ್ರಸ್ತಾಪಿಸಲಾಗಿರುವ ರಾಜಕೀಯ ಸಂಸ್ಕೃತಿಯ ಮೂರು ಪ್ರಕಾರಗಳು ಪರಸ್ಪರಾವಲಂಬಿಗಳಾಗಿವೆ. ಒಂದು ಪ್ರಕಾರದ ರಾಜಕೀಯ ಸಂಸ್ಕೃತಿಯು ಇನ್ನೊಂದನ್ನು ಪರಿವರ್ತಿಸಲಾರದು. ಸಾಮಾನ್ಯವಾಗಿ ಮೂರು ಪ್ರಕಾರದ ರಾಜಕೀಯ ಸಂಸ್ಕೃತಿಗಳು ಸಮ್ಮಿಲನಗೊಂಡಿದ್ದು ಏಕಕಾಲದಲ್ಲಿ ಕಾರ್ಯಾಚರಿಸುವಂತಹವುಗಳು. ಮುಂದುವರಿದು, ಆಲ್ಮಂಡ್ ಹಾಗೂ ವರ್ಬಾ ಪ್ರತಿಪಾದಿಸಿರುವ ಮೇಲಿನ ಪ್ರಕಾರಗಳು ಆರಂಭಿಕವಾದವುಗಳಾಗಿದ್ದು ಅವುಗಳ ಬೆಳಕಿನಲ್ಲಿ ರಾಜಕೀಯ ಉಪ ಸಂಸ್ಕೃತಿ, ಸಮೂಹ ಸಂಸ್ಕೃತಿ, ಗಣ್ಯರ ಸಂಸ್ಕೃತಿ, ನಾಗರಿಕ ಸಂಸ್ಕೃತಿ ಮುಂತಾದ ರಾಜಕೀಯ ಸಂಸ್ಕೃತಿಯ ಪ್ರಕಾರಗಳನ್ನು ಚಿಂತಕರು ಪ್ರತಿಪಾದಿಸಿದ್ದಾರೆ.

## [III.] ರಾಜಕೀಯ ಪ್ರಾತಿನಿಧ್ಯ [Political Representation]:

ಸಮಕಾಲೀನ ಜಗತ್ತಿನಲ್ಲಿ ಕಂಡು ಬರುವ ರಾಜಕೀಯ ಪ್ರಕ್ರಿಯೆಗಳಲ್ಲಿ ರಾಜಕೀಯ ಪ್ರಾತಿನಿಧ್ಯವೂ ಒಂದು. ಚಿಂತಕರು ರಾಜಕೀಯ ಪ್ರಾತಿನಿಧ್ಯಕುರಿತು ಭಿನ್ನ ವಿಚಾರಗಳನ್ನು ಪ್ರತಿಪಾದಿಸಿರುವುದರಿಂದ ಅದೊಂದು ಸಂಕೀರ್ಣ ಪ್ರಕ್ರಿಯೆ ಎನಿಸಿದೆ. ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆ ಪ್ರಪಂಚದಾದ್ಯಂತ ಜನಪ್ರಿಯಗೊಂಡಿದುದು ರಾಜಕೀಯ ಪ್ರಾತಿನಿಧ್ಯ ಕುರಿತಾದ ಭಿನ್ನತೆಗಳಿಗೆ ಕಾರಣವೆನ್ನಬಹುದು. ಈ ಕೆಳಗೆ ರಾಜಕೀಯ ಪ್ರಕ್ರಿಯೆಯಾಗಿರುವ ರಾಜಕೀಯ ಪ್ರಾತಿನಿಧ್ಯ ಕುರಿತಂತೆ ಬೆಳಕು ಚೆಲ್ಲಲಾಗಿದೆ.

### [A.] ರಾಜಕೀಯ ಪ್ರಾತಿನಿಧ್ಯದ ಅರ್ಥ

### [Meaning of Political Representation]:

ರಾಜಕೀಯ ಪ್ರಾತಿನಿಧ್ಯವು ಸಾಮಾನ್ಯ ಮತ್ತು ನಿರ್ದಿಷ್ಟ ಅರ್ಥವನ್ನು ಮೈಗೂಡಿಸಿಕೊಂಡಿರುವ ರಾಜಕೀಯ ಪ್ರಕ್ರಿಯೆ ಎನಿಸಿದೆ. ಅಧಿಕ ಜನಸಂಖ್ಯೆಯ ಕಾರಣದಿಂದ ಜನ ಸಮೂಹವು ಪ್ರತ್ಯಕ್ಷವಾಗಿ ರಾಜಕೀಯ ವ್ಯವಹಾರದಲ್ಲಿ ಭಾಗವಹಿಸಲು ಅಸಾಧ್ಯವಾದಾಗ ನಿರ್ದಿಷ್ಟ ಗುಂಪು ಅಥವಾ ವ್ಯಕ್ತಿ ತನ್ನ ಗುಂಪಿನ ಪರವಾಗಿ ಕಾರ್ಯಾಚರಿಸುವುದೇ ಸಾಮಾನ್ಯ ಅರ್ಥದಲ್ಲಿ ರಾಜಕೀಯ ಪ್ರಾತಿನಿಧ್ಯವಾಗಿದೆ. ನಿರ್ದಿಷ್ಟ ಅರ್ಥದಲ್ಲಿ ಸಮಸ್ತ ಜನ ಸಮೂಹದ ವರ್ತನೆ, ಆದ್ಯತೆ ಅಥವಾ ಆಶಯಗಳನ್ನು ಒಬ್ಬ ಪ್ರಜೆ ಆಳುವ ಕೆಲ ಪ್ರಜೆಗಳ ಭಾಗವಾಗಿ ನಿರ್ವಹಿಸುವುದೇ ರಾಜಕೀಯ ಪ್ರಾತಿನಿಧ್ಯವೆನಿಸುತ್ತದೆ. ಮುಂದುವರಿದು, ಸಾರ್ವಜನಿಕ ನೀತಿಯನ್ನು ರೂಪಿಸುವಲ್ಲಿ ಜನರ ಧ್ವನಿ, ಅಭಿಪ್ರಾಯ ಅಥವಾ ದೃಷ್ಟಿಕೋನವನ್ನು ಪ್ರಸ್ತುತಪಡಿಸುವ ಅವಕಾಶದಲ್ಲಿ ರಾಜಕೀಯ ಪ್ರಾತಿನಿಧ್ಯ



ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿಯೇ ಹನಾ ಪಿಟ್ಕಿನ್ ರಾಜಕೀಯ ಪ್ರಾತಿನಿಧ್ಯವೆಂದರೆ ಮರಳಿ ಪ್ರಸ್ತಾಪಿಸುವುದು ಎಂದಿರುವರು. ಸಾಮಾನ್ಯವಾಗಿ ರಾಜಕೀಯ ಪಾತ್ರಧಾರಿಯು ರಾಜಕೀಯ ವೇದಿಕೆಗಳಲ್ಲಿ ಇತರರ ಪರವಾಗಿ ಮಾತನಾಡುವ, ಪ್ರತಿಪಾದಿಸುವ ಅಥವಾ ಕಾರ್ಯಾಚರಿಸಿದಾಗ ರಾಜಕೀಯ ಪ್ರಾತಿನಿಧ್ಯ ಗೋಚರಿಸುತ್ತದೆ. ಒಟ್ಟಾರೆ ಸಮಸ್ತ ಜನ ಸಮೂಹದ ಪರವಾಗಿ ಒಬ್ಬ ಅಥವಾ ಕೆಲವರು ತೋರುವ ರಾಜಕೀಯ ಸಹಾಯ ಅಥವಾ ಪ್ರಸ್ತಾಪದಲ್ಲಿ ರಾಜಕೀಯ ಪ್ರಾತಿನಿಧ್ಯವನ್ನು ಗುರುತಿಸಬಹುದಾಗಿದೆ.

ಗಮನಾರ್ಹ ಅಂಶವೇನೆಂದರೆ, ರಾಜಕೀಯ ಪ್ರಾತಿನಿಧ್ಯ ಕುರಿತಂತೆ ವಿವಿಧ ಆಯಾಮವುಳ್ಳ ವಿವಾದಗಳು ಜೀವಂತವಾಗಿವೆ. ಜೊತೆಗೆ ವಿವಿಧ ಮಾದರಿಯ ರಾಜಕೀಯ ಪ್ರಾತಿನಿಧ್ಯಗಳು ಪ್ರತಿನಿಧಿಗಳ ಮೌಲ್ಯ ಮಾಪನವನ್ನು ಕುರಿತಂತೆ ಪ್ರತಿಪಾದಿಸುವ ಮೂಲಾಂಶಗಳು ಏಕರೂಪವಾಗಿಲ್ಲ. ಫಲವಾಗಿ ಕೆಳಗಿನ ಪ್ರಶ್ನೆಗಳು ಜನ್ಮ ತಾಳಿವೆ.

1. ಪ್ರಜೆಗಳು ಮತ್ತು ಅವರ ಪ್ರತಿನಿಧಿಗಳ ಸ್ವಾಯತ್ತತೆ ಏನಾಗಿರಬೇಕು?
2. ಪ್ರತಿನಿಧಿಗಳನ್ನು ಪ್ರಜೆಗಳಿಗೆ ಹೇಗೆ ಹೊಣೆಗಾರರನ್ನಾಗಿ ಮಾಡಬೇಕು?
3. ಪ್ರಜಾ ಪ್ರತಿನಿಧಿಗಳಿಗೆ ಎಷ್ಟರ ಮಟ್ಟಿಗೆ ವಿವೇಚನಾ ಸ್ವಾತಂತ್ರ್ಯ ನೀಡಬೇಕು?
4.ಎಂತಹ ಸ್ಥಿತಿಯಲ್ಲಿ ಪ್ರತಿನಿಧಿಗಳು ಪ್ರಜೆಗಳ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು?

### [B.] ರಾಜಕೀಯ ಪ್ರಾತಿನಿಧ್ಯದ ಪ್ರಕಾರಗಳು

### [Types of Political Representation]:

ಪ್ರಾತಿನಿಧ್ಯವು ಅತ್ಯಂತ ಪ್ರಾಚೀನ ರಾಜಕೀಯ ಪ್ರಕ್ರಿಯೆಯಾಗಿದೆ. ಆಧುನಿಕ ಪ್ರಾತಿನಿಧ್ಯವು ಪ್ರಾಚೀನ ಹಾಗೂ ಮಧ್ಯ ಯುಗದ ಪ್ರಾತಿನಿಧ್ಯದ ಸ್ವರೂಪಕ್ಕಿಂತ ಭಿನ್ನವಾಗಿದೆ. ಬಹು ಕಾಲದವರೆಗೆ ಸಮಾಜದಲ್ಲಿನ ಗಣ್ಯರು ಹಾಗೂ ಆಸ್ತಿವಂತರು ಸಮಸ್ತ ಜನ ಸಮೂಹದ ಪರವಾಗಿ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಿದ್ದರು. ಆದರೆ, ಪ್ರಜಾಪ್ರಭುತ್ವ ಹರಡಿದಂತೆ ಪ್ರಾತಿನಿಧ್ಯವು ಸಮಾಜದಲ್ಲಿನ ಪ್ರತಿಯೊಬ್ಬ ಪ್ರಜೆಗೆ ಸೇರಿದ ಪರಿಕಲ್ಪನೆಯಾಗಿ ಪರಿವರ್ತನೆಗೊಂಡಿತು. ಪ್ರಸ್ತುತ ಪ್ರಜೆಗಳ ರಾಜಕೀಯ ಪ್ರಾತಿನಿಧ್ಯ ಕುರಿತಾದ ವಿವಿಧ ಪ್ರಕಾರಗಳು ಅಸ್ತಿತ್ವದಲ್ಲಿದ್ದು ಅವುಗಳಲ್ಲಿ ಪ್ರಧಾನವಾದವುಗಳನ್ನು ಕೆಳಗೆ ವಿವರಿಸಲಾಗಿದೆ.

**1. ಭೌಗೋಳಿಕ ಪ್ರಾತಿನಿಧ್ಯ [Territorial Representation]:** ದೇಶವೊಂದರ ಭೂ ಪ್ರದೇಶವನ್ನು ಆ ದೇಶದ ಶಾಸಕಾಂಗದ ಒಟ್ಟು ಸದಸ್ಯರ ಸಂಖ್ಯೆಯಷ್ಟು ಮತಕ್ಷೇತ್ರಗಳಾಗಿ ವಿಂಗಡಿಸಲಾಗುತ್ತದೆ. ಪ್ರತಿ ಭೌಗೋಳಿಕ ಮತಕ್ಷೇತ್ರ ಏಕ ಸದಸ್ಯ ಮತಕ್ಷೇತ್ರಗಳಾಗಿದ್ದು ಒಬ್ಬನೇ ಪ್ರತಿನಿಧಿ ಅದನ್ನು ಪ್ರತಿನಿಧಿಸುತ್ತಾನೆ.. ಕೆಲವೆಡೆ ಪ್ರತಿನಿಧಿಗಳ ಸಂಖ್ಯೆಗಿಂತ ಭೌಗೋಳಿಕ ಮತಕ್ಷೇತ್ರಗಳು ಕಡಿಮೆಯಾಗಿದ್ದರೆ ಜನಸಾಂಧ್ರತೆ ಅಧಿಕವಾಗಿರುವ ಮತಕ್ಷೇತ್ರಗಳು ಬಹು ಸದಸ್ಯ ಮತಕ್ಷೇತ್ರವಾಗಿರುತ್ತವೆ. ಪ್ರತಿನಿಧಿಗಳು ಸಮಾನ ಜನಸಂಖ್ಯೆಯನ್ನು

ಪ್ರತಿನಿಧಿಸಬೇಕೆಂಬುದು ಈ ಭೌಗೋಳಿಕ ಮತಕ್ಷೇತ್ರದ ಪ್ರಧಾನ ಲಕ್ಷಣವಾಗಿರುತ್ತದೆ. ಗಮನಾರ್ಹ ಅಂಶವೇನೆಂದರೆ, ಒಂದು ಭೌಗೋಳಿಕ ಮತಕ್ಷೇತ್ರದ ಜನರು ಏಕರೂಪದ ಸಮಸ್ಯೆ, ಭಾವನೆ, ಅಭಿಪ್ರಾಯ, ಬೇಡಿಕೆಗಳನ್ನು ಹೊಂದಿರುವರೆಂಬ ನಿಲುವಿನೊಡನೆ ಒಬ್ಬ ಪ್ರತಿನಿಧಿಯನ್ನು ಚುನಾಯಿಸಿಕೊಳ್ಳಲು ಭೌಗೋಳಿಕ ಮತಕ್ಷೇತ್ರದ ವಾಸಿಗಳು ಅವಕಾಶ ಪಡೆದಿರುತ್ತಾರೆ. ಈ ಮಾದರಿಯ ರಾಜಕೀಯ ಪ್ರಾತಿನಿಧ್ಯವನ್ನು ಸಾರ್ವತ್ರಿಕವಾಗಿ ಜಗತ್ತಿನ ಎಲ್ಲ ರಾಷ್ಟ್ರಗಳು ಅಳವಡಿಸಿಕೊಂಡಿದ್ದರೂ ಅದರಲ್ಲಿ ಹಲವು ದೋಷಗಳನ್ನು ಗುರುತಿಸಬಹುದಾಗಿದೆ. ಬಹುಮತ ತತ್ವದಂತೆ ಪ್ರತಿನಿಧಿಯನ್ನು ಆಯ್ಕೆ ಮಾಡುವುದರಿಂದ ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಕಡೆಗಣನೆ, ಮತಗಳ ಪ್ರಮಾಣವನ್ನಾಧರಿಸಿ ಪ್ರತಿನಿಧಿಯನ್ನು ಆಯ್ಕೆ ಮಾಡುವುದರಿಂದ ಮತಕ್ಷೇತ್ರದ ಕಾರ್ಯಾತ್ಮಕ ಸಮೂಹಗಳು ನಿರ್ಲಕ್ಷ್ಯ, ಮಹಿಳೆಯರ ಅವಕಾಶ ವಂಚನೆಯಂತಹ ದೋಷಗಳನ್ನು ಭೌಗೋಳಿಕ ಪ್ರಾತಿನಿಧ್ಯದಲ್ಲಿ ಚಿಂತಕರು ಕಂಡುಕೊಂಡಿರುವುದು ಗಮನಾರ್ಹ.

**2. ಕಾರ್ಯಾತ್ಮಕ ಪ್ರಾತಿನಿಧ್ಯ [Functional Representation]:** ಸರಳಾರ್ಥದಲ್ಲಿ ಭೌಗೋಳಿಕ ತಳಹದಿಯ ಬದಲು ಆರ್ಥಿಕ ಹಿತಾಸಕ್ತಿ ಆಧರಿಸಿರುವ ಪ್ರಾತಿನಿಧ್ಯವು ಕಾರ್ಯಾತ್ಮಕ ಪ್ರಾತಿನಿಧ್ಯವಾಗಿದೆ. ದೇಶವೊಂದರ ಶಾಸಕಾಂಗದಲ್ಲಿನ ಪ್ರಾತಿನಿಧ್ಯವು ಭೌಗೋಳಿಕ ಮತಕ್ಷೇತ್ರದ ಬದಲು ವಿವಿಧ ವೃತ್ತಿಪರ ಗುಂಪುಗಳನ್ನು ಆಧರಿಸಿರುವುದೇ ಕಾರ್ಯಾತ್ಮಕ ಪ್ರಾತಿನಿಧ್ಯವೆನಿಸಿದೆ. ಉದಾ: ಶಿಕ್ಷಕರ ಸಮೂಹವನ್ನು ಶಿಕ್ಷಕ, ವ್ಯಾಪಾರಿಗಳ ವರ್ಗವನ್ನು ವ್ಯಾಪಾರಿ, ಕಾರ್ಮಿಕ ಸಮುದಾಯವನ್ನು ಕಾರ್ಮಿಕ ಪ್ರತಿನಿಧಿಸುವುದು. ಸಾಮಾನ್ಯವಾಗಿ ನಗರಗಳಲ್ಲಿನ ಉದ್ಯಮಿಗಳು, ವ್ಯಾಪಾರಿಗಳು, ಕಾರ್ಮಿಕರು ಮತ್ತು ಗ್ರಾಮಗಳಲ್ಲಿನ ರೈತರು, ಸಣ್ಣ ವ್ಯಾಪಾರಿಗಳು, ಕರಕುಶಲಕರ್ಮಿಗಳು ಈ ವಿಧಾನದಡಿ ಶಾಸಕಾಂಗದಲ್ಲಿ ಪ್ರಾತಿನಿಧ್ಯ ಪಡೆಯಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಯಾತ್ಮಕ ಪ್ರಾತಿನಿಧ್ಯವನ್ನು ವೃತ್ತಿಪರ [Occupational] ಪ್ರಾತಿನಿಧ್ಯ ಎಂತಲೂ ಕರೆಯಲಾಗುತ್ತದೆ. ಒಟ್ಟಾರೆ ದೇಶದ ಶಾಸಕಾಂಗವು ಸಮಾಜದಲ್ಲಿನ ವಿವಿಧ ವೃತ್ತಿಯ ಅಥವಾ ಕಾರ್ಯಗಳ ಆರ್ಥಿಕ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದು ಕಾರ್ಯಾತ್ಮಕ ಪ್ರಾತಿನಿಧ್ಯದ ತಿರುಳಾಗಿದೆ. ಬ್ರಿಟನ್ನಿನ ಗಿಲ್ಡ್ ಸಮಾಜವಾದಿಗಳು ವೃತ್ತಿಯಾಧಾರಿತ ಕಾರ್ಯಾತ್ಮಕ ಪ್ರಾತಿನಿಧ್ಯದ ಬೆಳವಣಿಗೆಗೆ ಕಾರಣರಾದ್ದು ಜಿ. ಡಿ. ಎಚ್. ಕೋಲ್ ಈ ಪ್ರಕಾರದ ಪ್ರಾತಿನಿಧ್ಯದ ಪ್ರಮುಖ ಪ್ರತಿಪಾದಕ.

**3. ಪ್ರಮಾಣಾನುಗುಣ ಪ್ರಾತಿನಿಧ್ಯ [Proportional Representation]:** ಜನರ ಪ್ರಮಾಣಕ್ಕೆ ತಕ್ಕಂತೆ ಶಾಸಕಾಂಗದಲ್ಲಿ ಪಾಲು ನೀಡುವ ವಿಧಾನವನ್ನು ಸರಳವಾಗಿ ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನವೆನ್ನಬಹುದು. ವಿಶಾಲಾರ್ಥದಲ್ಲಿ ಚುನಾವಣೆಯ ವೇಳೆ ನಿರ್ದಿಷ್ಟ ಪಕ್ಷವೊಂದು ಪಡೆದಿರುವ ಶೇಕಡಾವಾರು ಚಲಾವಣೆಗೊಂಡ ಮತಗಳ



ಪ್ರಮಾಣಕ್ಕೆ ತಕ್ಕಂತೆ ದೇಶದ ಶಾಸಕಾಂಗದ ಸ್ಥಾನಗಳನ್ನು ಆ ಪಕ್ಷಕ್ಕೆ ಒದಗಿಸುವುದು ಪ್ರಮಾಣಾನುಗುಣ ಪ್ರಾತಿನಿಧ್ಯವಾಗಿದೆ. ಈ ಬಗೆಯ ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನವು ಜಾರಿಗೊಂಡರೆ ದೇಶದೊಳಗಿನ ಪ್ರತಿಯೊಂದೂ ವರ್ಗ ತನ್ನ ಮತಗಳಿಕೆಗೆ ತಕ್ಕಂತೆ ಶಾಸನ ಸಭೆಯಲ್ಲಿ ಸ್ಥಾನ ಗಳಿಸಿ ತನ್ನ ಅಲ್ಪಸಂಖ್ಯಾತ ಮತದಾರರ ಪ್ರಗತಿಯನ್ನು ಸಾಧಿಸಬಹುದಾಗಿದೆ. ಹೀಗಾಗಿ ಬಹುಸಂಖ್ಯಾತರನ್ನು ಓಲೈಸುವ ಬಹುಮತ ತತ್ವಾಧಾರಿತ ಪ್ರಾತಿನಿಧ್ಯದ ಬದಲು ಪ್ರಮಾಣಾನುಗುಣ ಪ್ರಾತಿನಿಧ್ಯಕ್ಕೆ ಮಿಲ್‌ನು ತನ್ನ ಚಿಂತನೆಯಲ್ಲಿ ಒಲವು ಹೊಂದಿದ್ದನು. ಗಮನಾರ್ಹ ಅಂಶವೇನೆಂದರೆ, ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನವನ್ನು ಜಾರಿಗೊಳಿಸಲು ಏಕಮತ ವರ್ಗಾವಣಾ ಮತದಾನ ಪದ್ಧತಿ ಅಥವಾ ಪಟ್ಟಿ ಮತದಾನ ಪದ್ಧತಿ ಅನುಸರಿಸಲಾಗುತ್ತದೆ. ಈ ಏಕಮತ ವರ್ಗಾವಣಾ ಪದ್ಧತಿಯನ್ನು ಕಾರ್ಲ್ ಆಯ್‌ಂಡ್ರಿ ಪ್ರತಿಪಾದಿಸಿದರೆ ಪಟ್ಟಿ ಪದ್ಧತಿಯನ್ನು ಥಾಮಸ್ ಹೇರ್ ಮೊದಲು ಪ್ರತಿಪಾದಿಸಿದ್ದರು.

**4. ಅಲ್ಪಸಂಖ್ಯಾತರ ಪ್ರಾತಿನಿಧ್ಯ [Minarity Representation]:** ಧರ್ಮ ಭಾಷೆ, ಜನಾಂಗಗಳ ಆಧಾರದಲ್ಲಿ ಅಲ್ಪಸಂಖ್ಯಾತರಾದವರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಒದಗಿಸುವುದೇ ಅಲ್ಪಸಂಖ್ಯಾತರ ಪ್ರಾತಿನಿಧ್ಯದ ತಿರುಳಾಗಿದೆ. ಸಾಮಾನ್ಯವಾಗಿ ಪ್ರಜಾಪ್ರಭುತ್ವದಲ್ಲಿ ಬಹುಮತ ತತ್ವಕ್ಕೆ ಮಹತ್ವ ನೀಡುವುದರಿಂದ ಅಲ್ಪಸಂಖ್ಯಾತರ ಆಶಯಗಳಿಗೆ ಆದ್ಯತೆ ದೊರಕದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಪರಿಕಲ್ಪನೆ ಜನ್ಮತಾಳಿದೆ. ಈ ಬಗೆಯ ರಾಜಕೀಯ ಪ್ರಾತಿನಿಧ್ಯವನ್ನು ಸಾಧಿಸಲು ಸೀಮಿತ ಮತದಾನ ಪದ್ಧತಿ, ಏಕಮತ ಪದ್ಧತಿ, ಪ್ರಾಕ್ಸಿ ಮತದಾನ ಪದ್ಧತಿ, ಕ್ಯುಮ್ಯುಲೇಟಿವ್ ಮತದಾನ ಪದ್ಧತಿಗಳನ್ನು ಪಾಲಿಸಲಾಗುತ್ತದೆ. ಈ ವಿವಿಧ ಮತದಾನ ಪದ್ಧತಿಗಳಿಂದ ಅಲ್ಪಸಂಖ್ಯಾತರು ತಮ್ಮ ಪ್ರತಿನಿಧಿಯನ್ನು ಚುನಾಯಿಸಲು ಅಥವಾ ಬಹುಸಂಖ್ಯಾತರ ಪ್ರತಿನಿಧಿಯ ಮೇಲೆ ಪ್ರಭಾವ ಬೀರಲು ಸಾಧ್ಯವಾಗಿ ದಬ್ಬಾಳಿಕೆಯಿಂದ ಮುಕ್ತರಾಗಬಹುದಾಗಿದೆ.

## ಮಾದರಿ ಪ್ರಶ್ನೆಗಳು [ Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ರಾಜಕೀಯ ಸಾಮಾಜೀಕರಣ ಎಂದರೇನು?
2. ಕುಟುಂಬವು ರಾಜಕೀಯ ಸಾಮಾಜೀಕರಣದ ನಿಯೋಗಿ. ಹೇಗೆ?
3. ರಾಜಕೀಯ ಸಾಮಾಜೀಕರಣದ ಮೂರು ನಿಯೋಗಿಗಳನ್ನು ಬರೆಯಿರಿ.
4. ರಾಜಕೀಯ ಸಂಸ್ಕೃತಿ ಎಂದರೇನು?
5. ರಾಜಕೀಯ ಸಂಸ್ಕೃತಿಯ ಪ್ರಕಾರಗಳನ್ನು ಹೆಸರಿಸಿರಿ.
6. ಪರೋಕಿಯಲ್ ರಾಜಕೀಯ ಸಂಸ್ಕೃತಿಯನ್ನು ಕುರಿತು ಬರೆಯಿರಿ.
7. ರಾಜಕೀಯ ಪ್ರಾತಿನಿಧ್ಯದ ಅರ್ಥವನ್ನು ಬರೆಯಿರಿ.
8. ಭೌಗೋಳಿಕ ಪ್ರಾತಿನಿಧ್ಯ ಎಂದರೇನು?
9. ಅಲ್ಪಸಂಖ್ಯಾತರ ಪ್ರಾತಿನಿಧ್ಯ ಸಾಧನೆಗೆ ನೆರವಾಗುವ ವಿವಿಧ ಮತದಾನ ಪದ್ಧತಿಗಳನ್ನು ಹೆಸರಿಸಿರಿ.
10. ಯಾವುದಾದರೂ ನಾಲ್ಕು ರಾಜಕೀಯ ಪ್ರಾತಿನಿಧ್ಯದ ವಿಧಾನಗಳನ್ನು ಬರೆಯಿರಿ.

**[B.] ಐದು ಅಂಕದ ಪ್ರಶ್ನೆಗಳು:**

1. ರಾಜಕೀಯ ಸಾಮಾಜೀಕರಣ ಕುರಿತು ಟಿಪ್ಪಣಿ ಬರೆಯಿರಿ.
2. ರಾಜಕೀಯ ಸಂಸ್ಕೃತಿ ಎಂದರೇನು? ಅದರ ಪ್ರಕಾರಗಳನ್ನು ಚರ್ಚಿಸಿರಿ.
3. ರಾಜಕೀಯ ಪ್ರಾತಿನಿಧ್ಯ ಎಂದರೇನು? ಅದರ ಪ್ರಮುಖ ಪ್ರಕಾರಗಳನ್ನು ವಿವರಿಸಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ರಾಜಕೀಯ ಸಾಮಾಜೀಕರಣ ಎಂದರೇನು? ಅದರ ನಿಯೋಗಿಗಳನ್ನು ವಿವರಿಸಿ.



ಅಧ್ಯಾಯ 8:

# ಶಾಸಕಾಂಗ

# [Legislature]:

### ಪ್ರಸ್ತಾವನೆ [Introduction]:

ಜಗತ್ತಿನ ಪ್ರತಿಯೊಂದು ರಾಜ್ಯ ಅಂದರೆ ದೇಶವು ತನ್ನದೇಯಾದ ಸರ್ಕಾರವನ್ನು ಹೊಂದಿರುತ್ತದೆ. ಸರ್ಕಾರವು ಆಯಾ ರಾಜ್ಯದ ಅಥವಾ ದೇಶದ ಇಚ್ಛೆಯನ್ನು ಪೂರೈಸುವ ಸಾಧನವಾಗಿರುತ್ತದೆ. ಸಾಮಾನ್ಯವಾಗಿ ಸರ್ಕಾರವು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವೆಂಬ ಮೂರು ಅಂಗಗಳನ್ನು ಒಳಗೊಂಡಿರುತ್ತದೆ. ಸಂಕುಚಿತಾರ್ಥದಲ್ಲಿ ದೇಶದ ಆಡಳಿತಕ್ಕೆ ಅಗತ್ಯವಾದ ಶಾಸನಗಳನ್ನು ರಚಿಸುವ ಸರ್ಕಾರದ ಮೊದಲ ಅಂಗವನ್ನು ಶಾಸಕಾಂಗ ಎನ್ನಬಹುದು. ವಿಶಾಲಾರ್ಥದಲ್ಲಿ ದೇಶದಾಡಳಿತಕ್ಕೆ ಅಗತ್ಯವಾದ ಕಾನೂನುಗಳನ್ನು ರಚಿಸುವ, ನಿರುಪಯುಕ್ತ ಕಾನೂನುಗಳನ್ನು ರದ್ದುಗೊಳಿಸುವ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನಲ್ಲಿ ಬದಲಾವಣೆ ತರುವ ಸರ್ಕಾರದ ಮೊದಲ ಅಂಗವನ್ನು ಶಾಸಕಾಂಗ ಎನ್ನಬಹುದಾಗಿದೆ. ಶಾಸನ ರಚನೆಯೊಡನೆ ಶಾಸಕಾಂಗವು ಪ್ರಜೆಗಳ ಮತ್ತು ದೇಶದ ಹಿತದೃಷ್ಟಿಯಿಂದ ಆರ್ಥಿಕ, ಆಡಳಿತಾತ್ಮಕ, ನ್ಯಾಯಿಕ ನಿಯಂತ್ರಣದ ಜವಾಬ್ದಾರಿಯನ್ನು ಶಾಸಕಾಂಗ ಹೊಂದಿರುತ್ತದೆ. ಜೊತೆಗೆ ಶಾಸಕಾಂಗವು ಪ್ರಜೆಗಳು ಮತ್ತು ಸರ್ಕಾರದ ಅಂದರೆ ಕಾರ್ಯಾಂಗದ ನಡುವೆ ಸಂಪರ್ಕ ಸೇತುವೆಯಾಗಿ ಜನಪರ ವಿಷಯಗಳಿಗೆ ಆದ್ಯತೆ ನೀಡುತ್ತಾ ಸಾರ್ವಜನಿಕಾಭಿಪ್ರಾಯದ ಕೈಗನ್ನಡಿ ಎನಿಸಿಕೊಂಡಿದೆ.

ಗಮನಿಸಬೇಕಾದ ಅಂಶವೇನೆಂದರೆ ವಿಶ್ವದ ಎಲ್ಲ ದೇಶಗಳಲ್ಲಿ ಶಾಸಕಾಂಗವು ಏಕರೂಪವಾಗಿಲ್ಲ. ಸರ್ಕಾರದ ಮಾದರಿಯನ್ನು ಆಧರಿಸಿ ಶಾಸಕಾಂಗದ ರಚನೆ ಮತ್ತು ಅಧಿಕಾರಗಳಲ್ಲಿ ವ್ಯತ್ಯಾಸ ಉಂಟಾದುದನ್ನು ಗುರುತಿಸಬಹುದಾಗಿದೆ. ಸಾಮಾನ್ಯವಾಗಿ ಸರ್ವಾಧಿಕಾರಿ ಧೋರಣೆಯ ದೇಶಗಳಲ್ಲಿ ಏಕ ಸದನವುಳ್ಳ ಶಾಸಕಾಂಗಗಳು ಕಂಡು ಬಂದರೆ ಉದಾರವಾದಿ ಪ್ರಜಾಪ್ರಭುತ್ವ ಜಾರಿಯಲ್ಲಿರುವ ದೇಶಗಳಲ್ಲಿ ಎರಡು ಸದನವುಳ್ಳ ಶಾಸಕಾಂಗಗಳು ಕಂಡು ಬರುತ್ತವೆ. ಅಲ್ಲದೇ ಕೆಲವು ದೇಶಗಳಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗಗಳು ಸ್ವತಂತ್ರವಾಗಿದ್ದರೆ ಸಂಸದೀಯ ಮಾದರಿ ಸರ್ಕಾರದಲ್ಲಿ ಅವೆರಡೂ ಪರಸ್ಪರ ಅವಲಂಬಿಯಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಶಾಸಕಾಂಗದ ರಚನೆ ಮತ್ತು ಅಧಿಕಾರ

ಕಾರ್ಯಗಳಲ್ಲಿ ಭಿನ್ನತೆ ಹೊಂದಿರುವ ಅಮೇರಿಕಾ, ಬ್ರಿಟನ್ ಮತ್ತು ಚೀನಾದ ಶಾಸಕಾಂಗಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ವಿವರಿಸಲಾಗಿದೆ.

## [I.] ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್ಸಿನ ರಚನೆ ಮತ್ತು ಅಧಿಕಾರ ಕಾರ್ಯಗಳು

## [Composition and Powers of the Congress of United States of America

**ಪೀಠಿಕೆ:** ಅಮೇರಿಕಾ ಸಂವಿಧಾನದ ಮೊದಲನೇ ವಿಧಿಯು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಶಾಸಕಾಂಗದ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ವಿವರಿಸುತ್ತದೆ. ಈ ವಿಧಿಯು ವಿವರಿಸುವಂತೆ ಅಮೇರಿಕಾದ ಶಾಸನೀಯ ಅಧಿಕಾರಗಳೆಲ್ಲ ಎರಡು ಸದನಗಳುಳ್ಳ ಕಾಂಗ್ರೆಸ್ಸಿಗೆ ಸೇರಿವೆ. ಕಾಂಗ್ರೆಸ್ಸು (Congress) ಎಂದರೆ ಅಮೇರಿಕಾದ ಕೇಂದ್ರ ಶಾಸಕಾಂಗವಾಗಿದ್ದು ಸೆನೆಟ್ (Senate) ಮತ್ತು ಪ್ರತಿನಿಧಿಗಳ ಸಭೆ (House of Representatives) ಅದರೊಳಗಿನ ಎರಡು ಸದನಗಳಾಗಿವೆ. ಅಮೇರಿಕಾವು ಸ್ವತಂತ್ರಗೊಂಡ ಆರಂಭದಲ್ಲಿ ಕಾಂಗ್ರೆಸ್ಸು 13 ವಸಾಹತುಗಳ ಪ್ರತಿನಿಧಿಗಳಿಂದ ಕೂಡಿದ್ದ ಒಂದೇ ಸದನವನ್ನು ಹೊಂದಿತ್ತು. ಮುಂದೆ 1789 ರಲ್ಲಿ ಸಂವಿಧಾನ ರಚನಾಕಾರರು ಅಮೇರಿಕಾದ ಕಾಂಗ್ರೆಸ್ಸು ಎರಡು ಸದನಗಳನ್ನು ಹೊಂದಿರಬೇಕೆಂದು ಒಕ್ಕೊರಲಿನಿಂದ ತೀರ್ಮಾನಿಸಿದರು. ಹೀಗಾಗಿ ಪ್ರಸ್ತುತ ಅಮೇರಿಕಾದ ಕೇಂದ್ರ ಶಾಸಕಾಂಗವಾದ ಕಾಂಗ್ರೆಸ್ಸು ಮೇಲ್ಮನೆಯಾದ ಸೆನೆಟ್ ಮತ್ತು ಕೆಳಮನೆಯಾದ ಪ್ರತಿನಿಧಿಗಳ ಸಭೆಯನ್ನು ಒಳಗೊಳ್ಳುವಂತಾಗಿದೆ.

### [A.] ಪ್ರತಿನಿಧಿಗಳ ಸಭೆಯ ರಚನೆ

### [Composition of the House of Representatives]:

**ಪೀಠಿಕೆ:** ಅಮೇರಿಕಾದ ಕೇಂದ್ರ ಶಾಸಕಾಂಗವಾದ ಕಾಂಗ್ರೆಸ್ಸಿನ ಕೆಳಮನೆಯೇ ಪ್ರತಿನಿಧಿಗಳ ಸಭೆ. ಜನತಾ ಸದನವಾಗಿರುವ ಪ್ರತಿನಿಧಿಗಳ ಸಭೆಯ ರಚನೆಯನ್ನು ಈ ಕೆಳಗೆ ಪ್ರಸ್ತಾಪಿಸಲಾಗಿರುವ ಅಂಶಗಳ ನೆರವಿನಿಂದ ಮನವರಿಕೆ ಮಾಡಿಕೊಳ್ಳಬಹುದಾಗಿದೆ.

**1. ಗಾತ್ರ [Size]:** ಪ್ರತಿನಿಧಿಗಳ ಸಭೆಯ ಸದಸ್ಯರ ಗಾತ್ರವನ್ನು ಕುರಿತಂತೆ ಅಮೇರಿಕಾದ ಮೂಲ ಸಂವಿಧಾನದಲ್ಲಿ ಸ್ಪಷ್ಟವಾದ ವಿವರಣೆಯಿಲ್ಲ. ಸಂವಿಧಾನವು ಕೇವಲ ಪ್ರತಿನಿಧಿಗಳ ಸಭೆಯು ಎಲ್ಲ ರಾಜ್ಯಗಳ ಪ್ರತಿನಿಧಿಗಳನ್ನು ಹೊಂದಿರಬೇಕು, ಪ್ರತಿ ರಾಜ್ಯ ಕನಿಷ್ಠ ಒಬ್ಬ ಸದಸ್ಯನನ್ನಾದರೂ ಪ್ರತಿನಿಧಿಗಳ ಸಭೆಗೆ ಆಯ್ಕೆ ಮಾಡಬೇಕು, ಒಬ್ಬ ಸದಸ್ಯ 30 ಸಾವಿರ ಜನರನ್ನು ಪ್ರತಿನಿಧಿಸಬೇಕು ಎಂಬುದಾಗಿ ಮಾತ್ರ ಸೂಚಿಸಿದೆ. ಹೀಗಾಗಿ 1789 ರಲ್ಲಿ ಪ್ರತಿನಿಧಿಗಳ ಸಭೆ ಜಾರಿಗೊಂಡಾಗ ಅದರ ಸದಸ್ಯರ ಸಂಖ್ಯೆ ಕೇವಲ 65 ಆಗಿತ್ತು. ಮುಂದೆ ಪ್ರತಿ ಜನಗಣತಿಯ ಬಳಿಕ ಪ್ರತಿನಿಧಿಗಳ ಸಭೆಯ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಯಿತು.



1911 ರ ಹೊತ್ತಿಗೆ ಪ್ರತಿನಿಧಿಗಳ ಸಭೆಯ ಸಂಖ್ಯೆ 435 ನ್ನು ತಲುಪಿತು. 1929 ರ ಕಾಯಿದೆಯಂತೆ ಜನಗಣತಿಯ ಬಳಿಕ ಪ್ರತಿನಿಧಿಗಳ ಗಾತ್ರವನ್ನು ಪರಿಷ್ಕರಿಸುವುದನ್ನು ಕೈಬಿಟ್ಟು ಅದೇ ಸಂಖ್ಯೆಯನ್ನು ಮುಂದುವರಿಸಲು ನಿರ್ಧರಿಸಲಾಯಿತು. ಆದರೆ, ಅಲಾಸ್ಕಾ ಮತ್ತು ಹವಾಯಿ ರಾಜ್ಯಗಳ ಸೇರ್ಪಡೆಯಿಂದ 1959 ರ ಹೊತ್ತಿಗೆ ಇದರ ಸಂಖ್ಯೆ 437 ಕ್ಕೆ ತಲುಪಿತಾದರೂ 1961 ರಲ್ಲಿ ಪುನಃ 435 ಕ್ಕೆ ಸೀಮಿತಗೊಂಡಿತು..

**2. ಚುನಾವಣಾ ವಿಧಾನ [Election Method]:** ಪ್ರತಿನಿಧಿಗಳ ಸಭೆಯ ಸದಸ್ಯರನ್ನು ಅಮೇರಿಕಾದಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯಂತೆ ಜನರೇ ನೇರವಾಗಿ ಚುನಾಯಿಸುತ್ತಾರೆ. ಪ್ರತಿನಿಧಿಗಳ ಸಭೆಯ ಚುನಾವಣೆ ಕುರಿತಾದ ಅಧಿಕ ವಿವರಗಳನ್ನು ಇದೇ ಪತ್ರಿಕೆಯ ಕೊನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

**3. ಅರ್ಹತೆಗಳು [Qualifications]:** ಅಮೇರಿಕಾದ ಕಾಂಗ್ರೆಸ್ಸಿನ ಪ್ರತಿನಿಧಿಗಳ ಸಭೆಯ ಸದಸ್ಯನಾಗಲು ವ್ಯಕ್ತಿಯೊಬ್ಬ ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕು. ಅವುಗಳೆಂದರೆ

ಅ. ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಪೌರತ್ವವನ್ನು ಕನಿಷ್ಠ ಏಳು ವರ್ಷಗಳಿಂದ ಹೊಂದಿರಬೇಕು.

ಆ. 25 ವರ್ಷಗಳ ವಯೋಮಿತಿಯನ್ನು ಪೂರೈಸಿರಬೇಕು.

ಇ. ತಾನು ಆಯ್ಕೆ ಬಯಸುವ ರಾಜ್ಯದ ಮೂಲದವನಾಗಿರಬೇಕು. ಈ. ತಾನು ಆಯ್ಕೆ ಬಯಸುವ ಮತಕ್ಷೇತ್ರದ ನಿವಾಸಿಯಾಗಿರಬೇಕು.

**4. ಅಧಿಕಾರವಧಿ [Term] :** ಪ್ರತಿನಿಧಿಗಳ ಸಭೆಯ ಸದಸ್ಯರು ಎರಡು ವರ್ಷಗಳ ಅಧಿಕಾರವಧಿಯನ್ನು ಪಡೆದಿದ್ದಾರೆ. ಈ ಕಡಿಮೆ ಅವಧಿಯಲ್ಲಿ ರಾಜಕೀಯವಾಗಿ ಯಾವುದೇ ಸಾಧನೆ ತೋರಲಾಗದ್ದರಿಂದ ಅದರ ಅಧಿಕಾರವಧಿಯನ್ನು ನಾಲ್ಕು ವರ್ಷಗಳಿಗೆ ಹೆಚ್ಚಿಸಬೇಕೆಂಬ ಚರ್ಚೆ ಜಾರಿಯಲ್ಲಿದೆ.

**5. ಅಧಿವೇಶನ [Session]:** ಪ್ರತಿನಿಧಿಗಳ ಸಭೆಯು ವರ್ಷದಲ್ಲಿ ಒಮ್ಮೆ ಮಾತ್ರ ಅಧಿವೇಶನಗೊಳ್ಳುತ್ತದೆ. ಅಮೇರಿಕಾದ ಮೂಲ ಸಂವಿಧಾನವೇ ಸೂಚಿಸಿದಂತೆ ಬಹುಕಾಲದವರೆಗೆ ಪ್ರತಿ ಡಿಸೆಂಬರ್‌ನ ಮೊದಲನೇ ಸೋಮವಾರ ಪ್ರತಿನಿಧಿಗಳ ಸಭೆಯು ಸಮಾವೇಶಗೊಳ್ಳುತ್ತಿತ್ತು. ಕಾಲಾನುಕ್ರಮದಲ್ಲಿ ಕಾರಣಾಂತರದಿಂದ ಸಂವಿಧಾನದ ಈ ಮಾರ್ಗದರ್ಶನವು ಏರು ಪೇರಾಯಿತು. ಆಗ ಸಂವಿಧಾನಕ್ಕೆ 1933 ರಲ್ಲಿ 20 ನೇ ತಿದ್ದುಪಡಿ ಮಾಡಿ ವರ್ಷಕ್ಕೊಮ್ಮೆ ಕನಿಷ್ಠ ಒಂದು ಅಧಿವೇಶನ ಸೇರುವ ಮತ್ತು ಚುನಾಯಿತ ಪ್ರತಿನಿಧಿಗಳು ಜನವರಿ ತಿಂಗಳ ಮೊದಲ ವಾರದಲ್ಲಿ ಅಧಿವೇಶನಗೊಳ್ಳುವ ಅವಕಾಶ ಕಲ್ಪಿಸಲಾಯಿತು. ಇದರೊಡನೆ ರಾಷ್ಟ್ರೀಯ ಹಿತಾಸಕ್ತಿಗಾಗಿ ಅಗತ್ಯವೆನಿಸಿದರೆ ಅಧ್ಯಕ್ಷ ವಿಶೇಷ ಸಭೆಯನ್ನು ಕರೆಯಲು ಆಸ್ಪದ ಒದಗಿಸಲಾಯಿತು.

**6. ಕೋರಂ [Quorum]:** ಪ್ರತಿನಿಧಿಗಳ ಸಭೆಯ ಕಲಾಪಗಳು ಜರುಗಲು ಹಾಜರಾಗಬೇಕಾದ ಕನಿಷ್ಠ ಸದಸ್ಯರ ಸಂಖ್ಯೆಯನ್ನು ಕೋರಂ ಎನ್ನಲಾಗುತ್ತದೆ. ಅಮೇರಿಕಾ ಸಂವಿಧಾನದ ಮೊದಲನೇ ವಿಧಿಯ ಐದನೇ ಸೆಕ್ಷನ್ ವಿವರಿಸುವಂತೆ ಪ್ರತಿನಿಧಿಗಳ ಸಭೆಯ ಬಹುಮತದ ಅಥವಾ ಅರ್ಧಕ್ಕಿಂತ ಹೆಚ್ಚಿನ ಸದಸ್ಯರ ಸಂಖ್ಯೆಯು ಕೋರಂ ಎನಿಸುತ್ತದೆ. ಇದರನ್ವಯ ಪ್ರತಿನಿಧಿಗಳ ಸಭೆಯಲ್ಲಿ 437 ಸದಸ್ಯರಿದ್ದು ಅರ್ಧಕ್ಕಿಂತ ಹೆಚ್ಚು ಅಂದರೆ 219 ಸದಸ್ಯರ ಸಂಖ್ಯೆಯು ಕೋರಂ ಎನಿಸಿಕೊಳ್ಳುತ್ತದೆ.

**7. ಅಧ್ಯಕ್ಷ [Speeker]:** ಪ್ರತಿನಿಧಿಗಳ ಸಭೆಯ ಅಧ್ಯಕ್ಷನ ನೇಮಕ ಹಾಗೂ ಅಧಿಕಾರ ಕಾರ್ಯಗಳನ್ನು ಕುರಿತಂತೆ ಅಮೇರಿಕಾದ ಸಂವಿಧಾನವು ಹೆಚ್ಚಿನ ವಿವರಣೆಯನ್ನು ನೀಡದೇ ಪ್ರತಿನಿಧಿಗಳ ಸಭೆಯ ಸದಸ್ಯರು ತಮ್ಮ ಅಧ್ಯಕ್ಷನನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಸೂಚಿಸಿದೆ. ಹೀಗಾಗಿ ನೂತನವಾಗಿ ಚುನಾಯಿತಗೊಂಡ ಪ್ರತಿನಿಧಿಗಳ ಸಭೆಯ ಸದಸ್ಯರು ಹಿಂದಿನ ಅವಧಿಯ ಕ್ಲಾರ್ಕ್‌ನ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಅಧ್ಯಕ್ಷನ ನೇಮಕದ ಪ್ರಕ್ರಿಯೆಗೆ ಮುಂದಾಗುತ್ತಾರೆ. ಸಾಮಾನ್ಯವಾಗಿ ಸದನದಲ್ಲಿ ಬಹುಮತ ಹೊಂದಿದ ಪಕ್ಷವು ಸೂಚಿಸುವ ವ್ಯಕ್ತಿ ಅಧ್ಯಕ್ಷನಾಗುತ್ತಾನೆ.

**8. ವೇತನ ಮತ್ತು ವಿನಾಯಿತಿಗಳು [Salary and Immunities]:** ಪ್ರತಿನಿಧಿಗಳ ಸಭೆಯ ಸದಸ್ಯರು ವಾರ್ಷಿಕ 174 ಸಾವಿರ ಡಾಲರ್‌ನಷ್ಟು ವೇತನವನ್ನು ಪಡೆಯುತ್ತಾರೆ. ಮುಂದುವರಿದು ಪ್ರತಿನಿಧಿಗಳ ಸಭೆಯ ಬಹುಮತ ಹಾಗೂ ಅಲ್ಪಮತ ಪಕ್ಷಗಳ ನಾಯಕರು 193 ಸಾವಿರದ 400 ರಷ್ಟು ವಾರ್ಷಿಕ ವೇತನವನ್ನು ಪಡೆಯುತ್ತಾರೆ. ಇದಲ್ಲದೇ ಕಛೇರಿ ನಿರ್ವಹಣೆ, ಆರೋಗ್ಯ, ಪ್ರಯಾಣ ಹಾಗೂ ಅಂಚೆ ಭತ್ಯೆಗಳನ್ನು ಪಡೆಯುತ್ತಾರೆ. ಇದರೊಡನೆ ಕನಿಷ್ಠ 6 ವರ್ಷ ಪ್ರತಿನಿಧಿಗಳ ಸಭೆಯ ಸದಸ್ಯನಾಗಿದ್ದ ವ್ಯಕ್ತಿಗೆ ನಿವೃತ್ತಿ ವೇತನ ನೀಡಲಾಗುತ್ತದೆ. ಅಲ್ಲದೇ ಈ ಕೆಳಗಿನ ಹಲವು ವಿನಾಯಿತಿಗಳನ್ನು ಪ್ರತಿನಿಧಿಗಳ ಸಭೆಯ ಸದಸ್ಯರು ಅನುಭವಿಸುತ್ತಾರೆ.

ಅ. ಪ್ರತಿನಿಧಿಗಳ ಸಭೆಯ ಸದಸ್ಯರು ಸದನದಲ್ಲಿ ಮುಕ್ತವಾಗಿ ಮಾತನಾಡುವ ಅವಕಾಶ ಹೊಂದಿದ್ದು ಸದನದಲ್ಲಿ ವ್ಯಕ್ತಪಡಿಸಿದ ವಿಚಾರಗಳಿಗೆ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ.

ಆ. ನಾಗರಿಕ ಮೊಕದ್ದಮೆಗೆ ಸಂಬಂಧಿಸಿದಂತೆ ಅಧಿವೇಶನ ಆರಂಭವಾಗುವ ಮೊದಲು ಮತ್ತು ನಂತರದ 40 ದಿನಗಳವರೆಗೆ ಪ್ರತಿನಿಧಿಗಳ ಸಭೆಯ ಸದಸ್ಯರನ್ನು ಬಂಧಿಸುವಂತಿಲ್ಲ.

ಇ. ಪ್ರತಿನಿಧಿಗಳ ಸಭೆಯು ತನ್ನ ಕಾರ್ಯ ಕಲಾಪಗಳಿಗೆ ಪೂರಕವಾದ ನಿಯಮಾವಳಿಗಳು ಅಥವಾ ಪ್ರಕ್ರಿಯೆಗಳನ್ನು ರೂಪಿಸಲು ಸ್ವತಂತ್ರವಾಗಿರುತ್ತದೆ.

ಈ. ಪ್ರತಿನಿಧಿಗಳ ಸಭೆಯ ನಿಂದನೆಗೆ ಸೂಕ್ತವೆನಿಸಿದ ಶಿಕ್ಷೆಯನ್ನು ನೀಡುವ ಅಧಿಕಾರವನ್ನು ಪಡೆದಿದೆ.



**[B.] ಪ್ರತಿನಿಧಿಗಳ ಸಭೆಯ ಅಧಿಕಾರ ಕಾರ್ಯಗಳು**

**[Powers and Fungctions of the House of Representatives]:**

ಅಮೇರಿಕಾದ ಕಾಂಗ್ರೆಸ್ಸಿನ ಕೆಳಮನೆಯಾದ ಪ್ರತಿನಿಧಿಗಳ ಸಭೆಯು ತನ್ನದೇಯಾದ ಅಧಿಕಾರ ಕಾರ್ಯಗಳನ್ನು ಹೊಂದಿದೆ. ಗಮನಾರ್ಹ ಅಂಶವೇನೆಂದರೆ ಅಮೇರಿಕಾದ ಕಾಂಗ್ರೆಸ್ಸಿನ ಎರಡೂ ಸದನಗಳಿಗೆ ಸಮಾನ ಅಧಿಕಾರಗಳನ್ನು ಅಲ್ಲಿನ ಸಂವಿಧಾನವೇ ನೀಡಿದೆ. ಮುಂದುವರಿದು ಕೆಳಮನೆಗಿಲ್ಲದ ಕೆಲವು ವಿಶೇಷ ಅಧಿಕಾರಗಳನ್ನು ಮೇಲ್ಮನೆಗೆ ಒದಗಿಸಿದೆ. ಹೀಗಾಗಿ ಪ್ರತಿನಿಧಿಗಳ ಸಭೆಯು ಈ ಕೆಳಗಿನ ಹಲವು ಅಧಿಕಾರಗಳನ್ನು ಚಲಾಯಿಸಲು ಅವಕಾಶ ಪಡೆದಿದೆ.

**1. ಶಾಸನೀಯ ಅಧಿಕಾರ ಕಾರ್ಯಗಳು [Legislative Power and Fungctions]:** ಅಮೇರಿಕಾದಲ್ಲಿ ಅಧಿಕಾರ ಪ್ರತ್ಯೇಕತೆಯ ಪರಿಣಾಮ ಕಾರ್ಯಾಂಗವು ಶಾಸಕಾಂಗದಲ್ಲಿ ಮಸೂದೆಗಳನ್ನು ಮಂಡಿಸಲು ಅವಕಾಶವಿಲ್ಲ. ಹೀಗಾಗಿ ಕಾಂಗ್ರೆಸ್ಸಿನ ಎರಡು ಸದನಗಳ ಸದಸ್ಯರೇ ಮಸೂದೆಗಳನ್ನು ಮಂಡಿಸಲು ಅಧಿಕಾರ ಹೊಂದಿರುತ್ತಾರೆ. ಸಾಮಾನ್ಯ ಮಸೂದೆಯೊಂದನ್ನು ಕಾಂಗ್ರೆಸ್ಸಿನ ಯಾವುದೇ ಸದನದಲ್ಲಿ ಮೊದಲು ಮಂಡಿಸಬಹುದಾಗಿದೆ. ಗಮನಾರ್ಹ ಅಂಶವೇನೆಂದರೆ ಮಸೂದೆಯೊಂದು ಶಾಸನವಾಗಲು ಎರಡೂ ಸದನಗಳ ಅಂಗೀಕಾರ ಅತ್ಯಗತ್ಯ. ಈ ಅವಕಾಶದಡಿ ಪ್ರತಿನಿಧಿಗಳ ಸಭೆಯಲ್ಲಿ ಅದರ ಯಾವುದೇ ಒಬ್ಬ ಸದಸ್ಯನಿಂದ ಮೊದಲು ಮಸೂದೆ ಮಂಡನೆಯಾದರೆ ಅದನ್ನು ಸಮಿತಿಗೆ ಸದನವು ವರ್ಗಾಯಿಸುತ್ತದೆ. ಸಮಿತಿಯ ಪರಿಶೀಲನೆಯ ಬಳಿಕ ಪ್ರತಿನಿಧಿಗಳ ಸಭೆಯ ಅಂಗೀಕಾರಕ್ಕೆ ಮಂಡಿಸಲ್ಪಡುತ್ತದೆ. ಪ್ರತಿನಿಧಿಗಳ ಸಭೆಯು ಅಂಗೀಕರಿಸಿದ ಮಸೂದೆಯನ್ನು ಸೆನೆಟ್‌ನ ಸಮ್ಮತಿಗೆ ಕಳುಹಿಸಲಾಗುತ್ತದೆ. ಆಗ ಸೆನೆಟ್‌ನಲ್ಲಿಯೂ ಮಸೂದೆಯನ್ನು ಸಮಿತಿಗೆ ವರ್ಗಾಯಿಸಿ ಪರಿಶೀಲಿಸಿದ ನಂತರ ಸೆನೆಟ್‌ನ ಅಂಗೀಕಾರಕ್ಕೆ ಸಲ್ಲಿಸಲಾಗುತ್ತದೆ. ಈ ವೇಳೆ ಸೆನೆಟ್ ಮಸೂದೆಯನ್ನು ಅಂಗೀಕರಿಸುವ, ತಿದ್ದುಪಡಿಗಳೊಡನೆ ಪ್ರತಿನಿಧಿಗಳ ಸಭೆಗೆ ಹಿಂತಿರುಗಿಸುವ ಅಥವಾ ಅಂಗೀಕಾರ ನೀಡದಿರುವ ಅಧಿಕಾರ ಪಡೆದಿರುತ್ತದೆ. ಸೆನೆಟ್ ತಿದ್ದುಪಡಿಗಳೊಂದಿಗೆ ಪ್ರತಿನಿಧಿಗಳ ಸಭೆಗೆ ಕಳುಹಿಸಿದ ಮಸೂದೆಯ ತಿದ್ದುಪಡಿಗಳನ್ನು ಅಂಗೀಕರಿಸಿದರೆ ಮಸೂದೆ ನೇರವಾಗಿ ಅಧ್ಯಕ್ಷನ ಸಹಿಯೊಡನೆ ಶಾಸನವಾಗುತ್ತದೆ. ಒಂದೊಮ್ಮೆ ಸೆನೆಟ್‌ನ ತಿದ್ದುಪಡಿಗಳನ್ನು ಪ್ರತಿನಿಧಿಗಳ ಸಭೆಯು ನಿರಾಕರಿಸಿದರೆ ಬಿಕ್ಕಟ್ಟು ಉಂಟಾಗುತ್ತದೆ. ಇಂತಹ ಸಮಯದಲ್ಲಿ ಎರಡೂ ಸದನಗಳ ತಲಾ ಮೂವರು ಸದಸ್ಯರಿಂದ ಕೂಡಿರುವ ಸಮ್ಮೇಳನ ಸಮಿತಿಯನ್ನು ಬಿಕ್ಕಟ್ಟು ನಿವಾರಣೆಗೆ ರಚಿಸಲಾಗುತ್ತದೆ. ಅಂತಿಮವಾಗಿ ಈ ಸಮ್ಮೇಳನ ಸಮಿತಿಯ ನಿರ್ಧಾರದಂತೆ ಮಸೂದೆಯ ಭವಿಷ್ಯ ನಿರ್ಧಾರವಾಗುತ್ತದೆ. ಹೀಗೆ ಪ್ರತಿನಿಧಿಗಳ ಸಭೆಯು ಸೆನೆಟ್‌ಗೆ ಸಮಾನವಾದ ಶಾಸನೀಯ ಅಧಿಕಾರವನ್ನು ಪಡೆದಿದೆ ಎನ್ನಬಹುದು.

**2. ಹಣಕಾಸಿನ ಅಧಿಕಾರ ಕಾರ್ಯಗಳು [Financial Power and Fungctions]:** ಅಮೇರಿಕಾದಲ್ಲಿ ಹಣಕಾಸಿನ ಮಸೂದೆಯೊಂದು ಮೊದಲು ಪ್ರತಿನಿಧಿಗಳ ಸಭೆಯಲ್ಲಿಯೇ ಮಂಡನೆಗೊಳ್ಳುತ್ತದೆ. ತನ್ನಲ್ಲಿ ಮಂಡನೆಗೊಂಡ ಮಸೂದೆಯನ್ನು ಪ್ರತಿನಿಧಿಗಳ ಸಭೆಯು ಅಂಗೀಕರಿಸಿ ಮೇಲ್ಮನೆಯಾದ ಸೆನೆಟ್‌ಗೆ ಕಳುಹಿಸುತ್ತದೆ. ಆಗ ಸೆನೆಟ್ ಅಂಗೀಕರಿಸಿದರೆ ಅಧ್ಯಕ್ಷನ ಸಹಿಗೆ ಕಳುಹಿಸಲಾಗುತ್ತದೆ. ಒಂದೊಮ್ಮೆ ತಿದ್ದುಪಡಿಗಳೊಡನೆ ಸೆನೆಟ್ ಪ್ರತಿನಿಧಿಗಳ ಸಭೆಗೆ ಮಸೂದೆಯನ್ನು ಹಿಂತಿರುಗಿಸಿದರೆ ಆ ತಿದ್ದುಪಡಿಗಳನ್ನು ಪ್ರತಿನಿಧಿಗಳ ಸಭೆಯು ಅಂಗೀಕರಿಸಲೇಬೇಕಾಗುತ್ತದೆ. ಇದಕ್ಕೆ ಹಣಕಾಸು ಮಸೂದೆಯೊಂದು ಶಾಸನವಾಗಲು ಎರಡೂ ಸದನಗಳ ಅಂಗೀಕಾರ ಅಗತ್ಯವಾದುದು ಪ್ರಧಾನ ಕಾರಣ. ಇದರೊಡನೆ ತೆರಿಗೆ ಮೂಲಕ ಹಣದ ಸಂಗ್ರಹ ಮತ್ತು ವೆಚ್ಚಗಳನ್ನು ಪರಿಶೀಲಿಸುವ ಅಧಿಕಾರಗಳನ್ನು ಪ್ರತಿನಿಧಿಗಳ ಸಭೆಯು ಸೆನೆಟ್‌ನೊಡನೆ ಜೊತೆಗೂಡಿ ಚಲಾಯಿಸುತ್ತದೆ.

**3. ಚುನಾವಣಾ ಅಧಿಕಾರ ಕಾರ್ಯಗಳು [Election Power and Fungctions]:** ಪ್ರತಿನಿಧಿಗಳ ಸಭೆಯು ಕೆಲ ಚುನಾವಣಾ ಅಧಿಕಾರಗಳನ್ನು ಪಡೆದಿದೆ. ಅವುಗಳಲ್ಲಿ ಪ್ರಮುಖವಾದದ್ದು ಪ್ರತಿನಿಧಿಗಳ ಸಭೆಯ ಅಧ್ಯಕ್ಷ ಅಂದರೆ ಸ್ಪೀಕರ್‌ನನ್ನು ಚುನಾಯಿಸಿಕೊಳ್ಳುವುದು. ಮುಂದುವರಿದು ಅಮೇರಿಕಾದ ಅಧ್ಯಕ್ಷನ ಚುನಾವಣೆಯಲ್ಲಿ ಯಾವುದೇ ಅಭ್ಯರ್ಥಿ ಚಲಾವಣೆಗೊಂಡ ಮತಗಳಲ್ಲಿ ಬಹುಮತದ ಅಂದರೆ ಅರ್ಧಕ್ಕಿಂತ ಹೆಚ್ಚಿನ ಮತಗಳನ್ನು ಪಡೆಯದಿದ್ದಾಗ ಪ್ರತಿನಿಧಿಗಳ ಸಭೆಯು ಮತ ನೀಡುವ ಮೂಲಕ ಅಧಿಕ ಮತ ಗಳಿಸಿರುವ ಮೂವರು ಅಧ್ಯಕ್ಷೀಯ ಉಮೇದುವಾರರ ಪೈಕಿ ಒಬ್ಬನನ್ನು ಚುನಾಯಿಸಲು ಅಧಿಕಾರವನ್ನು ಪಡೆದಿದೆ.

**4. ಪದಚ್ಯುತಿ ಅಧಿಕಾರ ಕಾರ್ಯಗಳು [Power and Fungctions of Impeachment]:** ಅಧ್ಯಕ್ಷ ಸೇರಿದಂತೆ ಅಮೇರಿಕಾದ ಪ್ರಮುಖ ಹುದ್ದೆಯಲ್ಲಿರುವವರು ದುರ್ವರ್ತನೆ, ಅಪ್ರಾಮಾಣಿಕತೆ ಅಥವಾ ದೇಶದ್ರೋಹದಂತಹ ಗಂಭೀರ ಆರೋಪಗಳಿಗೆ ಒಳಗಾದರೆ ಪ್ರತಿನಿಧಿಗಳ ಸಭೆಯ ಸದಸ್ಯರು ಅಂತಹ ಆರೋಪವನ್ನು ಕುರಿತಂತೆ ಪ್ರಸ್ತಾಪಿಸುವರು. ಆಗ ಆರೋಪವನ್ನು ಪ್ರತಿನಿಧಿಗಳ ಸಭೆಯ ಸಮಿತಿಗೆ ವರ್ಗಾಯಿಸಲಾಗುತ್ತದೆ. ಸಮಿತಿಯು ಆರೋಪದ ಸತ್ಯಾಸತ್ಯತೆಯನ್ನು ಪರಿಶೀಲಿಸಿ ವರದಿಯನ್ನು ನೀಡುತ್ತದೆ. ನಂತರದಲ್ಲಿ ಪ್ರತಿನಿಧಿಗಳ ಸಭೆಯು ಚರ್ಚೆಯ ಬಳಿಕ ನಿರ್ಣಯವೊಂದನ್ನು ಅಂಗೀಕರಿಸಿ ಸೆನೆಟ್‌ಗೆ ಕಳುಹಿಸುತ್ತದೆ. ಈ ವೇಳೆಯಲ್ಲಿ ನ್ಯಾಯಾಲಯದೋಪಾದಿಯಲ್ಲಿ ವಿಚಾರಣೆ ನಡೆಸುವ ಸೆನೆಟ್ ಅಗತ್ಯವಿದ್ದಲ್ಲಿ ಪದಚ್ಯುತಿಗೆ ಮುಂದಾಗುತ್ತದೆ. ಹೀಗೆ ಸೆನೆಟ್‌ನ ಜೊತೆಗೂಡಿ ಪ್ರತಿನಿಧಿಗಳ ಸಭೆಯು ಪದಚ್ಯುತಿ ಅಧಿಕಾರವನ್ನು ಚಲಾಯಿಸಲು ಅಧಿಕಾರ ಪಡೆದಿದೆ.



**5. ಯುದ್ಧ ಘೋಷಣೆಯ ಅಧಿಕಾರ [Power of Declaring War]:** ಯುದ್ಧ ಅಥವಾ ಶಾಂತಿಯನ್ನು ಘೋಷಿಸುವ ಅಧಿಕಾರವು ಅಮೇರಿಕಾದಲ್ಲಿ ತಾತ್ವಿಕವಾಗಿ ಮಹಾ ದಂಡನಾಯಕನಾಗಿರುವ ಅಧ್ಯಕ್ಷನಿಗೆ ಸೇರಿದೆ. ಆದರೆ, ಅಧ್ಯಕ್ಷನು ಸ್ವತಂತ್ರವಾಗಿ ತನ್ನ ಅಧಿಕಾರವನ್ನು ಚಲಾಯಿಸಲಾಗದು. ಪ್ರತಿನಿಧಿಗಳ ಸಭೆಯೊಡನೆ ಸೆನೆಟ್‌ನ ಒಪ್ಪಿಗೆ ಯುದ್ಧ ಘೋಷಣೆಗೆ ಅತ್ಯಗತ್ಯ. ಹೀಗೆ ತಡೆ ಮತ್ತು ಸಮತೋಲನ ತತ್ವದಡಿ ಅಧ್ಯಕ್ಷನ ಯುದ್ಧ ಘೋಷಣೆಯ ಅಧಿಕಾರವನ್ನು ನಿಯಂತ್ರಿಸುವ ವಿಚಾರದಲ್ಲಿ ಪ್ರತಿನಿಧಿಗಳ ಸಭೆಯೂ ಪಾಲು ಹೊಂದಿದೆ.

**6. ಸಂವಿಧಾನ ತಿದ್ದುಪಡಿಯ ಅಧಿಕಾರ [Power of Constitution Ammendment]:** ಸೆನೆಟ್ ಹಾಗೂ ಪ್ರತಿನಿಧಿಗಳ ಸಭೆ ಮೂರನೇ ಎರಡರಷ್ಟು ಬಹುಮತದೊಡನೆ ಸಂವಿಧಾನದ ತಿದ್ದುಪಡಿಗೆ ಚಾಲನೆ ನೀಡಬಹುದಾಗಿದೆ. ಮುಂದುವರಿದು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಮೂರನೇ ಎರಡರಷ್ಟು ರಾಜ್ಯ ಶಾಸಕಾಂಗಗಳು ಸಂವಿಧಾನದ ತಿದ್ದುಪಡಿಗೆ ಮನವಿ ಸಲ್ಲಿಸಿದರೆ ತಿದ್ದುಪಡಿಗೆ ಕಾಂಗ್ರೆಸ್ಸಿನ ಎರಡೂ ಸದನಗಳು ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಹೀಗೆ ಪ್ರತಿನಿಧಿಗಳ ಸಭೆ ಮತ್ತು ಸೆನೆಟ್ ಹೊರತುಪಡಿಸಿ ಅಮೇರಿಕಾದಲ್ಲಿ ಸಂವಿಧಾನ ತಿದ್ದುಪಡಿಗೊಳಿಸಲು ಸಾಧ್ಯವಿಲ್ಲ.

ಈ ಮೇಲೆ ಸಂಕ್ಷಿಪ್ತವಾಗಿ ವಿವರಿಸಲಾಗಿರುವ ಅಧಿಕಾರ ಕಾರ್ಯಗಳನ್ನು ಅಮೇರಿಕಾದ ಪ್ರತಿನಿಧಿಗಳ ಸಭೆಯು ಪಡೆದುಕೊಂಡಿದೆ. ಅಮೇರಿಕಾದ ಸಂವಿಧಾನ ರಚನಾಕಾರರು ಅಧಿಕಾರ ಪ್ರತ್ಯೇಕತೆಯ ತತ್ವವನ್ನು ಪಾಲಿಸಿದರೂ ಸೆನೆಟ್‌ಗೆ ಅಧ್ಯಕ್ಷನ ಸಲಹಾ ಮಂಡಳಿಯ ಸ್ಥಾನವನ್ನೊದಗಿಸಲು ಬಯಸಿದ್ದರು. ಹೀಗಾಗಿ ಜನತಾ ಸದನವಾದ ಪ್ರತಿನಿಧಿಗಳ ಸಭೆಗಿಂತ ಅಧಿಕ ಅಧಿಕಾರಗಳನ್ನು ಮೇಲ್ಮನೆಯಾದ ಸೆನೆಟ್‌ಗೆ ಕಲ್ಪಿಸಿದ್ದಾರೆ. ಪ್ರಸ್ತುತ ಸೆನೆಟ್ ಜನರಿಂದ ಪರೋಕ್ಷವಾಗಿ ಆಯ್ಕೆಗೊಳ್ಳುವ ಬದಲು ನೇರವಾಗಿ ಚುನಾಯಿತಗೊಳ್ಳುತ್ತಿರುವುದರಿಂದ ಅದರ ಪ್ರಭಾವ ಮತ್ತಷ್ಟು ಹೆಚ್ಚಾಗಿದೆ. ಹೀಗಾಗಿ ಅಪೇಕ್ಷಿಸಿದಷ್ಟು ಅಧಿಕಾರವನ್ನು ಪಡೆಯುವಲ್ಲಿ ಪ್ರತಿನಿಧಿಗಳ ಸಭೆಯು ವಂಚಿತಗೊಂಡಿದೆ.

### [C] ಸೆನೆಟ್‌ನ ರಚನೆ [Composition of the Senate]:

**ಪೀಠಿಕೆ:** ಅಮೇರಿಕಾದ ಕೇಂದ್ರ ಶಾಸಕಾಂಗದ ಮೇಲ್ಮನೆಯೇ ಸೆನೆಟ್. ವಿಶ್ವದ ಇತರ ದೇಶಗಳ ಮೇಲ್ಮನೆಗಿಂತ ಅಧಿಕ ಅಧಿಕಾರಗಳನ್ನು ಪಡೆದಿರುವ ಸೆನೆಟ್ ಹಿರಿಯರ ಸದನ ಮತ್ತು ಶಾಶ್ವತ ಸದನ ಎಂದು ಗುರುತಿಸಲ್ಪಡುತ್ತಿದೆ. ಈ ಸದನದ ರಚನೆಯನ್ನು ಕೆಳಗಿನ ಅಂಶಗಳ ನೆರವಿನಿಂದ ಮನವರಿಕೆ ಮಾಡಿಕೊಳ್ಳಬಹುದಾಗಿದೆ.

**1. ಗಾತ್ರ [Size]:** ಅಮೇರಿಕಾದ ಶಾಸಕಾಂಗವಾದ ಕಾಂಗ್ರೆಸ್ಸಿನ ಮೇಲ್ಮನೆಯಾದ ಸೆನೆಟ್ ಚಿಕ್ಕ ಗಾತ್ರವನ್ನು ಹೊಂದಿದೆ. ಈ ಸಭೆಗೆ ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಪ್ರತಿ ರಾಜ್ಯ ಇಬ್ಬರು ಪ್ರತಿನಿಧಿಗಳನ್ನು ಚುನಾಯಿಸಲು ಅವಕಾಶವಿದೆ. ಗಮನಿಸಬೇಕಾದ ಅಂಶವೇನೆಂದರೆ ರಾಜ್ಯವೊಂದರ ಭೂ ಪ್ರದೇಶ ಮತ್ತು ಜನಸಂಖ್ಯೆಯ ಪ್ರಮಾಣ ಕಡಿಮೆಯಾಗಿರಲಿ ಅಥವಾ ಅಧಿಕವಾಗಿರಲಿ ಇಬ್ಬರು ಪ್ರತಿನಿಧಿಗಳನ್ನು ಸಮಾನವಾಗಿ ಚುನಾಯಿಸಬಹುದಾಗಿದೆ. ಪ್ರಸ್ತುತ ಅಮೇರಿಕಾದ ಸಂಯುಕ್ತ ಸಂಸ್ಥಾನವು 50 ರಾಜ್ಯಗಳಿಂದ ಕೂಡಿರುವ ಕಾರಣಕ್ಕೆ ಸೆನೆಟ್ 100 ಸದಸ್ಯರನ್ನು ಮಾತ್ರ ಹೊಂದುವಂತಾಗಿದೆ.

**2. ಚುನಾವಣಾ ವಿಧಾನ [Election Method]:** ಆರಂಭದಲ್ಲಿ ಸೆನೆಟ್‌ನ ಸದಸ್ಯರನ್ನು ರಾಜ್ಯ ಶಾಸಕಾಂಗಗಳ ಸದಸ್ಯರು ಮತ ನೀಡುವ ಮೂಲಕ ಚುನಾಯಿಸುತ್ತಿದ್ದರು. ಆದರೆ, ಸಂವಿಧಾನಕ್ಕೆ 1912 ರಲ್ಲಿ 17 ನೇ ತಿದ್ದುಪಡಿ ತರುವ ಮೂಲಕ ಸೆನೆಟ್‌ನ ಸದಸ್ಯರನ್ನು ಪ್ರತ್ಯಕ್ಷ ಚುನಾವಣೆಯ ಮೂಲಕ ಜನರಿಂದಲೇ ಚುನಾಯಿಸಲು ನಿರ್ಧರಿಸಲಾಯಿತು. ಈ ಕುರಿತಾದ ವಿವರಗಳನ್ನು ಇದೇ ಪತ್ರಿಕೆಯ ಕೊನೆಯ ಅಧ್ಯಾಯದಲ್ಲಿ ನೀಡಲಾಗಿದೆ.

**3. ಅರ್ಹತೆಗಳು [Qualifications]:** ವ್ಯಕ್ತಿಯೊಬ್ಬ ಅಮೇರಿಕಾದ ಸೆನೆಟ್‌ನ ಸದಸ್ಯನಾಗಲು ಈ ಕೆಳಗಿನ ಪ್ರಧಾನ ಅರ್ಹತೆಗಳನ್ನು ಪಡೆದಿರಬೇಕಾಗುತ್ತದೆ.

ಅ. ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಪೌರತ್ವವನ್ನು ಕನಿಷ್ಟ ಒಂಬತ್ತು ವರ್ಷಗಳಿಂದ ಹೊಂದಿರಬೇಕು.

ಆ. 30 ವರ್ಷಗಳ ವಯೋಮಿತಿಯನ್ನು ಪೂರೈಸಿರಬೇಕು.

ಇ. ತಾನು ಆಯ್ಕೆ ಬಯಸುವ ರಾಜ್ಯದ ನಿವಾಸಿಯಾಗಿರಬೇಕು.

**4. ಅಧಿಕಾರವಧಿ [term]:** ಸೆನೆಟ್‌ನ ಸದಸ್ಯರ ಅಧಿಕಾರವಧಿಯು ಆರು ವರ್ಷಗಳು. ಗಮನಾರ್ಹ ಅಂಶವೇನೆಂದರೆ ಸೆನೆಟ್‌ನ ಒಟ್ಟು ಸದಸ್ಯರ ಪೈಕಿ ಮೂರನೇ ಒಂದರಷ್ಟು ಸದಸ್ಯರು ಪ್ರತಿ ಎರಡು ವರ್ಷಗಳಿಗೆ ನಿವೃತ್ತರಾಗುತ್ತಾರೆ. ಮುಂದುವರಿದು ನಿವೃತ್ತರಾದ ಸದಸ್ಯರ ಸ್ಥಾನಗಳಷ್ಟೇ ಸದಸ್ಯರು ಸೆನೆಟ್‌ಗೆ ಹೊಸದಾಗಿ ಚುನಾಯಿತರಾಗುತ್ತಾರೆ. ಹೀಗಾಗಿ ಸೆನೆಟ್ ಒಮ್ಮೆಲೇ ವಿಸರ್ಜನೆಗೊಳ್ಳದ ನಿರಂತರ ಸದನವೆನಿಸಿದೆ. ಆಸಕ್ತಿದಾಯಕ ಅಂಶವೇನೆಂದರೆ ನಿವೃತ್ತನಾದ ಒಬ್ಬ ಸೆನೆಟ್ ಸದಸ್ಯ ಎಷ್ಟು ಬಾರಿಯಾದರೂ ಮರು ಚುನಾವಣೆಯಲ್ಲಿ ಜಯಶಾಲಿಯಾಗಿ ಸೆನೆಟ್‌ನ ಸದಸ್ಯನಾಗಲು ಅವಕಾಶವಿದೆ. ಉದಾ: ಅರಿಜೋನಾ ರಾಜ್ಯದ ಕಾರ್ಲ್ ಹೈಡನ್ ಆರು ಅವಧಿಗೆ ಅಂದರೆ ಸುಮಾರು 35 ವರ್ಷ ಸೆನೆಟ್‌ನ ಸದಸ್ಯರಾಗಿದ್ದರು. ಅನರ್ಹತೆ, ಮರಣ ಅಥವಾ ರಾಜೀನಾಮೆಯಿಂದ ಸೆನೆಟ್‌ನ ಸ್ಥಾನ ತೆರವಾದರೆ ಉಳಿದ ಅವಧಿಗೆ ಆಯಾ ರಾಜ್ಯದ ಗವರ್ನರ್ ನೇಮಕಗೊಳಿಸಲು ಸಂವಿಧಾನದ 17 ನೇ ತಿದ್ದುಪಡಿ ಅವಕಾಶ ಮಾಡಿಕೊಟ್ಟಿದೆ.



**5. ಅಧಿವೇಶನ [Session]:** ಸೆನೆಟ್‌ನ ಸದಸ್ಯರೂ ಸಹ ಪ್ರತಿನಿಧಿಗಳ ಸಭೆಯಂತೆ ವರ್ಷದಲ್ಲಿ ಒಮ್ಮೆ ಸಭೆ ಸೇರುತ್ತಾರೆ. ಮುಂದುವರಿದು ಪ್ರತಿನಿಧಿಗಳ ಸಭೆಯು ಅಧಿವೇಶನದಲ್ಲಿಲ್ಲದಿದ್ದರೂ ಸೆನೆಟ್‌ನ ವಿಶೇಷ ಸಭೆ ಕರೆಯುವ ಅಧಿಕಾರವನ್ನು ಅಧ್ಯಕ್ಷ ಪಡೆದಿರುತ್ತಾನೆ. ಈ ವೇಳೆ ಸೆನೆಟ್ ಪ್ರತಿನಿಧಿಗಳ ಸಭೆಯೊಡನೆ ಹಂಚಿಕೊಂಡಿರದ ಒಪ್ಪಂದಗಳ ಅಂಗೀಕಾರ, ನೇಮಕಾತಿಗಳಿಗೆ ಅನುಮತಿ ಹಾಗೂ ಪದಚ್ಯುತಿಯ ವಿಚಾರಣೆಯ ಅಧಿಕಾರಗಳನ್ನು ಚಲಾಯಿಸುತ್ತದೆ. ಗಮನಿಸಬೇಕಾದ ಅಂಶವೇನೆಂದರೆ ಪ್ರತಿನಿಧಿಗಳ ಸಭೆಯನ್ನು ಬಿಟ್ಟು ಅಧ್ಯಕ್ಷ ಸೆನೆಟ್‌ನ ವಿಶೇಷ ಸಭೆಗಳನ್ನು ಎಷ್ಟು ಬಾರಿಯಾದರೂ ಕರೆಯಬಹುದಾಗಿದ್ದು ಸೆನೆಟ್ ಹೊರತುಪಡಿಸಿ ಪ್ರತಿನಿಧಿಗಳ ಸಭೆಯ ಅಧಿವೇಶನವನ್ನು ಒಮ್ಮೆಯೂ ಕರೆಯಲಾಗದು.

**6. ಕೋರಂ [Quorum]:** ಸೆನೆಟ್‌ನ ಸಭೆಯ ಕಲಾಪಗಳು ಜರುಗಲು ಹಾಜರಾಗಬೇಕಾದ ಕನಿಷ್ಟ ಸದಸ್ಯರ ಸಂಖ್ಯೆಯನ್ನು ಕೋರಂ ಎನ್ನಲಾಗುತ್ತದೆ. ಅಮೇರಿಕಾ ಸಂವಿಧಾನದ ಮೊದಲನೇ ವಿಧಿಯಲ್ಲಿ ವಿವರಿಸಿರುವಂತೆ ಸೆನೆಟ್‌ನ ಬಹುಮತದ ಅಥವಾ ಅರ್ಧಕ್ಕಿಂತ ಹೆಚ್ಚಿನ ಸದಸ್ಯರ ಸಂಖ್ಯೆಯು ಕೋರಂ ಎನಿಸುತ್ತದೆ. ಇದರನ್ವಯ ಸೆನೆಟ್‌ನಲ್ಲಿ 100 ಸದಸ್ಯರಿದ್ದು ಅರ್ಧಕ್ಕಿಂತ ಹೆಚ್ಚು ಅಂದರೆ 51 ಸದಸ್ಯರ ಸಂಖ್ಯೆಯು ಕೋರಂ ಎನಿಸಿಕೊಳ್ಳುತ್ತದೆ.

**7. ಅಧ್ಯಕ್ಷ [Speeker]:** ಅಮೇರಿಕಾದ ಉಪಾಧ್ಯಕ್ಷರಾದವರು ಸೆನೆಟ್‌ನ ಪದನಿಮಿತ್ತ ಅಧ್ಯಕ್ಷತೆಯನ್ನು ಹೊಂದಿರುತ್ತಾರೆ. ಪ್ರತಿನಿಧಿಗಳ ಸಭೆಯಂತೆ ಬಹುಮತ ಪಡೆದ ಪಕ್ಷದ ನಾಯಕನಾಗಿರದೇ ಸೆನೆಟ್‌ನ ಅಧ್ಯಕ್ಷತೆಯನ್ನು ಸಾಂಪ್ರದಾಯಿಕವಾಗಿ ಉಪಾಧ್ಯಕ್ಷರು ನಿರ್ವಹಿಸುತ್ತಾರೆ. ಆಸಕ್ತಿದಾಯಕ ಅಂಶವೇನೆಂದರೆ ಸೆನೆಟ್‌ನ ಸದಸ್ಯರು ಪ್ರೆಸಿಡೆಂಟ್ ಪ್ರೊ ಟೆಂಪೊರೆ ಎಂಬ ಉಪಾಧ್ಯಕ್ಷನನ್ನು ಚುನಾಯಿಸಿಕೊಳ್ಳುತ್ತಾರೆ. ಈತ ಸೆನೆಟ್‌ನ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಅವರ ಕಾರ್ಯಗಳನ್ನು ನಿರ್ವಹಿಸುತ್ತಾನೆ.

**8. ವೇತನ ಮತ್ತು ವಿನಾಯಿತಿಗಳು [Salary and Immunities]:** ಸೆನೆಟ್‌ನ ಸದಸ್ಯರು ವಾರ್ಷಿಕ 174 ಸಾವಿರ ಡಾಲರ್‌ನಷ್ಟು ವೇತನವನ್ನು ಪಡೆಯುತ್ತಾರೆ. ಮುಂದುವರಿದು ಸೆನೆಟ್‌ನ ಬಹುಮತ ಮತ್ತು ಅಲ್ಪಮತದ ಪಕ್ಷಗಳ ನಾಯಕರು ವಾರ್ಷಿಕ 193 ಸಾವಿರದ 400 ಡಾಲರ್‌ನಷ್ಟು ವಾರ್ಷಿಕ ವೇತನವನ್ನು ಪಡೆಯುತ್ತಾರೆ. ಜೊತೆಗೆ ಕಛೇರಿ ನಿರ್ವಹಣೆ, ಆರೋಗ್ಯ, ಪ್ರಯಾಣ ಹಾಗೂ ಅಂಚೆ ಭತ್ಯೆಗಳನ್ನು ಸೆನೆಟ್‌ನ ಸದಸ್ಯರು ಪಡೆಯುತ್ತಾರೆ. ಇದರೊಡನೆ ಸೆನೆಟ್‌ನ ಸದಸ್ಯರಿಗೆ ನಿವೃತ್ತಿ ವೇತನವನ್ನು ನೀಡಲಾಗುತ್ತದೆ. ಅಲ್ಲದೇ ಈ ಕೆಳಗಿನ ಹಲವು ವಿನಾಯಿತಿಗಳನ್ನು ಸೆನೆಟ್‌ನ ಸದಸ್ಯರು ಅನುಭವಿಸುತ್ತಾರೆ.

ಅ. ಸೆನೆಟ್‌ನ ಸದಸ್ಯರು ಸದನದಲ್ಲಿ ಮುಕ್ತವಾಗಿ ಮಾತನಾಡುವ ಅವಕಾಶ ಹೊಂದಿದ್ದು ಸದನದಲ್ಲಿ ವ್ಯಕ್ತಪಡಿಸಿದ ವಿಚಾರಗಳಿಗೆ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ.

ಆ. ನಾಗರಿಕ ಮೊಕದ್ದಮೆಗೆ ಸಂಬಂಧಿಸಿದಂತೆ ಅಧಿವೇಶನ ಆರಂಭವಾಗುವ ಮೊದಲು ಮತ್ತು ನಂತರದ 40 ದಿನಗಳವರೆಗೆ ಸೆನೆಟ್‌ನ ಸದಸ್ಯರನ್ನು ಬಂಧಿಸುವಂತಿಲ್ಲ.

ಇ. ಸೆನೆಟ್ ತನ್ನ ಕಾರ್ಯ ಕಲಾಪಗಳಿಗೆ ಪೂರಕವಾದ ನಿಯಮಾವಳಿಗಳು ಅಥವಾ ಪ್ರಕ್ರಿಯೆಗಳನ್ನು ರೂಪಿಸಲು ಸ್ವತಂತ್ರವಾಗಿರುತ್ತದೆ.

ಈ. ಸೆನೆಟ್‌ನ ನಿಂದನೆಗೆ ಸೂಕ್ತವೆನಿಸಿದ ಶಿಕ್ಷೆಯನ್ನು ನೀಡುವ ಅಧಿಕಾರವನ್ನು ಪಡೆದಿದೆ.

**[D.] ಸೆನೆಟ್‌ನ ಅಧಿಕಾರ ಕಾರ್ಯಗಳು**

**[Powers and Fungctions of the Senate]:**

ಅಮೇರಿಕಾದ ಸಂವಿಧಾನ ರಚನಾಕಾರರು ಅಧ್ಯಕ್ಷನಿಗೆ ಸಲಹಾ ಮಂಡಳಿಯಂತೆ ಸೆನೆಟ್ ಕಾರ್ಯ ನಿರ್ವಹಿಸಬೇಕೆಂಬ ಕನಸನ್ನು ಹೊಂದಿದ್ದರು. ಹೀಗಾಗಿ ಕೆಳಮನೆಯಾದ ಪ್ರತಿನಿಧಿಗಳ ಸಭೆಗಿಂತ ಹೆಚ್ಚಿನ ಅಧಿಕಾರಗಳನ್ನು ಸೆನೆಟ್‌ಗೆ ಒದಗಿಸಿರುವರು. ಆಸಕ್ತಿದಾಯಕ ಅಂಶವೇನೆಂದರೆ ಅಮೇರಿಕಾದ ಸರ್ಕಾರ ವ್ಯವಸ್ಥೆಯಲ್ಲಿ ಅಧ್ಯಕ್ಷರು ನಾಲ್ಕು ವರ್ಷಗಳಿಗೆ ಮತ್ತು ಪ್ರತಿನಿಧಿಗಳ ಸಭೆಯು ಎರಡು ವರ್ಷಗಳಿಗೆ ಬದಲಾವಣೆಗೊಳ್ಳಬೇಕಾಗುತ್ತದೆ. ಆದರೆ, ಸೆನೆಟ್ ನಿರಂತರವಾಗಿ ಮುಂದುವರಿದು ಶಾಶ್ವತ ಸ್ವರೂಪವುಳ್ಳ ಅಂಗವೆನಿಸಿದೆ. ಹೀಗಾಗಿ ಸೆನೆಟ್ ವಿಫುಲ ಅಧಿಕಾರ ಕಾರ್ಯಗಳನ್ನು ಪಡೆದಿದ್ದು ಅವುಗಳಲ್ಲಿ ಪ್ರಮುಖವಾದವುಗಳನ್ನು ಕೆಳಗೆ ನೀಡಲಾಗಿದೆ.

**1. ಶಾಸನೀಯ ಅಧಿಕಾರ ಕಾರ್ಯಗಳು [Legislative Power and Fungctions]:** ಅಮೇರಿಕಾದ ಕಾಂಗ್ರೆಸ್ಸಿನ ಮೇಲ್ಮನೆಯಾಗಿ ಸೆನೆಟ್ ಪ್ರತಿನಿಧಿಗಳ ಸಭೆಗೆ ಸಮಾನವಾದ ಶಾಸನ ರಚನಾ ಅಧಿಕಾರವನ್ನು ಪಡೆದಿದೆ. ಸಾಮಾನ್ಯ ಮಸೂದೆಯೊಂದನ್ನು ಸೆನೆಟ್‌ನಲ್ಲಿಯೂ ಮೊದಲು ಮಂಡಿಸಬಹುದಾಗಿದೆ. ಮುಂದುವರಿದು ಮಸೂದೆಯೊಂದು ಪ್ರತಿನಿಧಿಗಳ ಸಭೆಯಲ್ಲಿ ಮೊದಲು ಮಂಡನೆಗೊಂಡರೂ ಸೆನೆಟ್‌ನ ಅಂಗೀಕಾರವಿಲ್ಲದೇ ಶಾಸನವಾಗಲಾರದು. ಇದರೊಡನೆ ಮಸೂದೆಯೊಂದನ್ನು ಕುರಿತಂತೆ ಪ್ರತಿನಿಧಿಗಳ ಸಭೆ ಮತ್ತು ಸೆನೆಟ್‌ನ ನಡುವೆ ಭಿನ್ನಾಭಿಪ್ರಾಯಗಳು ಉಂಟಾದರೆ ಎರಡೂ ಸದನಗಳ ತಲಾ ಮೂವರು ಸದಸ್ಯರಿಂದ ಕೂಡಿರುವ ಸಮ್ಮೇಳನ ,ಸಮಿತಿಯೊಂದನ್ನು (conference committee) ರಚಿಸಲಾಗುತ್ತದೆ. ಈ ಸಮಿತಿಯು ಮಸೂದೆ ಕುರಿತಂತೆ ಎರಡೂ ಸದನಗಳ ನಡುವೆ ಸಂಧಾನವನ್ನೇರ್ಪಡಿಸಿ ಸೂಕ್ತ ತೀರ್ಮಾನ ಕೈಗೊಳ್ಳಲು ನೆರವಾಗುತ್ತದೆ. ಹೀಗೆ ಅಮೇರಿಕಾದಲ್ಲಿ ಒಂದು ಮಸೂದೆ ಶಾಸನವಾಗಲು ಸೆನೆಟ್ ಪ್ರತಿನಿಧಿಗಳ ಸಭೆಗೆ ಸಮಾನ ಅಧಿಕಾರವನ್ನು ಪಡೆದಿದೆ.

**2. ಹಣಕಾಸಿನ ಅಧಿಕಾರ ಕಾರ್ಯಗಳು [Financial Power and Fungctions]:** ಅಮೇರಿಕಾದ ಸಂವಿಧಾನವು ಹಣಕಾಸಿನ ಮಸೂದೆ ಮೊದಲು



ಕೆಳಮನೆಯಾದ ಪ್ರತಿನಿಧಿಗಳ ಸಭೆಯಲ್ಲಿ ಮಂಡನೆಗೊಳ್ಳಬೇಕೆಂದು ಸೂಚಿಸಿದೆ. ಮುಂದುವರಿದು ಪ್ರತಿನಿಧಿಗಳ ಸಭೆಯು ಅಂಗೀಕರಿಸಿದ ಹಣಕಾಸಿನ ಮಸೂದೆಗೆ ತಿದ್ದುಪಡಿ ಸೂಚಿಸುವ ಅಧಿಕಾರವನ್ನು ಮುಕ್ತವಾಗಿ ಸೆನೆಟ್‌ಗೆ ನೀಡಿದೆ. ಜೊತೆಗೆ ಒಂದು ಹಣಕಾಸಿನ ಮಸೂದೆ ಶಾಸನವಾಗಲು ಸೆನೆಟ್‌ನ ಅಂಗೀಕಾರ ಪಡೆಯುವುದು ಕಡ್ಡಾಯವೆಂದು ವಿವರಿಸಿದೆ. ಹೀಗಾಗಿ ಸೆನೆಟ್ ವ್ಯಾಪಕ ತಿದ್ದುಪಡಿಗಳನ್ನು ಸೂಚಿಸುವ ಮೂಲಕ ಮಸೂದೆಯನ್ನು ಪ್ರತಿನಿಧಿಗಳ ಸಭೆಗೆ ಹಿಂತಿರುಗಿಸಲು ಅವಕಾಶ ಪಡೆದಿದೆ. ಆಗ ಪ್ರತಿನಿಧಿಗಳ ಸಭೆಯು ಸೆನೆಟ್‌ನ ತಿದ್ದುಪಡಿಗಳನ್ನು ಅನಿವಾರ್ಯವಾಗಿ ಅಂಗೀಕರಿಸಬೇಕಾಗುತ್ತದೆ. ಈ ರೀತಿ ಹಣಕಾಸಿನ ಮಸೂದೆಯನ್ನು ಮೊದಲು ಮಂಡಿಸಲು ಅವಕಾಶ ಪಡೆಯದಿದ್ದರೂ ಸೆನೆಟ್ ದೇಶದ ಹಣಕಾಸಿನ ಮೇಲೆ ತನ್ನ ನಿಯಂತ್ರಣವನ್ನು ಹೊಂದಲು ತಿದ್ದುಪಡಿಗಳ ಸೂಚನೆಯ ನೆರವಿನಿಂದ ಪ್ರಯತ್ನಿಸುತ್ತದೆ. ಉದಾ: ಹಣಕಾಸು ಮಸೂದೆಯೊಂದಕ್ಕೆ 847 ತಿದ್ದುಪಡಿಗಳನ್ನು ಸೆನೆಟ್ ಸೂಚಿಸಿದ್ದುದು. ಹೀಗೆ ಹಣಕಾಸಿನ ನಿಯಂತ್ರಣದ ವಿಚಾರದಲ್ಲಿ ಸೆನೆಟ್ ವಿಶ್ವದ ಯಾವುದೇ ಮೇಲ್ಮನೆ ಹೊಂದಿರದಷ್ಟು ಪ್ರಬಲ ಅಧಿಕಾರವನ್ನು ಪಡೆದುಕೊಂಡಿದೆ.

**3. ನೇಮಕಾತಿಯ ಅಧಿಕಾರ ಕಾರ್ಯಗಳು** [Power and Fungctions of **Appointments]:** ಅಮೇರಿಕಾ ಸಂವಿಧಾನದ ಎರಡನೇ ವಿಧಿಯ ಎರಡನೇ ಸೆಕ್ಷನ್ ವಿವರಿಸುವಂತೆ ಅಧ್ಯಕ್ಷ ನೇಮಿಸುವ ಪ್ರಮುಖ ಹುದ್ದೆಗಳಿಗೆ ಸೆನೆಟ್‌ನ ಸಲಹೆ ಅಥವಾ ಅಂಗೀಕಾರ ಪಡೆಯಬೇಕಾಗುತ್ತದೆ. ರಾಯಭಾರಿಗಳು, ಇತರ ಸಾರ್ವಜನಿಕ ಮಂತ್ರಿಗಳು, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಂತಹ ಪ್ರಮುಖ ಹುದ್ದೆಗಳಿಗೆ ಅಧ್ಯಕ್ಷನು ಸೆನೆಟ್‌ನ ಅಂಗೀಕಾರ ಪಡೆಯಬೇಕಾಗುತ್ತದೆ. ಅಧ್ಯಕ್ಷನ ನೇಮಕಾತಿಯ ಪ್ರಸ್ತಾವವನ್ನು ಸೆನೆಟ್ ತನ್ನ ವಿವಿಧ ಸಮಿತಿಗಳಿಗೆ ವರ್ಗಾಯಿಸಿ ಅವುಗಳ ಸಲಹೆಯಂತೆ ನೇಮಕಾತಿಗೆ ಅಂಗೀಕಾರ ನೀಡುತ್ತದೆ. ಸೆನೆಟ್‌ನ ಅಂಗೀಕಾರವಿಲ್ಲದೇ ಅಧ್ಯಕ್ಷ ಮಾಡುವ ನೇಮಕಾತಿಯು ಊರ್ಜಿತಗೊಳ್ಳುವುದಿಲ್ಲ. ಆಸಕ್ತಿದಾಯಕ ಅಂಶವೇನೆಂದರೆ ಪ್ರಾದೇಶಿಕ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಆಯಾ ರಾಜ್ಯದ ಸೆನೆಟ್ ಸದಸ್ಯರೊಡನೆ ಸಮಾಲೋಚಿಸಿ ನಿರ್ಧಾರ ಕೈಗೊಳ್ಳಬೇಕೆಂಬ ನಿಯಮವಿದ್ದು ಅದನ್ನು ಸೆನೆಟೋರಿಯಲ್ ಕರ್ಟೆಸಿ (Senatorial courtesy) ಎನ್ನಲಾಗುತ್ತದೆ. ಹೀಗೆ ಸೆನೆಟ್‌ನ ಸದಸ್ಯರು ನೇಮಕಾತಿ ಕುರಿತಂತೆ ಅಧಿಕ ಅಧಿಕಾರಗಳನ್ನು ಚಲಾಯಿಸಲು ಅವಕಾಶ ಪಡೆದಿದ್ದಾರೆ.

**4. ಒಪ್ಪಂದಗಳನ್ನು ಅಂಗೀಕರಿಸುವ ಅಧಿಕಾರ ಕಾರ್ಯಗಳು [Power and Fungctions of Approval of Treaties]:** ಅಧ್ಯಕ್ಷ ವಿದೇಶಗಳೊಡನೆ ನಾನಾ ಒಪ್ಪಂದಗಳನ್ನು ಮಾಡಿಕೊಳ್ಳಲು ಅಧಿಕಾರ ಹೊಂದಿದ್ದರೂ ಆ ಒಪ್ಪಂದಗಳು ಜಾರಿಗೊಳ್ಳಬೇಕಾದರೆ ಸೆನೆಟ್‌ನ ಅಂಗೀಕಾರ ಅವಶ್ಯಕ. ಅಧ್ಯಕ್ಷ ಮಾಡಿಕೊಂಡ

ಒಪ್ಪಂದಗಳನ್ನು ಸೆನೆಟ್ ತನ್ನ ವಿದೇಶಾಂಗ ವ್ಯವಹಾರಗಳ ಸಮಿತಿಗೆ ನೀಡುತ್ತದೆ. ಆ ಸಮಿತಿಯು ವಿವಿಧ ಮೂಲಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಸಾರ್ವಜನಿಕ ಅಭಿಪ್ರಾಯ ಪಡೆದು, ಆಳವಾದ ಅಧ್ಯಯನದೊಡನೆ ಒಪ್ಪಂದವನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ವರದಿಯನ್ನು ಸೆನೆಟ್‌ಗೆ ಸಲ್ಲಿಸುತ್ತದೆ. ಸೆನೆಟ್‌ನ ಚರ್ಚೆಯ ಬಳಿಕ ಬಹುಮತದೊಡನೆ ಅಂದರೆ ಅರ್ಧಕ್ಕಿಂತ ಹೆಚ್ಚಿನ ಸದಸ್ಯರ ಬೆಂಬಲದೊಡನೆ ಒಪ್ಪಂದವು ಅಂಗೀಕಾರವಾದರೆ ಜಾರಿಗೊಳ್ಳುತ್ತದೆ. ಇಲ್ಲವಾದಲ್ಲಿ ಅಂದರೆ ಸೆನೆಟ್‌ನ ಅಂಗೀಕಾರ ಪಡೆಯದಿದ್ದರೆ ಒಪ್ಪಂದ ಅಧ್ಯಕ್ಷ ಮಾಡಿಕೊಂಡ ಒಪ್ಪಂದ ರದ್ದುಗೊಳ್ಳುತ್ತದೆ. ಹೀಗಾಗಿ ಅಧ್ಯಕ್ಷ ಸೆನೆಟ್‌ನ ವಿದೇಶಾಂಗ ವ್ಯವಹಾರಗಳ ಸಮಿತಿಯ ಅಧ್ಯಕ್ಷನೊಡನೆ ಸಂಪರ್ಕದಲ್ಲಿದ್ದು ಒಪ್ಪಂದಗಳಿಗೆ ಮುಂದಾಗುತ್ತಾನೆ. ಹೀಗೆ ಸೆನೆಟ್ ಪ್ರತಿನಿಧಿಗಳ ಸಭೆಗಿಲ್ಲದ ವಿಶೇಷ ಅಧಿಕಾರವನ್ನು ತನ್ನದಾಗಿಸಿಕೊಂಡಿದೆ.

**5. ತನಿಖಾ ಸಮೀತಿಗಳನ್ನು ರಚಿಸುವ ಅಧಿಕಾರ [Power of Appoint Investigation Committees]:** ಸರ್ಕಾರದ ವಿವಿಧ ಇಲಾಖೆಗಳ ಕಾರ್ಯಾಚರಣೆಯನ್ನು ಪರಿಶೀಲಿಸಲು ತನಿಖಾ ಸಮಿತಿಗಳನ್ನು ರಚಿಸಲು ಸೆನೆಟ್ ಅಧಿಕಾರವನ್ನು ಪಡೆದಿದೆ. ಇಂತಹ ಸಮಿತಿಗಳು ಆಡಳಿತದಲ್ಲಿ ಸೆನೆಟ್ ನಿಯಂತ್ರಣ ಹೊಂದಲು ಮತ್ತು ಸಾರ್ವಜನಿಕರಿಗೆ ಮಾಹಿತಿ ಒದಗಿಸಲು ಸಹಕಾರಿಯಾಗಿವೆ. ಉದಾ: ಟ್ರೂಮನ್ ಕಮೀಟಿ, ವಾಟರ್‌ಗೇಟ್ ಕಮೀಟಿ ಇತ್ಯಾದಿ. ದೇಶದ ಆಡಳಿತದಲ್ಲಿ ದಕ್ಷತೆಯನ್ನು ಖಾತ್ರಿಗೊಳಿಸಲು ಸೆನೆಟ್‌ಗೆ ತನಿಖಾ ಸಮಿತಿಗಳನ್ನು ರಚಿಸುವ ಅಧಿಕಾರವನ್ನು ದಯಪಾಲಿಸಲಾಗಿದೆ ಎನ್ನಬಹುದು. ಒಟ್ಟಾರೆ ಸರ್ಕಾರಿ ಇಲಾಖೆಗಳ ಸುಧಾರಣೆಗೆ ತನಿಖಾ ಸಮಿತಿಗಳ ಮೂಲಕ ಶ್ರಮಿಸುವ ಅಧಿಕಾರವನ್ನು ಸೆನೆಟ್ ಪಡೆದಿದುದು ಸುಸ್ಪಷ್ಟ

**6. ಪದಚ್ಯುತಿ ಅಧಿಕಾರ ಕಾರ್ಯಗಳು [Power and Fungctions of Impeachment]:** ಅಮೇರಿಕಾದ ಸಂವಿಧಾನ ರಚನಾಕಾರರು ಪದಚ್ಯುತಿಗೆ ಸಂಬಂಧಿಸಿದಂತೆ ಬ್ರಿಟಿಷ್ ವ್ಯವಸ್ಥೆಯಿಂದ ಪ್ರಭಾವಿತರಾಗಿದ್ದರು. ಹೀಗಾಗಿ ಬ್ರಿಟನ್ನಿನ ಶ್ರೀಮಂತರ ಸದನದಂತೆ ವಿವಿಧ ಹುದ್ದೆಗಳ ಪದಚ್ಯುತಿಯ ಅಧಿಕಾರವನ್ನು ಸೆನೆಟ್‌ಗೆ ನೀಡಿರುವರು. ಅಧ್ಯಕ್ಷ, ಉಪಾಧ್ಯಕ್ಷ, ನ್ಯಾಯಾಧೀಶರು, ಮಂತ್ರಿಗಳು ಸೇರಿದಂತೆ ಹಲವು ಪ್ರಮುಖ ಹುದ್ದೆಯಲ್ಲಿರುವವರು ದುರ್ವರ್ತನೆ, ಅಪ್ರಾಮಾಣಿಕತೆ ಅಥವಾ ದೇಶದ್ರೋಹದಂತಹ ಗಂಭೀರ ಆರೋಪಗಳಿಗೆ ಒಳಗಾದರೆ ಅವರನ್ನು ಪದಚ್ಯುತಿಗೊಳಿಸುವ ಅಧಿಕಾರವನ್ನು ಸೆನೆಟ್‌ಗೆ ನೀಡಲಾಗಿದೆ. ಆಸಕ್ತಿದಾಯಕ ಅಂಶವೇನೆಂದರೆ ಪ್ರತಿನಿಧಿಗಳ ಸಭೆಯ ಸದಸ್ಯರು ಆರೋಪವನ್ನು ಕುರಿತಂತೆ ಪ್ರಸ್ತಾಪಿಸಿದಾಗ ಅದನ್ನು ಸಮಿತಿಗೆ ವರ್ಗಾಯಿಸಲಾಗುತ್ತದೆ. ಸಮಿತಿ ಆರೋಪವನ್ನು ಪರಿಶೀಲಿಸಿ ಸತ್ಯಾಂಶವಿದ್ದರೆ ಪ್ರತಿನಿಧಿಗಳ ಸಭೆಯು ನಿರ್ಣಯವೊಂದನ್ನು ಅಂಗೀಕರಿಸಿ ಸೆನೆಟ್‌ಗೆ



ಕಳುಹಿಸುತ್ತದೆ. ಆಗ ವಿಚಾರಣೆ ನಡೆಸುವ ಸೆನೆಟ್ ನ್ಯಾಯಾಲಯದೋಪಾದಿಯಲ್ಲಿ ವಿಚಾರಣೆ ನಡೆಸಿ ಅಗತ್ಯವಿದ್ದಲ್ಲಿ ಪದಚ್ಯುತಿಗೆ ಮುಂದಾಗುತ್ತದೆ.

**7. ಯುದ್ಧ ಘೋಷಣೆಯ ಅಧಿಕಾರ [Power of Declaring War]:** ಯುದ್ಧ ಅಥವಾ ಶಾಂತಿಯನ್ನು ಘೋಷಿಸುವ ಅಧಿಕಾರವು ಅಮೇರಿಕಾದಲ್ಲಿ ತಾತ್ವಿಕವಾಗಿ ಮಹಾ ದಂಡನಾಯಕನಾಗಿರುವ ಅಧ್ಯಕ್ಷನಿಗೆ ಸೇರಿದೆ. ಆದರೆ, ಅಧ್ಯಕ್ಷನು ಸ್ವತಂತ್ರವಾಗಿ ತನ್ನ ಅಧಿಕಾರವನ್ನು ಚಲಾಯಿಸಲಾಗದು. ಪ್ರತಿನಿಧಿಗಳ ಸಭೆಯೊಡನೆ ಸೆನೆಟ್‌ನ ಒಪ್ಪಿಗೆ ಯುದ್ಧ ಘೋಷಣೆಗೆ ಅತ್ಯಗತ್ಯ. ಹೀಗೆ ತಡೆ ಮತ್ತು ಸಮತೋಲನ ತತ್ವದಡಿ ಅಧ್ಯಕ್ಷನ ಯುದ್ಧ ಘೋಷಣೆಯ ಅಧಿಕಾರವನ್ನು ಸೆನೆಟ್ ನಿಯಂತ್ರಣಾಧಿಕಾರ ಹೊಂದಿದೆ.

**8. ಸಂವಿಧಾನ ತಿದ್ದುಪಡಿಯ ಅಧಿಕಾರ** [Power of Constitution Ammendment: ಸೆನೆಟ್ ಹಾಗೂ ಪ್ರತಿನಿಧಿಗಳ ಸಭೆ ಮೂರನೇ ಎರಡರಷ್ಟು ಬಹುಮತದೊಡನೆ ಸಂವಿಧಾನದ ತಿದ್ದುಪಡಿಗೆ ಚಾಲನೆ ನೀಡಬಹುದಾಗಿದೆ. ಮುಂದುವರಿದು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಮೂರನೇ ಎರಡರಷ್ಟು ರಾಜ್ಯ ಶಾಸಕಾಂಗಗಳು ಸಂವಿಧಾನದ ತಿದ್ದುಪಡಿಗೆ ಮನವಿ ಸಲ್ಲಿಸಿದರೆ ತಿದ್ದುಪಡಿಗೆ ಕಾಂಗ್ರೆಸ್ಸಿನ ಎರಡೂ ಸದನಗಳು ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಹೀಗೆ ಪ್ರತಿನಿಧಿಗಳ ಸಭೆ ಮತ್ತು ಸೆನೆಟ್ ಹೊರತುಪಡಿಸಿ ಅಮೇರಿಕಾದಲ್ಲಿ ಸಂವಿಧಾನ ತಿದ್ದುಪಡಿಗೊಳಿಸಲು ಸಾಧ್ಯವಿಲ್ಲ.

ಈ ಮೇಲೆ ಸಂಕ್ಷೀಪ್ತವಾಗಿ ವಿವರಿಸಲಾದ ಸೆನೆಟ್‌ನ ಅಧಿಕಾರಗಳನ್ನು ಅವಲೋಕಿಸಿದಾಗ ಸೆನೆಟ್ ಅಮೇರಿಕಾದ ಪ್ರಬಲ ಸದನವೆಂಬುದು ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ವಿಶ್ವದ ಇತರ ದೇಶಗಳ ಮೇಲ್ಮನೆಗಳಿಗಿಲ್ಲದ ಅಧಿಕ ಅಧಿಕಾರಗಳನ್ನು ಸೆನೆಟ್ ಪಡೆದಿರುವುದು ಮನವರಿಕೆಯಾಗುತ್ತದೆ. ಪ್ರಜಾಸತ್ತಾತ್ಮಕ ಮೌಲ್ಯಗಳ ಪ್ರತೀಕವಾಗಿ ಹಾಗೂ ಅಧ್ಯಕ್ಷನ ಸರ್ವಾಧಿಕಾರತ್ವದ ನಿಯಂತ್ರಕನಾಗಿ ಅಮೇರಿಕಾದ ಶಾಸನೀಯ, ಹಣಕಾಸಿನ, ಆಡಳಿತಾತ್ಮಕ ಹಾಗೂ ನ್ಯಾಯಿಕ ಅಧಿಕಾರಗಳಲ್ಲಿ ಬಿಗಿ ಹಿಡಿತ ಹೊಂದಿರುವ ಸೆನೆಟ್ ಅಮೇರಿಕಾದ ಸರ್ಕಾರ ವ್ಯವಸ್ಥೆಯ ಕೇಂದ್ರ ಬಿಂದುವಾಗಿ ಪರಿಗಣಿಸಲ್ಪಡುತ್ತಿದೆ.

## [II.] ಬ್ರಿಟಿಷ್ ಸಂಸತ್ತಿನ ರಚನೆ ಮತ್ತು ಅಧಿಕಾರ ಕಾರ್ಯಗಳು [Composition and Powers of the British Parliament]:

**ಪೀಠಿಕೆ:** ಬ್ರಿಟನ್ನಿನ ಶಾಸಕಾಂಗವನ್ನು ಸಂಸತ್ತು (Parliament) ಎನ್ನಲಾಗುತ್ತದೆ. ಬ್ರಿಟಿಷ್ ಸಂಸತ್ತು ಬ್ರಿಟನ್ನಿನ ಅರಸ ಅಥವಾ ರಾಣಿ, ಮೇಲ್ಮನೆಯಾದ ಶ್ರೀಮಂತರ ಸದನ (House of Lords) ಹಾಗೂ ಕೆಳಮನೆಯಾದ ಸಾಮಾನ್ಯರ ಸದನಗಳಿಂದ (House of Commons) ಕೂಡಿದೆ. ಜಗತ್ತಿನ ಪ್ರಾಚೀನ ಶಾಸಕಾಂಗವಾಗಿರುವ ಬ್ರಿಟಿಷ್ ಸಂಸತ್ತಿನ ಆರಂಭದ ದಿನಗಳಲ್ಲಿ ಮೇಲ್ಮನೆಯಾದ ಶ್ರೀಮಂತರ ಸದನ ಪ್ರಬಲವಾಗಿತ್ತು. ಆದರೆ, 17 ನೇ

ಶತಮಾನದ ಮಧ್ಯ ಭಾಗದಿಂದ ಅದರ ಪ್ರಭಾವ ಇಳಿಮುಖಗೊಳ್ಳುತ್ತಾ ಬಂದು ಪ್ರಸ್ತುತ ಸಾಮಾನ್ಯರ ಸಭೆಯು ಬ್ರಿಟನ್ ಸಂಸತ್ತಿನ ಪ್ರಬಲ ಸದನವೆನಿಸಿದೆ. ಬ್ರಿಟಿಷ್ ಸಂಸತ್ತನ್ನು ಜಗತ್ತಿನ ಎಲ್ಲ ಸಂಸತ್ತುಗಳ ತಾಯಿ (mother of All the Parliaments) ಎಂದು ಕರೆಯಲಾಗುತ್ತದೆ. ಬ್ರಿಟಿಷ್ ಸಂಸತ್ತು ಬ್ರಿಟನ್ನಿನಲ್ಲಿ ಯಾವುದೇ ಸಂಸ್ಥೆಯ ನಿಯಂತ್ರಣಕ್ಕೊಳಪಡದೇ ತನಗಿಷ್ಟವಾದ ಕಾನೂನನ್ನು ರಚಿಸುವ ಅಥವಾ ರದ್ದುಗೊಳಿಸುವ ಪರಮಾಧಿಕಾರವನ್ನು ಪಡೆದಿದೆ. ಈ ಹಿನ್ನಲೆಯಲ್ಲಿ ಪ್ರಪಂಚದ ಇತರ ಸಂಸತ್ತುಗಳಿಗಿಂತ ಪ್ರಬಲ ಸಂಸತ್ತು ಎನಿಸಿಕೊಂಡಿದೆ.

### [A.] ಸಾಮಾನ್ಯರ ಸದನದ ರಚನೆ
### [Composition of the House of Commons]:

**ಪೀಠಿಕೆ:** ಸಾಮಾನ್ಯರ ಸಭೆ ಅಥವಾ ಹೌಸ್ ಆಫ್ ಕಾಮನ್ಸ್ ಬ್ರಿಟಿಷ್ ಸಂಸತ್ತಿನ ಕೆಳಮನೆಯಾಗಿದ್ದು ಜನತಾ ಸದನವಾಗಿದೆ. ಈ ಸದನವು ತನ್ನ ಆಕರ್ಷಕ ಐತಿಹ್ಯ ಮತ್ತು ಇಂಗ್ಲಿಷ್ ರಾಷ್ಟ್ರದ ಮಹತ್ವದಲ್ಲಿ ಅವಿಭಾಜ್ಯ ಪಾತ್ರದಿಂದ ಹೆಸರುವಾಸಿಯಾಗಿದೆ. ಮುಂದುವರಿದು ಬ್ರಿಟಿಷ್ ಸಂಸತ್ತಿನ ಎರಡು ಸದನಗಳಲ್ಲಿ ಹೌಸ್ ಆಫ್ ಕಾಮನ್ಸ್ ಪ್ರಬಲ ಸದನವೆನಿಸಿದೆ. ಹೀಗಾಗಿಯೇ ಸ್ಪೆನ್ಸರ್ ವಾಲ್ಪೋಲ್ ಮಂತ್ರಿಯೊಬ್ಬ ಸಂಸತ್ತನ್ನು ಸಂಪರ್ಕಿಸುವುದೆಂದರೆ ಸಾಮಾನ್ಯರ ಸಭೆಯನ್ನು ಸಂಪರ್ಕಿಸುವುದು. ರಾಣಿಯು ಸಂಸತ್ತನ್ನು ವಿಸರ್ಜಿಸುವುದೆಂದರೆ ಸಾಮಾನ್ಯರ ಸಭೆಯನ್ನು ವಿಸರ್ಜಿಸುವುದು ಮತ್ತು ಹೊಸ ಸಂಸತ್ತು ರಚನೆಗೊಳ್ಳುವುದು ಎಂದರೆ ಸಾಮಾನ್ಯರ ಸಭೆಯು ರಚನೆಗೊಳ್ಳುವುದು' ಎಂಬುದಾಗಿ ಅಭಿಪ್ರಾಯಪಡುತ್ತಾ ಅದರ ಮಹತ್ವದ ಸ್ಥಾನವನ್ನು ವಿವರಿಸಿರುವರು. ಈ ಹಿನ್ನೆಲೆಯಲ್ಲಿ ಸಂಸತ್ತನ್ನು ಅರಿಯಲು ಮೊದಲು ಹೌಸ್ ಆಫ್ ಕಾಮನ್ಸ್ ಅಧ್ಯಯನ ಅತ್ಯಗತ್ಯವಾಗಿದ್ದು ಅದರ ರಚನೆಯನ್ನು ಕೆಳಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

**1. ಗಾತ್ರ [Size]:** ಬ್ರಿಟಿಷ್ ಸಂಸತ್ತಿನ ಕೆಳಮನೆಯಾದ ಹೌಸ್ ಆಫ್ ಕಾಮನ್ಸ್ ಪ್ರಸ್ತುತ ಚುನಾಯಿತ ಸದಸ್ಯರನ್ನು ಹೊಂದಿರುವ ಜನತಾ ಸದನವಾಗಿದೆ. ಆದರೆ, ಆರಂಭದಲ್ಲಿ ಈ ಸದನಕ್ಕೆ ಅರಸರು ನಿರ್ದಿಷ್ಟವಲ್ಲದ ಅಲ್ಪ ಸದಸ್ಯರನ್ನು ಆಹ್ವಾನಿಸುತ್ತಿದ್ದರು. ಕಾಲಾನುಕ್ರಮದಲ್ಲಿ ಅಗತ್ಯಾನುಸಾರ ಇದರ ಸದಸ್ಯರ ಸಂಖ್ಯೆ ಏರುತ್ತಾ ಸಾಗಿತು. ಆಗ ಭೂ ಮಾಲೀಕರು, ವ್ಯಾಪಾರಿಗಳು ಮತ್ತು ಶ್ರೀಮಂತರು ಈ ಸದನದ ಸದಸ್ಯರಾಗಿರುತ್ತಿದ್ದರು. 20 ನೇ ಶತಮಾನದ ಹೊತ್ತಿಗೆ ಹಂತ ಹಂತವಾಗಿ ದೊರೆತ ಮತದಾನದ ಹಕ್ಕಿನಿಂದ ಜನರ ಪ್ರತಿನಿಧಿಗಳಿರುವ ಜನತಾ ಸದನವಾಗಿ ಹೌಸ್ ಆಫ್ ಕಾಮನ್ಸ್ ಪರಿವರ್ತನೆಗೊಂಡಿತು. ವಂಶಪಾರಂಪರ್ಯ ಹಾಗೂ ವ್ಯಕ್ತಿಪರ ಪ್ರತಿನಿಧಿಗಳ ಬದಲು ಭೌಗೋಳಿಕ ಆಧಾರದ ಜನತಾ ಪ್ರತಿನಿಧಿಗಳು ಮತದಾನದ ಮೂಲಕ ಚುನಾಯಿತಗೊಳ್ಳುವುದರೊಡನೆ ಪರಿಪೂರ್ಣ ಜನತಾ ಸದನವಾಗಿ ಹೌಸ್ ಆಫ್ ಕಾಮನ್ಸ್ ರೂಪುಗೊಂಡಿತು. ಪ್ರತಿ ಹತ್ತು



ವರ್ಷಕ್ಕೊಮ್ಮೆ ಜನಗಣತಿಯ ಬಳಿಕ ಅದರ ಗಾತ್ರದಲ್ಲಿ ಅಂದರೆ ಸದಸ್ಯರ ಸಂಖ್ಯೆಯಲ್ಲಿ ಬದಲಾವಣೆಯಾಗುತ್ತಿದೆ. ಉದಾ: 1974 ರಲ್ಲಿ 630 ರಿಂದ 635 ಕ್ಕೆ ಏರಿಕೆಯಾದ ಹೌಸ್ ಆಫ್ ಕಾಮನ್ಸ್ ಸದಸ್ಯರ ಸಂಖ್ಯೆಯು 1983 ರಲ್ಲಿ 635 ರಿಂದ 650 ಕ್ಕೆ ನಿಗದಿಗೊಂಡಿತು. 1992 ರ ಚುನಾವಣೆಯಲ್ಲಿ ಈ ಸದನದ ಒಟ್ಟು 650 ಸದಸ್ಯರ ಪೈಕಿ 523 ಸದಸ್ಯರು ಇಂಗ್ಲೆಂಡಿನಿಂದ, 38 ಸದಸ್ಯರು ವೇಲ್ಸ್‌ನಿಂದ, 72 ಸದಸ್ಯರು ಸ್ಕಾಟ್ಲ್ಯಾಂಡ್‌ನಿಂದ ಮತ್ತು 17 ಸದಸ್ಯರು ಉತ್ತರ ಐರ್ಲ್ಯಾಂಡ್‌ನಿಂದ ಚುನಾಯಿತರಾಗಿದ್ದರು. ಮುಂದೆ 1997 ರ ಸಾರ್ವತ್ರಿಕ ಚುನಾವಣೆಯ ಹೊತ್ತಿಗೆ ಹೌಸ್ ಆಫ್ ಕಾಮನ್ಸ್ ಸದಸ್ಯರ ಸಂಖ್ಯೆ 659 ಕ್ಕೆ ನಿಗದಿಗೊಂಡಿತು. ಆದರೆ ಪ್ರಸ್ತುತ ಸಾಮಾನ್ಯರ ಸಭೆಯು 646 ಸದಸ್ಯರನ್ನು ಒಳಗೊಂಡಿದೆ.

**2. ಚುನಾವಣಾ ವಿಧಾನ [Election Method]:** ಹೌಸ್ ಆಫ್ ಕಾಮನ್ಸ್‌ಗೆ ನಿಗದಿಪಡಿಸಲಾದ ಸ್ಥಾನಗಳಷ್ಟು ಸಂಖ್ಯೆಯ ಭೌಗೋಳಿಕ ತಳಹದಿಯ ಮತಕ್ಷೇತ್ರಗಳಾಗಿ ಯುನೈಟೆಡ್ ಕಿಂಗ್ಡಮ್ ವಿಂಗಡಿಸಲ್ಪಡುತ್ತದೆ. ಈ ಮತಕ್ಷೇತ್ರಗಳು ಏಕ ಸದಸ್ಯ ಮತಕ್ಷೇತ್ರವಾಗಿದ್ದು ಒಬ್ಬನೇ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಿರುತ್ತದೆ. ಆಯಾ ಮತಕ್ಷೇತ್ರಕ್ಕೆ ಸೇರಿದ ವಯಸ್ಕರರು ಅಂದರೆ 18 ವರ್ಷಗಳ ವಯೋಮಿತಿಯನ್ನು ಪೂರೈಸಿದ ಸ್ತ್ರೀ ಮತ್ತು ಪುರುಷರು ಮತ ನೀಡಿ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿಕೊಳ್ಳುತ್ತಾರೆ. ಈ ಕುರಿತಾದ ವಿವರಗಳನ್ನು ಇದೇ ಪತ್ರಿಕೆಯ ಕೊನೆಯ ಅಧ್ಯಾಯದಲ್ಲಿ ನೀಡಲಾಗಿದೆ.

**3. ಅರ್ಹತೆಗಳು [Qualifications]:** ವ್ಯಕ್ತಿಯೊಬ್ಬ ಹೌಸ್ ಆಫ್ ಕಾಮನ್ಸ್ ಸದಸ್ಯರಾಗಲು ಈ ಕೆಳಗಿನ ಸಾಮಾನ್ಯ ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ.

ಅ. ಗ್ರೇಟ್ ಬ್ರಿಟನ್ನಿನ ಪೌರನಾಗಿರಬೇಕು.

ಆ. ಕನಿಷ್ಠ 21 ವರ್ಷಗಳ ವಯೋಮಿತಿಯನ್ನು ಹೊಂದಿರಬೇಕು.

ಇ. ಮತದಾರರ ಪಟ್ಟಿಯಲ್ಲಿ ಹೆಸರನ್ನು ಹೊಂದಿರಬೇಕು.

**4. ಅಧಿಕಾರವಧಿ [Term]:** 1911 ರ ಸಂಸತ್ತಿನ ಕಾಯಿದೆಯಂತೆ ಸಾಮಾನ್ಯರ ಸಭೆಯ ಅಧಿಕಾರವಧಿಯನ್ನು ಐದು ವರ್ಷಗಳಿಗೆ ನಿಗಧಿಪಡಿಸಲಾಗಿದೆ. ಆದರೆ, ಈ ಅಧಿಕಾರವಧಿಯು ಪ್ರಧಾನಿಯ ಸಲಹೆಯಂತೆ ಅರಸ ಕೆಳಮನೆಯನ್ನು ವಿಸರ್ಜನೆಗೊಳಿಸಿದಾಗ ಕಡಿತಗೊಳ್ಳುವ ಮತ್ತು ತುರ್ತು ಪರಿಸ್ಥಿತಿಯ ವೇಳೆಯಲ್ಲಿ ಮುಂದುವರಿಯುವ ಸಾಧ್ಯತೆಗಳಿರುತ್ತವೆ. ಉದಾ: 1935 ರಲ್ಲಿ ಚುನಾಯಿತರಾಗಿದ್ದ ಸಾಮಾನ್ಯರ ಸಭೆಯ ಸದಸ್ಯರು 1945 ರವರೆಗೆ ಎರಡನೇ ಮಹಾಯುದ್ಧದ ಕಾರಣಕ್ಕೆ ಮುಂದುವರಿದದ್ದು.

**5. ಅಧಿವೇಶನ [Session]:** ಸಾಮಾನ್ಯರ ಸಭೆಯು ವರ್ಷದಲ್ಲಿ 160 ರಿಂದ 180 ದಿನಗಳ ಕಾಲ ಸಭೆ ಸೇರುತ್ತದೆ. ಅಧಿವೇಶನದ ಸಮಯದಲ್ಲಿ ವಾರದ ಐದು ದಿನಗಳ ಕಾಲ

ಅಂದರೆ ಸೋಮವಾರದಿಂದ ಶುಕ್ರವಾರದವರೆಗೆ ಸದನದ ಕಲಾಪಗಳಲ್ಲಿ ಇದರ ಸದಸ್ಯರು ಪಾಲ್ಗೊಂಡಿರುತ್ತಾರೆ. ಸಾಮಾನ್ಯವಾಗಿ ಇದರ ಸಭೆಗಳು ಮಧ್ಯಾಹ್ನ ಆರಂಭವಾಗಿ ತಡ ರಾತ್ರಿಯವರೆಗೆ ಜರುಗುತ್ತವೆ.

**6. ಕೋರಂ [Quorum]:** ಸಾಮಾನ್ಯರ ಸಭೆಯ ಕಾರ್ಯ ಕಲಾಪಗಳು ಜರುಗಲು ಹಾಜರಿರಬೇಕಾದ ಕನಿಷ್ಠ ಸದಸ್ಯರ ಸಂಖ್ಯೆಯನ್ನು ಕೋರಂ ಎನ್ನಲಾಗುತ್ತದೆ. ಸ್ಪೀಕರ್ ಸೇರಿದಂತೆ 40 ಸಂಖ್ಯೆಯ ಸದಸ್ಯರು ಸಾಮಾನ್ಯರ ಸಭೆಯ ಕೋರಂ ಪೂರೈಸಬಹುದಾಗಿದೆ.

**7. ಅಧ್ಯಕ್ಷ [Speeker]:** ಸಾಮಾನ್ಯರ ಸಭೆಯ ಸಭಾಧ್ಯಕ್ಷನನ್ನು ಬ್ರಿಟನ್ನಿನಲ್ಲಿ ಸ್ಪೀಕರ್ ಎನ್ನಲಾಗುತ್ತದೆ. ಸಾರ್ವತ್ರಿಕ ಚುನಾವಣೆಯ ಬಳಿಕ ಅಧಿವೇಶನಗೊಳ್ಳುವ ಸಾಮಾನ್ಯರ ಸಭೆ ಕೈಗೊಳ್ಳುವ ಮೊದಲ ಕಾರ್ಯವೇ ತನ್ನ ಸ್ಪೀಕರ್‌ನನ್ನು ಆಯ್ಕೆ ಮಾಡಿಕೊಳ್ಳುವುದು. ಆಸಕ್ತಿದಾಯಕ ಅಂಶವೇನೆಂದರೆ ಬಹಳ ಹಿಂದೆಯೇ ಈ ಸ್ಪೀಕರ್‌ನ ಹುದ್ದೆ ಬ್ರಿಟನ್ನಿನಲ್ಲಿ ಜನ್ಮ ತಾಳಿತ್ತು. ಸಾಮಾನ್ಯರ ಸದನದ ಸದಸ್ಯರ ಪರವಾಗಿ ಅರಸನೊಡನೆ ಮಾತನಾಡುವ ಜವಾಬ್ದಾರಿಯ ಹಿನ್ನೆಲೆಯಲ್ಲಿ ಈ ಹುದ್ದೆ 14 ನೇ ಶತಮಾನದಲ್ಲಿಯೇ ಉತ್ಪತ್ತಿಗೊಂಡಿತ್ತು. ಆಗ ಸ್ಪೀಕರ್‌ನನ್ನು ಅರಸ ನೇಮಿಸುತ್ತಿದ್ದ. ಪ್ರಸ್ತುತ ದಿನಗಳಲ್ಲಿಯೂ ಸದನದ ಪ್ರಮುಖನಾಗಿ ಈ ಹುದ್ದೆ ಮುಂದುವರಿದುಕೊಂಡು ಬಂದಿದೆ. ಗಮನಿಸಬೇಕಾದ ಅಂಶವೇನೆಂದರೆ ಬ್ರಿಟನ್ನಿನಲ್ಲಿ ಸ್ಪೀಕರ್‌ನ ಹುದ್ದೆಗೆ ಅನುಭವವುಳ್ಳ ವ್ಯಕ್ತಿಯನ್ನು ಪಕ್ಷಾತೀತವಾಗಿ ಚುನಾಯಿಸಲ್ಪಡುವುದು. ಒಮ್ಮೆ ಸ್ಪೀಕರ್‌ನಾಗಿ ಆಯ್ಕೆಗೊಂಡ ವ್ಯಕ್ತಿ ತಾನು ಎಷ್ಟು ಬಾರಿ ಮರು ಆಯ್ಕೆ ಬಯಸುತ್ತಾನೆಯೋ ಅಲ್ಲಿಯವರೆಗೆ ಸ್ಪೀಕರ್‌ನಾಗಿ ಮುಂದುವರಿಯಬಹುದಾಗಿದೆ. ಆದ್ದರಿಂದ (ಒಮ್ಮೆ ಸ್ಪೀಕರ್‌ನಾದರೆ ಸದಾ ಸ್ಪೀಕರ್ ನಾಗಿರುತ್ತಾನೆ) ಎಂಬ ನುಡಿಗಟ್ಟು ಬ್ರಿಟನ್ನಿನಲ್ಲಿ ಜಾರಿಯಲ್ಲಿದೆ.

**8. ವೇತನ ಮತ್ತು ವಿನಾಯಿತಿಗಳು [Salary and Immunities]:** ಸಾಮಾನ್ಯರ ಸಭೆಯ ಸದಸ್ಯರಿಗೆ ವೇತನ ನೀಡುವ ಪ್ರಸ್ತಾಪವನ್ನು 18 ನೇ ಶತಮಾನದಿಂದ ನಿರಾಕರಿಸುತ್ತಾ ಬರಲಾಗಿತ್ತು. ಅಂತಿಮವಾಗಿ 1911 ರಲ್ಲಿ ಡೇವಿಡ್ ಲಾಯ್ಡ್ ಜಾರ್ಜ್ 400 ಪೌಂಡುಗಳ ಭತ್ಯೆಯನ್ನು ಸಾಮಾನ್ಯರ ಸಭೆಯ ಸದಸ್ಯರಿಗೆ ಘೋಷಿಸಿದನು. ಕಾಲಾನುಕ್ರಮದಲ್ಲಿ ಭತ್ಯೆಯು ವೇತನವಾಗಿ ಪರಿವರ್ತನೆಗೊಂಡು 1946 ರ ಹೊತ್ತಿಗೆ ಅವರ ವಾರ್ಷಿಕ ವೇತನವು 1000 ಪೌಂಡುಗಳಿಗೇರಿತು. ಪ್ರಸ್ತುತ ಏಪ್ರಿಲ್ 1, 2022 ರಿಂದ ಸಾಮಾನ್ಯರ ಸಭೆಯ ಸದಸ್ಯರ ವೇತನವನ್ನು ವಾರ್ಷಿಕ 84144 ಪೌಂಡುಗಳೆಂದು ನಿಗಧಿಪಡಿಸಲಾಗಿದೆ. ಈ ವೇತನವನ್ನು ಕಛೇರಿ ನಿರ್ವಹಣೆ, ಸಿಬ್ಬಂದಿಗಳ ನೇಮಕ, ಸಂಸತ್ತು ಹಾಗೂ ಮತಕ್ಷೇತ್ರಗಳ ನಡುವಿನ ಓಡಾಟಕ್ಕೆ ಬಳಸಿಕೊಳ್ಳಲು ನೀಡಲಾಗುತ್ತಿದೆ. ಇದರೊಡನೆ ಸಾಮಾನ್ಯರ ಸಭೆಯ ಸದಸ್ಯರು ಕೆಳಗಿನ ಹಲವು ವಿನಾಯಿತಿಗಳನ್ನು ಪಡೆದಿರುತ್ತಾರೆ.

ಅ. ಸಾಮಾನ್ಯರ ಸಭೆಯ ಸದಸ್ಯರು ಸದನದಲ್ಲಿ ಮುಕ್ತವಾಗಿ ಮಾತನಾಡುವ ಅವಕಾಶ



ಹೊಂದಿದ್ದು ಸದನದಲ್ಲಿ ವ್ಯಕ್ತಪಡಿಸಿದ ವಿಚಾರಗಳಿಗೆ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ.

ಆ. ನಾಗರಿಕ ಮೊಕದ್ದಮೆಗೆ ಸಂಬಂಧಿಸಿದಂತೆ ಅಧಿವೇಶನ ಆರಂಭವಾಗುವ ಮೊದಲು ಮತ್ತು ನಂತರದ 40 ದಿನಗಳವರೆಗೆ ಸಾಮಾನ್ಯರ ಸಭೆಯ ಸದಸ್ಯರನ್ನು ಬಂಧಿಸುವಂತಿಲ್ಲ.

ಇ. ಸಾಮಾನ್ಯರ ಸಭೆಯು ತನ್ನ ಕಾರ್ಯ ಕಲಾಪಗಳಿಗೆ ಪೂರಕವಾದ ನಿಯಮಾವಳಿಗಳು ಅಥವಾ ಪ್ರಕ್ರಿಯೆಗಳನ್ನು ರೂಪಿಸಲು ಸ್ವತಂತ್ರವಾಗಿರುತ್ತದೆ.

ಈ. ಸಾಮಾನ್ಯರ ಸಭೆಯ ನಿಂದನೆಗೆ ಸೂಕ್ತವೆನಿಸಿದ ಶಿಕ್ಷೆಯನ್ನು ನೀಡುವ ಅಧಿಕಾರವನ್ನು ಪಡೆದಿದೆ.

### [B.] ಸಾಮಾನ್ಯರ ಸಭೆಯ ಅಧಿಕಾರ ಕಾರ್ಯಗಳು
### [Powers and Fungctions of House of Commons]:

**ಪೀಠಿಕೆ:** ಸಾಮಾನ್ಯರ ಸಭೆಯು ಬ್ರಿಟಿಷ್ ಸರ್ಕಾರದ ಪ್ರಧಾನ ಅಂಗವಾಗಿದೆ. ಮುಂದುವರಿದು ಬ್ರಿಟಿಷ್ ಆಡಳಿತದ ಶಾಸನೀಯ, ಕಾರ್ಯಾಂಗೀಯ ಹಾಗೂ ಹಣಕಾಸಿನ ಆಡಳಿತದಲ್ಲಿ ಸಾಮಾನ್ಯರ ಸಭೆಯು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ. ಹೀಗಾಗಿಯೇ ಬ್ರಿಟಿಷ್ ಸಂಸತ್ತು ಎಂದರೆ ಸಾಮಾನ್ಯರ ಸಭೆ ಎಂಬ ಭಾವನೆ ಮೂಡುತ್ತದೆ. ಈ ಕೆಳಗೆ ಸಾಮಾನ್ಯರ ಸದನದ ಪ್ರಧಾನ ಅಧಿಕಾರ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದ್ದು ಅವುಗಳ ಅಧ್ಯಯನವು ಮೇಲಿನ ಹೇಳಿಕೆಯನ್ನು ಮನವರಿಕೆ ಮಾಡುತ್ತದೆ.

**1. ಶಾಸನೀಯ ಅಧಿಕಾರ ಕಾರ್ಯಗಳು [Legislative Powers and Fungctions]:** ಏಕಾತ್ಮಕ ವ್ಯವಸ್ಥೆಯನ್ನು ಹೊಂದಿರುವ ಯುನೈಟೆಡ್ ಕಿಂಗಡಮ್‌ನಲ್ಲಿ ಇಡೀ ದೇಶಕ್ಕೆ ಒಂದೇ ಶಾಸಕಾಂಗವಿದೆ. ಈ ಏಕ ಶಾಸಕಾಂಗದ ಜನತಾ ಸದನವಾದ ಸಾಮಾನ್ಯರ ಸಭೆಯು ಸಹಜವಾಗಿ ಅಧಿಕ ಅಧಿಕಾರಗಳನ್ನು ತನ್ನದಾಗಿಸಿಕೊಂಡಿದೆ. ಆರಂಭದಲ್ಲಿ ಸಾಮಾನ್ಯರ ಸಭೆಯು ಶಾಸನ ರಚಿಸುವ ವಿಚಾರದಲ್ಲಿ ಶ್ರೀಮಂತರ ಸದನದೊಡನೆ ತನ್ನ ಅಧಿಕಾರವನ್ನು ಹಂಚಿಕೊಂಡಿತ್ತು. ಆದರೆ 1911 ಮತ್ತು 1949 ರ ಸಂಸತ್ತಿನ ಕಾಯಿದೆಯಂತೆ ಶ್ರೀಮಂತರ ಸದನಕ್ಕಿಂತ ಅಧಿಕ ಶಾಸನೀಯ ಅಧಿಕಾರಗಳನ್ನು ಸಾಮಾನ್ಯರ ಸಭೆಯೇ ಹೊಂದುವಂತಾಗಿದೆ. ಸಾಮಾನ್ಯರ ಸಭೆಯು ಅಂಗೀಕರಿಸಿದ ಒಂದು ಹಣಕಾಸೇತರ ಮಸೂದೆಯನ್ನು ಶ್ರೀಮಂತರ ಸದನವು ಹೆಚ್ಚೆಂದರೆ ಒಂದು ವರ್ಷದವರೆಗೆ ತಡೆ ಹಿಡಿಯಬಹುದಾಗಿದೆ. ಅರಸರು ಸಾಮಾನ್ಯ ಸಭೆಯು ಅಂಗೀಕರಿಸಿದ ಮಸೂದೆಗೆ ಅಂಕಿತ ಹಾಕಲು ನಿರಾಕರಿಸುವ ಅಧಿಕಾರವನ್ನು ಪಡೆದಿಲ್ಲ. ಜೊತೆಗೆ ಸಾಮಾನ್ಯರ ಸಭೆಯು ಅಂಗೀಕರಿಸಿದ ಮಸೂದೆಯನ್ನು ನ್ಯಾಯಾಂಗದ ವಿಮರ್ಶೆಗೊಳಪಡಿಸುವ ಅವಕಾಶವಿಲ್ಲ. ಹೀಗಾಗಿ ಸಾಮಾನ್ಯರ ಸಭೆಯು ರದ್ದುಗೊಳಿಸಲಾಗದ ಮತ್ತು ರಚಿಸಲಾಗದ ಯಾವ ಕಾಯಿದೆಯೂ ಇಂಗ್ಲೆಂಡಿನಲ್ಲಿ ಇರವು.

**2. ಹಣಕಾಸಿನ ಅಧಿಕಾರ ಕಾರ್ಯಗಳು [Financial Powers and Fungctions]:** ಬ್ರಿಟನ್ನಿನ ಖಜಾನೆಯ ಮೇಲೆ ಸಾಮಾನ್ಯರ ಸಭೆಯು ಅಧಿಕ ನಿಯಂತ್ರಣಾಧಿಕಾರವನ್ನು ಪಡೆದಿದೆ. 1911 ರ ಸಂಸತ್ತಿನ ಕಾಯಿದೆಯಂತೆ ಹಣಕಾಸಿನ ಮಸೂದೆಯೊಂದು ಮೊದಲು ಸಾಮಾನ್ಯರ ಸಭೆಯಲ್ಲಿಯೇ ಮಂಡನೆಗೊಳ್ಳಬೇಕಾಗುತ್ತದೆ. ತನ್ನಲ್ಲಿ ಮಂಡಿಸಲ್ಪಟ್ಟ ಆಯವ್ಯಯ ಪತ್ರವನ್ನು ಚರ್ಚಿಸಿ ಅಂಗೀಕಾರ ನೀಡಲು ಸಾಮಾನ್ಯರ ಸಭೆಗೆ ಅಧಿಕಾರವಿದೆ. ತೆರಿಗೆ ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವ ಅಂತಿಮ ಅಧಿಕಾರವು ಜನತಾ ಸದನವಾದ ಸಾಮಾನ್ಯರ ಸಭೆಗಿದೆ. ಗಮನಾರ್ಹ ಅಂಶವೇನೆಂದರೆ ಹಣಕಾಸು ಮಸೂದೆಯನ್ನು ಶ್ರೀಮಂತರ ಸದನವು ಒಂದು ತಿಂಗಳವರೆಗೆ ಮಾತ್ರ ತಡೆ ಹಿಡಿಯಬಹುದೇ ಹೊರತು ರದ್ದುಗೊಳಿಸುವ ಅಧಿಕಾರವಿಲ್ಲ. ಒಂದು ತಿಂಗಳ ನಂತರವೂ ಶ್ರೀಮಂತರ ಸದನ ಅಂಗೀಕಾರ ನೀಡದಿದ್ದರೆ ಅರಸನ ಅಂಕಿತದೊಡನೆ ಹಣಕಾಸು ಮಸೂದೆಯು ಸಾಮಾನ್ಯರ ಸಭೆಯ ಆಶಯದಂತೆ ಜಾರಿಗೊಳ್ಳುತ್ತದೆ. ಹೀಗೆ ಹಣಕಾಸಿನ ವ್ಯಾಪಕ ಅಧಿಕಾರಗಳನ್ನು ಬ್ರಿಟನ್ನಿನಲ್ಲಿ ಸಾಮಾನ್ಯರ ಸಭೆಯು ಪಡೆದುಕೊಂಡಿದೆ.

**3. ಕಾರ್ಯಾಂಗೀಯ ಅಧಿಕಾರ ಕಾರ್ಯಗಳು [Executive Powers and Fungctions]:** ಜನತಾ ಸದನವಾದ ಸಾಮಾನ್ಯರ ಸಭೆಯಲ್ಲಿ ಬಹುಮತ ಪಡೆದ ಪಕ್ಷವೇ ಬ್ರಿಟನ್ನಿನಲ್ಲಿ ಪ್ರಧಾನಿ ನಾಯಕತ್ವದ ನೈಜ ಕಾರ್ಯಾಂಗವನ್ನು ಅಂದರೆ ಸಚಿವ ಸಂಪುಟವನ್ನು ರಚಿಸುತ್ತದೆ. ಈ ಸಚಿವ ಸಂಪುಟವು ಅಂದರೆ ಕಾರ್ಯಾಂಗವು ಸಾಮಾನ್ಯರ ಸಭೆಗೆ ಜವಾಬ್ದಾರಿಯಾಗಿ ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಅಧಿವೇಶನದ ವೇಳೆಯಲ್ಲಿ ಸಾಮಾನ್ಯರ ಸದನದ ಸದಸ್ಯರು ಕೇಳುವ ಪ್ರಶ್ನೆ ಮತ್ತು ಉಪ ಪ್ರಶ್ನೆಗಳಿಗೆ ಮಂತ್ರಿಗಳು ಉತ್ತರಿಸಬೇಕಾಗುತ್ತದೆ. ಮುಂದುವರಿದು ಸಚಿವ ಸಂಪುಟದ ನೀತಿ, ನಿರ್ಧಾರ ಅಥವಾ ಕಾರ್ಯಕ್ರಮಗಳಲ್ಲಿನ ದೋಷಗಳನ್ನು ಟೀಕಿಸುವ ಅಧಿಕಾರ ಸಾಮಾನ್ಯರ ಸದನದ ಸದಸ್ಯರಿಗಿರುತ್ತದೆ. ಜೊತೆಗೆ ವಿವಿಧ ಸಂಸದೀಯ ಅವಕಾಶಗಳಡಿ ಅಂದರೆ ನಿಲುವಳಿ, ಚರ್ಚೆ, ಶೂನ್ಯ ವೇಳೆಗಳ ಮೂಲಕ ದೇಶದ ಗಂಭೀರ ಸವಾಲುಗಳನ್ನು ಕುರಿತಂತೆ ಸಚಿವ ಸಂಪುಟದ ಗಮನ ಸೆಳೆಯುವ ಮೂಲಕ ಆಡಳಿತ ನಡೆಸುವ ಕಾರ್ಯಾಂಗವನ್ನು ಸಂಸತ್ತು ನಿಯಂತ್ರಿಸಬಹುದಾಗಿದೆ.

**2. ನ್ಯಾಯಾಂಗೀಯ ಅಧಿಕಾರ ಕಾರ್ಯಗಳು [Judicial Powers and Fungctions]:** ಸಾಮಾನ್ಯರ ಸಭೆಯು ಅಲ್ಪ ಪ್ರಮಾಣದ ನ್ಯಾಯಿಕ ಅಧಿಕಾರಗಳನ್ನು ಹೊಂದಿದೆ. ಅವುಗಳಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ಪದಚ್ಯುತಗೊಳಿಸುವಂತೆ ಅರಸನಿಗೆ ಶಿಫಾರಸು ಮಾಡುವುದು ಪ್ರಧಾನವಾದದ್ದು. ಇದರೊಡನೆ ಸಾಮಾನ್ಯರ ಸಭೆಯನ್ನು ನಿಂದಿಸಿದವರನ್ನು ಶಿಕ್ಷಿಸುವ ಅಧಿಕಾರವನ್ನು ಸಾಮಾನ್ಯರ ಸಭೆಯೇ ಹೊಂದಿದೆ. ಹೀಗೆ ಸೀಮಿತವಾದ ನ್ಯಾಯಾಂಗೀಯ ಅಧಿಕಾರಗಳನ್ನು ಸಾಮಾನ್ಯರ ಸಭೆ ಪಡೆದಿದೆ.



**5. ಚುನಾವಣಾ ಅಧಿಕಾರ ಕಾರ್ಯಗಳು [Election Powers and Fungctions]:** ಆನುವಂಶಿಕ ಅರಸೊತ್ತಿಗೆಯನ್ನು ಅನುಸರಿಸುತ್ತಿರುವ ಬ್ರಿಟನ್ನಿನಲ್ಲಿ ಸಾಮಾನ್ಯರ ಸಭೆಗೆ ಭಾರತದಂತೆ ವ್ಯಾಪಕ ಚುನಾವಣಾ ಅಧಿಕಾರಗಳಿಲ್ಲ. ಆದರೆ ಸಾಮಾನ್ಯರ ಸಭೆಯು ತನ್ನ ಸ್ಪೀಕರ್ ಮತ್ತು ಉಪ ಸ್ಪೀಕರ್‌ನನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಪಡೆದಿದೆ. ಉಳಿದಂತೆ ಪ್ರಧಾನವಲ್ಲದ ಇತರ ಚುನಾವಣಾ ಅಧಿಕಾರಗಳನ್ನು ಸಾಮಾನ್ಯರ ಸಭೆಯು ಚಲಾಯಿಸುತ್ತದೆ.

**6. ಸಾರ್ವಜನಿಕ ಕುಂದು ಕೊರತೆಗಳನ್ನು ನಿವಾರಿಸುವ ಅಧಿಕಾರ ಕಾರ್ಯಗಳು:** ಜನತಾ ಸದನವಾಗಿರುವ ಸಾಮಾನ್ಯರ ಸಭೆಯು ಜನರ ಜ್ವಲಂತ ಸಮಸ್ಯೆಗಳನ್ನು ಸರ್ಕಾರದ ಅಂದರೆ ಸಚಿವ ಸಂಪುಟದ ಗಮನಕ್ಕೆ ತರುತ್ತದೆ. ಮುಂದುವರಿದು ಸಾರ್ವಜನಿಕ ಅಭಿಪ್ರಾಯಗಳನ್ನು ಸದನದಲ್ಲಿ ವ್ಯಕ್ತಪಡಿಸಿ ಅದರ ತಳಹದಿಯಲ್ಲಿ ಜನಹಿತ ರಕ್ಷಿಸುವ ಕಾನೂನುಗಳನ್ನು ರಚಿಸಲು ಶ್ರಮಿಸುತ್ತದೆ. ಇದರೊಡನೆ ಸರ್ಕಾರ ಮತ್ತು ಪ್ರಜೆಗಳ ನಡುವೆ ಸಂಪರ್ಕವನ್ನು ಏರ್ಪಡಿಸುವಲ್ಲಿ ಸಾಮಾನ್ಯರ ಸಭೆಯು ಪ್ರಧಾನ ಪಾತ್ರವನ್ನು ನಿರ್ವಹಿಸುತ್ತದೆ. ಹೀಗೆ ಸಾರ್ವಜನಿಕರ ಪ್ರತಿನಿಧಿಗಳಿಂದ ಕೂಡಿರುವ ಸಾಮಾನ್ಯರ ಸಭೆಯು ಅವರ ಕುಂದು ಕೊರತೆಗಳನ್ನು ನಿವಾರಿಸಲು ಕಾರ್ಯಾಚರಿಸುತ್ತದೆ.

ಈ ಮೇಲೆ ಸಂಕ್ಷಿಪ್ತವಾಗಿ ವಿವರಿಸಲಾದ ಸಾಮಾನ್ಯರ ಸಭೆಯ ಅಧಿಕಾರ ಕಾರ್ಯಗಳ ನೆರವಿನಿಂದ ಬ್ರಿಟಿಷ್ ಆಡಳಿತದಲ್ಲಿ ಅದರ ಮಹತ್ವವನ್ನು ಅರ್ಥೈಸಿಕೊಳ್ಳಬಹುದಾಗಿದೆ. ಇದರೊಡನೆ ಸಾಮಾನ್ಯರ ಸಭೆಯು ರಾಜಕೀಯ ಶಿಕ್ಷಣವನ್ನು ಹರಡಿ ಜನರನ್ನು ಜಾಗೃತಗೊಳಿಸುವುದಲ್ಲದೇ ರಾಷ್ಟ್ರೀಯ ನಾಯಕರನ್ನು ಹುಟ್ಟು ಹಾಕುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಜೊತೆಗೆ ವಿದೇಶಾಂಗ, ರಕ್ಷಣೆ, ಒಳಾಡಳಿತ ನೀತಿಗಳನ್ನು ಪ್ರಭಾವಿಸಿ ದೇಶದ ಪ್ರಗತಿಗೆ ಸಾಮಾನ್ಯರ ಸಭೆಯು ನೆರವಾಗುತ್ತದೆ.

**[C] ಶ್ರೀಮಂತರ ಸದನದ ರಚನೆ [Composition of the House of Lords]:**

**ಪೀಠಿಕೆ:** ಶ್ರೀಮಂತರ ಸಭೆ (House of Lords) ಬ್ರಿಟಿಷ್ ಸಂಸತ್ತಿನ ಮೇಲ್ಮನೆಯಾಗಿದೆ. ಕಳೆದ ಸಾವಿರ ವರ್ಷಗಳಿಂದ ವಿವಿಧ ರೂಪದಲ್ಲಿ ನಿರಂತರವಾಗಿ ಕಾರ್ಯಾಚರಿಸುತ್ತಿರುವ ಶ್ರೀಮಂತರ ಸಭೆಯು ವಿಶ್ವದ ಶಾಸಕಾಂಗವೊಂದರ ಪುರಾತನ ಎರಡನೇ ಸದನವೆನಿಸಿದೆ. ಆಂಗ್ಲೋ ಸ್ಯಾಕ್ಸನ್ನರ ಕಾಲದ ವಿಟನ್ [Witan] ಹೆಸರಿನ ಸಭೆಯಲ್ಲಿ ಇದರ ಮೂಲವನ್ನು ಗುರುತಿಸಬಹುದಾದರೂ 1295 ರ ಮಾದರಿ ಸಂಸತ್ತಿನ ಬಳಿಕ ಕ್ಲೆರ್ಜಿ ಮತ್ತು ನಾರ್ಮನ್ ಗುಂಪುಗಳ ಸಂಯೋಜನೆಯಿಂದ ಶ್ರೀಮಂತರ ಸದನವು ಸ್ಪಷ್ಟ ರೂಪವನ್ನು ತಾಳಿತ್ತು. ಪ್ರಬಲ ಸದನವಾಗಿದ್ದ ಶ್ರೀಮಂತರ ಸಭೆಯು ಸ್ವರೂಪದಲ್ಲಿ ಪರಿವರ್ತನೆಯುಂಟಾಗಿ ಪ್ರಸ್ತುತ ವಿಶ್ವದ ಅತ್ಯಂತ ದುರ್ಬಲ ಸದನವಾಗಿ ಮಾರ್ಪಟ್ಟಿದೆ. ಈ ಹಿಗೆ ಶ್ರೀಮಂತರ ಸಭೆಯ ರಚನೆಯನ್ನು ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

**[1. ಗಾತ್ರ [Size]:** ಶ್ರೀಮಂತರ ಸಭೆಯ ಸದಸ್ಯರ ಸಂಖ್ಯೆಯು ನಿಖರವಾಗಿಲ್ಲ. ಕಾಲದಿಂದ ಕಾಲಕ್ಕೆ ಇದರ ಸದಸ್ಯರ ಸಂಖ್ಯೆಯಲ್ಲಿ ಪುರಾತನ ಕಾಲದಿಂದಲೂ ಬದಲಾವಣೆಯಾಗುತ್ತಾ ಬಂದಿರುವುದನ್ನು ಗುರುತಿಸಬಹುದಾಗಿದೆ. ಪ್ರಸ್ತುತ ಶ್ರೀಮಂತರ ಸಭೆಯಲ್ಲಿ ಪಾಲ್ಗೊಳ್ಳಲು ಅವಕಾಶ ಪಡೆದಿರುವ ಸುಮಾರು 800 ಸದಸ್ಯರನ್ನು ಈ ಸದನವು ಹೊಂದಿದೆ.

**2. ಚುನಾವಣಾ ವಿಧಾನ [Election Method]:** ಶ್ರೀಮಂತರ ಸದನಕ್ಕೆ ಸದಸ್ಯರು ವಂಶಪಾರಂಪರ್ಯ ಮತ್ತು ಪ್ರಜಾಸತ್ತಾತ್ಮಕ ತತ್ವದಂತೆ ಆಯ್ಕೆಗೊಳ್ಳುತ್ತಾರೆ. ಆಸಕ್ತಿದಾಯಕ ಅಂಶವೇನೆಂದರೆ ಈ ಸದನವು ಕೆಳಗಿನ ಏಳು ಬಗೆಯ ಸದಸ್ಯರಿಂದ ಕಾಲಾನುಕ್ರಮದಲ್ಲಿ ರಚನೆಗೊಳ್ಳುತ್ತಿತ್ತು. ಶ್ರೀಮಂತರ ಸಭೆಯ ಆ ಏಳು ವರ್ಗದ ಸದಸ್ಯರೆಂದರೆ

ಅ. ಅರಸು ಮನೆತನದ ರಾಜಕುಮಾರರು [Princes of the royal blood]

ಆ. ವಂಶಪಾರಂಪರ್ಯ ಪೀರರು [Hereditary peers]

ಇ. ಸ್ಕಾಟ್‌ಲ್ಯಾಂಡ್‌ನ ಪ್ರಾತಿನಿಧಿಕ ಪೀರರು [Representative peers of Scotland]

ಈ. ಐರ್‌ಲ್ಯಾಂಡ್‌ನ ಪ್ರಾತಿನಿಧಿಕ ಪೀರರು [Representative peers of Ireland]

ಉ. ನ್ಯಾಯಿಕ ಪೀರರು [Lords of Appeal]

ಊ. ಧಾರ್ಮಿಕ ಪೀರರು [Lords Spiritual]

ಋ. ಆಜೀವ ಪೀರರು [Life peers]

ಗಮನಾರ್ಹ ಅಂಶವೇನೆಂದರೆ ಈ ಏಳು ವರ್ಗದ ಸದಸ್ಯರ ಪೈಕಿ ಕೆಲ ವರ್ಗಗಳು ಪ್ರಸ್ತುತ ಶ್ರೀಮಂತರ ಸದನದಲ್ಲಿ ಸದಸ್ಯತ್ವವನ್ನು ಹೊಂದಿಲ್ಲ. ಪ್ರಸ್ತುತ ವಂಶಪಾರಂಪರ್ಯ, ಧಾರ್ಮಿಕ, ಆಜೀವ ಪೀರರ ವರ್ಗವನ್ನು ಮಾತ್ರ ಗುರುತಿಸಬಹುದಾಗಿದೆ. 700 ಕ್ಕೂ ಅಧಿಕ ಸಂಖ್ಯೆಯ ಆಜೀವ ಪೀರರನ್ನು ಪ್ರಧಾನಿಯ ಸಲಹೆಯಂತೆ ಅರಸ ನೇಮಿಸುತ್ತಾನೆ. 1957 ರವರೆಗೆ ಕೇವಲ ಪುರುಷ ಸದಸ್ಯರನ್ನು ಹೊಂದಿದ್ದ ಈ ಶ್ರೀಮಂತರ ಸಭೆಯಲ್ಲಿ 1958 ರಿಂದ ಮಹಿಳೆಯರೂ ಸದಸ್ಯತ್ವ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

**3. ಅರ್ಹತೆಗಳು [Qualifications]:** ಶ್ರೀಮಂತರ ಸದನದ ಸದಸ್ಯತ್ವ ಅಥವಾ ಪೀರತ್ವ ಪಡೆಯಲು ವ್ಯಕ್ತಿಯೊಬ್ಬ ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ.

ಅ. ಯುನೈಟೆಡ್ ಕಿಂಗ್ಡಂನ ಪೌರನಾಗಿರಬೇಕು.

ಆ. 21 ವರ್ಷಗಳ ವಯೋಮಿತಿಯನ್ನು ಪೂರೈಸಿರಬೇಕು.

ಇ. ಶಿಕ್ಷಣ, ವ್ಯಾಪಾರ, ಕ್ರೀಡೆ, ಸಾಹಿತ್ಯದಂತಹ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ತೋರಿರಬೇಕು.

ಈ. ಅಸಾಮಾನ್ಯ ಪಂಡಿತನಾಗಿದ್ದು ದೇಶದ ಪ್ರಗತಿಗೆ ಆತನ ಸೇವೆಯ ಅಗತ್ಯವಿರಬೇಕು.

ಉ. ದೇಶದ ಬೊಕ್ಕಸಕ್ಕೆ ತೆರಿಗೆದಾರನಾಗಿರಬೇಕು.



**4. ಅಧಿಕಾರವಧಿ [Term]:** ಶ್ರೀಮಂತರ ಸದನದ ಎಲ್ಲ ಸದಸ್ಯರ ಅಧಿಕಾರವಧಿಯು ಏಕರೂಪವಾಗಿಲ್ಲ. ವಂಶಪಾರಂಪರ್ಯ ಮತ್ತು ಆಜೀವ ಸದಸ್ಯರ ಅಧಿಕಾರವಧಿಯು ಜೀವನಪರ್ಯಂತ ಸಾಗುತ್ತದೆ. ಆದರೆ, ಧಾರ್ಮಿಕ ಪೀರರ ಅಧಿಕಾರವಧಿಯು ನಿರ್ದಿಷ್ಟ ಕಾಲವನ್ನು ಹೊಂದಿದ್ದು ಉಳಿದ ಧಾರ್ಮಿಕ ಮುಖಂಡರಿಗೆ ಪೀರತ್ವ ದೊರಕುವಂತೆ ಮಾಡಲು ಸಹಕಾರಿಯಾಗಿದೆ.

**5. ಅಧಿವೇಶನ [Session]:** ಶ್ರೀಮಂತರ ಸಭೆಯು ಸಾಮಾನ್ಯರ ಸಭೆಯೊಡನೆ ಸಾಮಾನ್ಯವಾಗಿ ಅಧಿವೇಶನಗೊಳ್ಳುತ್ತದೆ. ಆದರೆ, ವಾರದಲ್ಲಿ ನಾಲ್ಕು ದಿನ ಅಂದರೆ ಸೋಮವಾರದಿಂದ ಗುರುವಾರದವರೆಗೆ ಮಾತ್ರ ಇದರ ಕಲಾಪಗಳು ಜರುಗುತ್ತವೆ. ವಿಶೇಷ ಸಂದರ್ಭವನ್ನು ಹೊರತುಪಡಿಸಿ ಪ್ರತಿ ದಿನ ಕೇವಲ ಎರಡು ಗಂಟೆಗಳ ಕಾಲದಷ್ಟು ಮಾತ್ರವೇ ಶ್ರೀಮಂತರ ಸದನವು ಸಭೆ ಸೇರುತ್ತದೆ.

**3.ಕೋರಂ [Quorum]:** ಶ್ರೀಮಂತರ ಸಭೆಯ ಕಲಾಪಗಳು ಜರುಗಲು ಹಾಜರಿರಬೇಕಾದ ಸದಸ್ಯರ ಸಂಖ್ಯೆಯನ್ನು ಕೋರಂ ಎನ್ನಲಾಗುತ್ತದೆ. ಈ ಸದನದ ಕೋರಂ ಭರ್ತಿಗೊಳ್ಳಲು ಮೂವರು ಹಾಜರಿದ್ದರೆ ಸಾಕು. ಆದರೆ, ಶ್ರೀಮಂತರ ಸದನದಲ್ಲಿ ಮಸೂದೆಯನ್ನು ಅಂಗೀಕರಿಸಬೇಕಾದರೆ ಕನಿಷ್ಟ 30 ಸದಸ್ಯರು ಹಾಜರಿರಬೇಕಾಗುತ್ತದೆ.

**7. ಅಧ್ಯಕ್ಷ [Lord Chancellor]:** ಶ್ರೀಮಂತರ ಸಭೆಯ ಅಧ್ಯಕ್ಷನನ್ನು ಲಾರ್ಡ್ ಛಾನ್ಸಲರ್ ಎನ್ನಲಾಗುತ್ತದೆ. ಈತ ಪ್ರಧಾನಿ ನೇತೃತ್ವದ ನೈಜ ಕಾರ್ಯಾಂಗ ಅಥವಾ ಸಚಿವ ಸಂಪುಟದ ಸದಸ್ಯನಾಗಿರುತ್ತಾನೆ. ಪ್ರಧಾನ ಮಂತ್ರಿಯ ಸಲಹೆಯಂತೆ ಅರಸನಿಂದ ಲಾರ್ಡ್ ಚಾನ್ಸಲರ್ ಆಯ್ಕೆಗೊಂಡಿದ್ದು ಪ್ರಧಾನಿ ಬಯಸುವವರೆಗೆ ತನ್ನ ಹುದ್ದೆಯಲ್ಲಿ ಮುಂದುವರಿಯುತ್ತಾನೆ. ಕಲಾಪಗಳ ಸಮಯದಲ್ಲಿ ಲಾರ್ಡ್ ಛಾನ್ಸಲರ್‌ನ ಪಾತ್ರವು ಕೇವಲ ಸಾಂಕೇತಿಕ ಹಾಗೂ ಔಪಚಾರಿಕವಾಗಿರುವುದು ಗಮನಾರ್ಹ ಸಂಗತಿ. ಆಸಕ್ತಿದಾಯಕ ಅಂಶವೇನೆಂದರೆ ಶ್ರೀಮಂತರ ಸದನದ ಅಧ್ಯಕ್ಷನಾದ ಈತನಿಗೆ ನಿರ್ಣಾಯಕ ಮತ ಚಲಾಯಿಸುವ ಅಥವಾ ಸದನದಲ್ಲಿ ಮಾತನಾಡುವವರನ್ನು ನಿರ್ಧರಿಸುವ ಅಧಿಕಾರವನ್ನು ನೀಡಿರುವುದಿಲ್ಲ. ಮುಂದುವರಿದು ಮಾತನಾಡುವ ಸದಸ್ಯರು ಅಧ್ಯಕ್ಷನನ್ನು ಸಂಬೋಧಿಸದೇ ಇಡೀ ಸದನವನ್ನು ಮೈ ಲಾರ್ಡ್ ಎಂದು ಸಂಬೋಧಿಸಿ ಮಾತನಾಡುತ್ತಾರೆ. ಈ ಹಿನ್ನೆಲೆಯಲ್ಲಿ ಸಾಮಾನ್ಯರ ಸದನದ ಸ್ಪೀಕರ್‌ನಂತೆ ವ್ಯಾಪಕ ಅಧಿಕಾರಗಳನ್ನು ಲಾರ್ಡ್ ಛಾನ್ಸಲರ್‌ನು ಪಡೆದಿಲ್ಲವೆನ್ನಬಹುದು. ಆದರೆ ನ್ಯಾಯಿಕ ಸಮಿತಿಯ ಸದಸ್ಯನಾಗಿ ಮತ್ತು ಅರಸನಿಗೆ ಕಾನೂನು ಸಲಹಾಕಾರನಾಗಿ ಹಲವು ಅಧಿಕಾರಗಳನ್ನು ಚಲಾಯಿಸುತ್ತಾನೆ.

**8. ವೇತನ ಮತ್ತು ವಿನಾಯಿತಿಗಳು [Salary and Immunities]:** ಶ್ರೀಮಂತರ ಸದನದ ಸದಸ್ಯರು ಸಾಮಾನ್ಯರ ಸದನದಂತೆ ವಾರ್ಷಿಕ ವೇತನವನ್ನು ಪಡೆಯುವುದಿಲ್ಲ.

ಆದರೆ, ಸಂಸದೀಯ ಭತ್ಯೆಗಳನ್ನು ಪಡೆಯಲು ಅವಕಾಶವಿದೆ. ಈ ಸಭೆಯ ಬಹುತೇಕರು ವೇತನವನ್ನು ಪಡೆಯದೇ ಸಂಸತ್ತಿನ ಕಲಾಪಗಳಿಗೆ ಹಾಜರಾಗುವುದರಿಂದ ತಗಲುವ ಪ್ರಯಾಣ ಮತ್ತು ಹಾಜರಾತಿ ಭತ್ಯೆಗಳನ್ನು ಪಡೆಯುತ್ತಾರೆ. ಮುಂದುವರಿದು ಸಾಮಾನ್ಯರ ಸಭೆಯ ಸದಸ್ಯರಂತೆ ಕೆಳಗಿನ ಹಲವು ವಿನಾಯಿತಿಗಳನ್ನು ಅನುಭವಿಸುತ್ತಾರೆ.

ಅ. ಶ್ರೀಮಂತರ ಸಭೆಯ ಸದಸ್ಯರು ಸದನದಲ್ಲಿ ಮುಕ್ತವಾಗಿ ಮಾತನಾಡುವ ಅವಕಾಶ ಹೊಂದಿದ್ದು ಸದನದಲ್ಲಿ ವ್ಯಕ್ತಪಡಿಸಿದ ವಿಚಾರಗಳಿಗೆ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ.

ಆ. ನಾಗರಿಕ ಮೊಕದ್ದಮೆಗೆ ಸಂಬಂಧಿಸಿದಂತೆ ಅಧಿವೇಶನ ಆರಂಭವಾಗುವ ಮೊದಲು ಮತ್ತು ನಂತರದ 40 ದಿನಗಳವರೆಗೆ ಶ್ರೀಮಂತರ ಸಭೆಯ ಸದಸ್ಯರನ್ನು ಬಂಧಿಸುವಂತಿಲ್ಲ.

**[D.] ಶ್ರೀಮಂತರ ಸಭೆಯ ಅಧಿಕಾರ ಕಾರ್ಯಗಳು [Powers and Fungctions of the House of Lords]:**

**ಪೀಠಿಕೆ:** ಆರಂಭದಲ್ಲಿ ಬ್ರಿಟನ್ನಿನ ಶ್ರೀಮಂತರ ಸಭೆ ಮತ್ತು ಸಾಮಾನ್ಯರ ಸಭೆಗಳು ಸಮಾನ ಅಧಿಕಾರವನ್ನು ಹೊಂದಿದ್ದವು. ಇದಕ್ಕೆ ಸಂಪ್ರದಾಯಶೀಲ ಸದಸ್ಯರು ಎರಡೂ ಸದನಗಳಲ್ಲಿ ಸದಸ್ಯತ್ವ ಹೊಂದಿದ್ದುದು ಕಾರಣವಾಗಿತ್ತು. ಆದರೆ, 1832, 1867 ಹಾಗೂ 1884 ರ ಸುಧಾರಣಾ ಕಾಯಿದೆಗಳು ಮತದಾನದ ಹಕ್ಕನ್ನು ಒದಗಿಸುವ ಮೂಲಕ ಸಾಮಾನ್ಯರ ಸದನವು ಪ್ರಜಾಸತ್ತಾತ್ಮಕ ಸ್ವರೂಪವನ್ನು ಪಡೆಯಿತು. ಫಲವಾಗಿ ಉದಾರವಾದಿಗಳು ಸಾಮಾನ್ಯರ ಸಭೆಯಲ್ಲಿ ಕಂಡು ಬಂದರೆ ಸಂಪ್ರದಾಯವಾದಿಗಳು ಶ್ರೀಮಂತರ ಸದನದಲ್ಲಿ ಕಾಣಿಸಿಕೊಂಡರು. ಸಾಮಾನ್ಯರ ಸಭೆಯು ಉದಾರವಾದಿ ಚಿಂತನೆಯ ತಳಹದಿಯುಳ್ಳ ಶಾಸನಗಳನ್ನು ಅಂಗೀಕರಿಸಿದರೆ ಸಂಪ್ರದಾಯವಾದಿ ಶ್ರೀಮಂತರ ಸದನವು ಅವುಗಳನ್ನು ನಿಯಂತ್ರಿಸಲು ಪ್ರಯತ್ನಿಸತೊಡಗಿತು. ಈ ಹಿನ್ನೆಲೆಯಲ್ಲಿ ಈ ಎರಡೂ ಸದನಗಳ ನಡುವೆ 1910 ರ ವೇಳೆಗೆ ತೀವ್ರ ತಿಕ್ಕಾಟ ಉಂಟಾಯಿತು. ಅಂತಿಮವಾಗಿ 1911 ರ ಸಂಸತ್ತಿನ ಕಾಯಿದೆಯಂತೆ ಶ್ರೀಮಂತರ ಸಭೆಯ ಸಮಾನ ಅಧಿಕಾರಗಳನ್ನು ಮೊಟಕುಗೊಳಿಸಿ ಸಾಮಾನ್ಯರ ಸಭೆ ಪ್ರಬಲವಾಯಿತು. ಮುಂದೆ 1949 ರಲ್ಲಿ ಸಂಸತ್ತಿನ ಕಾಯಿದೆಯ ತಿದ್ದುಪಡಿಯೊಡನೆ ಶ್ರೀಮಂತರ ಸದನವನ್ನು ಮತ್ತಷ್ಟು ದುರ್ಬಲಗೊಳಿಸಲಾಯಿತು. ಹೀಗೆ ಬ್ರಿಟನ್ನಿನಲ್ಲಿ ಮೇಲ್ಮನೆಯಾದ ಶ್ರೀಮಂತರ ಸದನವು ಪ್ರಸ್ತುತ ಕೆಳಮನೆಯಾದ ಸಾಮಾನ್ಯರ ಸಭೆಗೆ ಅಧೀನವಾದ ಸದನವಾಗಿ ಪರಿವರ್ತನೆಗೊಂಡಿದೆ. ಆದ್ಯಾಗ್ಯೂ ಶ್ರೀಮಂತರ ಸದನವು ಕೆಳಗಿನ ಹಲವು ಅಧಿಕಾರ ಕಾರ್ಯಗಳನ್ನು ಚಲಾಯಿಸುತ್ತಾ ತನ್ನ ಹಿಂದಿನ ವೈಭವವನ್ನು ಕಳೆದುಕೊಂಡು ಸಾಂಕೇತಿಕವಾಗಿ ಕಾರ್ಯಾಚರಿಸುತ್ತಿದೆ.

**1. ಶಾಸನೀಯ ಅಧಿಕಾರ ಕಾರ್ಯಗಳು [Legislative Powers and Fungctions]:** 1911 ರ ಮೊದಲು ಸಾಮಾನ್ಯ ಮಸೂದೆಯೊಂದನ್ನು ಬ್ರಿಟಿಷ್ ಸಂಸತ್ತಿನ



ಯಾವುದೇ ಸದನದಲ್ಲಾದರೂ ಮಂಡಿಸಬಹುದಾಗಿತ್ತು. ಆದರೆ, ಎರಡೂ ಸದನಗಳ ಸಮ್ಮತಿಯೊಡನೆ ಅರಸನ ಅಂಕಿತ ಪಡೆದು ಮಸೂದೆ ಶಾಸನವಾಗುತ್ತಿತ್ತು. ಪ್ರಸ್ತುತ ಶ್ರೀಮಂತರ ಸದನವು ಸಾಮಾನ್ಯರ ಸಭೆ ಅಂಗೀಕರಿಸಿ ತನ್ನ ಸಮ್ಮತಿಗೆ ಸಲ್ಲಿಸಲ್ಪಟ್ಟ ಮಸೂದೆಯನ್ನು ಅಂಗೀಕರಿಸದೇ ಮಸೂದೆ ಶಾಸನವಾಗದಂತೆ ತಡೆಯಲಾರದು. ಹೆಚ್ಚೆಂದರೆ ತನ್ನ ಅಂಗೀಕಾರಕ್ಕೆ ಸಲ್ಲಿಸಲಾದ ಸಾಮಾನ್ಯ ಮಸೂದೆಯನ್ನು ಒಂದು ವರ್ಷದವರೆಗೆ ತಡೆ ಹಿಡಿಯಬಹುದಾಗಿದೆ. ಈ ಅವಧಿಯ ನಂತರ ಸಾಮಾನ್ಯರ ಸಭೆಯು ಮಸೂದೆಯನ್ನು ಅರಸನ ಅಂಕಿತಕ್ಕೆ ಕಳುಹಿಸಿ ಆತನ ಅಂಕಿತದೊಡನೆ ಮಸೂದೆ ಶಾಸನವಾಗುತ್ತದೆ. ಹೀಗೆ ಸಾಮಾನ್ಯರ ಸಭೆಯ ಆಶಯವೇ ಶಾಸನೀಯ ವಿಚಾರದಲ್ಲಿ ಬ್ರಿಟನ್ನಿನ ಸಂಸತ್ತಿನಲ್ಲಿ ಮೇಲುಗೈ ಸಾಧಿಸುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀಮಂತರ ಸಭೆಯು ದುರ್ಬಲವಾಗಿರುವ ಅಂಶ ಸ್ಪಷ್ಟವಾಗುತ್ತದೆ.

**2. ಹಣಕಾಸಿನ ಅಧಿಕಾರ ಕಾರ್ಯಗಳು [Financial Powers and Functions]:** 1911 ರ ಸಂಸತ್ತಿನ ಕಾಯಿದೆ ಜಾರಿಗೊಳ್ಳುವ ಮೊದಲು ಅಸ್ತಿತ್ವದಲ್ಲಿದ್ದ ಸಂಪ್ರದಾಯದಂತೆ ಹಣಕಾಸಿನ ಮಸೂದೆಯೊಂದು ಸಾಮಾನ್ಯರ ಸಭೆಯಲ್ಲಿಯೇ ಮೊದಲು ಮಂಡನೆಯಾಗುತ್ತಿತ್ತು. ಇಂತಹ ಮಸೂದೆಯನ್ನು ಸಾಮಾನ್ಯರ ಸಭೆಯು ಅಂಗೀಕರಿಸಿ ಶ್ರೀಮಂತರ ಸದನದ ಒಪ್ಪಿಗೆಗೆ ಕಳುಹಿಸುತ್ತಿತ್ತು. ಆಗ ಶ್ರೀಮಂತರ ಸದನವು ಹಣಕಾಸು ಮಸೂದೆಯನ್ನೂ ಸಹ ತಿರಸ್ಕರಿಸುವ ಅಥವಾ ಶಿಫಾರಸ್ಸುಗಳನ್ನು ಸೂಚಿಸಿ ಹಿಂತಿರುಗಿಸುವ ಅಧಿಕಾರವನ್ನು ಪಡೆದಿತ್ತು. ಆದರೆ, ಪ್ರಸ್ತುತ ಹಣಕಾಸಿನ ಮಸೂದೆ ಕಾನೂನಾತ್ಮಕವಾಗಿ ಮೊದಲು ಸಾಮಾನ್ಯರ ಸಭೆಯಲ್ಲಿಯೇ ಮೊದಲು ಮಂಡಿಸಲ್ಪಡುತ್ತದೆ. ಮುಂದುವರಿದು ಸಾಮಾನ್ಯರ ಸಭೆಯು ಅಂಗೀಕರಿಸಿದ ಮಸೂದೆಯನ್ನು ಶ್ರೀಮಂತರ ಸದನವು ತಿರಸ್ಕರಿಸಲು ಅಧಿಕಾರವನ್ನು ಕಳೆದುಕೊಂಡಿದೆ. ಹೆಚ್ಚೆಂದರೆ ಸಾಮಾನ್ಯರ ಸಭೆಯು ಅಂಗೀಕರಿಸಿದ ಹಣಕಾಸಿನ ಮಸೂದೆಯನ್ನು ಒಂದು ತಿಂಗಳವರೆಗೆ ಜಾರಿಗೊಳ್ಳದಂತೆ ತಡೆ ಹಿಡಿಯಬಹುದಾಗಿದೆ. ಮುಂದುವರಿದು ತೆರಿಗೆ ವಿಧಿಸುವಿಕೆ ಅಥವಾ ಹಣ ವೆಚ್ಚ ಮಾಡುವಿಕೆಯನ್ನು ಶ್ರೀಮಂತರ ಸದನವು ಸಾಮಾನ್ಯರ ಸಭೆಯಂತೆ ನಿಯಂತ್ರಿಸುವ ಅವಕಾಶವನ್ನು ಪಡೆದಿರುವುದಿಲ್ಲ. ಹೀಗೆ ಹಣಕಾಸಿನ ವಿಚಾರದಲ್ಲಿ ಅತ್ಯಂತ ಕಡಿಮೆ ಅಧಿಕಾರವನ್ನು ಬ್ರಿಟನ್ನಿನ ಶ್ರೀಮಂತರ ಸದನ ಹೊಂದಿದೆ.

**3. ಕಾರ್ಯಾಂಗೀಯ ಅಧಿಕಾರ ಕಾರ್ಯಗಳು [Exicative Powers and Fungctions]:** ಶ್ರೀಮಂತರ ಸಭೆಯು ಸೀಮಿತ ಕಾರ್ಯಾಂಗೀಯ ಅಧಿಕಾರವನ್ನು ಪಡೆದಿದೆ. ಇದರ ಸದಸ್ಯರು ಸಚಿವ ಸಂಪುಟದ ಮಂತ್ರಿಗಳನ್ನು ಪ್ರಶ್ನೆ ಮತ್ತು ಉಪ ಪ್ರಶ್ನೆಗಳ ಮೂಲಕ ನಿಯಂತ್ರಿಸಬಹುದಾಗಿದೆ. ಮುಂದುವರಿದು ವಿವಿಧ ಸಂಸದೀಯ ಅವಕಾಶಗಳ ನೆರವಿನಿಂದ ಕಾರ್ಯಾಂಗವನ್ನು ಪ್ರಭಾವಿಸಬಹುದಾಗಿದೆ. ಇದರೊಡನೆ ಶ್ರೀಮಂತರ ಸಭೆಯ ಸದಸ್ಯರು ಸರ್ಕಾರದ ನೀತಿ, ನಿರ್ಧಾರ ಅಥವಾ ಕಾರ್ಯಕ್ರಮಗಳನ್ನು ವರ್ಣಿಸುವ

ಅಥವಾ ವಿಮರ್ಶಿಸುವ ಅವಕಾಶವನ್ನು ಪಡೆದಿದ್ದಾರೆ. ಹೀಗೆ ಕಾರ್ಯಾಂಗೀಯ ಕ್ಷೇತ್ರದಲ್ಲಿ ಸೀಮಿತ ಅಧಿಕಾರವನ್ನು ಶ್ರೀಮಂತರ ಸದನ ಚಲಾಯಿಸುತ್ತದೆ.

**4. ನ್ಯಾಯಾಂಗೀಯ ಅಧಿಕಾರ ಕಾರ್ಯಗಳು [Judicial Powers and Fungctions]:** ಬ್ರಿಟಿಷ್ ಸಂಸತ್ತಿನ ಶ್ರೀಮಂತರ ಸಭೆಯು ಇಂದಿಗೂ ಇಂಗ್ಲೆಂಡ್ ಮತ್ತು ಉತ್ತರ ಐರ್‌ಲ್ಯಾಂಡಿನ ನಾಗರಿಕ ಮತ್ತು ಅಪರಾಧ ಮೊಕದ್ದಮೆಗಳ ಅಂತಿಮ ಮೇಲ್ಮನವಿಯ ನ್ಯಾಯಾಲಯವಾಗಿದೆ. ಆದರೆ, ಸ್ಕಾಟ್‌ಲ್ಯಾಂಡಿನ ನಾಗರಿಕ ಮೊಕದ್ದಮೆಗಳಿಗೆ ಮಾತ್ರ ಅಂತಿಮ ಮೇಲ್ಮನವಿಯ ನ್ಯಾಯಾಲಯವಾಗಿ ಶ್ರೀಮಂತರ ಸದನ ಕಾರ್ಯ ನಿರ್ವಹಿಸುವ ಅಧಿಕಾರ ಪಡೆದಿದೆ. ಆಸಕ್ತಿದಾಯಕ ಸಂಗತಿ ಏನೆಂದರೆ ಶ್ರೀಮಂತರ ಸದನವು ಮೊಕದ್ದಮೆಗಳ ವಿಚಾರಣೆಯನ್ನು ಸ್ವಪ್ರೇರಣೆಯಿಂದ ಕೈಗೆತ್ತಿಕೊಳ್ಳದೇ ಮನವಿಯನ್ನಾಧರಿಸಿ ಮಾತ್ರ ವಿಚಾರಣೆ ನಡೆಸಿ ತೀರ್ಪುಗಳನ್ನು ನೀಡುತ್ತದೆ. ಮುಂದುವರಿದು ತನ್ನ ಸದಸ್ಯನೊಬ್ಬನ ವಿರುದ್ಧ ಮೊಕದ್ದಮೆ ದಾಖಲಾದಾಗ ಆತ ಸಾಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಗೆ ನಿರಾಕರಿಸಿದರೆ ಅಂತಹ ಮೊಕದ್ದಮೆಗಳನ್ನು ಸ್ವೀಕರಿಸುವ ಮೂಲಕ ವಿಚಾರಣೆ ನಡೆಸಿ ತೀರ್ಪು ನೀಡುವ ಅಧಿಕಾರವನ್ನು ಶ್ರೀಮಂತರ ಸಭೆ ಹೊಂದಿದೆ. ಇದಲ್ಲದೇ ದೇಶದ ಪ್ರಮುಖ ಹುದ್ದೆಯಲ್ಲಿರುವವರ ವಿರುದ್ಧ ಸಾಮಾನ್ಯರ ಸಭೆಯು ಪದಚ್ಯುತಿ ನಿರ್ಣಯವನ್ನು ಕೈಗೊಂಡರೆ ಆ ಕುರಿತು ವಿಚಾರಣೆ ನಡೆಸುವ ಅಧಿಕಾರವನ್ನೂ ಶ್ರೀಮಂತರ ಸಭೆ ಪಡೆದಿದೆ. ಹೀಗೆ ಹಲವು ನ್ಯಾಯಾಂಗೀಯ ಅಧಿಕಾರಗಳನ್ನು ಶ್ರೀಮಂತರ ಸದನ ಚಲಾಯಿಸುತ್ತದೆ.

ಈ ಮೇಲೆ ಚರ್ಚಿಸಲಾದ ಅಧಿಕಾರ ಕಾರ್ಯಗಳನ್ನು ಶ್ರೀಮಂತರ ಸದನವು ಪ್ರಸ್ತುತ ಚಲಾಯಿಸುತ್ತಿದ್ದು ಸಾಮಾನ್ಯರ ಸಭೆಗಿಂತ ದುರ್ಬಲ ಸದನವೆನಿಸಿದೆ. ವಂಶಪಾರಂಪರ್ಯ ತತ್ವದ ಪಾಲನೆ, ನಿರ್ದಿಷ್ಟ ಹಿತಾಸಕ್ತಿಗೆ ಆದ್ಯತೆ ಹಾಗೂ ಸಂಪ್ರದಾಯವಾದಿ ಕಂಜರ್ವೇಟಿವ್ ಪಕ್ಷದ ಸಿದ್ಧಾಂತಗಳಿಗೆ ಬದ್ಧತೆಯಂತಹ ಟೀಕೆಗಳನ್ನು ಎದುರಿಸುತ್ತಿರುವ ಶ್ರೀಮಂತರ ಸದನವು ಪ್ರಜಾಪ್ರಭುತ್ವ ವ್ಯವಸ್ಥೆಗೆ ಪೂರಕವಲ್ಲದ ಸಂಸ್ಥೆ ಎಂಬುದಾಗಿ ಪರಿಗಣಿಸಲ್ಪಟ್ಟಿದೆ. ಈ ನಡುವೆ ಶ್ರೀಮಂತರ ಸಭೆಯನ್ನು ಉಪಯುಕ್ತ ಸಂಸ್ಥೆಯನ್ನಾಗಿ ಪರಿವರ್ತಿಸಲು ಹಲವು ದಶಕಗಳಿಂದ ಸುಧಾರಣೆಗಳನ್ನು ತರಲಾಗುತ್ತಿದೆ. ಉದಾ: 1999 ರಲ್ಲಿ ವಂಶಪಾರಂಪರ್ಯ ಪೀರರ ಸಂಖ್ಯೆಯನ್ನು 750 ರಿಂದ 92 ಕ್ಕೆ ಸೀಮಿತಗೊಳಿಸಿದುದು, ರಾಜಕೀಯೇತರ ಜನ ಸಾಮಾನ್ಯರಿಗೆ ಪೀರತ್ವ ಒದಗಿಸಲು ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಿದುದು, 1957 ರ ಸುಧಾರಣಾ ಕಾಯಿದೆಯಂತೆ ಮಹಿಳೆಯರೂ ಸಹ ಪೀರತ್ವ ಪಡೆಯಲು ಅವಕಾಶ ಕಲ್ಪಿಸಿದುದು ಇತ್ಯಾದಿ.



**[III.] ಚೀನಾದ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ರಚನೆ ಮತ್ತು ಅಧಿಕಾರ ಕಾರ್ಯಗಳು [Composition and Powers of National People's Congress of China]:**

**ಪೀಠಿಕೆ:** ನಾವು ಚೀನಾ ಎಂದು ಕರೆಯುವ ಸಮತಾವಾದಿ ರಾಷ್ಟ್ರದ ಪೂರ್ಣ ಹೆಸರು ಚೀನಾದ ಜನತಾ ಗಣರಾಜ್ಯ (People's Republic of China) ಎಂದಾಗಿದೆ. ಚೀನಾವು ಜನಸಂಖ್ಯೆಯಲ್ಲಿ ಜಗತ್ತಿನ ಮೊದಲ ಸ್ಥಾನವನ್ನು ಮತ್ತು ಭೂ ಪ್ರದೇಶದಲ್ಲಿ ಜಗತ್ತಿನ ಮೂರನೇ ಸ್ಥಾನವನ್ನು ಪಡೆದಿದ್ದರೂ ಸಮತಾವಾದದ ಪ್ರಭಾವದಿಂದ ಏಕಾತ್ಮಕ ರಾಜಕೀಯ ವ್ಯವಸ್ಥೆಯನ್ನು ಮೈಗೂಡಿಸಿಕೊಂಡಿದೆ. ಫಲವಾಗಿ ದ್ವಿ ಸದನಗಳ ಬದಲು ಕಮ್ಯುನಿಸ್ಟ್ ಪಕ್ಷದ ಏಕಸ್ವಾಮ್ಯವುಳ್ಳ ಏಕ ಸದನ ಶಾಸಕಾಂಗವನ್ನು ಚೀನಾ ಅಳವಡಿಸಿಕೊಂಡಿದ್ದು ಅದನ್ನು ರಾಷ್ಟ್ರೀಯ ಜನತಾ ಕಾಂಗ್ರೆಸ್ ಎನ್ನಲಾಗುತ್ತದೆ. 1982 ರಲ್ಲಿ ಜಾರಿಗೊಂಡ ಚೀನಾದ ನೂತನ ಸಂವಿಧಾನದ 3 ನೇ ಅಧ್ಯಾಯದಲ್ಲಿನ 57 ನೇ ವಿಧಿಯಿಂದ ಚೀನಾದ ಶಾಸಕಾಂಗದ ರಚನೆ ಮತ್ತು ಅಧಿಕಾರಗಳನ್ನು ವಿವರಿಸಲಾಗಿದೆ. ಚೀನಾದ ಸಂವಿಧಾನವು ರಾಷ್ಟ್ರೀಯ ಜನತಾ ಕಾಂಗ್ರೆಸ್ ದೇಶದ ಅತ್ಯುನ್ನತ ಅಧಿಕಾರ ಅಂಗವೆಂದು ವಿವರಿಸುವ ಮೂಲಕ ಸಮಸ್ತ ಶಾಸನೀಯ ಅಧಿಕಾರಗಳನ್ನು ಅದಕ್ಕೆ ಒದಗಿಸಿದೆ. ಆಸಕ್ತಿದಾಯಕ ಅಂಶವೇನೆಂದರೆ, ಏಕ ಸದನ ಶಾಸಕಾಂಗವಾಗಿರುವ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಅವಿಭಾಜ್ಯ ಅಂಗವಾಗಿರುವ ಸ್ಥಾಯಿ ಸಮಿತಿಯು ವಾಸ್ತವದಲ್ಲಿ ಶಾಸಕಾಂಗದ ಸಮಗ್ರ ಅಧಿಕಾರವನ್ನು ಚಲಾಯಿಸುತ್ತದೆ. ಈ ಕೆಳಗೆ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ.

**[A.] ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ರಚನೆ**

**[Composition of National People's Congress]:**

**1. ಗಾತ್ರ [Size]:** ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಸದಸ್ಯರ ಗಾತ್ರವನ್ನು ಕುರಿತಂತೆ ಚೀನಾದ ಸಂವಿಧಾನದಲ್ಲಿ ಸ್ಪಷ್ಟವಾದ ವಿವರಣೆಯಿಲ್ಲ. ಕಾಲಕಾಲಕ್ಕೆ ಜಾರಿಗೊಳ್ಳುವ ಕಾನೂನಿನಂತೆ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಗಾತ್ರ ಅಂದರೆ ಸದಸ್ಯರ ಸಂಖ್ಯೆ ನಿರ್ಧರಿಸಲ್ಪಡುತ್ತದೆ. ಇದರ ಸದಸ್ಯರನ್ನು ಡೆಪ್ಯುಟಿ ಎನ್ನಲಾಗುತ್ತದೆ. 1983 ರಲ್ಲಿ 3300, 1988 ರಲ್ಲಿ 2700, 1998 ರಲ್ಲಿ 2900 ಸದಸ್ಯರನ್ನು ಚೀನಾದ ರಾಷ್ಟ್ರೀಯ ಜನತಾ ಕಾಂಗ್ರೆಸ್ ಹೊಂದಿತ್ತು. ಹೀಗಾಗಿ ಚೀನಾದ ರಾಷ್ಟ್ರೀಯ ಜನತಾ ಕಾಂಗ್ರೆಸ್ ವಿಶ್ವದ ಬೃಹತ್ ಶಾಸಕಾಂಗವೆಂದು ಪರಿಗಣಿಸಲ್ಪಟ್ಟಿದೆ.

**2. ಚುನಾವಣಾ ವಿಧಾನ [Election Method]:** ಚೀನಾದ ಶಾಸಕಾಂಗವಾಗಿರುವ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಚುನಾವಣೆ ಕುರಿತಂತೆ ಅದರ ಸಂವಿಧಾನ ಮೌನವಾಗಿದೆ. ಕಾಲಕಾಲಕ್ಕೆ ಅಸ್ತಿತ್ವದಲ್ಲಿರುವ ಕಾನೂನಿನಂತೆ ಚೀನಾದಲ್ಲಿ

ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಸದಸ್ಯರ ಅಂದರೆ ಡೆಪ್ಯುಟಿಗಳ ಚುನಾವಣೆ ಜರುಗುತ್ತದೆ. 18 ವರ್ಷಗಳ ವಯೋಮಿತಿ ಪೂರೈಸಿದ ಚೀನಾದ ಪ್ರಜೆಗಳಿಂದ ನೇರವಾಗಿ ಆಯ್ಕೆಯಾಗದೇ ಜನರಿಂದ ಆಯ್ಕೆಗೊಂಡಿರುವ ಪ್ರತಿನಿಧಿಗಳಿಂದ ಚುನಾಯಿತಗೊಳ್ಳುತ್ತಾರೆ.

**3. ಅರ್ಹತೆಗಳು [Qualifications]:** ಚೀನಾದ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಡೆಪ್ಯುಟಿಯಾಗಲು ವ್ಯಕ್ತಿಯೊಬ್ಬ ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕು. ಅವುಗಳೆಂದರೆ

ಅ. ಚೀನಾದ ಪೌರತ್ವವನ್ನು ಹೊಂದಿರಬೇಕು.

ಆ. 18 ವರ್ಷಗಳ ವಯೋಮಿತಿಯನ್ನು ಪೂರೈಸಿರಬೇಕು.

ಇ. ಸ್ಥಾಪಿತ ಕಾನೂನಿನಂತೆ ರಾಜಕೀಯ ಹಕ್ಕುಗಳನ್ನು ಕಳೆದುಕೊಂಡಿರಬಾರದು.

**4. ಅಧಿಕಾರವಧಿ [Term]:** ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಡೆಪ್ಯುಟಿಗಳು ಅಂದರೆ ಸದಸ್ಯರು 5 ವರ್ಷಗಳ ಅಧಿಕಾರವಧಿಯನ್ನು ಪಡೆದಿರುತ್ತಾರೆ. ಐದು ವರ್ಷಗಳ ಅಧಿಕಾರಾವಧಿ ಪೂರ್ಣಗೊಳ್ಳುವ ಎರಡು ತಿಂಗಳ ಮೊದಲೇ ನೂತನ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಡೆಪ್ಯುಟಿಗಳ ಚುನಾವಣೆಯನ್ನು ಕಾಂಗ್ರೆಸ್‌ನ ಸ್ಥಾಯಿ ಸಮಿತಿ ಪೂರ್ಣಗೊಳಿಸಿರಬೇಕಾಗುತ್ತದೆ. ಒಂದೊಮ್ಮೆ ವಿಶೇಷ ಸನ್ನಿವೇಶಗಳಲ್ಲಿ ಚುನಾವಣೆ ನಡೆಸಲು ಸಾಧ್ಯವಾಗದಿದ್ದರೆ ಸ್ಥಾಯಿ ಸಮಿತಿಯು ಮೂರನೇ ಎರಡರಷ್ಟು ಬಹುಮತದೊಡನೆ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಅಧಿಕಾರಾವಧಿಯನ್ನು ಒಂದು ವರ್ಷದವರೆಗೆ ಮುಂದೂಡುವ ನಿರ್ಣಯ ಕೈಗೊಳ್ಳಲು ಅವಕಾಶವಿರುತ್ತದೆ. ಈ ವೇಳೆಯಲ್ಲಿ ಡೆಪ್ಯುಟಿಗಳ ಅಧಿಕಾರಾವಧಿ ಒಂದು ವರ್ಷ ವಿಸ್ತರಣೆಗೊಳ್ಳುತ್ತದೆ.

**5. ಅಧಿವೇಶನ [Session]:** ರಾಷ್ಟ್ರೀಯ ಜನತಾ ಕಾಂಗ್ರೆಸ್ ವರ್ಷದಲ್ಲಿ ಒಮ್ಮೆಯಾದರೂ ಅಧಿವೇಶನಗೊಳ್ಳಬೇಕಿರುತ್ತದೆ. ಕಾಂಗ್ರೆಸ್‌ನ ಸ್ಥಾಯಿ ಸಮಿತಿ ಬಯಸಿದರೆ ಮತ್ತು ರಾಷ್ಟ್ರೀಯ ಜನತಾ ಸದನದ ಐದನೇ ಒಂದಕ್ಕಿಂತ ಹೆಚ್ಚಿನ ಸದಸ್ಯರು ಆಶಿಸಿದರೆ ವಿಶೇಷ ಅಧಿವೇಶನವನ್ನು ಸ್ಥಾಯಿ ಸಮಿತಿ ಕರೆಯಬಹುದಾಗಿದೆ.

**6. ಪದಚ್ಯುತಿ:** ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಡೆಪ್ಯುಟಿಗಳು ತಾವು ಆಯ್ಕೆಗೊಂಡ ಕ್ಷೇತ್ರ ಅಥವಾ ಘಟಕದ ಮತದಾರರಿಂದ ಮೇಲ್ವಿಚಾರಣೆಗೊಳಪಟ್ಟಿರುತ್ತಾರೆ. ಸೂಕ್ತ ರೀತಿಯಲ್ಲಿ ಕಾರ್ಯ ನಿರ್ವಹಿಸದ ಡೆಪ್ಯುಟಿಗಳನ್ನು ಆಯಾ ಕ್ಷೇತ್ರದ ಮತದಾರರು ಹಿಂದಕ್ಕೆ ಕರೆಯಿಸಿಕೊಳ್ಳಲು ಅಂದರೆ ಅಧಿಕಾರದಿಂದ ಪದಚ್ಯುತಗೊಳಿಸಲು ಅವಕಾಶ ಪಡೆದಿರುತ್ತಾರೆ.

**7. ಅಧ್ಯಕ್ಷ:** ರಾಷ್ಟ್ರೀಯ ಜನತಾ ಕಾಂಗ್ರೆಸ್ ಅಧಿವೇಶನಗೊಂಡೊಡನೆ ಆ ಅಧಿವೇಶನಕ್ಕೆ ಸೀಮಿತಗೊಂಡಂತೆ ಅಧ್ಯಕ್ಷನನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಅಧ್ಯಕ್ಷನು ಕಾಂಗ್ರೆಸ್‌ನ ಕಾರ್ಯ ಕಲಾಪಗಳನ್ನು ಸ್ಥಾಪಿತ ಕಾನೂನಿನಂತೆ ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತಾನೆ.



**8. ವಿಶೇಷ ಹಕ್ಕುಗಳು:** ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಡೆಪ್ಯುಟಿಗಳು ಈ ಕೆಳಗಿನ ವಿಶೇಷ ಹಕ್ಕುಗಳನ್ನು ಪಡೆದಿರುತ್ತಾರೆ.

ಅ. ಡೆಪ್ಯುಟಿಗಳು ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಅಧಿವೇಶನದಲ್ಲಿ ಮುಕ್ತವಾಗಿ ಮಾತನಾಡುವ ಅವಕಾಶ ಹೊಂದಿದ್ದು ಸದನದಲ್ಲಿ ವ್ಯಕ್ತಪಡಿಸಿದ ವಿಚಾರಗಳಿಗೆ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ.

ಆ. ಕಾನೂನಾತ್ಮಕ ಮೊಕದ್ದಮೆಗೆ ಸಂಬಂಧಿಸಿದಂತೆ ಕಾಂಗ್ರೆಸ್‌ನ ಅಧಿವೇಶನ ಜಾರಿಯಲ್ಲಿರುವಾಗ ಅದರ ಅಧ್ಯಕ್ಷನ ಮತ್ತು ಅಧಿವೇಶನ ಜಾರಿಯಲ್ಲಿರದಿದ್ದಾಗ ಸ್ಥಾಯಿ ಸಮಿತಿಯ ಸಮ್ಮತಿಯಿಲ್ಲದೇ ಡೆಪ್ಯುಟಿಗಳನ್ನು ಬಂಧಿಸುವಂತಿಲ್ಲ.

ಇ. ರಾಷ್ಟ್ರೀಯ ಜನತಾ ಕಾಂಗ್ರೆಸ್ ಕಾನೂನಿನನ್ವಯ ತನ್ನ ಕಾರ್ಯ ಕಲಾಪಗಳಿಗೆ ಪೂರಕವಾದ ನಿಯಮಾವಳಿಗಳು ಅಥವಾ ಪ್ರಕ್ರಿಯೆಗಳನ್ನು ರೂಪಿಸಲು ಸ್ವತಂತ್ರವಾಗಿರುತ್ತದೆ.

ಈ. ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ನಿಂದನೆಗೆ ಸೂಕ್ತವೆನಿಸಿದ ಶಿಕ್ಷೆಯನ್ನು ನೀಡುವ ಅಧಿಕಾರವನ್ನು ಡೆಪ್ಯುಟಿಗಳು ಸಾಮೂಹಿಕವಾಗಿ ಪಡೆದಿರುತ್ತಾರೆ.

**[B.] ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಅಧಿಕಾರ ಕಾರ್ಯಗಳು**

**[Power or Functions of National People's Congress]:**

ಚೀನಾದ ಜನತಾ ಗಣರಾಜ್ಯವು ಏಕ ಸದನ ಶಾಸಕಾಂಗವನ್ನು ಅಳವಡಿಸಿಕೊಂಡಿದೆ. ಹೀಗಾಗಿ ದೇಶದ ಸಮಸ್ತ ಅಧಿಕಾರಗಳನ್ನು ಸಂವಿಧಾನವು ರಾಷ್ಟ್ರೀಯ ಜನತಾ ಕಾಂಗ್ರೆಸ್‌ಗೆ ನೀಡಿದೆ. ಶಾಸಕಾಂಗವಾದ ಕಾಂಗ್ರೆಸ್ ತನ್ನ ವಿಶಾಲ ಅಧಿಕಾರಗಳನ್ನು ಸಮರ್ಥವಾಗಿ ನಿಭಾಯಿಸಲು ಸ್ಥಾಯಿ ಸಮಿತಿ ಎಂಬ ಉಪಾಂಗವನ್ನು ಹೊಂದಿದ್ದು ಶಾಸಕಾಂಗದ ಸಮಸ್ತ ಕಾರ್ಯಗಳನ್ನು ವಾಸ್ತವದಲ್ಲಿ ಸ್ಥಾಯಿ ಸಮಿತಿಯೇ ನೋಡಿಕೊಳ್ಳುತ್ತದೆ. ತಾತ್ವಿಕವಾಗಿ ಕಾಂಗ್ರೆಸ್ ಹೊಂದಿರುವ ವಿವಿಧ ಅಧಿಕಾರ ಕಾರ್ಯಗಳನ್ನು ಈ ಕೆಳಗೆ ವಿವರಿಸಲಾಗಿದೆ.

**[1. ಶಾಸನೀಯ ಅಧಿಕಾರ ಕಾರ್ಯಗಳು [Legislative Power and Fungctions]:** ಚೀನಾದ ಆಡಳಿತಕ್ಕೆ ಅಗತ್ಯವಾದ ಮೂಲಭೂತ ಕಾನೂನುಗಳನ್ನು ಶಾಸಕಾಂಗವಾದ ರಾಷ್ಟ್ರೀಯ ಜನತಾ ಕಾಂಗ್ರೆಸ್ ರಚಿಸುತ್ತದೆ. ಸಾಮಾನ್ಯವಾಗಿ ಅಪರಾಧ ಕೃತ್ಯಗಳು, ನಾಗರಿಕ ವ್ಯವಹಾರಗಳು ಹಾಗೂ ರಾಜ್ಯ ಅಂಗಗಳಿಗೆ ಸಂಬಂಧಿಸಿದ ಮಹತ್ವದ ಶಾಸನಗಳನ್ನು ರಾಷ್ಟ್ರೀಯ ಜನತಾ ಕಾಂಗ್ರೆಸ್ ಅನುಮೋದಿಸುತ್ತದೆ. ಉಳಿದಂತೆ ದೇಶದ ದೈನಂದಿನ ಆಡಳಿತಕ್ಕೆ ಪೂರಕವಾದ ಶಾಸನಗಳನ್ನು ಸ್ಥಾಯಿ ಸಮಿತಿಯು ರಚಿಸಿ ರಾಷ್ಟ್ರೀಯ ಕಾಂಗ್ರೆಸ್‌ನ ಅನುಮೋದನೆ ಪಡೆಯುತ್ತದೆ. ಆರಂಭದಲ್ಲಿ ರಾಷ್ಟ್ರೀಯ ಜನತಾ ಕಾಂಗ್ರೆಸ್ ಸಮಸ್ತ ಶಾಸನಗಳನ್ನು ತಾನೇ ರಚಿಸುತ್ತಿತ್ತು. ಆದರೆ, ಸಮಯದ ಕೊರತೆ ಹಾಗೂ ಕಾರ್ಯಭಾರದ ಪರಿಣಾಮ 1982 ರ ಸಂವಿಧಾನದಂತೆ ತನ್ನ ಸ್ಥಾಯಿ ಸಮಿತಿಗೆ ಕೆಲ ಅಧಿಕಾರಗಳನ್ನು ವರ್ಗಾಯಿಸಬೇಕಾಯಿತು.

**2. ಹಣಕಾಸಿನ ಅಧಿಕಾರ ಕಾರ್ಯಗಳು [Financial Power and Fungctions]:** ರಾಷ್ಟ್ರೀಯ ಜನತಾ ಕಾಂಗ್ರೆಸ್ಸು ದೇಶದ ಆರ್ಥಿಕ ಮತ್ತು ಸಾಮಾಜಿಕ ಯೋಜನೆಗಳನ್ನು ಪರಿಶೀಲಿಸಿ ಅನುಮೋದಿಸುವ ಅಧಿಕಾರವನ್ನು ಪಡೆದಿದೆ. ಜೊತೆಗೆ ಸರ್ಕಾರದ ಮುಂಗಡ ಪತ್ರಕ್ಕೆ ಸಮ್ಮತಿ ಒದಗಿಸುತ್ತದೆ. ಇದರೊಡನೆ ಮುಂಗಡ ಪತ್ರದಲ್ಲಿ ಪ್ರಸ್ತಾಪಿಸಲಾದ ಅಂಶಗಳ ಅನುಷ್ಠಾನವನ್ನು ಪರಿಶೀಲಿಸುವ ಅಧಿಕಾರವನ್ನು ಕಾಂಗ್ರೆಸ್ ಪಡೆದಿದೆ.

**3. ನೇಮಕಾತಿ ಅಧಿಕಾರ ಕಾರ್ಯಗಳು [Appointment Power and Fungctions]:** ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಡೆಪ್ಯುಟಿಗಳು ಚೀನಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು ಆಯ್ಕೆ ಮಾಡುವ ಅಧಿಕಾರ ಪಡೆದಿದ್ದಾರೆ. ಜೊತೆಗೆ ಪ್ರಧಾನಿ ಮತ್ತು ರಾಜ್ಯ ಪರಿಷತ್ತಿನ ಸದಸ್ಯರನ್ನು ಕಾಂಗ್ರೆಸ್ ನೇಮಿಸುತ್ತದೆ. ಇದರೊಡನೆ ಸ್ಥಾಯಿ ಸಮಿತಿಯ ಸದಸ್ಯರನ್ನು ಚುನಾಯಿಸುವ. ಮಹಾ ಲೆಕ್ಕ ಪರಿಶೋಧಕ, ಕೇಂದ್ರ ಮಿಲಿಟರಿ ಆಯೋಗದ ಅಧ್ಯಕ್ಷ, ಕಾರ್ಯದರ್ಶಿಗಳನ್ನು ಕಾಂಗ್ರೆಸ್ ನೇಮಿಸುತ್ತದೆ. ಮುಂದುವರಿದು, ಸರ್ವೋಚ್ಚ ಜನತಾ ನ್ಯಾಯಾಲಯದ ನ್ಯಾಯಾಧೀಶರನ್ನು ರಾಷ್ಟ್ರೀಯ ಜನತಾ ಕಾಂಗ್ರೆಸ್ಸು ನೇಮಕಗೊಳಿಸುತ್ತದೆ.

**4. ಯುದ್ಧ ಅಥವಾ ಶಾಂತಿ ಘೋಷಣೆಯ ಅಧಿಕಾರ [Power of Declaring War or Peace]:** ಯುದ್ಧ ಅಥವಾ ಶಾಂತಿಯನ್ನು ಘೋಷಿಸುವ ಅಧಿಕಾರವು ಚೀನಾದಲ್ಲಿ ಶಾಸ್ತ್ರೀಕವಾಗಿ ಮಹಾ ದಂಡನಾಯಕನಾಗಿರುವ ಅಧ್ಯಕ್ಷನಿಗೆ ಸೇರಿದೆ. ಆದರೆ, ಅಧ್ಯಕ್ಷನು ಸ್ವತಂತ್ರವಾಗಿ ತನ್ನ ಅಧಿಕಾರವನ್ನು ಚಲಾಯಿಸಲಾಗದು. ಚೀನಾವು ಯುದ್ಧ ಅಥವಾ ಶಾಂತಿ ಘೋಷಿಸಲು ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಒಪ್ಪಿಗೆ ಅತ್ಯಗತ್ಯ.

**5. ಸಂವಿಧಾನ ತಿದ್ದುಪಡಿಯ ಅಧಿಕಾರ [Power of Constitution Ammendment]:** ಚೀನಾ ಸಂವಿಧಾನದ 64 ನೇ ವಿಧಿಯು ಸಂವಿಧಾನದ ತಿದ್ದುಪಡಿಗೆ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಮೂರನೇ ಎರಡಕ್ಕಿಂತ ಹೆಚ್ಚಿನ ಡೆಪ್ಯುಟಿಗಳ ಬಹುಮತ ಅಗತ್ಯವೆಂದು ತಿಳಿಸಿದೆ. ಸಂವಿಧಾನ ತಿದ್ದುಪಡಿಯ ಪ್ರಸ್ತಾಪವನ್ನು ಸ್ಥಾಯಿ ಸಮಿತಿ ಮುಂದಿಡಬಹುದು ಅಥವಾ ಐದನೇ ಒಂದಕ್ಕಿಂತ ಹೆಚ್ಚಿನ ಕಾಂಗ್ರೆಸ್ ಡೆಪ್ಯುಟಿಗಳು ಪ್ರಸ್ತಾಪಿಸಬಹುದು. ಒಟ್ಟಾರೆ ಸಂವಿಧಾನ ತಿದ್ದುಪಡಿಗೊಳ್ಳಲು ಕಾಂಗ್ರೆಸ್‌ನ ಮೂರನೇ ಎರಡಕ್ಕಿಂತ ಹೆಚ್ಚಿನ ಡೆಪ್ಯುಟಿಗಳ ಅನುಮೋದನೆ ಅಗತ್ಯವಾಗಿರುತ್ತದೆ.

6. ಚೀನಾದ ಕೇಂದ್ರ ಸರ್ಕಾರದಡಿ ನೂತನ ಪ್ರಾಂತ್ಯ, ಸ್ವಾಯತ್ತ ಪ್ರದೇಶಗಳು ಅಥವಾ ನಗರಪಾಲಿಕೆಗಳ ರಚನೆಗೆ ಅನುಮೋದನೆ ನೀಡುವುದು.
7. ಚೀನಾದ ಪ್ರಾಂತ್ಯಗಳು ಅಥವಾ ನಗರಪಾಲಿಕೆಗಳ ಗಡಿಗಳನ್ನು ಬದಲಿಸುವ ಅಧಿಕಾರ.
8. ವಿಶೇಷ ಆಡಳಿತಾತ್ಮಕ ಪ್ರದೇಶಗಳ ರಚನೆಗೆ ಅನುಮೋದನೆ ನೀಡುವುದು.



ಈ ಮೇಲೆ ಪ್ರಸ್ತಾಪಿಸಲಾದ ಅಧಿಕಾರಗಳಲ್ಲದೇ ದೇಶದ ಸರ್ವೋನ್ನತ ಅಧಿಕಾರ ಅಂಗವಾಗಿ ರಾಷ್ಟ್ರೀಯ ಜನತಾ ಕಾಂಗ್ರೆಸ್ ವೈವಿಧ್ಯಮಯ ಕಾರ್ಯಗಳನ್ನು ನಿರ್ವಹಿಸುತ್ತದೆ.

## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ಶಾಸಕಾಂಗ ಎಂದರೇನು?
2. ಶಾಸಕಾಂಗದ ಎರಡು ಕಾರ್ಯಗಳನ್ನು ತಿಳಿಸಿ.
3. ಅಮೇರಿಕಾದ ಕೇಂದ್ರ ಶಾಸಕಾಂಗವಾದ ಕಾಂಗ್ರೆಸ್ಸಿನ ಎರಡು ಸದನಗಳನ್ನು ಹೆಸರಿಸಿರಿ.
4. ಪ್ರತಿನಿಧಿಗಳ ಸಭೆಯ ಎರಡು ಚುನಾವಣಾ ಅಧಿಕಾರಗಳನ್ನು ಬರೆಯಿರಿ.
5. ಸೆನೆಟ್‌ನ ಗಾತ್ರವನ್ನು ತಿಳಿಸಿರಿ.
6. ಸೆನೆಟನ್ನು ಶಾಶ್ವತ ಸದನ ಎನ್ನಲು ಕಾರಣವೇನು?
7. ಸೆನೆಟ್ ಪ್ರತಿನಿಧಿ ಸಭೆಗೆ ಸಮಾನವಾದ ಶಾಸನೀಯ ಅಧಿಕಾರ ಹೊಂದಿದೆ. ಹೇಗೆ?
8. ಸೆನೆಟ್ ಯಾವ ಯಾವ ಹುದ್ದೆಗಳ ಪದಚ್ಯುತಿ ಅಧಿಕಾರವನ್ನು ಪಡೆದಿದೆ?
9. ಬ್ರಿಟನ್ನಿನ ಸಂಸತ್ತು ಯಾರನ್ನು ಒಳಗೊಂಡಿದೆ?
10. ಬ್ರಿಟನ್ನಿನ ಹೌಸ್ ಆಫ್ ಕಾಮನ್ಸ್‌ನ ಚುನಾವಣಾ ವಿಧಾನವನ್ನು ಬರೆಯಿರಿ.
11. ಬ್ರಿಟಿಷ್ ಸಾಮಾನ್ಯರ ಸದನಕ್ಕೆ ಸ್ಪರ್ಧಿಸಲು ಇರಬೇಕಾದ ಅರ್ಹತೆಗಳಾವುವು?
12. ಬ್ರಿಟಿಷ್ ಸಂಸತ್ತು ಎಂದರೆ ಸಾಮಾನ್ಯರ ಸಭೆ ಎಂಬ ಭಾವನೆ ಮೂಡಲು ಕಾರಣವೇನು?
13. ಬ್ರಿಟನ್ನಿನ ಶ್ರೀಮಂತರ ಸದನದ ಸದಸ್ಯನಾಗಲು ಇರಬೇಕಾದ ಅರ್ಹತೆಗಳಾವುವು?
14. ಶ್ರೀಮಂತರ ಸಭೆಯ ಅಧ್ಯಕ್ಷನ ಸ್ಥಾನವನ್ನು ತಿಳಿಸಿರಿ.
15. ಚೀನಾದ ಶಾಸಕಾಂಗದ ಎರಡು ವಿಶೇಷತೆಗಳನ್ನು ಬರೆಯಿರಿ.
16. ಚೀನಾದ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಅಧಿಕಾರಾವಧಿಯನ್ನು ಕುರಿತಂತೆ ತಿಳಿಸಿರಿ.
17. ಚೀನಾದ ಡೆಪ್ಯುಟಿಗಳ ವಿಶೇಷ ಹಕ್ಕುಗಳನ್ನು ಬರೆಯಿರಿ.

**[B.] ಐದು ಅಂಕದ ಪ್ರಶ್ನೆಗಳು:**

1. ಅಮೇರಿಕಾದ ಪ್ರತಿನಿಧಿಗಳ ಸಭೆಯ ರಚನೆಯನ್ನು ವಿವರಿಸಿರಿ.
2. ಅಮೇರಿಕಾದ ಸೆನೆಟ್ ವಿಶ್ವದ ಪ್ರಬಲ ಮೇಲ್ಮನೆ ಎಂಬುದನ್ನು ಸಮರ್ಥಿಸಿರಿ.
3. ಬ್ರಿಟನ್ನಿನ ಶ್ರೀಮಂತರ ಸದನದ ಅಧಿಕಾರಗಳನ್ನು ಪರಿಶೀಲಿಸಿರಿ.
4. ಚೀನಾದ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ರಚನೆಯನ್ನು ವಿವರಿಸಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ಅಮೇರಿಕಾದ ಪ್ರತಿನಿಧಿಗಳ ಸಭೆಯ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ವಿವರಿಸಿರಿ.
2. ಸೆನೆಟ್‌ನ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ಚರ್ಚಿಸಿರಿ.
3. ಬ್ರಿಟನ್ನಿನ ಸಾಮಾನ್ಯರ ಸದನದ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ವಿವರಿಸಿರಿ.
4. ಬ್ರಿಟನ್ನಿನ ಶ್ರೀಮಂತರ ಸದನದ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ಚರ್ಚಿಸಿರಿ.
5. ಚೀನಾದ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ಪರಿಶೀಲಿಸಿರಿ.



ಅಧ್ಯಾಯ 9:

# ಕಾರ್ಯಾಂಗ

## [Executive]

**ಪ್ರಸ್ತಾವನೆ [Introduction]:**

ಶಾಸಕಾಂಗದ ಶಾಸನಗಳನ್ನು ಮತ್ತು ನ್ಯಾಯಾಂಗದ ನಿರ್ದೇಶನಗಳನ್ನು ಅನುಷ್ಠಾನಗೊಳಿಸುವ ಸರ್ಕಾರದ ಅಂಗವೇ ಕಾರ್ಯಾಂಗ. ದೇಶಗಳು ಹೊಂದಿರುವ ಸರ್ಕಾರದ ಮಾದರಿಗೆ ತಕ್ಕಂತೆ ಕಾರ್ಯಾಂಗದ ಸ್ವರೂಪ ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತದೆ. ಸರ್ವಾಧಿಕಾರತ್ವ ಹೊಂದಿರುವ ದೇಶಗಳಲ್ಲಿ ಕಾರ್ಯಾಂಗವು ಪ್ರಜಾಪ್ರಭುತ್ವ ದೇಶಗಳಿಗಿಂತ ಪ್ರಬಲವಾಗಿರುತ್ತದೆ. ಅಮೇರಿಕಾ ಹಾಗೂ ಬ್ರಿಟನಗಳಲ್ಲಿ ಪ್ರಜಾಪ್ರಭುತ್ವ ಜಾರಿಯಲ್ಲಿದ್ದರೂ ಕಾರ್ಯಾಂಗದ ರಚನೆ ಮತ್ತು ಕಾರ್ಯಗಳಲ್ಲಿ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. ಅಂತೆಯೇ ಸಮತಾವಾದಿ ದೇಶವಾದ ಚೀನಾದ ಕಾರ್ಯಾಂಗ ಮತ್ತಷ್ಟು ಭಿನ್ನವಾಗಿದೆ. ಸರ್ಕಾರದ ಸ್ವರೂಪ ಯಾವುದೇ ಇರಲಿ ಕಾರ್ಯಾಂಗವು ಉಳಿದ ಎರಡು ಅಂಗಗಳಿಗಿಂತ ಮಹತ್ವ ಪಡೆದಿರುತ್ತದೆ. ಆದ್ದರಿಂದಲೇ ಜನಸಾಮಾನ್ಯರು ಕಾರ್ಯಾಂಗವನ್ನೇ ಸರ್ಕಾರವೆಂದು ಸಂಬೋಧಿಸುತ್ತಾರೆ. ಹೀಗಾಗಿ ಚಿಂತಕ ಗಿಲ್‌ಕ್ರಿಸ್ಟ್ 'ಶಾಸಕಾಂಗವು ಸರ್ಕಾರದ ಪ್ರಧಾನ ಅಂಗವಾದರೆ ನ್ಯಾಯಾಂಗವು ಅದರ ಉಪಾಂಗವಾಗಿದ್ದು ಕಾರ್ಯಾಂಗವು ಉಪ ಸಂಹಾರವಾಗಿದೆ' ಎಂದಿರುವರು. ಪ್ರಸ್ತುತ ಅಧ್ಯಾಯದಲ್ಲಿ ಕಾರ್ಯಾಂಗ ಎಂಬ ಶೀರ್ಷಿಕೆಯಡಿ ಅಮೇರಿಕಾ, ಬ್ರಿಟನ್ ಮತ್ತು ಚೀನಾಗಳ ಕಾರ್ಯಾಂಗಗಳ ತೌಲನಿಕ ಅಧ್ಯಯನಕ್ಕೆ ನೆರವಾಗುವ ಅಂಶಗಳನ್ನು ಸಂಕ್ಷೀಪ್ತವಾಗಿ ಚರ್ಚಿಸಲಾಗಿದೆ.

**[I.] ಅಮೇರಿಕಾದ ಕಾರ್ಯಾಂಗ [Executive of America]:**

ಪೀಠಿಕೆ: ಸರ್ಕಾರದ ಮೂರೂ ಅಂಗಗಳು ಸ್ವತಂತ್ರವಾಗಿ ಕಾರ್ಯಾಚರಿಸುವ ಮಾದರಿಯ ಸರ್ಕಾರವನ್ನು ಸರಳಾರ್ಥದಲ್ಲಿ ಅಧ್ಯಕ್ಷೀಯ ಮಾದರಿ ಸರ್ಕಾರ ಎನ್ನಬಹುದಾಗಿದೆ. ಇಲ್ಲಿ ದೇಶದ ಮುಖ್ಯಸ್ಥ ಮತ್ತು ಸರ್ಕಾರದ ಮುಖ್ಯಸ್ಥನಾಗಿ ಕಾರ್ಯಾಂಗದಲ್ಲಿ ಅಧ್ಯಕ್ಷನಿದ್ದು ನೈಜವಾಗಿ ಅಧಿಕಾರವನ್ನು ಆತನೇ ಚಲಾಯಿಸುತ್ತಾನೆ. ಈ ಅಧ್ಯಕ್ಷೀಯ ಮಾದರಿ ಸರ್ಕಾರವನ್ನು ಜಗತ್ತಿನಲ್ಲಿ ಮೊಟ್ಟ ಮೊದಲು ಅಮೇರಿಕಾ

ಆಳವಡಿಸಿಕೊಂಡಿತು. ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಂವಿಧಾನದ ಎರಡನೇ ವಿಧಿಯು ಅಮೇರಿಕಾದ ಎಲ್ಲ ಕಾರ್ಯಾಂಗೀಯ ಅಧಿಕಾರಗಳನ್ನು ಅಧ್ಯಕ್ಷನಿಗೆ ನೀಡಿದೆ. ಮುಂದುವರಿದು, ಅಮೇರಿಕಾದ ಕಾರ್ಯಾಂಗದಲ್ಲಿ ಮಂತ್ರಿ ಮಂಡಲವಿದ್ದರೂ ಅದು ಅಧ್ಯಕ್ಷನಿಂದಲೇ ನೇಮಕಗೊಂಡ ಆತನ ಸಲಹೆಗಾರರಿಂದ ರಚಿಸಲ್ಪಟ್ಟಿದ್ದು ಅದರ ನಿಯಂತ್ರಣವನ್ನು ಅಧ್ಯಕ್ಷನೇ ಹೊಂದಿರುತ್ತಾನೆ. ಈ ಹಿನ್ನೆಲೆಯಲ್ಲಿ ಆಗ್ ಎಂಬ ಚಿಂತಕ ಅಮೇರಿಕಾದ ಅಧ್ಯಕ್ಷನನ್ನು ಪ್ರಪಂಚದ ಪ್ರಬಲ ಆಡಳಿತಗಾರ (greatest ruler of the world) ಎಂದಿರುವರು. ಪ್ರಸ್ತುತ ಅಮೇರಿಕಾದ ಕಾರ್ಯಾಂಗದ ಕೇಂದ್ರಬಿಂದುವಾದ ಅಧ್ಯಕ್ಷನ ಅಧಿಕಾರ ಕಾರ್ಯಗಳನ್ನು ಕುರಿತಂತೆ ನಾವು ಅಧ್ಯಯನ ಮಾಡಬೇಕಿದ್ದು ಅದಕ್ಕೆ ಪೂರಕವಾದ ಅಂಶಗಳನ್ನು ಕೆಳಗೆ ಚರ್ಚಿಸಲಾಗಿದೆ.

**[A.] ಚುನಾವಣಾ ವಿಧಾನ [Election Method]:** ಅಮೇರಿಕಾದ ಸಂವಿಧಾನದನ್ವಯ ಅಧ್ಯಕ್ಷನು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆಗೊಳ್ಳುತ್ತಾನೆ. ಅಧ್ಯಕ್ಷೀಯ ಚುನಾವಣೆಯ ವೇಳೆ ಅಮೇರಿಕಾದ ಪ್ರತಿ ರಾಜ್ಯವು ಕೇಂದ್ರ ಶಾಸಕಾಂಗವಾದ ಕಾಂಗ್ರೆಸ್ಸಿನ ಪ್ರತಿನಿಧಿಗಳ ಸಭೆ ಮತ್ತು ಸೆನೆಟ್‌ನಲ್ಲಿ ತಾನು ಹೊಂದಿರುವ ಸ್ಥಾನಗಳಷ್ಟು ಸದಸ್ಯರನ್ನು ಅಧ್ಯಕ್ಷೀಯ ಚುನಾವಣೆಯಲ್ಲಿ .ಮತದಾನ ಮಾಡುವ ಮತದಾರ ವರ್ಗಕ್ಕೆ (Electoral College) ಚುನಾಯಿಸುತ್ತದೆ. ಈ ಮತದಾತೃ ವರ್ಗವು ಅಧ್ಯಕ್ಷನ ಚುನಾವಣೆಯಲ್ಲಿ ತಮ್ಮನ್ನು ಚುನಾಯಿಸಿದ ಜನರ ಪರವಾಗಿ ಮತ ಚಲಾಯಿಸುವ ಮೂಲಕ ಅಧ್ಯಕ್ಷನನ್ನು ಚುನಾಯಿಸುತ್ತದೆ. ಒಟ್ಟಾರೆ ಅಧ್ಯಕ್ಷನ ಚುನಾವಣೆಯಲ್ಲಿ ಮತ ನೀಡುವ ಮತದಾರರನ್ನು ಮೊದಲು ಜನರಿಂದ ಆಯ್ಕೆ ಮಾಡಲಾಗುತ್ತಿದ್ದು ಅವರು ನಿರ್ದಿಷ್ಟ ದಿನದಂದು ಅಧ್ಯಕ್ಷನಿಗೆ ಮತ ಚಲಾಯಿಸುವುದರಿಂದ ಅಧ್ಯಕ್ಷನ ಚುನಾವಣೆಯನ್ನು ಪ್ರತ್ಯಕ್ಷ ಚುನಾವಣೆ ಎಂದು ಪರಿಗಣಿಸಲಾಗುತ್ತಿದೆ.

**[B.] ಅರ್ಹತೆಗಳು [Qualifications]:** ಅಮೇರಿಕಾದ ಅಧ್ಯಕ್ಷನ ಚುನಾವಣೆಯಲ್ಲಿ ಸ್ಪರ್ಧಿಸಲು ವ್ಯಕ್ತಿಯೊಬ್ಬ ಈ ಕೆಳಗಿನ ಅರ್ಹತೆಗಳನ್ನು ಪಡೆದಿರಬೇಕಾಗುತ್ತದೆ.

ಅ. ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸ್ವಾಭಾವಿಕ ಪೌರತ್ವವನ್ನು ಪಡೆದಿರಬೇಕು.

ಆ. ಕನಿಷ್ಠ 35 ವರ್ಷಗಳನ್ನು ಪೂರೈಸಿರಬೇಕು.

ಇ. ಕಳೆದ 14 ವರ್ಷಗಳಿಂದ ಅಮೇರಿಕಾದಲ್ಲಿಯೇ ವಾಸವಾಗಿರಬೇಕು.

**[C.] ಅಧಿಕಾರವಧಿ [Term]:**

ಅಮೇರಿಕಾದ ಅಧ್ಯಕ್ಷನ ಅಧಿಕಾರವಧಿಯು 4 ವರ್ಷಗಳು. ಒಬ್ಬ ವ್ಯಕ್ತಿ ಮರು ಆಯ್ಕೆಗೆ ಅರ್ಹನಾಗಿದ್ದು ಮರು ಆಯ್ಕೆಗೊಂಡಲ್ಲಿ ಅಧಿಕಾರವಧಿಯು ವಿಸ್ತರಣೆಗೊಳ್ಳುತ್ತದೆ. ಗಮನಾರ್ಹ ಅಂಶವೇನೆಂದರೆ ಜಾರ್ಜ್ ವಾಷಿಂಗ್ಟನ್ ಎರಡು ಅವಧಿಗೆ ಅಂದರೆ 8 ವರ್ಷ ಅಮೇರಿಕಾದ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ ಬಳಿಕ ಮರು ಆಯ್ಕೆಗೆ ನಿರಾಕರಿಸಿದರು.



ಈ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬ ಎರಡು ಅವಧಿಗೆ ಮಾತ್ರ ಅಧ್ಯಕ್ಷನ ಹುದ್ದೆಗೆ ಸ್ಪರ್ಧಿಸಬಹುದೆಂಬ ಸಂಪ್ರದಾಯ ಬೆಳೆದು ಜಾರಿಯಲ್ಲಿತ್ತು. ಆದರೆ, ಎರಡನೇ ಮಹಾ ಯುದ್ಧದ ವೇಳೆಯಲ್ಲಿ ರೂಸ್‌ವೆಲ್ಟ್ ಎರಡು ಅವಧಿಗಳನ್ನು ಮೀರಿ ಮೂರು ಮತ್ತು ನಾಲ್ಕನೇ ಅವಧಿಗೆ ಅಧ್ಯಕ್ಷನಾಗಿ ಅಧಿಕಾರ ಚಲಾಯಿಸಿದರು. ಈ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬ ಎರಡೇ ಅವಧಿಗೆ ಅಧ್ಯಕ್ಷೀಯ ಸ್ಥಾನಕ್ಕೆ ಅರ್ಹನೆಂಬಂಶವನ್ನು ಸಂವಿಧಾನದ 22 ನೇ ತಿದ್ದುಪಡಿಯ ಮೂಲಕ 1952 ರಲ್ಲಿ ತೀರ್ಮಾನಿಸಲಾಗಿದೆ.

**[D.] ಉತ್ತರಾಧಿಕಾರತ್ವ [Seccession]:**

ಅಧ್ಯಕ್ಷನ ಸ್ಥಾನವು ಕಾರಣಾಂತರದಿಂದ ತೆರವಾದರೆ ಯಾರು ಅದನ್ನು ನಿರ್ವಹಿಸಬೇಕೆಂಬುದನ್ನು ಕುರಿತಂತೆ ಅಮೇರಿಕಾದ ಸಂವಿಧಾನ ಮೌನವಾಗಿದೆ. ಈ ಹಿನ್ನೆಲೆಯಲ್ಲಿ ಅಮೇರಿಕಾ ಸಂವಿಧಾನಕ್ಕೆ 25 ನೇ ತಿದ್ದುಪಡಿಯ ಮೂಲಕ 1967 ರಲ್ಲಿ ಅಧ್ಯಕ್ಷನ ಸ್ಥಾನದ ಉತ್ತರಾಧಿಕಾರತ್ವದ ವಿವರಗಳನ್ನು ಸೇರಿಸಲಾಯಿತು. ಪ್ರಸ್ತುತ ಅಮೇರಿಕಾದ ಅಧ್ಯಕ್ಷನ ಸ್ಥಾನವು ತೆರವಾದರೆ ಉಪಾಧ್ಯಕ್ಷ ಹಂಗಾಮಿ ಅಧ್ಯಕ್ಷನಾಗಲು ಅಧಿಕಾರ ಪಡೆದಿದ್ದಾನೆ. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳೆರಡೂ ತೆರವಾದಲ್ಲಿ ಪ್ರತಿನಿಧಿಗಳ ಸಭೆಯ ಸ್ಪೀಕರ್ ಹಂಗಾಮಿ ಅಧ್ಯಕ್ಷನಾಗಬಹುದಾಗಿದೆ. ಒಂದೊಮ್ಮೆ ಸ್ಪೀಕರ್‌ನ ಸ್ಥಾನವೂ ತೆರವಾಗಿದ್ದಲ್ಲಿ ಸೆನೆಟ್‌ನ ಉಪಾಧ್ಯಕ್ಷ ಅಂದರೆ ಪ್ರೆಸಿಡೆಂಟ್ ಪ್ರೊ ಟೆಂಪೊರೆ ಹಂಗಾಮಿ ಅಧ್ಯಕ್ಷನಾಗಿ ಅಧಿಕಾರ ಚಲಾಯಿಸಬಹುದಾಗಿದೆ.

**[E] ವೇತನ ಮತ್ತು ಸೌಲಭ್ಯಗಳು [Salary and Immunities]:**

ಅಮೇರಿಕಾದ ಅಧ್ಯಕ್ಷನಿಗೆ ಆರಂಭದಲ್ಲಿ 25 ಸಾವಿರ ಡಾಲರ್ ವಾರ್ಷಿಕ ವೇತನ ನೀಡಲಾಗುತ್ತಿತ್ತು. ಕಾಲ ಕಾಲಕ್ಕೆ ಪರಿಷ್ಕರಣೆಗೊಂಡು ಪ್ರಸ್ತುತ 4 ಲಕ್ಷ ಡಾಲರ್ ವಾರ್ಷಿಕ ವೇತನವನ್ನು ಅಧ್ಯಕ್ಷ ಪಡೆಯುತ್ತಿದ್ದಾನೆ. ಇದರೊಡನೆ 50 ಸಾವಿರ ಡಾಲರ್ ವೆಚ್ಚದ ಭತ್ಯೆಯನ್ನು ಪಡೆಯುತ್ತಾನೆ. ವೈಟ್ ಹೌಸ್ ಎಂಬ ಸುಸಜ್ಜಿತ ನಿವಾಸವನ್ನು ಅಧ್ಯಕ್ಷನಿಗೆ ನೀಡಲಾಗುತ್ತದೆ. ಮುಂದುವರಿದು ಅಧ್ಯಕ್ಷನ ಪ್ರವಾಸಕ್ಕೆ ನೆರವಾಗುವ ಅತ್ಯಾಧುನಿಕ ವಾಹನಗಳು ಮತ್ತು ಏರ್‌ಫೋರ್ಸ್ 1 ಎಂಬ ವಿಮಾನ ಒದಗಿಸಲಾಗುತ್ತಿದೆ. ಜೊತೆಗೆ ನಿವೃತ್ತಿಯ ನಂತರ ಪಿಂಚಣಿಯ ಸೌಲಭ್ಯ ಹಾಗೂ ಸಿಬ್ಬಂದಿಗಳ ನೆರವನ್ನು ಅಧ್ಯಕ್ಷ ಪಡೆಯುತ್ತಾನೆ.

**[F.] ಪದಚ್ಯುತಿ [Removal]:**

ಅಮೇರಿಕಾದ ಅಧ್ಯಕ್ಷನನ್ನು ನಾಲ್ಕು ವರ್ಷಗಳ ಅಧಿಕಾರವಧಿಗೆ ಮುನ್ನ ತೆಗೆದು ಹಾಕುವುದನ್ನು ಪದಚ್ಯುತಿ ಎನ್ನಲಾಗುತ್ತದೆ. ಅಧ್ಯಕ್ಷನ ವಿರುದ್ಧದ ಗಂಭೀರ ಆರೋಪಗಳನ್ನು ಆಧರಿಸಿ ಮೊದಲು ಪ್ರತಿನಿಧಿಗಳ ಸಭೆಯು ನಿರ್ಣಯವೊಂದನ್ನು ಅಂಗೀಕರಿಸಿ

ನಾಯಕರನ್ನು ನೇಮಿಸುತ್ತದೆ. ಈ ಪ್ರತಿನಿಧಿ ಸಭೆಯ ನಾಯಕರು ಅಧ್ಯಕ್ಷನ ಪದಚ್ಯುತಿಗೆ ನ್ಯಾಯ ಮಂಡಳಿಯಾಗಿ ಕಾರ್ಯ ನಿರ್ವಹಿಸುವ ಸೆನೆಟ್‌ಗೆ ತೆರಳಿ ಅಪಾದನೆಯನ್ನು ಮಂಡಿಸಬೇಕಾಗುತ್ತದೆ. ಈ ಬಗೆಯ ಸೆನೆಟ್‌ನ ಸಭೆಯ ಅಧ್ಯಕ್ಷತೆಯನ್ನು ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶನು ಅಧ್ಯಕ್ಷತೆ ವಹಿಸಿರುತ್ತಾರೆ. ಅಂತಿಮವಾಗಿ ಸೆನೆಟ್ ಮೂರನೇ ಎರಡರಷ್ಟು ಬಹುಮತದೊಡನೆ ಆರೋಪವನ್ನು ಅಂಗೀಕರಿಸಿದರೆ ಅಧ್ಯಕ್ಷನು ಪದಚ್ಯುತಗೊಳ್ಳುತ್ತಾನೆ. ಆಸಕ್ತಿದಾಯಕ ಅಂಶವೇನೆಂದರೆ ಈ ಪದಚ್ಯುತಿ ವಿಧಾನ ಕಠಿಣವಾಗಿದ್ದು ಇವರೆಗೆ 1968 ರಲ್ಲಿ ಒಮ್ಮೆ ಮಾತ್ರ ಪದಚ್ಯುತಿ ಪ್ರಕ್ರಿಯೆಯನ್ನು ಅಧ್ಯಕ್ಷನಾಗಿದ್ದ ಜಾನ್ಸನ್ ವಿರುದ್ಧ ಕೈಗೊಳ್ಳಲಾಗಿತ್ತು. ಮುಂದೆ ಅಧ್ಯಕ್ಷನಾಗಿದ್ದ ನಿಕ್ಸನ್ ವಿರುದ್ಧ ಪದಚ್ಯುತಿ ಕೈಗೊಳ್ಳುವ ಮುನ್ನವೇ ಆತ ರಾಜೀನಾಮೆ ನೀಡಿದನು.

### [G.] ಅಧಿಕಾರ ಕಾರ್ಯಗಳು [Power and Functions]:

ಜಗತ್ತಿನ ಪ್ರಜಾಪ್ರಭುತ್ವ ದೇಶಗಳ ಮುಖ್ಯಸ್ಥರಿಗೆ ಹೋಲಿಸಿದರೆ ಅಮೇರಿಕಾದ ಅಧ್ಯಕ್ಷನ ಹುದ್ದೆಯು ಅತ್ಯಂತ ಅಧಿಕಾರಯುತವಾಗಿದೆ. ಬ್ರಿಟನ್ನಿನ ಅರಸ ಅಥವಾ ಭಾರತದ ರಾಷ್ಟ್ರಪತಿ ಹೊಂದಿರದ ವಾಸ್ತವಿಕ ಮತ್ತು ವ್ಯಾಪಕ ಅಧಿಕಾರಗಳನ್ನು ಅಮೇರಿಕಾದ ಅಧ್ಯಕ್ಷ ಪಡೆದಿರುವನು. ಹೀಗಾಗಿ ಲಾರ್ಡ್ ಬ್ರೈಸ್ ಅಧ್ಯಕ್ಷನ ಹುದ್ದೆಯನ್ನು ಪ್ರಪಂಚದ ಪ್ರಬಲ ಹುದ್ದೆ (the greatest office in the world) ಎಂಬುದಾಗಿ ಕರೆದಿರುವರು. ಮುಂದುವರಿದು ಹಾಕಿನ್ಸ್ ಎಂಬಾತ ಅಮೇರಿಕಾದ ಅಧ್ಯಕ್ಷನನ್ನು ಅಗ್ರಗಣ್ಯ ಆಡಳಿತಗಾರ (the foremost ruler) ಎಂದು ಬಣ್ಣಿಸಿರುವರು. ಆಸಕ್ತಿದಾಯಕ ಅಂಶವೇನೆಂದರೆ ಅಮೇರಿಕಾದ ಸಂವಿಧಾನವು ಅಧ್ಯಕ್ಷನಿಗೆ ಸೀಮಿತ ಅಧಿಕಾರಗಳನ್ನೇ ಒದಗಿಸಿತ್ತು. ಕಾಲಾನುಕ್ರಮದಲ್ಲಿ ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳು, ಕಾಂಗ್ರೆಸ್ಸಿನ ಶಾಸನಗಳು, ಸಂಪ್ರದಾಯಗಳು, ತುರ್ತು ಪರಿಸ್ಥಿತಿಗಳು ಅಧ್ಯಕ್ಷನ ಅಧಿಕಾರವನ್ನು ಹೆಚ್ಚಿಸುತ್ತಾ ಬಂದಿವೆ. ಪ್ರಸ್ತುತ ಅಮೇರಿಕಾದ ಅಧ್ಯಕ್ಷ ಆ ದೇಶದ ಸಂವಿಧಾನ ರಚನಾಕಾರರು ಊಹಿಸದಿದ್ದಷ್ಟು ವ್ಯಾಪಕ ಅಧಿಕಾರಗಳನ್ನು ಚಲಾಯಿಸುವಂತಾಗಿದೆ. ಕೇವಲ ಅಮೇರಿಕಾದಲ್ಲಿ ಮಾತ್ರವಲ್ಲದೇ ವಿಶ್ವದಾದ್ಯಂತ ಪ್ರಭಾವ ಬೀರುವ ಅಮೇರಿಕಾದ ಅಧ್ಯಕ್ಷನ ಪ್ರಮುಖ ಅಧಿಕಾರ ಕಾರ್ಯಗಳನ್ನು ಮಾತ್ರ ಸಂಕ್ಷಿಪ್ತವಾಗಿ ಈ ಕೆಳಗೆ ಚರ್ಚಿಸಲಾಗಿದೆ.

#### 1. ಕಾರ್ಯಾಂಗೀಯ ಅಧಿಕಾರ ಕಾರ್ಯಗಳು [Executive Power and Fungctions]:

ಅಮೇರಿಕಾ ಸಂವಿಧಾನದ ಎರಡನೇ ವಿಧಿಯು ದೇಶದ ಎಲ್ಲ ಕಾರ್ಯಾಂಗೀಯ ಅಧಿಕಾರಗಳನ್ನು ದೇಶ ಮತ್ತು ಸರ್ಕಾರದ ಮುಖ್ಯಸ್ಥನಾಗಿರುವ ಅಧ್ಯಕ್ಷನಿಗೆ ನೀಡಿದೆ. ಹೀಗಾಗಿ ಅಧ್ಯಕ್ಷ ವ್ಯಾಪಕ ಕಾರ್ಯಾಂಗೀಯ ಅಧಿಕಾರಗಳನ್ನು ಚಲಾಯಿಸಲು ಅವಕಾಶ ಪಡೆದಿರುವನು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ



೧. ಅಮೇರಿಕಾ ಗಣರಾಜ್ಯದ ಎಲ್ಲ ಕಾರ್ಯಾಂಗೀಯ ಚಟುವಟಿಕೆಗಳು ಅಧ್ಯಕ್ಷನ ಹೆಸರಿನಲ್ಲಿಯೇ ಜರುಗುತ್ತವೆ.

೨. ಅಧ್ಯಕ್ಷನು ತನ್ನ ಆಡಳಿತಾತ್ಮಕ ಅನುಕೂಲಕ್ಕಾಗಿ ಅನೌಪಚಾರಿಕ ಮಂತ್ರಿ ಮಂಡಲವನ್ನು ನೇಮಿಸಿಕೊಳ್ಳಲು ಅಧಿಕಾರ ಪಡೆದಿದ್ದು ಅದರ ಮಂತ್ರಿಗಳನ್ನು ಕಾರ್ಯದರ್ಶಿ ಎನ್ನಲಾಗುತ್ತದೆ.

೩. ಅಧ್ಯಕ್ಷನು ಹಣಕಾಸು, ರಕ್ಷಣೆ, ವಿದೇಶಾಂಗ ಮುಂತಾದ ಆಡಳಿತಾತ್ಮಕ ಇಲಾಖೆಗಳು ಅನುಸರಿಸಬೇಕಾದ ನೀತಿಯನ್ನು ರೂಪಿಸುವ ಮತ್ತು ವಿವಿಧ ಇಲಾಖೆಗಳ ನಡುವೆ ಸಮನ್ವಯ ತರುವ ಅಧಿಕಾರವನ್ನು ಪಡೆದಿದ್ದಾನೆ.

೪. ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳು, ವಿದೇಶಗಳೊಡನೆ ಮಾಡಿಕೊಂಡ ಒಪ್ಪಂದಗಳು, ಸಂವಿಧಾನಾತ್ಮಕ ಹಾಗೂ ಕಾಂಗ್ರೆಸ್ಸು ಅಂಗೀಕರಿಸಿದ ಶಾಸನಗಳನ್ನು ಜಾರಿಗೊಳಿಸುವುದು ಅಧ್ಯಕ್ಷನ ಜವಾಬ್ದಾರಿಯಾಗಿದೆ.

೫. ಸಂಯುಕ್ತ ಕಾಯಿದೆಗಳ ನೆರವಿನಿಂದ ಅಮೇರಿಕಾ ಸಂಯುಕ್ತ ಸಂಸ್ಥಾನದ ಯಾವುದೇ ಭಾಗದಲ್ಲಿನ ಆಕ್ರಮಣ ಅಥವಾ ಧಂಗೆಗಳನ್ನು ನಿಯಂತ್ರಿಸುವ ಅಧಿಕಾರವನ್ನು ಅಧ್ಯಕ್ಷ ಪಡೆದಿದ್ದಾನೆ.

೬. ಅಮೇರಿಕಾದ ಕೇಂದ್ರ ಸರ್ಕಾರದ ಉನ್ನತ ಹುದ್ದೆಗಳಿಗೆ ಸೆನೆಟ್‌ನ ಸಮ್ಮತಿಯೊಡನೆ ಮತ್ತು ಕೆಳ ಹುದ್ದೆಗಳಿಗೆ ಸ್ವತಂತ್ರವಾಗಿ ನೇಮಕಾತಿ ನಡೆಸುವ ಅಧಿಕಾರವನ್ನು ಅಧ್ಯಕ್ಷ ಪಡೆದಿದ್ದಾನೆ.

೭. ಅಧ್ಯಕ್ಷ ತಾನು ನೇಮಿಸಿದ ಹುದ್ದೆಗಳಲ್ಲಿನ ವ್ಯಕ್ತಿಗಳನ್ನು ಅಸಮರ್ಥತೆ, ಭ್ರಷ್ಟಾಚಾರ, ಸಂವಿಧಾನದ ಉಲ್ಲಂಘನೆಯಂತಹ ಕಾರಣಗಳಿಗೆ ಅಧಿಕಾರದಿಂದ ಪದಚ್ಯುತಗೊಳಿಸುವ ಅಧಿಕಾರವನ್ನು ಹೊಂದಿದ್ದಾನೆ.

#### 2. ಶಾಸನೀಯ ಅಧಿಕಾರ ಕಾರ್ಯಗಳು [Legislative Power and Fungctions]:

ಅಮೇರಿಕಾದ ಸಂವಿಧಾನವು ಅಧಿಕಾರ ಪ್ರತ್ಯೇಕತಾ ತತ್ವವನ್ನು ಆಧರಿಸಿರುವುದರಿಂದ ಅಧ್ಯಕ್ಷನಿಗೆ ನೇರವಾಗಿ ಯಾವುದೇ ಶಾಸನೀಯ ಅಧಿಕಾರಗಳನ್ನು ನೀಡಿಲ್ಲ. ಹೀಗಾಗಿ ಸಂಸದೀಯ ಮಾದರಿ ಸರ್ಕಾರದ ಪ್ರಧಾನಿಯಂತೆ ಶಾಸಕಾಂಗದ ಸದಸ್ಯತ್ವ ಂದಲಿಕ್ಕಾಗಲಿ, ಅಧಿವೇಶನಗಳನ್ನು ಕರೆಯುವುದಿಕ್ಕಾಗಲಿ, ಕಾಂಗ್ರೆಸ್ಸಿನ ಕೆಳಮನೆಯನ್ನು ವಿಸರ್ಜಿಸುವುದಕ್ಕಾಗಲಿ, ಮಸೂದೆಗಳನ್ನು ಮಂಡಿಸುವುದಕ್ಕಾಗಲಿ ಅಮೇರಿಕಾದ ಅಧ್ಯಕ್ಷನಿಗೆ ಅವಕಾಶವಿಲ್ಲ. ಶಾಸನ ರಚನೆಯಲ್ಲಿ ಅಮೇರಿಕಾದ ಕಾಂಗ್ರೆಸ್ಸು ಸ್ವತಂತ್ರವಾಗಿದ್ದು ಅದು ಅಂಗೀಕರಿಸಿದ ಶಾಸನಗಳನ್ನು ಅಧ್ಯಕ್ಷ ಜಾರಿಗೊಳಿಸಬೇಕಾಗುತ್ತದೆ. ಆದರೆ, ಕಾಲಾನುಕ್ರಮದಲ್ಲಿ ಕಾರ್ಯಾಂಗದ ಮುಖ್ಯಸ್ಥನಾಗಿರುವ ಅಧ್ಯಕ್ಷನು ಅನೌಪಚಾರಿಕವಾಗಿ ಪ್ರಧಾನ ಶಾಸನ ರಚನಾಕಾರನ (Chief legislator) ಪಾತ್ರವನ್ನು ನಿರ್ವಹಿಸುವಂತಾಗಿದೆ.

ಈ ಕೆಳಗಿನವು ಅಧ್ಯಕ್ಷನು ಚಲಾಯಿಸುವ ಪ್ರಮುಖ ಶಾಸನೀಯ ಅಧಿಕಾರಗಳೆನಿಸಿವೆ.

ಅ. ಅಧ್ಯಕ್ಷನು ಕಾಂಗ್ರೆಸ್ಸಿಗೆ ಮೌಖಿಕ ಅಥವಾ ಲಿಖಿತ ರೂಪದ ಸಂದೇಶವನ್ನು ನೀಡುವ ಅಧಿಕಾರವನ್ನು ಪಡೆದಿರುವನು. ಸಾಮಾನ್ಯವಾಗಿ ವಿದೇಶಿ ವ್ಯವಹಾರಗಳಲ್ಲಿ ಅಮೇರಿಕಾದ ಧೋರಣೆಗೆ ಸಂಬಂಧಿಸಿದ ಸೂಕ್ತ ಶಾಸನಗಳನ್ನು ರಚಿಸಲು ಈ ಸಂದೇಶಗಳನ್ನು ನೀಡಲಾಗುತ್ತದೆ.

ಆ. ಅಧ್ಯಕ್ಷನು ಕಾಂಗ್ರೆಸ್ಸಿನ ವಿಶೇಷ ಅಧಿವೇಶನವನ್ನು ಕರೆಯುವ ಅಧಿಕಾರವನ್ನು ಪಡೆದಿರುವನು. ಉದಾ: 1913 ರಲ್ಲಿ ವಿಲ್ಸನ್ ಕರೆದಿದ್ದ ವಿಶೇಷ ಅಧಿವೇಶನ. ಗಮನಾರ್ಹ ಅಂಶವೇನೆಂದರೆ ಇತ್ತೀಚಿಗೆ ಕಾಂಗ್ರೆಸ್ಸಿನ ಅಧಿವೇಶನಗಳ ಅಂತರ ಅತ್ಯಂತ ಕಡಿಮೆ ಇರುವುದರಿಂದ ವಿಶೇಷ ಅಧಿವೇಶನಗಳ ಅಗತ್ಯ ಅಧ್ಯಕ್ಷನಿಗೆ ಉಂಟಾಗುತ್ತಿಲ್ಲ.

ಇ. ಕಾಂಗ್ರೆಸ್ಸು ತನಗೆ ತೊಡಕುಂಟು ಮಾಡುತ್ತಿದೆ ಎಂಬುದು ಮನವರಿಕೆಯಾದರೆ ಅಧ್ಯಕ್ಷನು ಆಕಾಶವಾಣಿ, ಪತ್ರಿಕೆಗಳು, ದೂರ ದರ್ಶನಗಳಂತಹ ಸಾಮೂಹಿಕ ಮಾಧ್ಯಮಗಳನ್ನು ಬಳಸಿಕೊಂಡು ಪ್ರಬಲ ಸಾರ್ವಜನಿಕಾಭಿಪ್ರಾಯವನ್ನು ಕಾಂಗ್ರೆಸ್ಸಿನ ಧೋರಣೆ ಕುರಿತಂತೆ ರೂಪಿಸುವ ಅಧಿಕಾರ ಹೊಂದಿರುವನು.

ಈ. ಕಾಂಗ್ರೆಸ್ಸಿನ ಪ್ರಮುಖ ನಾಯಕರೊಡನೆ ಪ್ರಧಾನ ಶಾಸನೀಯ ವಿಚಾರಗಳನ್ನು ಚರ್ಚಿಸಲು ಅನೌಪಚಾರಿಕ ಚಹ ಮತ್ತು ಔತಣಕೂಟಗಳನ್ನು ಏರ್ಪಡಿಸುವ ಅಧಿಕಾರವನ್ನು ಅಧ್ಯಕ್ಷ ಪಡೆದಿದ್ದಾನೆ. ಇಂತಹ ಅನೌಪಚಾರಿಕ ಸಭೆಗಳಿಗೆ ತನ್ನ ಪಕ್ಷದ ಜೊತೆಗೆ ವಿರೋಧ ಪಕ್ಷದವರನ್ನು ಆಹ್ವಾನಿಸಿ ಚರ್ಚಿಸಲು ಅಧ್ಯಕ್ಷ ಮುಕ್ತನಾಗಿರುವ.

ಉ. ಕಾಂಗ್ರೆಸ್ಸು ಅಂಗೀಕರಿಸಿದ ಶಾಸನಗಳಿಗೆ ಪೂರಕವಾದ ನಿಯಮಾವಳಿಗಳನ್ನು ಕಾರ್ಯಾಂಗೀಯ ಆದೇಶಗಳ ನೆರವಿನಿಂದ ರಚಿಸಿಕೊಳ್ಳಲು ಅಧ್ಯಕ್ಷನಿಗೆ ಅವಕಾಶ ಕಲ್ಪಿಸಿರುತ್ತವೆ. ಇಂತಹ ನಿಯೋಜಿತ ಶಾಸನಾಧಿಕಾರಗಳಡಿ ಅಧ್ಯಕ್ಷ ಶಾಸನದಷ್ಟೇ ಪ್ರಬಲವಾದ ಹಲವು ನಿಯಮಾವಳಿಗಳನ್ನು ಕಾರ್ಯಾಂಗೀಯ ಆದೇಶಗಳ ನೆರವಿನಿಂದ ರಚಿಸಿಕೊಳ್ಳಬಹುದಾಗಿದೆ.

ಊ. ಕಾಂಗ್ರೆಸ್ಸಿನಿಂದ ಅಂಗೀಕಾರಗೊಂಡ ಎಲ್ಲ ಮಸೂದೆಗಳು ಶಾಸನವಾಗಲು ಅಧ್ಯಕ್ಷನ ಅಂಕಿತ ಅತ್ಯಗತ್ಯ. ಈ ಸಮಯದಲ್ಲಿ ಕಾಂಗ್ರೆಸ್ಸು ಅಂಗೀಕರಿಸಿದ ಮಸೂದೆಗಳಿಗೆ ಸಂಬಂಧಿಸಿದಂತೆ ಕೆಳಗಿನ ಮೂರು ಬಗೆಯ ನಿರ್ಧಾರ ಕೈಗೊಳ್ಳುವ ಅವಕಾಶವನ್ನು ಅಧ್ಯಕ್ಷ ಪಡೆದಿರುವನು. ಅವುಗಳೆಂದರೆ

1. ಕಾಂಗ್ರೆಸ್ಸಿನ ಎರಡೂ ಸದನಗಳಿಂದ ಅಂಗೀಕಾರಗೊಂಡು ಅಧ್ಯಕ್ಷನ ಅಂಕಿತಕ್ಕೆ ಸಲ್ಲಿಸಿರುವ ಮಸೂದೆಗೆ ಅಧ್ಯಕ್ಷ ಅಂಕಿತ ನೀಡಿದರೆ ಆ ಮಸೂದೆಯು ಶಾಸನವೆನಿಸುತ್ತದೆ.

2. ಕಾಂಗ್ರೆಸ್ಸಿನ ಎರಡೂ ಸದನಗಳಿಂದ ಅಂಗೀಕಾರಗೊಂಡು ಅಧ್ಯಕ್ಷನ ಅಂಕಿತಕ್ಕೆ ಸಲ್ಲಿಸಿದ ಮಸೂದೆಗೆ ಅಧ್ಯಕ್ಷ ಅಂಕಿತ ನೀಡದೇ ಕಾಯ್ದಿರಿಸಬಹುದು. ಈ ವೇಳೆಯಲ್ಲಿ ಕಾಂಗ್ರೆಸ್ಸಿನ ಅಧಿವೇಶನ ಮುಂದುವರಿದಿದ್ದರೆ 10 ದಿನಗಳ ನಂತರ ಅಧ್ಯಕ್ಷನ ಅಂಕಿತವಿಲ್ಲದೇ ಮಸೂದೆಯು ಶಾಸನವೆನಿಸುತ್ತದೆ. ಒಂದೊಮ್ಮೆ 10 ದಿನಗಳೊಳಗೆ ಕಾಂಗ್ರೆಸ್ಸಿನ ಅಧಿವೇಶನವು ಮುಂದೂಡಲ್ಪಟ್ಟರೆ ಅಧ್ಯಕ್ಷನಿಂದ ಕಾಯ್ದಿರಿಸಿದ ಮಸೂದೆ ರದ್ದಾಗುತ್ತದೆ. ಇದನ್ನು ಪಾಕೇಟ್ ವಿಟೊ ಎನ್ನಲಾಗುತ್ತದೆ.



3. ಕಾಂಗ್ರೆಸ್ಸಿನ ಎರಡೂ ಸದನಗಳಿಂದ ಅಂಗೀಕಾರಗೊಂಡು ಅಧ್ಯಕ್ಷನ ಅಂಕಿತಕ್ಕೆ ಸಲ್ಲಿಸಲಾದ ಮಸೂದೆಗೆ ಅಧ್ಯಕ್ಷ ಅಂಕಿತ ನೀಡದೇ ತಿದ್ದುಪಡಿ ಸಹಿತ ಅಥವಾ ತಿದ್ದುಪಡಿ ರಹಿತವಾಗಿ ಕಾಂಗ್ರೆಸ್ಸಿಗೆ ಮರಳಿಸಬಹುದು. ಈ ಸಮಯದಲ್ಲಿ ಕಾಂಗ್ರೆಸ್ಸಿನ ಎರಡೂ ಸದನಗಳು ಮೂರನೇ ಎರಡರಷ್ಟು ಬಹುಮತದೊಡನೆ ಮಸೂದೆಯನ್ನು ಅಂಗೀಕರಿಸಿ ಮತ್ತೊಮ್ಮೆ ಅಧ್ಯಕ್ಷನ ಅಂಗೀಕಾರಕ್ಕೆ ಸಲ್ಲಿಸಬೇಕಾಗುತ್ತದೆ. ಆಗ ಅಧ್ಯಕ್ಷ ಆ ಮಸೂದೆಗೆ ಕಡ್ಡಾಯವಾಗಿ ಅಂಕಿತ ನೀಡಬೇಕಾಗುತ್ತದೆ.

**3.ಹಣಕಾಸಿನ ಅಧಿಕಾರ ಕಾರ್ಯಗಳು [Financial Power and Fungctions]:**

ಸಂವಿಧಾನಾತ್ಮಕವಾಗಿ ಹಣಕಾಸಿನ ಅಧಿಕಾರಗಳು ಕಾಂಗ್ರೆಸ್ಸಿಗೆ ಸೇರಿದ್ದರೂ ವಾಸ್ತವದಲ್ಲಿ ಅಧ್ಯಕ್ಷನೇ ಅಮೇರಿಕಾದ ಹಣಕಾಸಿನ ನಿರ್ದೇಶನ ಮತ್ತು ನಿಯಂತ್ರಣ ಅಧಿಕಾರವನ್ನು ಪಡೆದಿರುವನು. ಅಧ್ಯಕ್ಷನ ಮೇಲ್ವಿಚಾರಣೆಯಲ್ಲಿಯೇ ಅಮೇರಿಕಾದ ಮುಂಗಡ ಪತ್ರ ಸಿದ್ಧವಾಗುತ್ತದೆ. ಮುಂಗಡ ಪತ್ರವು ತಾಂತ್ರಿಕವಾಗಿರುವುದರಿಂದ ಕಾಂಗ್ರೆಸ್ಸು ಅಧಿಕ ತಿದ್ದುಪಡಿಗೊಳಪಡಿಸದೇ ಅಂಗೀಕಾರ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಕ್ಷ ಹಣಕಾಸಿನ ವಿಚಾರದಲ್ಲಿ ಅಧಿಕಾರಯುತನಾಗಿದ್ದಾನೆ ಎನ್ನಬಹುದಾಗಿದೆ.

**4.ನ್ಯಾಯಾಂಗೀಯ ಅಧಿಕಾರ ಕಾರ್ಯಗಳು [Judicial Power and Fungctions]:**

ಜಗತ್ತಿನ ಇತರ ದೇಶಗಳ ಮುಖ್ಯಸ್ಥರು ಹೊಂದಿರುವಂತೆ ಅಮೇರಿಕಾದ ಅಧ್ಯಕ್ಷನೂ ಸಹ ಹಲವು ನ್ಯಾಯಾಂಗೀಯ ಅಧಿಕಾರಗಳನ್ನು ಪಡೆದಿದ್ದಾನೆ. ಅಧ್ಯಕ್ಷನು ಅಮೇರಿಕಾದ ರಾಷ್ಟ್ರೀಯ ಕಾನೂನುಗಳ ಉಲ್ಲಂಘನೆಗೆ ಶಿಕ್ಷೆಗೊಳಗಾದವರ ಶಿಕ್ಷೆಯನ್ನು ಬದಲಿಸುವ, ಸ್ಥಗಿತಗೊಳಿಸುವ ಅಥವಾ ರದ್ದುಗೊಳಿಸುವ ಅಧಿಕಾರವನ್ನು ಪಡೆದಿರುವನು. ಮುಂದುವರಿದು ಸೆನೆಟ್‌ನ ಸಲಹೆಯಂತೆ ಅಧ್ಯಕ್ಷನು ಅಮೇರಿಕಾದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರವನ್ನು ಪಡೆದಿದ್ದಾನೆ.

**5.ವಿದೇಶಾಂಗ ವ್ಯವಹಾರಗಳ ಅಧಿಕಾರ ಕಾರ್ಯಗಳು [Power and Fungctions of Foreigne Afairs]:**

ಅಮೇರಿಕಾದ ಅಧ್ಯಕ್ಷ ವಿದೇಶಾಂಗ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಲವು ಅಧಿಕಾರಗಳನ್ನು ಪಡೆದಿದ್ದಾನೆ. ಸಾಮಾನ್ಯವಾಗಿ ಸೆನೆಟ್‌ನ ಸಮ್ಮತಿಯೊಡನೆ ಚಲಾಯಿಸುವ ಅಧ್ಯಕ್ಷನ ಪ್ರಮುಖ ವಿದೇಶಾಂಗ ವ್ಯವಹಾರಗಳಿಗೆ ಸಂಬಂಧಿಸಿದ ಅಧಿಕಾರಗಳೆಂದರೆ

ಅ. ವಿದೇಶಗಳಿಂದ ಅಮೇರಿಕಾಕ್ಕೆ ನೇಮಕಗೊಳ್ಳುವ ರಾಯಭಾರಿಗಳನ್ನು ಬರ ಮಾಡಿಕೊಳ್ಳುವ ಅಧಿಕಾರವನ್ನು ಅಧ್ಯಕ್ಷ ಪಡೆದಿರುತ್ತಾನೆ.

ಆ. ವಿದೇಶಗಳಿಗೆ ಅಮೇರಿಕಾದ ರಾಯಭಾರಿಗಳನ್ನು ನೇಮಿಸುವ ಅಧಿಕಾರವನ್ನು ಅಧ್ಯಕ್ಷ ಹೊಂದಿರುತ್ತಾನೆ.

ಇ. ಅಧ್ಯಕ್ಷನಿಗೆ ವಿದೇಶಗಳೊಡನೆ ಒಪ್ಪಂದ ಮಾಡಿಕೊಳ್ಳುವ ಅಧಿಕಾರವಿದ್ದು ಅವುಗಳ ಅನುಷ್ಠಾನವು ಸೆನೆಟ್‌ನ ಸಮ್ಮತಿಯನ್ನು ಆಧರಿಸಿರುತ್ತದೆ.

ಈ. ಅಧ್ಯಕ್ಷನು ಸೆನೆಟ್‌ನ ಸಮ್ಮತಿಯಿಲ್ಲದೇ ವಿದೇಶಗಳೊಡನೆ ಕಾರ್ಯಾಂಗೀಯ ಒಪ್ಪಂದಗಳನ್ನು ಮಾಡಿಕೊಳ್ಳುವ ಅಧಿಕಾರ ಪಡೆದಿರುತ್ತಾನೆ. ಉದಾ: ರೂಸ್ವೆಲ್ಟ್ ಮತ್ತು ಜಪಾನ್ ಚಕ್ರವರ್ತಿಯ ನಡುವಿನ ಒಪ್ಪಂದ.

ಉ. ಸುಮಧುರ ಬಾಂಧವ್ಯದ ಬಲವರ್ಧನೆಗೆ ವಿದೇಶಗಳಿಗೆ ಭೇಟಿ ನೀಡುವ ಅಧಿಕಾರ.

ಊ. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಅಮೇರಿಕಾದ ಪ್ರತಿನಿಧಿಯಾಗಿ ಭಾಗವಹಿಸುವ ಅಧಿಕಾರ.

ಋ. ನೂತನ ದೇಶಗಳಿಗೆ ಮಾನ್ಯತೆ ನೀಡುವ ಅಧಿಕಾರ.

ಎ. ವಿದೇಶಗಳೊಡನೆ ಅಗತ್ಯವಿದ್ದಲ್ಲಿ ಅಧ್ಯಕ್ಷನು ಗುಪ್ತ ಒಪ್ಪಂದಗಳನ್ನು ಮಾಡಿಕೊಳ್ಳುವ ಅಧಿಕಾರ ಪಡೆದಿದ್ದಾನೆ.

**6. ಸೈನಿಕ ಅಧಿಕಾರ ಕಾರ್ಯಗಳು [Military Power and Fungctions]:**

ಅಮೇರಿಕಾದ ಕಾರ್ಯಾಂಗೀಯ ಮುಖ್ಯಸ್ಥನಾಗಿ ಅಮೇರಿಕಾದ ಅಧ್ಯಕ್ಷ ಕೆಳಗಿನ ಹಲವು ಸೈನಿಕ ಅಧಿಕಾರಗಳನ್ನು ಪಡೆದಿದ್ದಾನೆ.

ಅ. ಸಂವಿಧಾನದ ಎರಡನೇ ವಿಧಿಯಂತೆ ಅಧ್ಯಕ್ಷನು ಅಮೇರಿಕಾದ ಮಹಾ ದಂಡ ನಾಯಕ ಎನಿಸಿರುವನು.

ಆ. ಅಧ್ಯಕ್ಷನು ಸೇನಾ ಪಡೆಗಳ ಮುಖ್ಯಸ್ಥರನ್ನು ನೇಮಿಸುವ ಅಧಿಕಾರವನ್ನು ಪಡೆದಿದ್ದಾನೆ.

ಇ. ಕಾಂಗ್ರೆಸ್ಸಿನ ಸಮ್ಮತಿಯೊಡನೆ ಯುದ್ಧ ಅಥವಾ ಶಾಂತಿಯನ್ನು ಘೋಷಿಸುವ ಅಧಿಕಾರವು ಅಮೇರಿಕಾದ ಅಧ್ಯಕ್ಷನಿಗಿದೆ.

ಈ. ಯುದ್ಧ ಜಾರಿಯಲ್ಲಿರುವಾಗ ಅಧ್ಯಕ್ಷನು ತನ್ನ ವಿವೇಚನಾನುಸಾರ ಸೈನ್ಯ ಪಡೆಗಳನ್ನು ನಿಯೋಜಿಸುವ ಅಧಿಕಾರವನ್ನು ಹೊಂದಿರುತ್ತಾನೆ.

ಈ ಮೇಲಿನ ಅಮೇರಿಕಾದ ಅಧ್ಯಕ್ಷನ ವ್ಯಾಪಕ ಅಧಿಕಾರ ಕಾರ್ಯಗಳನ್ನು ಅವಲೋಕಿಸಿದರೆ ನಿಶ್ಚಿತವಾಗಿ ಆತ ಜಗತ್ತಿನ ಪ್ರಬಲ ಆಡಳಿತಗಾರ ಎಂಬುದು ಸ್ಪಷ್ಟವಾಗುತ್ತದೆ. ಬ್ರಿಟಿಷ್ ಅರಸ ಮತ್ತು ಭಾರತದ ರಾಷ್ಟ್ರಪತಿ ಹೊಂದಿರದ ವಿಪುಲ ಅಧಿಕಾರಗಳನ್ನು ಅಧ್ಯಕ್ಷ ಪಡೆದುಕೊಂಡಿದ್ದಾನೆ. ಆಸಕ್ತಿದಾಯಕ ಅಂಶವೇನೆಂದರೆ



ಅಧ್ಯಕ್ಷನೂ ಸಹ ಸಂವಿಧಾನ, ಸೆನೆಟ್, ಸರ್ವೋಚ್ಚ ನ್ಯಾಯಾಲಯ ಹಾಗೂ ಸಾರ್ವಜನಿಕ ಅಭಿಪ್ರಾಯಗಳಿಗೆ ಒಳಪಟ್ಟು ತನ್ನ ಅಧಿಕಾರಗಳನ್ನು ಚಲಾಯಿಸಬೇಕಾಗುತ್ತದೆ. ಹೀಗಾಗಿಯೇ ಲಾಸ್ಕಿ ಅಮೇರಿಕಾದ ಅಧ್ಯಕ್ಷ ಹೆಚ್ಚು ಕಡಿಮೆ ಬ್ರಿಟನ್ನಿನ ಅರಸ ಮತ್ತು ಪ್ರಧಾನಿಯನ್ನು ಹೋಲುತ್ತಾನೆ ಎಂಬುದಾಗಿ ಅಭಿಪ್ರಾಯಪಟ್ಟಿರುವರು.

## [II.] ಬ್ರಿಟನ್ನಿನ ಕಾರ್ಯಾಂಗ [British Executive]:

**ಪೀಠಿಕೆ:** ಬ್ರಿಟನ್ ಸಂಸದೀಯ ಮಾದರಿ ಪ್ರಜಾಪ್ರಭುತ್ವದ ತವರೂರು ಎನಿಸಿದೆ. ಇದಕ್ಕೆ ಕಾರಣವೇ ಸಂಸದೀಯ ಮಾದರಿ ಸರ್ಕಾರವು ಬ್ರಿಟನ್ನಿನಲ್ಲಿ ಉಗಮಗೊಂಡು ಪ್ರಪಂಚದಾದ್ಯಂತ ಹರಡಿದುದು. ಸಾಮಾನ್ಯವಾಗಿ ಸಂಸದೀಯ ಮಾದರಿ ಸರ್ಕಾರವಿದ್ದಲ್ಲಿ ಕಾರ್ಯಾಂಗವು ನಾಮ ಮಾತ್ರ ಹಾಗೂ ನೈಜ ಮುಖ್ಯಸ್ಥರನ್ನು ಹೊಂದಿರುತ್ತದೆ. ಹೀಗಾಗಿ ಬ್ರಿಟನ್ನಿನಲ್ಲಿ ಸಂಸದೀಯ ಮಾದರಿ ಸರ್ಕಾರದ ನಾಮ ಮಾತ್ರ ಕಾರ್ಯಾಂಗದ ಮುಖ್ಯಸ್ಥನಾಗಿ ಅರಸನ ಹುದ್ದೆಯನ್ನು ಹಾಗೂ ನೈಜ ಕಾರ್ಯಾಂಗದ ಮುಖ್ಯಸ್ಥನಾಗಿ ಪ್ರಧಾನ ಮಂತ್ರಿಯ ಹುದ್ದೆಯನ್ನು ಗುರುತಿಸಬಹುದಾಗಿದೆ.

ಪ್ರಸ್ತುತ ಬ್ರಿಟನ್ನಿನಲ್ಲಿ ನಾಮ ಮಾತ್ರ ಕಾರ್ಯಾಂಗದ ಮುಖ್ಯಸ್ಥನಾಗಿರುವ ಅರಸನ ಸ್ಥಾನವು ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ಆರಂಭದ ಆಂಗ್ಲೊ ಸ್ಯಾಕ್ಸನ್ ಮನೆತನದ ಕಾಲದಲ್ಲಿ ಅರಸನ ಸ್ಥಾನಕ್ಕೆ ಚುನಾವಣೆ ಅಸ್ತಿತ್ವದಲ್ಲಿತ್ತು. ಮುಂದೆ ನಾರ್ಮನ್ ದೊರೆಗಳ ಕಾಲದಲ್ಲಿ ಅರಸು ಸ್ಥಾನವು ವಂಶಪಾರಂಪರ್ಯ ಸ್ವರೂಪವನ್ನು ತಾಳಿತು. ಕಾಲಾನುಕ್ರಮದಲ್ಲಿ ಅರಸರು ಮತ್ತು ಜನತಾ ಪ್ರತಿನಿಧಿಗಳ ಸಂಸತ್ತಿನ ನಡುವೆ ಪರಸ್ಪರ ಕಾರ್ಯಾಂಗದ ನಿಯಂತ್ರಣಾಧಿಕಾರಕ್ಕಾಗಿ ಸ್ಪರ್ಧೆ ಜರುಗಿತು. ಸ್ಟುವರ್ಟ್ ದೊರೆಗಳ ಕಾಲದಲ್ಲಿ ಅರಸು ನಿರಂಕುಶನಾಗಿ ಕಾರ್ಯಾಂಗೀಯ ಅಧಿಕಾರಗಳನ್ನು ಚಲಾಯಿಸಲು ಪ್ರಯತ್ನಿಸಿದ್ದ. ಫಲವಾಗಿ 1688 ರಲ್ಲಿ ಸಂಸತ್ತು ಹಾಗೂ ಅರಸರ ನಡುವೆ ರಕ್ತ ರಹಿತ ವೈಭವೋಪಿತ ಕ್ರಾಂತಿ ಘಟಿಸಿತು. ಈ ಬಳಿಕ ಅರಸ ತನ್ನ ಹಿಂದಿನ ಕಾರ್ಯಾಂಗೀಯ ಅಧಿಕಾರವನ್ನು ಜನ ಪ್ರತಿನಿಧಿಗಳಿರುವ ಸಂಸತ್ತಿಗೆ ಬಿಟ್ಟುಕೊಟ್ಟು ಬ್ರಿಟನ್ನಿನ ಸಾಂಕೇತಿಕ ಮುಖ್ಯಸ್ಥ ಎನಿಸಿಕೊಂಡ. ಇದೇ ಕಾಲದಿಂದ ಸಾಮಾನ್ಯರ ಸಭೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕರುಗಳಿಂದ ಮಂತ್ರಿ ಮಂಡಳ ರಚನೆಗೊಂಡು ಅರಸನ ಅಧಿಕಾರವನ್ನೆಲ್ಲ ಚಲಾಯಿಸತೊಡಗಿತು. ಫಲವಾಗಿ ಅರಸ ದೇಶದ ನಾಮ ಮಾತ್ರ ಕಾರ್ಯಾಂಗದ ಮುಖ್ಯಸ್ಥನಾಗಿ ಮತ್ತು ಮಂತ್ರಿ ಮಂಡಲ ವಾಸ್ತವದಲ್ಲಿ ಅಧಿಕಾರ ಚಲಾಯಿಸುವ ಸಂಸದೀಯ ವ್ಯವಸ್ಥೆ ಬ್ರಿಟನ್ನಿನಲ್ಲಿ ಜಾರಿಗೊಂಡಿತು.

ಬ್ರಿಟನ್ನಿನಲ್ಲಿ ವೈಭವೋಪಿತ ಕ್ರಾಂತಿಯ ಬಳಿಕ ಕಾರ್ಯಾಂಗಿಯ ಅಧಿಕಾರವನ್ನು ತನ್ನ ಹೆಸರಿನಲ್ಲಿ ಅರಸನೇ ಚಲಾಯಿಸಿದರೂ ಸಾಮಾನ್ಯರ ಸಭೆಯಲ್ಲಿ ಬಹುಮತ ಪಡೆದ ಪಕ್ಷದ

ನಾಯಕರಿಂದ ಕೂಡಿದ್ದ ಮಂತ್ರಿ ಮಂಡಳದ ಸಲಹೆಯಂತೆ ಚಲಾಯಿಸಬೇಕಾಗಿತ್ತು. ಮುಂದುವರಿದು ನೈಜವಾಗಿ ಅಧಿಕಾರವನ್ನು ಚಲಾಯಿಸುವ ಮಂತ್ರಿ ಮಂಡಲದ ಅಧ್ಯಕ್ಷತೆಯನ್ನು ಅರಸನೇ ವಹಿಸುತ್ತಿದ್ದ. ಆದರೆ, 18 ನೇ ಶತಮಾನದ ಪೂರ್ವಾರ್ಧದಲ್ಲಿ ಆಡಳಿತ ನಡೆಸಿದ ಬ್ರಿಟಿಷ್ ದೊರೆ ಮೊದಲನೇ ಜಾರ್ಜನಿಗೆ ಇಂಗ್ಲೀಷ್ ಭಾಷೆ ಬಾರದ ಕಾರಣ ಮಂತ್ರಿ ಮಂಡಲದ ಹಿರಿಯನಾದ ರಾಬರ್ಟ್ ವಾಲ್‌ಪೋಲ್‌ಗೆ ಮಂತ್ರಿ ಮಂಡಲದ ಅಧ್ಯಕ್ಷತೆ ವಹಿಸಲು ಅವಕಾಶ ಮಾಡಿಕೊಟ್ಟ, ಇಲ್ಲಿಂದ ಮಂತ್ರಿ ಮಂಡಲದ ಹಿರಿಯ ನಾಯಕನೇ ಅದರ ಅಧ್ಯಕ್ಷತೆ ವಹಿಸುವ ಸಂಪ್ರದಾಯ ಬೆಳೆಯಿತಲ್ಲದೇ ಹಾಗೆ ಅಧ್ಯಕ್ಷತೆ ವಹಿಸುವ ವ್ಯಕ್ತಿಯನ್ನು ಪ್ರಧಾನ ಮಂತ್ರಿ ಎಂದು ಗುರುತಿಸಲಾಯಿತು. ಈ ಹಿನ್ನೆಲೆಯಲ್ಲಿ ಬ್ರಿಟನ್ನಿನ ಮೊದಲ ಪ್ರಧಾನ ಮಂತ್ರಿ ಎಂದು ರಾಬರ್ಟ್ ವಾಲ್‌ಪೋಲ್ ಪರಿಗಣಿಸಲ್ಪಟ್ಟರು. ಹೀಗೆ ಬ್ರಿಟಿಷ್ ಸಂಸದೀಯ ಸರ್ಕಾರದ ಕಾರ್ಯಾಂಗವು ನಾಮ ಮಾತ್ರ ದೇಶದ ಮುಖ್ಯಸ್ಥನಾದ ಅರಸು ಮತ್ತು ನೈಜವಾಗಿ ಅಧಿಕಾರ ಚಲಾಯಿಸುವ ಸರ್ಕಾರದ ಮುಖ್ಯಸ್ಥ ಪ್ರಧಾನ ಮಂತ್ರಿ ನೇತೃತ್ವದ ಮಂತ್ರಿ ಮಂಡಲದಿಂದ ಕೂಡಿದೆ.

**[A.] ಬ್ರಿಟಿಷ್ ಅರಸನ ಅಧಿಕಾರ ಕಾರ್ಯಗಳು**

**[Power and Fungctions of the British King]:**

ವೈಭವೋಪೇತ ಕ್ರಾಂತಿಯ ಬಳಿಕ ಬ್ರಿಟನ್ನಿನಲ್ಲಿ ಅರಸನ ಅಧಿಕಾರಗಳನ್ನು ಪ್ರತಿನಿಧಿಸುವ ಅರಸೊತ್ತಿಗೆ ಪರಿಕಲ್ಪನೆ ಜಾರಿಗೊಂಡಿದ್ದು ಪ್ರಸ್ತುತ ಅರಸ ಅರಸೊತ್ತಿಗೆಯ ಭಾಗವಾಗಿ ದೇಶದ ನಾಮ ಮಾತ್ರ ಪ್ರಮುಖನಾಗಿ ಮಾತ್ರ ಕಾರ್ಯ ನಿರ್ವಹಿಸುವಂತಾಗಿದೆ. ಮುಂದುವರಿದು 1701 ರ ಆಕ್ಟ ಆಫ್ ಸೆಟಲ್‌ಮೆಂಟ್ ಅನ್ವಯ ವಂಶಪಾರಂಪರ್ಯ ಅರಸೊತ್ತಿಗೆ ಜಾರಿಯಲ್ಲಿದ್ದು ಅರಸನ ಹಿರಿಯ ಮಗ ಅಥವಾ ಮಗಳು ಅರಸರಾಗಿ ನೇಮಕಗೊಳ್ಳುತ್ತಾರೆ. ಹೀಗೆ ನೇಮಕವಾದ ಬ್ರಿಟಿಷ್ ಅರಸರು ಅರಸೊತ್ತಿಗೆಯ ಸಾಂಪ್ರದಾಯಿಕ ಪದ್ಧತಿಗಳ ಭಾಗವಾಗಿ ಮತ್ತು ಸಂಸತ್ತಿನ ಲಿಖಿತ ಕಾನೂನುಗಳ ಭಾಗವಾಗಿ ಅನೇಕ ಅಧಿಕಾರಗಳನ್ನು ತಾತ್ವಿಕವಾಗಿ ಚಲಾಯಿಸುತ್ತಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

**1. ಕಾರ್ಯಾಂಗೀಯ ಅಧಿಕಾರ ಕಾರ್ಯಗಳು [Executive Power and Fungctions]:**

ಬ್ರಿಟನ್ನಿನಲ್ಲಿ ಅರಸನೇ ದೇಶದ ಪ್ರಥಮ ಪ್ರಜೆ ಅಥವಾ ಮುಖ್ಯಸ್ಥ. ಹೀಗಾಗಿ ಬ್ರಿಟನ್ನಿನ ಕಾರ್ಯಾಂಗೀಯ ಅಧಿಕಾರವೆಲ್ಲ ಆತನ ಹೆಸರಿನಲ್ಲಿ ಮತ್ತು ಆತನಿಂದಲೇ ಚಲಾಯಿಸಲ್ಪಡುತ್ತವೆ. ಈ ಕೆಳಗಿನವು ಅರಸನ ಪ್ರಧಾನ ಕಾರ್ಯಾಂಗೀಯ ಅಧಿಕಾರಗಳಾಗಿವೆ.

ಅ. ನೈಜ ಕಾರ್ಯಾಂಗದ ಭಾಗವಾದ ಪ್ರಧಾನಿಯನ್ನು ಮತ್ತು ಆತನ ಸಲಹೆಯಂತೆ ಮಂತ್ರಿ ಮಂಡಲದ ಇತರ ಮಂತ್ರಿಗಳನ್ನು ಅರಸ ನೇಮಿಸುತ್ತಾನೆ.



ಆ. ನ್ಯಾಯಾಧೀಶರು ಮತ್ತು ಚರ್ಚಿನ ಬಿಷಪ್‌ರನ್ನು ಅರಸ ನೇಮಿಸುತ್ತಾನೆ.

ಇ. ಭೂ ದಳ, ನೌಕಾ ದಳ ಹಾಗೂ ವಾಯು ದಳಗಳ ಮುಖ್ಯಸ್ಥರನ್ನು ಅರಸರೇ ನೇಮಿಸುತ್ತಾರೆ.

ಈ. ಎಲ್ಲ ರಾಷ್ಟ್ರೀಯ ಕಾನೂನುಗಳ ಅನುಷ್ಠಾನವನ್ನು ಅರಸ ಪರಿಶೀಲಿಸಬಹುದಾಗಿದೆ.

ಉ. ಬ್ರಿಟನ್ನಿನ ಸೇನಾ ನೆಲೆಗಳ ಮೇಲೆ ಅರಸ ಪರಮಾಧಿಕಾರ ಹೊಂದಿರುತ್ತಾನೆ.

ಊ. ವಿದೇಶಗಳೊಡನೆ ಬ್ರಿಟನ್ನಿನ ಸುಮಧುರ ಸಂಬಂಧವನ್ನು ಅರಸ ವೃದ್ಧಿಸುತ್ತಾನೆ.

ಋ. ಬ್ರಿಟನ್ ಸಾಮ್ರಾಜ್ಯಕ್ಕೆ ಸೇರಿರುವ ವಸಾಹತು ಮತ್ತು ಡೊಮಿನಿಯನ್‌ಗಳೊಡನೆ ನಿರಂತರ ವ್ಯವಹರಿಸುತ್ತಾನೆ.

ಎ. ಸಂಸತ್ತಿನ ಸಮ್ಮತಿಯಿಲ್ಲದೇ ವಿದೇಶಗಳೊಡನೆ ವಿವಿಧ ಒಪ್ಪಂದಗಳನ್ನು ಅರಸ ಮಾಡಿಕೊಳ್ಳಬಹುದಾಗಿದೆ.

ಈ ಮೇಲೆ ವಿವರಿಸಲಾದ ವ್ಯಾಪಕ ಕಾರ್ಯಾಂಗೀಯ ಅಧಿಕಾರಗಳನ್ನು ತನ್ನ ಹೆಸರಿನಲ್ಲಿ ಅರಸನೇ ಚಲಾಯಿಸುತ್ತಾನೆ. ಆದರೆ, ಅರಸ ದೇಶದ ನಾಮ ಮಾತ್ರ ಮುಖ್ಯಸ್ಥನಾಗಿದ್ದು ಈ ಅಧಿಕಾರಗಳನ್ನು ಸ್ವತಂತ್ರವಾಗಿ ಚಲಾಯಿಸಲಾರ. ನೈಜ ಕಾರ್ಯಾಂಗವಾದ ಪ್ರಧಾನಿ ನಾಯಕತ್ವದ ಮಂತ್ರಿ ಮಂಡಲದ ಸಲಹೆಯ ಮೇರೆಗೆ ಮಾತ್ರ ಬ್ರಿಟನ್ನಿನ ಅರಸ ಮೇಲೆ ಚರ್ಚಿಸಲಾದ ಅಧಿಕಾರಗಳನ್ನು ಚಲಾಯಿಸುತ್ತಾನೆ. ಪರಿಣಾಮ ಅರಸರು ತಾವು ಕೈಗೊಂಡ ನೀತಿ, ನಿರ್ಧಾರ ಅಥವಾ ಕ್ರಮಗಳನ್ನು ಕುರಿತಂತೆ ಸಂಸತ್ತಿಗೆ ಉತ್ತರದಾಯಿ ತೋರಬೇಕಿಲ್ಲ. ಈ ಹಿನ್ನೆಲೆಯಲ್ಲಿ (ಬ್ರಿಟನ್ನಿನ ಅರಸ ಆಳುತ್ತಾನೆಯೇ ಹೊರತು ಆಡಳಿತ ನಡೆಸುವುದಿಲ್ಲ) ಎಂಬ ನಾಣ್ಣುಡಿ ಜಾರಿಯಲ್ಲಿದೆ.

**2. ಶಾಸನೀಯ ಅಧಿಕಾರ ಕಾರ್ಯಗಳು [Legislative Power and Fungctions]:**

ಬ್ರಿಟಿಷ್ ಅರಸು ಕೇವಲ ಕಾರ್ಯಾಂಗದ ಮುಖ್ಯಸ್ಥನಾಗಿರದೇ ಶಾಸಕಾಂಗವಾದ ಸಂಸತ್ತಿನ ಅವಿಭಾಜ್ಯ ಅಂಗವಾಗಿರುತ್ತಾನೆ. ಬ್ರಿಟನ್ನಿನಲ್ಲಿ ಅರಸ, ಶ್ರೀಮಂತರ ಸದನ ಮತ್ತು ಸಾಮಾನ್ಯರ ಸದನಗಳನ್ನು ಶಾಸಕಾಂಗವಾದ ಸಂಸತ್ತು ಒಳಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಅರಸ ಹಲವು ಶಾಸನೀಯ ಅಧಿಕಾರಗಳನ್ನು ಸಹಜವಾಗಿ ಪಡೆದಿದ್ದಾನೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

1. ಬ್ರಿಟನ್ ಸಂಸತ್ತಿನ ಅಧಿವೇಶನವನ್ನು ಕರೆಯುವ ಹಾಗೂ ಮುಂದೂಡುವ ಅಧಿಕಾರವು ಅರಸನಿಗೆ ಸೇರಿದೆ.

2. ಬ್ರಿಟಿಷ್ ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಅರಸ ಭಾಷಣ ಮಾಡುವ ಅಧಿಕಾರ ಪಡೆದಿದ್ದಾನೆ.

3. ಬ್ರಿಟಿಷ್ ಸಂಸತ್ತು ಅಂಗೀಕರಿಸುವ ಶಾಸನಗಳಿಗೆ ಅಂಕಿತ ನೀಡುವ ಅಧಿಕಾರವನ್ನು

ಅರಸ ಹೊಂದಿದ್ದಾನೆ. ಆಸಕ್ತಿದಾಯಕ ಅಂಶವೇನೆಂದರೆ ಅಮೇರಿಕಾದ ಅಧ್ಯಕ್ಷನಂತೆ ಸಂಸತ್ತು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದನ್ನು ಬ್ರಿಟನ್ನಿನ ಅರಸ ನಿರಾಕರಿಸುವ ಅಧಿಕಾರವನ್ನು ಪಡೆದಿಲ್ಲ. ಉದಾ: 1936 ರಲ್ಲಿ ದೊರೆ ಎಂಟನೇ ಎಡ್ವರ್ಡ್ ತನ್ನನ್ನು ಅಧಿಕಾರದಿಂದ ಕೆಳಗಿಳಿಸುವ ಕಾಯಿದೆಗೆ ತಾನೇ ಅಂಕಿತ ನೀಡಿದ್ದುದು.

ಈ. ಬ್ರಿಟಿಷ್ ಸಂಸತ್ತಿನ ಮೇಲ್ಮನೆಯಾದ ಶ್ರೀಮಂತರ ಸಭೆಗೆ ಪೀರರನ್ನು ಅರಸ ನೇಮಿಸುತ್ತಾನೆ.

ಉ. ಪ್ರಧಾನಿಯ ಸಲಹೆಯಂತೆ ಬ್ರಿಟಿಷ್ ಅರಸನು ಸಂಸತ್ತಿನ ಕೆಳಮನೆಯಾದ ಸಾಮಾನ್ಯರ ಸಭೆಯನ್ನು ವಿಸರ್ಜನೆಗೊಳಿಸುವ ಅಧಿಕಾರವನ್ನು ಹೊಂದಿದ್ದಾನೆ.

**3. ನ್ಯಾಯಾಂಗೀಯ ಅಧಿಕಾರ ಕಾರ್ಯಗಳು [Judicial Power and Fungctions]:** ಬ್ರಿಟನ್ನಿನಲ್ಲಿ ಅರಸನನ್ನು ನ್ಯಾಯದ ಕಾರಂಜಿ (Fountain of Justice) ಎಂಬುದಾಗಿ ಪರಿಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿವಿಧ ನ್ಯಾಯಿಕ ಅಧಿಕಾರಗಳನ್ನು ಆತ ನಿರ್ವಹಿಸುವುದು ಸ್ಪಷ್ಟವಾಗುತ್ತದೆ. ಅವುಗಳಲ್ಲಿ ಪ್ರಮುಖವಾದುವುಗಳೆಂದರೆ

ಅ. ಅರಸರು ಸ್ಥಳೀಯ ಮಟ್ಟದ ಶಾಂತಿಯ ನ್ಯಾಯಾಧೀಶರು (Justices of Peace) ಸೇರಿದಂತೆ ವಿವಿಧ ನ್ಯಾಯಾಧೀಶರನ್ನು ನೇಮಿಸುತ್ತಾರೆ.

ಆ. ಬ್ರಿಟನ್ನಿನಲ್ಲಿ ಎಲ್ಲ ಬಗೆಯ ನ್ಯಾಯದಾನವು ಅರಸರ ಹೆಸರಿನಲ್ಲಿಯೇ ನೀಡಲ್ಪಡುತ್ತದೆ.

ಇ. ಪ್ರೀವಿ ಪರಿಷತ್ತಿನ ನ್ಯಾಯಿಕ ಸಮಿತಿಯ ಮುಂದೆ ಬರುವ ಮೊಕದ್ದಮೆಗಳನ್ನು ಅರಸನ ಹೆಸರಿನಲ್ಲಿಯೇ ಬಗೆ ಹರಿಸಲಾಗುತ್ತದೆ.

ಈ. ನಾನಾ ಮೊಕದ್ದಮೆಗಳಲ್ಲಿ ಶಿಕ್ಷೆಗೊಳಗಾದ ವ್ಯಕ್ತಿಗಳಿಗೆ ಕ್ಷಮಾದಾನ ನೀಡುವ ಅಧಿಕಾರವು ಅರಸನಿಗಿರುತ್ತದೆ.

ಗಮನಾರ್ಹ ಅಂಶವೇನೆಂದರೆ ಅರಸನು ನಿರ್ವಹಿಸುವ ಮೇಲೆ ಪ್ರಸ್ತಾಪಿತ ನ್ಯಾಯಿಕ ಅಧಿಕಾರಗಳೆಲ್ಲ ಮಂತ್ರಿ ಮಂಡಲದ ಸಲಹೆಯನ್ನು ಆಧರಿಸಿರುತ್ತವೆ. ಹೀಗಾಗಿಯೇ ಮನ್ರೊ 'ಮಂತ್ರಿ ಮಂಡಳದ ಸಲಹೆಯಂತೆ ಅರಸನು ಚಲಾಯಿಸುವ ಅಧಿಕಾರಗಳನ್ನು ಕಾರ್ಯಾಂಗೀಯ ಅಧಿಕಾರಗಳು' ಎಂಬುದಾಗಿ ಅಭಿಪ್ರಾಯಪಟ್ಟಿರುವನು.

**4. ಚರ್ಚಿಗೆ ಸಂಬಂಧಿಸಿದ ಅಧಿಕಾರಗಳು [Powers Related to Church]:**

ಬ್ರಿಟನ್ನಿನಲ್ಲಿ ಅರಸನನ್ನು ಚರ್ಚಿನ ಮುಖ್ಯಸ್ಥ ಎಂದು ಪರಿಗಣಿಸಲಾಗುತ್ತದೆ. ಹೀಗಾಗಿ ಅರಸನು ಆರ್ಚ್ ಬಿಷಪ್, ಬಿಷಪ್ ಮತ್ತು ಇತರ ಧಾರ್ಮಿಕ ಹುದ್ದೆಗಳಿಗೆ ಅರ್ಹರನ್ನು ನೇಮಿಸುವ ಅಧಿಕಾರ ಪಡೆದಿದ್ದಾನೆ. ಆಸಕ್ತಿದಾಯಕ ಅಂಶವೇನೆಂದರೆ ಚರ್ಚಿಗೆ ಸಂಬಂಧಿಸಿರುವ ಅಧಿಕಾರಗಳನ್ನು ಸಹ ಅರಸರು ಸ್ವತಂತ್ರವಾಗಿ ಚಲಾಯಿಸದೇ ಮಂತ್ರಿ ಮಂಡಲದ ಸಲಹೆಯಂತೆ ಚಲಾಯಿಸುತ್ತಾರೆ.



**5. ಬಿರುದುಗಳಿಗೆ ಸಂಬಂಧಿಸಿದ ಅಧಿಕಾರ [Power Related to Honours]:**

ಬ್ರಿಟನ್ನಿನಲ್ಲಿ ಬಿರುದುಗಳನ್ನು ಅರಸನ ಹೆಸರಿನಲ್ಲಿ ಅರಸನೇ ನೀಡುತ್ತಾನೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿ ದೇಶದ ಪ್ರಗತಿಗೆ ಕಾಣಿಕೆ ನೀಡಿದವರನ್ನು ಗೌರವಿಸುವುದು ಈ ಬಿರುದುಗಳ ನೀಡಿಕೆಯ ಉದ್ದೇಶ. ಪೀರತ್ವ ಮತ್ತು ನೈಟ್‌ಗಳ ನೀಡಿಕೆಗೆ ಪ್ರತಿ ವರ್ಷ ಪಟ್ಟಿಯನ್ನು ಪ್ರಧಾನಿ ತನ್ನ ಮಂತ್ರಿ ಮಂಡಲದೊಡನೆ ಸಮಾಲೋಚಿಸಿ ತಯಾರಿಸುತ್ತಾನೆ. ಮುಂದುವರಿದು ಹೊಸ ವರ್ಷದಂದು ಸೈನಿಕ ಬಿರುದುಗಳನ್ನೂ ನೀಡಲಾಗುತ್ತದೆ. ಹೀಗೆ ತಯಾರಾದ ಬಿರುದುಗಳನ್ನು ಪಡೆಯುವವರ ಪಟ್ಟಿಯನ್ನು ಅರಸನಿಗೆ ಸಲ್ಲಿಸಲಾಗುತ್ತದೆ. ಅರಸ ಸೂಚಿಸಿದ ಕೆಲವು ಮಾರ್ಪಾಟುಗಳನ್ನು ಈ ವೇಳೆ ಪ್ರಧಾನಿ ಮಾಡಿಕೊಳ್ಳಬಹುದಾಗಿದೆ. ಹೀಗೆ ಬಿರುದುಗಳ ನೀಡಿಕೆಯ ವಿಚಾರದಲ್ಲಿ ಅಲ್ಪ ಪ್ರಭಾವವನ್ನು ಅರಸರು ಇಂದಿಗೂ ಉಳಿಸಿಕೊಂಡಿರುವುದು ಗಮನಾರ್ಹ ಸಂಗತಿ.

ಒಟ್ಟಾರೆ ಅರಸೊತ್ತಿಗೆಗೆ ಸೇರಿರುವ ವ್ಯಾಪಕ ಅಧಿಕಾರಗಳನ್ನು ಅದರ ಪ್ರತಿನಿಧಿಯಾಗಿ ಅರಸ ಬ್ರಿಟನ್ನಿನಲ್ಲಿ ತಾತ್ವಿಕವಾಗಿ ಚಲಾಯಿಸುತ್ತಾನೆ. ಈ ಹಿನ್ನೆಲೆಯಲ್ಲಿಯೇ ಬ್ರಿಟಿಷ್ ಅರಸ ಆಳುತ್ತಾನೆಯೇ ಹೊರತು ಆಡಳಿತ ನಡೆಸುವುದಿಲ್ಲ ಎಂಬೋಕ್ತಿ ಚಾಲನೆಯಲ್ಲಿದೆ. ಮುಂದುವರಿದು ಅರಸ ಚಲಾಯಿಸುವ ಅಧಿಕಾರಗಳ ಹಿಂದೆ ಮಂತ್ರಿ ಮಂಡಳದ ಸಲಹೆ ಕೂಡು ಬರುವುದರಿಂದ ಸೈದ್ಧಾಂತಿಕವಾಗಿ ಮಾತ್ರ ಅರಸ ಅಧಿಕಾರ ಚಲಾಯಿಸುತ್ತಾನೆ. ಹೀಗಾಗಿಯೇ ಬ್ರಿಟಿಷ್ ಅರಸ ತಪ್ಪನ್ನು ಎಂದಿಗೂ ಎಸಗಲಾರ ಎಂದು ನಂಬಲಾಗುತ್ತದೆ. ಈ ನಡುವೆ ಪ್ರಖ್ಯಾತ ಇಂಗ್ಲಿಷ್ ಬರಹಗಾರ ಬೇಗ್ ಹಾಟ್ ಬ್ರಿಟಿಷ್ ಅರಸ ಸಾರ್ವಭೌಮನಾಗಿ ಇಂದಿಗೂ ಕ್ಯಾಬಿನೆಟನ್ನು ನಿರ್ದೇಶಿಸುವ, ಪ್ರೋತ್ಸಾಹಿಸುವ ಹಾಗೂ ಎಚ್ಚರಿಸುವ ಅಧಿಕಾರಗಳನ್ನು ಹೊಂದಿರುವ ಎಂಬುದಾಗಿ ವಿವರಿಸಿರುವರು.

**[B.] ಬ್ರಿಟಿಷ್ ಪ್ರಧಾನ ಮಂತ್ರಿಯ ಅಧಿಕಾರ ಕಾರ್ಯಗಳು [Power and Fungctions of British Prime Minister]:**

18 ನೇ ಶತಮಾನದ ಪೂರ್ವಾರ್ಧದಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿಯ ಹುದ್ದೆ ಆಕಸ್ಮಿಕವಾಗಿ ಸೃಷ್ಟಿಸಲ್ಪಟ್ಟಿತು. ಕಾನೂನಾತ್ಮಕವಾಗಿ ಪ್ರಧಾನ ಮಂತ್ರಿಯ ಹುದ್ದೆಗೆ ಬ್ರಿಟನ್ನಿನಲ್ಲಿ ಬೇಗನೇ ಮಾನ್ಯತೆ ದೊರೆಯಲಿಲ್ಲ. 1878 ರಲ್ಲಿ ಜರುಗಿದ ಬರ್ಲಿನ್ ಒಪ್ಪಂದದ ದಾಖಲೆಗಳಲ್ಲಿ ಅಂದಿನ ಬ್ರಿಟಿಷ್ ಪ್ರಧಾನಿ ಲಾರ್ಡ್ ಬೀಕನ್ಸ್‌ಫೀಲ್ಡ್ ಭಾಗಿಯಾದುದನ್ನು ವಿವರಿಸುವಾಗ ಪ್ರಧಾನ ಮಂತ್ರಿ ಎಂಬ ಪದವನ್ನು ಬಳಸಲಾಗಿತ್ತು. ನಂತರ 1906 ರ ಬ್ರಿಟನ್ ಕಾಯಿದೆಯೊಂದು ಪ್ರಧಾನ ಮಂತ್ರಿಯು ಬ್ರಿಟನ್ನಿನ ನಾಲ್ಕನೇ ಶ್ರೇಣಿಯ ಪ್ರಜೆ ಎಂದು ವಿವರಿಸುವ ಮೂಲಕ ಪ್ರಧಾನಿ ಹುದ್ದೆಯನ್ನು ಕಾನೂನಾತ್ಮಕವಾಗಿ ಗುರುತಿಸಿತು. 1917 ರ ಚೆಕರ್ಸ್ ಎಸ್ಟೇಟ್ ಆಕ್ಟ್ ಪ್ರಧಾನ ಮಂತ್ರಿಯ ಹುದ್ದೆಯನ್ನು ಒಳಗೊಂಡಿತ್ತಾದರೂ ಅಂತಿಮವಾಗಿ ಪ್ರಧಾನಿಯ ಹುದ್ದೆಗೆ ಮಾನ್ಯತೆಯನ್ನು 1937 ರ ದಿ ಮಿನಿಸ್ಟರ್ಸ್ ಆಫ್ ದಿ

ಕ್ರೌನ್ ಆಕ್ಟ್ ಒದಗಿಸಿತು. ಹೀಗೆ ಆಕಸ್ಮಿಕವಾಗಿ ಉಗಮಗೊಂಡ ಪ್ರಧಾನ ಮಂತ್ರಿಯ ಹುದ್ದೆಯು ಪ್ರಸ್ತುತ ಬ್ರಿಟಿಷ್ ರಾಜಕೀಯ ವ್ಯವಸ್ಥೆಯಲ್ಲಿ ಮಾತ್ರವಲ್ಲದೇ ಜಗತ್ತಿನ ಇತರ ಸಂಸದೀಯ ಮಾದರಿ ಸರ್ಕಾರವಿರುವ ದೇಶಗಳಲ್ಲಿಯೂ ಪ್ರಭಾವ ಬೀರಿದೆ.

ಬ್ರಿಟಿಷ್ ಪ್ರಧಾನ ಮಂತ್ರಿಯನ್ನು ಬ್ರಿಟನ್ನಿನ ರಾಜ ಅಥವಾ ರಾಣಿ ನೇಮಿಸುತ್ತಾರೆ. ಸಂಸತ್ತಿನ ಕೆಳ ಮನೆಯಾದ ಸಾಮಾನ್ಯರ ಸಭೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕನನ್ನು ರಾಜ ಅಥವಾ ರಾಣಿ ಸಾಮಾನ್ಯವಾಗಿ ಪ್ರಧಾನ ಮಂತ್ರಿ ಸ್ಥಾನಕ್ಕೆ ನೇಮಿಸುವರು. ಒಂದೇ ರಾಜಕೀಯ ಪಕ್ಷ ಸಾಮಾನ್ಯರ ಸಭೆಯಲ್ಲಿ ಬಹುಮತ ಪಡೆಯದಿದ್ದಾಗ ಇತರ ಪಕ್ಷಗಳ ಬೆಂಬಲದೊಡನೆ ಬಹುಮತ ಸಾಬೀತು ಪಡಿಸಬಲ್ಲ ಸಾಮರ್ಥ್ಯವಿರುವ ಹೆಚ್ಚು ಸ್ಥಾನ ಪಡೆದ ಪಕ್ಷದ ನಾಯಕನನ್ನು ಅರಸರು ಪ್ರಧಾನಿಯನ್ನಾಗಿ ನೇಮಿಸುವರು. ಬ್ರಿಟಿಷ್ ಪ್ರಧಾನ ಮಂತ್ರಿಯ ಅಧಿಕಾರವಧಿಯು ನಿರ್ದಿಷ್ಟವಾಗಿರುವುದಿಲ್ಲ. ಸಾಮಾನ್ಯರ ಸಭೆಯಲ್ಲಿ ವಿಶ್ವಾಸ ಅಂದರೆ ಬಹುಮತ ಹೊಂದಿರುವವರೆಗೆ ಪ್ರಧಾನ ಮಂತ್ರಿ ಅಧಿಕಾರದಲ್ಲಿರುತ್ತಾರೆ. ಸಾಮಾನ್ಯರ ಸಭೆಯ ವಿಶ್ವಾಸ ಕಳೆದುಕೊಂಡ ಪ್ರಧಾನ ಮಂತ್ರಿ ತನ್ನ ಅಧಿಕಾರವನ್ನು ಕಳೆದುಕೊಳ್ಳುತ್ತಾನೆ. ಪ್ರಧಾನಿಯು ಮಂತ್ರಿಮಂಡಲದ'ಸಮಾನಿಗರಲ್ಲಿ ಮೊದಲಿಗ' ಎಂದು ಕರೆಯಲ್ಪಡುತ್ತಾನೆ. ಈ ಕೆಳಗೆ ಪ್ರಧಾನ ಮಂತ್ರಿ ಹೊಂದಿರುವ ಪ್ರಮುಖ ಅಧಿಕಾರ ಕಾರ್ಯಗಳನ್ನು ಸಂಕ್ಷೇಪ್ತವಾಗಿ ಚರ್ಚಿಸಲಾಗಿದೆ.

**1. ಮಂತ್ರಿಮಂಡಲದ ರಚನೆ:** ಪ್ರಧಾನ ಮಂತ್ರಿಯಾಗಿ ನೇಮಕಗೊಳ್ಳುವ ವ್ಯಕ್ತಿಯ ಪ್ರಾಥಮಿಕ ಕಾರ್ಯವೇನೆಂದರೆ ತನ್ನ ನಾಯಕತ್ವದ ಮಂತ್ರಿಮಂಡಲ ರಚಿಸುವುದಾಗಿದೆ. ಬ್ರಿಟಿಷ್ ಅರಸ ಅಥವಾ ರಾಣಿಯಿಂದ ಪ್ರಧಾನ ಮಂತ್ರಿಯಾಗಲು ಆಹ್ವಾನ ದೊರೆತೊಡನೆ ಅಥವಾ ಪ್ರಧಾನಿಯಾಗಿ ನೇಮಕಗೊಂಡ ಬಳಿಕ ಪ್ರಧಾನ ಮಂತ್ರಿಯು ಮಂತ್ರಿಮಂಡಲದಲ್ಲಿರಬೇಕಾದವರ ಹೆಸರುಗಳ ಪಟ್ಟಿಯನ್ನು ತಯಾರಿಸಿ ಪ್ರಮಾಣ ವಚನ ನೀಡಲು ಅರಸರಿಗೆ ಸಲ್ಲಿಸುತ್ತಾನೆ. ಈ ವೇಳೆಯಲ್ಲಿ, ಅನುಭವ ಹೊಂದಿದ, ಪಕ್ಷ ಕಟ್ಟಲು ಶ್ರಮಿಸಿದ, ದಕ್ಷತೆಯುಳ್ಳ ವ್ಯಕ್ತಿಗಳನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳಲು ಪ್ರಧಾನಿ ಬಯಸುತ್ತಾನೆ. ಜೊತೆಗೆ ವಿವಿಧ ಪ್ರದೇಶ ಮತ್ತು ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ದೊರೆಯುವಂತೆ ಗಮನ ಹರಿಸುತ್ತಾನೆ. ಪ್ರಧಾನಿ ನೀಡುವ ಪಟ್ಟಿಯನುಸಾರವೇ ಮಂತ್ರಿಮಂಡಲಕ್ಕೆ ವ್ಯಕ್ತಿಗಳನ್ನು ಅರಸ ನೇಮಕ ಮಾಡುವುದರಿಂದ ಪ್ರಧಾನಿಗೆ ಮಂತ್ರಿಮಂಡಲದ ರಚನೆಯಲ್ಲಿ ಪರಮಾಧಿಕಾರವಿರುವುದನ್ನು ಗುರುತಿಸಬಹುದು. ಪ್ರಧಾನಿ ತನ್ನ ಮಂತ್ರಿಮಂಡಲದ ಗಾತ್ರವನ್ನು ಅಂದರೆ ಎಷ್ಟು ಜನ ಮಂತ್ರಿಗಳು ಮಂತ್ರಿಮಂಡಲದಲ್ಲಿರಬೇಕೆಂಬುದನ್ನು ನಿರ್ಧರಿಸುವ ಪರಮಾಧಿಕಾರ ಹೊಂದಿರುತ್ತಾನೆ. ಆದ್ದರಿಂದಲೇ ಲಾಸ್ಕಿ ಮಂತ್ರಿಮಂಡಲದ ರಚನೆ, ಜೀವಂತಿಕೆ ಅಥವಾ ನಾಶಕ್ಕೆ ಪ್ರಧಾನಿಯೇ ಕೇಂದ್ರ ಬಿಂದು ಎಂದಿರುವರು.



**2. ಖಾತೆಗಳ ಹಂಚಿಕೆ:** ತನ್ನ ಮಂತ್ರಿಮಂಡಲವನ್ನು ರಚಿಸಿದ ನಂತರದಲ್ಲಿ ಪ್ರಧಾನ ಮಂತ್ರಿ ನಿರ್ವಹಿಸುವ ಬಹು ಮುಖ್ಯ ಕಾರ್ಯವೇ ಖಾತೆಗಳ ಹಂಚಿಕೆ. ಪ್ರಧಾನಿಯು ಮಂತ್ರಿಗಳಿಗೆ ಖಾತೆ ಹಂಚಲು ಸ್ವತಂತ್ರನಾಗಿರುತ್ತಾನೆ. ಆಯಾ ಮಂತ್ರಿಯ ವಿಶ್ವಾಸಾರ್ಹತೆ, ಸಾಮರ್ಥ್ಯ, ಶಿಕ್ಷಣ, ಅನುಭವ, ಚಾರಿತ್ರ್ಯ ಆಧರಿಸಿ ಖಾತೆಗಳನ್ನು ವಿತರಿಸುತ್ತಾನೆ. ಗೃಹ, ರಕ್ಷಣೆ, ಹಣಕಾಸು, ವಿದೇಶಾಂಗ ಮುಂತಾದ ಪ್ರಮುಖ ಖಾತೆಗಳ ಆಕಾಂಕ್ಷಿಗಳ ಅಸಮಧಾನವನ್ನು ಹೋಗಲಾಡಿಸುವ ಜವಾಬ್ದಾರಿ ಕೂಡ ಖಾತೆಗಳ ಹಂಚಿಕೆಯ ವೇಳೆ ಪ್ರಧಾನಿಯದಾಗಿರುತ್ತದೆ. ಹಿರಿಯರಿಗೆ ಪ್ರಮುಖ ಖಾತೆಯನ್ನು ಹಾಗೂ ಹೊಸಬರಿಗೆ ಮಹತ್ವವಲ್ಲದ ಖಾತೆಯನ್ನು ಸಾಮಾನ್ಯವಾಗಿ ಪ್ರಧಾನಿ ವಿತರಿಸುತ್ತಾನೆ. ಕೆಲವೊಮ್ಮೆ ಪ್ರಭಾವಿ ಮಂತ್ರಿಗಳು ನಿರ್ದಿಷ್ಟ ಖಾತೆಯನ್ನೇ ನೀಡಲು ಒತ್ತಾಯಿಸಿದರೆ ಪ್ರಧಾನಿ ಅದನ್ನು ನಿರಾಕರಿಸಬಹುದಾಗಿದೆ. ಉದಾ: 1929 ರಲ್ಲಿ ಪ್ರಧಾನಿ ಮ್ಯಾಕ್ ಡೊನಾಲ್ಡ್ ಆರ್ಥರ್ ಹ್ಯಾಂಡರ್ಸನ್‌ಗೆ ವಿದೇಶಾಂಗ ಇಲಾಖೆಯನ್ನು ನೀಡಲು ನಿರಾಕರಿಸಿದುದು.

**3. ಮಂತ್ರಿಮಂಡಲದ ಪುನರ್ರಚನೆ:** ಪ್ರಧಾನಿಯೇ ಮಂತ್ರಿಮಂಡಲದ ಸೃಷ್ಟಿಕರ್ತ. ಹೀಗಾಗಿ ಆತನಿಗೆ ಮಂತ್ರಿಮಂಡಲವನ್ನು ಪುನರ್‌ರಚಿಸುವ ವಿವೇಚನಾಧಿಕಾರ ನೀಡಲಾಗಿದೆ. ಪ್ರಧಾನ ಮಂತ್ರಿಯು ಮಂತ್ರಿಮಂಡಲದಲ್ಲಿರುವ ಮಂತ್ರಿಗಳ ಖಾತೆಗಳನ್ನು ಬದಲಿಸುವ ಅಧಿಕಾರವನ್ನು ಪಡೆದಿರುತ್ತಾನೆ. ಮುಂದುವರಿದು ಆಡಳಿತದಲ್ಲಿ ಹೊಸತನ ತರಲು ಮತ್ತು ಪಕ್ಷದ ಇತರರಿಗೆ ಅವಕಾಶ ಕಲ್ಪಿಸಲು ಪ್ರಧಾನಿಯು ತನ್ನ ಮಂತ್ರಿಮಂಡಲದ ಮಂತ್ರಿಗಳನ್ನೇ ಬದಲಾಯಿಸುವ ನಿರ್ಧಾರ ಕೈಗೊಳ್ಳಬಹುದಾಗಿದೆ. ಜೊತೆಗೆ ಅಸಮರ್ಥತೆ, ಭ್ರಷ್ಟಾಚಾರ ಆರೋಪ, ಅವಿಧೆಯತೆ ಮತ್ತಿತರ ಕಾರಣಗಳಿಗೆ ಮಂತ್ರಿಗಳಿಂದ ರಾಜೀನಾಮೆ ಪಡೆದು ಮಂತ್ರಿ ಸ್ಥಾನವನ್ನು ಬೇರೊಬ್ಬರಿಗೆ ನೀಡಬಹುದಾಗಿದೆ. ಇದಲ್ಲದೇ ರಾಜೀನಾಮೆ ನೀಡಲು ಸಮ್ಮತಿಸಧ ಮಂತ್ರಿಯನ್ನು ವಜಾಗೊಳಿಸುವಂತೆ ಅರಸರಿಗೆ ಸಲಹೆ ನೀಡುವ ಅವಕಾಶವನ್ನು ಪ್ರಧಾನಿ ಹೊಂದಿರುವ. ಉದಾ: ಜುಲೈ 1962 ರಲ್ಲಿ ಮ್ಯಾಕ್‌ಮಿಲ್ಲರ್ ತನ್ನ 20 ಮಂತ್ರಿಗಳ ಪೈಕಿ 7 ಮಂತ್ರಿಗಳನ್ನು ಮಂತ್ರಿಮಂಡಳದಿಂದ ಕೈಬಿಡಲು ಅಂದರೆ ಪದಚ್ಯುತಗೊಳಿಸಲು ಸಲಹೆ ನೀಡಿದ್ದ.

**4. ಸಚಿವ ಸಂಪುಟದ ಮುಖ್ಯಸ್ಥ:** ಮಂತ್ರಿಮಂಡಲದ ಒಡಲೊಳಗಿನ ಸಂಪುಟ ದರ್ಜೆಯ ಮಂತ್ರಿಗಳ ಸಮೂಹವೇ ಸಚಿವ ಸಂಪುಟ. ಆಗಾಗ ಅಂದರೆ ಅಗತ್ಯವೆನಿಸಿದಾಗ ಸಚಿವ ಸಂಪುಟದ ಸಭೆಗಳು ಪ್ರಧಾನ ಮಂತ್ರಿಯ ಅಧ್ಯಕ್ಷತೆಯಲ್ಲಿ ನಡೆಯುತ್ತವೆ. ಸಚಿವ ಸಂಪುಟದ ಸಭೆಯನ್ನು ಕರೆಯುವ ಮತ್ತು ಸಭೆಯಲ್ಲಿ ಚರ್ಚಿಸಲಾಗುವ ವಿಷಯಗಳನ್ನು ಅಂತಿಮಗೊಳಿಸುವ ಅಧಿಕಾರವನ್ನು ಪ್ರಧಾನ ಮಂತ್ರಿ ಪಡೆದಿರುತ್ತಾರೆ. ಜೊತೆಗೆ ಸಭೆಯಲ್ಲಿ ಸಚಿವರ ಸಾಧನೆಗಳನ್ನು ಪ್ರೋತ್ಸಾಹಿಸುವ ಅಥವಾ ದೋಷಗಳನ್ನು ಎಚ್ಚರಿಸುವ ಅಧಿಕಾರ ಪ್ರಧಾನಿಯವರಿಗೆ ಸೇರಿರುತ್ತದೆ. ಇದರೊಡನೆ

ಸಚಿವ ಸಂಪುಟದ ವಿವಿಧ ಶಾಶ್ವತ ಹಾಗೂ ತಾತ್ಕಾಲಿಕ ಸಮಿತಿಗಳ ಮುಖ್ಯಸ್ಥನಾಗಿಯೂ ಕಾರ್ಯ ನಿರ್ವಹಿಸುವ ಅಧಿಕಾರವನ್ನು ಪ್ರಧಾನಿ ಪಡೆದಿರುತ್ತಾರೆ.

**5. ಸರ್ಕಾರದ ನೀತಿಗಳ ಸಮನ್ವಯದ ಖುವಾರಿ:** ಕೃಷಿ, ಕೈಗಾರಿಕೆ, ಅರಣ್ಯ ಮುಂತಾದ ವಿವಿಧ ಇಲಾಖೆಗಳು ತಮ್ಮದೇ ನೀತಿಗಳನ್ನು ರೂಪಿಸಿ ಜಾರಿಗೊಳಿಸಲು ಮುಂದಾಗುತ್ತವೆ. ಈ ವೇಳೆಯಲ್ಲಿ ಬೇರೆ ಬೇರೆ ಇಲಾಖೆಗಳ ನೀತಿ ನಿರೂಪಣೆ ಅಥವಾ ಕಾರ್ಯಕ್ರಮಗಳ ನಡುವೆ ವಿರೋಧಾಭಾಸ ಸಹಜವಾಗಿರುತ್ತದೆ. ನೀತಿ ನಿರೂಪಣೆಯಲ್ಲಿ ವಿವಿಧ ಇಲಾಖೆಗಳ ಮಧ್ಯೆ ಘರ್ಷಣೆ ಕಂಡು ಬಂದರೆ ಪ್ರಧಾನಿ ಅವುಗಳ ನಡುವೆ ಸಮನ್ವಯ ತರಲು ಪ್ರಯತ್ನಿಸುತ್ತಾರೆ. ಜೊತೆಗೆ ಹಣಕಾಸು, ರಕ್ಷಣೆ, ವಿದೇಶಾಂಗ, ರೈಲ್ವೆಯಂತಹ ಪ್ರಮುಖ ಖಾತೆಗಳ ಮಂತ್ರಿಗಳೊಡನೆ ಸದಾ ಸಂಪರ್ಕದಲ್ಲಿದ್ದು ಹೊಂದಾಣಿಕೆ ಏರ್ಪಡಿಸುವರು. ಯಾವುದೇ ಇಲಾಖೆಯ ಮಾಹಿತಿಯನ್ನು ಪಡೆದು ಪರಿಶೀಲಿಸುವ ಅಧಿಕಾರ ಪ್ರಧಾನಿಗಿದ್ದು ಹೊಂದಾಣಿಕೆ ತರಲು ನೆರವಾಗಿದೆ. ಒಟ್ಟಾರೆ ಪ್ರಧಾನಿಯು ಆಡಳಿತದ ವಿವಿಧ ನೀತಿಗಳ ಸಮನ್ವಯದೊಂದಿಗೆ ಯೋಜನೆ ಜಾರಿಗೊಳಿಸಲು ಪ್ರಯತ್ನಿಸುವ ಕಾರ್ಯದಲ್ಲಿ ಸದಾ ನಿರತರಾಗಿರುತ್ತಾರೆ. ಆದ್ದರಿಂದಲೇ ಮೊರಿಸನ್ ಎಂಬ ಚಿಂತಕ ಪ್ರಧಾನ ಮಂತ್ರಿಯನ್ನು 'ಸಮನ್ವಯ ಮಂತ್ರಿ' ಎಂದು ಬಣ್ಣಿಸಿದ್ದಾರೆ.

**6. ಪ್ರಧಾನ ಸಲಹೆಗಾರ:** ಬ್ರಿಟನ್ನಿನ ಸಂಸದೀಯ ಮಾದರಿ ಸರ್ಕಾರದಲ್ಲಿ ನಾಮ ಮಾತ್ರ ಮುಖ್ಯಸ್ಥನಾದ ಅರಸ ನೈಜ ಕಾರ್ಯಾಂಗದ ಮುಖ್ಯಸ್ಥನಾದ ಪ್ರಧಾನಿಯ ಸಲಹೆಯಂತೆ ನಡೆದುಕೊಳ್ಳಬೇಕಾಗುತ್ತದೆ. ಅರಸನು ಯಾವ ವ್ಯಕ್ತಿಗಳಿಗೆ ವಿವಿಧ ಬಿರುದುಗಳನ್ನು ವಿತರಿಸಬೇಕೆಂಬ ಸಲಹೆಯನ್ನು ಪ್ರಧಾನಿ ನೀಡುತ್ತಾನೆ. ಜೊತೆಗೆ ಪ್ರಧಾನ ನೇಮಕಾತಿಗಳ ಹಿಂದೆ ಪ್ರಧಾನಿಯ ಸಲಹೆ ಕಾಣಬಹುದು. ಸಂಸತ್ತು ಅಧಿವೇಶನದಲ್ಲಿಲ್ಲದಿದ್ದಾಗ ಸುಗ್ರೀವಾಜ್ಞೆ ಹೊರಡಿಸಲು ಹಾಗೂ ಯುದ್ಧ ಅಥವಾ ಶಾಂತಿ ಘೋಷಿಸಲು ಪ್ರಧಾನಿ ಅರಸನಿಗೆ ಸಲಹೆ ನೀಡಬಹುದಾಗಿದೆ. ಪ್ರಧಾನಿಯು ಅರಸರ ಅಧಿಕೃತ ನಿವಾಸವಾದ ಬಕಿಂಗಹ್ಯಾಮ್ ಅರಮನೆಗೆ ಭೇಟಿ ನೀಡಿ ತನ್ನ ಸಲಹೆಗಳನ್ನು ನೀಡುತ್ತಾನೆ. ಕಾರ್ಯದೊತ್ತಡದ ನಡುವೆ ಭೇಟಿಯಾಗಲು ಸಾಧ್ಯವಾಗದಿದ್ದರೆ ಪತ್ರಗಳ ಮೂಲಕ ಅರಸನಿಗೆ ಅಗತ್ಯ ಸಲಹೆಗಳನ್ನು ತಲುಪಿಸುತ್ತಾನೆ.

**7. ಅರಸ ಹಾಗೂ ಮಂತ್ರಿಮಂಡಲದ ನಡುವೆ ಸಂಪರ್ಕ ಸೇತುವೆ:** ಪ್ರಧಾನಿಯು ಅರಸ ಹಾಗೂ ಮಂತ್ರಿಮಂಡಲದ ಮಧ್ಯೆ ಸಂಪರ್ಕವನ್ನು ಏರ್ಪಡಿಸುವನು. ಮಂತ್ರಿಮಂಡಲವು ಕೈಗೊಂಡ ಆಡಳಿತಾತ್ಮಕ ನಿರ್ಧಾರ ಅಥವಾ ಉದ್ದೇಶಿತ ಶಾಸನಗಳನ್ನು ಅರಸರ ಗಮನಕ್ಕೆ ಪ್ರಧಾನಿ ತರುತ್ತಾನೆ. ಜೊತೆಗೆ ಅರಸನು ಬಯಸುವ ಆಡಳಿತಾತ್ಮಕ ಅಥವಾ ಶಾಸನೀಯ ಮಾಹಿತಿಯನ್ನು ಪ್ರಧಾನ ಮಂತ್ರಿ ಒದಗಿಸುವರು. ಮುಂದುವರಿದು ಅರಸರ ಸಂದೇಶಗಳನ್ನು ಅಗತ್ಯವಿದ್ದಲ್ಲಿ ಮಂತ್ರಿಮಂಡಲದ ಮುಂದಿಡುತ್ತಾನೆ. ಮಾತ್ರವಲ್ಲ,



ಯಾವುದೇ ಮಂತ್ರಿ ಅರಸರನ್ನು ಭೇಟಿಯಾಗಲು ಪ್ರಧಾನಿಯ ಸಮ್ಮತಿ ಅಗತ್ಯವಾಗಿರುತ್ತದೆ. ರಾಣಿ ವಿಕ್ಟೋರಿಯಾಳ ಕಾಲದಲ್ಲಿ ಮಾತ್ರ ಪ್ರಧಾನಿಯ ಪರವಾಗಿ ಮಂತ್ರಿಗಳ ಭೇಟಿಗೆ ಒಂದೆರಡು ಬಾರಿ ಅನುಮತಿ ನೀಡಲಾಗಿತ್ತು. ಪ್ರಸ್ತುತ ಬ್ರಿಟನ್ನಿನಲ್ಲಿ ಈ ಸಂಪ್ರದಾಯವನ್ನು ಕೈಬಿಡಲಾಗಿದ್ದು ಪ್ರಧಾನ ಮಂತ್ರಿಯೇ ಅರಸರು ಮತ್ತು ಮಂತ್ರಿ ಮಂಡಲದ ಮಧ್ಯೆ ಸಂಪರ್ಕ ಸೇತುವೆಯಾಗಿ ಕಾರ್ಯಾಚರಿಸುತ್ತಾರೆ.

**8. ರಾಷ್ಟ್ರಕ್ಕೆ ನಾಯಕತ್ವ:** ಪ್ರಧಾನಿಯು ಸಾಮಾನ್ಯರ ಸಭೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕನಾಗಿದ್ದು ರಾಷ್ಟ್ರದ ಬಹುಸಂಖ್ಯಾತ ಮತದಾರರ ನಾಯಕನೆನಿಸುವರು. ಪ್ರಧಾನ ಮಂತ್ರಿಯು ರಾಷ್ಟ್ರಕ್ಕೆ ಯುದ್ಧ ಹಾಗೂ ಶಾಂತಿ ಕಾಲದಲ್ಲಿ ನಾಯಕತ್ವ ನೀಡುವರು. ಅಲ್ಲದೇ ದೇಶದ ಪ್ರಜೆಗಳು ತಮ್ಮ ನೋವಿಗೆ ಸ್ಪಂದಿಸುವರೆಂದು ಪ್ರಧಾನಿಯತ್ತ ನೋಡುವರು. ರಾಷ್ಟ್ರದ ಸಾಧನೆ ಹಾಗೂ ವಿಫಲತೆ ಪ್ರಧಾನಿಗೆ ಸೇರುತ್ತವೆ. ಇದಲ್ಲದೇ ಪ್ರಧಾನಿಯು ಅಗತ್ಯವಿದ್ದಾಗ ರಾಷ್ಟ್ರವನ್ನು ಉದ್ದೇಶಿಸಿ ಭಾಷಣ ಮಾಡುವರು. ಪ್ರಧಾನಿಯ ನಿಲುವು ರಾಷ್ಟ್ರದ ನಿಲುವಾಗಿ ಅಂತರರಾಷ್ಟ್ರಿಯ ವೇದಿಕೆಗಳಲ್ಲಿ ಪರಿಗಣಿಸಲ್ಪಡುತ್ತದೆ. ಉದಾ: ಲಾಯ್ಡ್ ಜಾರ್ಜ್ ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಚೆಂಬರ್‌ಲಿನ್ ಮ್ಯುನಿಚ್ ಸಭೆಯಲ್ಲಿ ಚರ್ಚಿಲ್ ರೂಸ್ವೆಲ್ಟ್ ಮತ್ತು ಸ್ಟಾಲಿನ್‌ರನ್ನು ಭೇಟಿಯಾದಾಗ ಅವರು ರಾಷ್ಟ್ರವನ್ನು ಪ್ರತಿನಿಧಿಸಿದುದು: ಸಾರ್ವತ್ರಿಕ ಚುನಾವಣೆಗಳು ಪ್ರಸ್ತುತ ಪ್ರಧಾನಿ ಹಾಗೂ ಸಂಭವನೀಯ ಪ್ರಧಾನಿಯ ನಡುವಿನ ಹೋರಾಟವೆನಿಸಿದ್ದು ತನ್ನ ಪಕ್ಷದ ಉಮೇದುವಾರರನ್ನು ಗೆಲ್ಲಿಸುವಲ್ಲಿ ಪ್ರಧಾನಿ ರಾಷ್ಟ್ರ ಮಟ್ಟದಲ್ಲಿ ನಾಯಕತ್ವ ವಹಿಸಿಕೊಳ್ಳುತ್ತಾರೆ.

**9. ಅಂತರರಾಷ್ಟ್ರಿಯ ಸಂಬಂಧಗಳ ವಕ್ತಾರ:** ಪ್ರಧಾನಿಯು ಅಂತರರಾಷ್ಟ್ರಿಯ ಸಂಬಂಧಗಳಲ್ಲಿ ದೇಶವನ್ನು ಪ್ರತಿನಿಧಿಸುತ್ತಾರೆ. ಕಾಮನ್ವೆಲ್ತ್ ಆಫ್ ನೇಷನ್ಸ್, ವಿಶ್ವ ಸಂಸ್ಥೆ, ನ್ಯಾಟೊ ಮುಂತಾದ ಅಂತರರಾಷ್ಟ್ರಿಯ ಸಂಸ್ಥೆಗಳ ಸಭೆಗಳಲ್ಲಿ ಪ್ರಧಾನಿ ಖುದ್ದಾಗಿ ದೇಶದ ಪರವಾಗಿ ಭಾಗವಹಿಸುತ್ತಾರೆ. ಸುಮಧುರ ಸಂಬಂಧ ಬೆಸೆಯಲು ವಿದೇಶಗಳಿಗೆ ಭೇಟಿ ನೀಡುವರು. ವಿದೇಶಿ ನಾಯಕರು ದೇಶಕ್ಕೆ ಆಗಮಿಸಿದರೆ ಅವರನ್ನು ಆಹ್ವಾನಿಸುವವರು ಪ್ರಧಾನ ಮಂತ್ರಿ. ವಿದೇಶಗಳ ರಾಯಬಾರಿಗಳೊಡನೆ ಪ್ರಧಾನ ಮಂತ್ರಿ ನಿಕಟ ಸಂಪರ್ಕದಲ್ಲಿರುತ್ತಾರೆ. ಜೊತೆಗೆ ಅಂತರರಾಷ್ಟ್ರಿಯ ಒಪ್ಪಂದಗಳ ಕುರಿತು ನಿರ್ಧರಿಸುವ ವಿಚಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

ಬ್ರಿಟಿಷ್ ಪ್ರಧಾನ ಮಂತ್ರಿಯ ಮೇಲಿನ ಅಧಿಕಾರಗಳನ್ನು ಅವಲೋಕಿಸಿದರೆ ಆತನ ಹುದ್ದೆಯ ಪ್ರಾಮುಖ್ಯತೆಯು ಅರಿವಾಗುತ್ತದೆ. ಜೊತೆಗೆ ಪ್ರಧಾನ ಮಂತ್ರಿಯದು ಸಾಮಾನ್ಯರ ಸಭೆಯ ನಾಯಕನಾಗಿ, ಸರ್ಕಾರದ ಮುಖಂಡನಾಗಿ, ರಾಷ್ಟ್ರದ ಧುರೀಣನಾಗಿ, ಅರಸ ಮತ್ತು ಮಂತ್ರಿ ಮಂಡಲದ ಸಂಪರ್ಕ ಸೇತುವೆಯಾಗಿ ಸತತ ಕಾರ್ಯ ನಿರ್ವಹಿಸಬೇಕಾದ ಹುದ್ದೆ ಎಂಬಂಶ ಮನವರಿಕೆಯಾಗುತ್ತದೆ. ಚುನಾಯಿತ

ರಾಜ, ತಾರಾಗಣಗಳ ನಡುವಿನ ಚಂದ್ರ, ಸೌರವ್ಯೂಹದ ಸೂರ್ಯ ಎಂಬುದಾಗಿ ಬಣ್ಣಿಸಿರುವ ಪ್ರಧಾನ ಮಂತ್ರಿಯ ಸ್ಥಾನವನ್ನು ಆ ಹುದ್ದೆಯನ್ನು ಅಲಂಕರಿಸುವ ವ್ಯಕ್ತಿಯ ವ್ಯಕ್ತಿತ್ವವನ್ನು ಅವಲಂಬಿಸಿದೆ. ಉದಾ: ಇಂಗ್ಲೆಂಡಿನಲ್ಲಿ ಪಿಟ್ಸ್, ಬ್ಲ್ಯಾಕ್‌ಸ್ಟೋನ್, ಡಿಸ್ರೇಲಿ, ಲಾಯ್ಡ್ ಜಾರ್ಜ್, ಚರ್ಚಿಲ್ ಮುಂತಾದವರು ಪ್ರಧಾನಿ ಹುದ್ದೆಯ ಘನತೆಯನ್ನು ಹೆಚ್ಚಿಸಿದರೆ ಕೆಲವರು ಆ ಹುದ್ದೆಯ ಸ್ಥಾನವನ್ನು ಕ್ಷೀಣಗೊಳಿಸಿದ್ದರು. ಒಟ್ಟಾರೆ ಪ್ರಧಾನಿಯು ಲಾಸ್ಕಿ ಅಭಿಪ್ರಾಯಪಟ್ಟಂತೆ ಬ್ರಿಟನ್ನಿನ ಆಡಳಿತ ಯಂತ್ರದ ಕೇಂದ್ರಬಿಂದುವಾಗಿದ್ದು ಆತನ ಸ್ಥಾನ ಅವರ್ಣನೀಯ.

**[III.[ ಚೀನಾದ ಜನತಾ ಗಣರಾಜ್ಯದ ಕಾರ್ಯಾಂಗ [Executive of People's Republic of China]**

ಚೀನಾವು ಸೋವಿಯತ್ ಒಕ್ಕೂಟದಿಂದ ಪ್ರಭಾವಿತಗೊಂಡು ಸಮತಾವಾದದ ಯಶಸ್ಸಿಗೆ ಪೂರಕವಾದ ವಿಶಿಷ್ಟ ಮಾದರಿಯ ಸರ್ಕಾರವನ್ನು ಅಳವಡಿಸಿಕೊಂಡಿತು. ಜನತಾ ಗಣರಾಜ್ಯವೆಂದು ಘೋಷಿಸಿಕೊಂಡ ಚೀನಾದಲ್ಲಿ ಸಂಸದೀಯ ಮತ್ತು ಅಧ್ಯಕ್ಷೀಯ ಸರ್ಕಾರಗಳಿಗಿಂತ ಭಿನ್ನವಾದ ಪ್ರಜಾಸತ್ತಾತ್ಮಕ ಕೇಂದ್ರೀಕರಣವುಳ್ಳ ಸರ್ಕಾರದ ಮಾದರಿ ಅಸ್ತಿತ್ವದಲ್ಲಿದೆ. 1954 ರಲ್ಲಿ ಜಾರಿಗೊಂಡ ಸಂವಿಧಾನವು ಚೀನಾದ ಕಾರ್ಯಾಂಗದ ಮುಖ್ಯಸ್ಥನಾಗಿ ಅಧ್ಯಕ್ಷನ ಹುದ್ದೆಯನ್ನು ಸೃಷ್ಟಿಸಿತು. ಆದರೆ, ಚೀನಾದ ಅಧ್ಯಕ್ಷ ಅಮೇರಿಕಾದ ಅಧ್ಯಕ್ಷನಂತೆ ನೈಜ ಅಧಿಕಾರಗಳನ್ನು ಚಲಾಯಿಸಲು ಆಸ್ಪದ ಒದಗಿಸಿರಲಿಲ್ಲ. ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷನೇ ಚೀನಾದ ಜನತಾ ಗಣರಾಜ್ಯದ ಅಧ್ಯಕ್ಷನಾಗಲಿದ್ದು ಅದೊಂದು ಅಲಂಕಾರಿಕ ಹುದ್ದೆ ಎನಿಸಿತ್ತು. ಕೆಲ ವರ್ಷಗಳವರೆಗೆ ಮಾವೊತ್ಸೆ ತುಂಗ್ ಅಧ್ಯಕ್ಷನಾದ ಬಳಿಕ ಲಿಯು ಶೌಚೈ ಆತನ ಉತ್ತರಾಧಿಕಾರಿಯಾದ. ಮುಂದೆ 1966 ರ ಸಾಂಸ್ಕೃತಿಕ ಕ್ರಾಂತಿಯ ವೇಳೆ ಮಾವೊನೊಂದಿಗೆ ಭಿನ್ನಾಭಿಪ್ರಾಯಗೊಂಡು ಅಧ್ಯಕ್ಷ ಸ್ಥಾನ ಕಳೆದುಕೊಂಡ. ನಂತರದಲ್ಲಿ ಚೀನಾದ ಅಧ್ಯಕ್ಷ ಸ್ಥಾನ ತೆರವಾಗಿಯೇ ಉಳಿದಿದ್ದು ರಾಷ್ಟ್ರೀಯ ಜನತಾ ಕಾಂಗ್ರೆಸ್ ಅಧ್ಯಕ್ಷನ ಕಾರ್ಯಗಳನ್ನು ನೋಡಿಕೊಳ್ಳುತ್ತಿತ್ತು. ಅಂತಿಮವಾಗಿ 1982 ರ ಸಂವಿಧಾನವು ಚೀನಾದ ಅಧ್ಯಕ್ಷ ಸ್ಥಾನವನ್ನು ಮರಳಿ ಪ್ರತಿಷ್ಠಾಪಿಸಿತು. ಇಂದೂ ಸಹ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ನಿರ್ಧಾರಗಳನ್ನು ಅನುಮೋದಿಸುವ ಕಾರ್ಯಾಂಗದ ಅಲಂಕಾರಿಕ ಹುದ್ದೆಯಾಗಿ ಚೀನಾದ ಅಧ್ಯಕ್ಷನ ಹುದ್ದೆ ಅಸ್ತಿತ್ವದಲ್ಲಿದೆ. ಈ ಕೆಳಗೆ ಚೀನಾದ ಜನತಾ ಗಣರಾಜ್ಯದ ಅಧ್ಯಕ್ಷನ ನೇಮಕ, ಅಧಿಕಾರಾವಧಿ, ಅಧಿಕಾರ ಕಾರ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**[A.] ನೇಮಕ [Appointment]:** ಚೀನಾದ ಅಧ್ಯಕ್ಷನನ್ನು ಅದರ ಶಾಸಕಾಂಗವಾದ ರಾಷ್ಟ್ರೀಯ ಜನತಾ ಕಾಂಗ್ರೆಸ್ ಚುನಾಯಿಸುತ್ತದೆ. 45 ವರ್ಷಗಳ ವಯೋಮಿತಿಯುಳ್ಳ ಯಾವುದೇ ಚೀನಾದ ಪ್ರಜೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಅವಕಾಶವಿರುತ್ತದೆ.



**[B.] ಅಧಿಕಾರಾವಧಿ [Term]:** ಚೀನಾದ ಅಧ್ಯಕ್ಷನ ಅಧಿಕಾರಾವಧಿ ಐದು ವರ್ಷಗಳು. 1982 ರ ಸಂವಿಧಾನದಂತೆ ಒಬ್ಬ ವ್ಯಕ್ತಿ ಒಂದೇ ಅವಧಿಗೆ ಅಧ್ಯಕ್ಷನಾಗಿ ಕಾರ್ಯಾಚರಿಸಬಹುದಾಗಿದೆ.

**[C.] ಉತ್ತರಾಧಿಕಾರತ್ವ [Seccession]:** ಚೀನಾದ ಶಾಸಕಾಂಗವಾದ ರಾಷ್ಟ್ರೀಯ ಜನತಾ ಕಾಂಗ್ರೆಸ್ಸು ಅಧ್ಯಕ್ಷನೊಡನೆ ಉಪಾಧ್ಯಕ್ಷನನ್ನೂ ಚುನಾಯಿಸಿರುತ್ತದೆ. ಉಪಾಧ್ಯಕ್ಷ ಅಧ್ಯಕ್ಷನ ಅಧಿಕಾರ ಚಲಾವಣೆಯಲ್ಲಿ ನೆರವಾಗಬೇಕಲ್ಲದೇ ಕಾರಣಾಂತರಗಳಿಂದ ಅಧ್ಯಕ್ಷನ ಸ್ಥಾನ ತೆರವಾದರೆ ಉಪಾಧ್ಯಕ್ಷ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ.

**[D.] ಅಧಿಕಾರ ಕಾರ್ಯಗಳು [Power and Functions]:** ಚೀನಾದ ಕಾರ್ಯಾಂಗದ ಮುಖ್ಯಸ್ಥನಾಗಿರುವ ಅಧ್ಯಕ್ಷನ ಹುದ್ದೆಯು ಅಲಂಕಾರಿಕ ಹುದ್ದೆಯಾಗಿದೆ. ಆತ ಕೇವಲ ತಾತ್ವಿಕ ಅಧಿಕಾರಗಳನ್ನು ಮಾತ್ರ ಚಲಾಯಿಸುತ್ತಾನೆ. ಈ ಕೆಳಗಿನವು ಚೀನಾದ ಅಧ್ಯಕ್ಷನ ಪ್ರಮುಖ ಕಾರ್ಯಗಳೆನಿಸಿವೆ.

1. ಚೀನಾದ ಪ್ರೀಮಿಯರ್ ಅಥವಾ ಪ್ರಧಾನ ಮಂತ್ರಿಯ ಹುದ್ದೆಗೆ ಅಧ್ಯಕ್ಷನು ವ್ಯಕ್ತಿಯೊಬ್ಬನ ಹೆಸರನ್ನು ಸೂಚಿಸುತ್ತಾನೆ. ರಾಷ್ಟ್ರೀಯ ಜನತಾ ಕಾಂಗ್ರೆಸ್ ಅಧ್ಯಕ್ಷ ಸೂಚಿಸಿದ ಹೆಸರನ್ನು ಅನುಮೋದಿಸಿದರೆ ಮಾತ್ರ ಅಧ್ಯಕ್ಷ ಪ್ರಧಾನ ಮಂತ್ರಿಯನ್ನು ನೇಮಿಸುತ್ತಾನೆ.
2. ಉಪ ಪ್ರೀಮಿಯರ್, ಮಂತ್ರಿಗಳು, ಲೆಕ್ಕ ಪರಿಶೋಧಕರು, ರಾಜ್ಯ ಕಾರ್ಯದರ್ಶಿ ಮುಂತಾದ ಪ್ರಮುಖ ಹುದ್ದೆಗಳಿಗೆ ರಾಷ್ಟ್ರೀಯ ಜನತಾ ಕಾಂಗ್ರೆಸ್ ಅಥವಾ ಸ್ಥಾಯಿ ಸಮಿತಿಯ ಸಲಹೆಯಂತೆ ನೇಮಕಾತಿ ಮಾಡುವುದು.
3. ರಾಷ್ಟ್ರೀಯ ಜನತಾ ಕಾಂಗ್ರೆಸ್ ಅಥವಾ ಅದರ ಸ್ಥಾಯಿ ಸಮಿತಿಯ ಸಲಹೆಯಂತೆ ಅಧ್ಯಕ್ಷ ತಾನು ನೇಮಿಸಿದವರನ್ನು ಪದಚ್ಯುತಗೊಳಿಸುವ ಅಧಿಕಾರ ಪಡೆದಿರುತ್ತಾನೆ.
4. ಕಾಂಗ್ರೆಸ್‌ನ ಸ್ಥಾಯಿ ಸಮಿತಿಯ ಸೂಚನೆಯಂತೆ ಅಧ್ಯಕ್ಷ ಉನ್ನತ ಬಿರುದು ಅಥವಾ ಪ್ರಶಸ್ತಿಗಳನ್ನು ವಿತರಿಸುತ್ತಾನೆ.
5. ಯುದ್ಧ ಅಥವಾ ಶಾಂತಿಯನ್ನು ಅಧ್ಯಕ್ಷ ಘೋಷಿಸುತ್ತಾನೆ.
6. ವಿಶೇಷ ಕ್ಷಮಾದಾನವನ್ನು ನೀಡಲು ಅಧ್ಯಕ್ಷನಿಗೆ ಅವಕಾಶವಿರುತ್ತದೆ.
7. ಚೀನಾದ ಜನತಾ ಗಣರಾಜ್ಯದ ಪರವಾಗಿ ವಿದೇಶಿ ರಾಯಭಾರಿಗಳು ಅಥವಾ ರಾಜತಾಂತ್ರಿಕ ಸಿಬ್ಬಂದಿಗಳನ್ನು ಬರಮಾಡಿಕೊಳ್ಳಲು ಅಧ್ಯಕ್ಷ ಅಧಿಕಾರ ಪಡೆದಿರುವನು.
8. ವಿದೇಶದಲ್ಲಿ ಕಾರ್ಯಾಚರಿಸುವ ಚೀನಾದ ರಾಯಭಾರಿಗಳನ್ನು ನೇಮಿಸುವ ಅಥವಾ ಹಿಂದಕ್ಕೆ ಕರೆಯಿಸಿಕೊಳ್ಳುವ ಅಧಿಕಾರವನ್ನು ಅಧ್ಯಕ್ಷ ಪಡೆದಿರುವನು.

9. ಚೀನಾವು ವಿದೇಶಗಳೊಡನೆ ಮಾಡಿಕೊಂಡ ಒಪ್ಪಂದಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ಅಧ್ಯಕ್ಷ ಪಡೆದಿರುವನು.

ಈ ಮೇಲೆ ಪಟ್ಟಿ ಮಾಡಲಾದ ಅಧಿಕಾರ ಕಾರ್ಯಗಳನ್ನು ಚೀನಾದ ಅಧ್ಯಕ್ಷ ಪಡೆದಿದ್ದು ಅವು ಅಲಂಕಾರಿಕ ಅಧಿಕಾರಗಳೆನಿಸಿವೆ. ರಾಷ್ಟ್ರೀಯ ಜನತಾ ಕಾಂಗ್ರೆಸ್ ಅಥವಾ ಅದರ ಸ್ಥಾಯಿ ಸಮಿತಿಯೇ ವಾಸ್ತವದಲ್ಲಿ ಚೀನಾದ ಕಾರ್ಯಾಂಗೀಯ ಅಧಿಕಾರಗಳನ್ನು ಕುರಿತಂತೆ ನಿರ್ಧಾರ ಕೈಗೊಳ್ಳುತ್ತಿರುವುದು ಇದಕ್ಕೆ ಪ್ರಧಾನ ಕಾರಣ. ಈ ಹಿನ್ನೆಲೆಯಲ್ಲಿ ಚೀನಾದ ಅಧ್ಯಕ್ಷ ಅಮೇರಿಕಾದ ಅಧ್ಯಕ್ಷನಂತೆ ಕಾರ್ಯಾಂಗದ ಮುಖ್ಯಸ್ಥನಾದರೂ ಆತನಂತೆ ನೈಜವಾಗಿ ಅಧಿಕಾರವನ್ನು ಚಲಾಯಿಸಲಾರ ಎಂಬ ತೀರ್ಮಾನಕ್ಕೆ ಚಿಂತಕರು ಬಂದಿದ್ದಾರೆ.

## ಮಾದರಿ ಪ್ರಶ್ನೆಗಳು [Model Questions]:

### [A.] ಎರಡು ಅಂಕದ ಪ್ರಶ್ನೆಗಳು:

1. ಕಾರ್ಯಾಂಗ ಎಂದರೇನು?
2. ಅಮೇರಿಕಾದ ಅಧ್ಯಕ್ಷನಾಗಲು ಇರಬೇಕಾದ ಅರ್ಹತೆಗಳನ್ನು ಬರೆಯಿರಿ.
3. ಅಮೇರಿಕಾದ ಅಧ್ಯಕ್ಷನಿಗಿರುವ ಸೌಲಭ್ಯಗಳನ್ನು ತಿಳಿಸಿರಿ.
4. ಅಮೇರಿಕಾದ ಅಧ್ಯಕ್ಷನ ಪದಚ್ಯುತಿ ವಿಧಾನವನ್ನು ಬರೆಯಿರಿ.
5. ಅಮೇರಿಕಾದ ಅಧ್ಯಕ್ಷನ ಅಧಿಕಾರಗಳು ಹೆಚ್ಚಲು ಕಾರಣವಾದ ಅಂಶಗಳಾವುವು?
6. ಪಾಕೇಟ್ ವೀಟೊ ಎಂದರೇನು?
7. ಅಮೇರಿಕಾದ ಅಧ್ಯಕ್ಷನ ಎರಡು ನ್ಯಾಯಾಂಗೀಯ ಅಧಿಕಾರಗಳನ್ನು ಬರೆಯಿರಿ.
8. ಅಮೇರಿಕಾದ ಅಧ್ಯಕ್ಷ ಜನರಿಗೆ ಏಕೆ ಜವಾಬ್ದಾರಿ ತೋರುತ್ತಾನೆ?
9. ಬ್ರಿಟನ್ನಿನ ಅರಸ ಹೊಂದಿರುವ ಎರಡು ಕಾರ್ಯಾಂಗೀಯ ಅಧಿಕಾರಗಳನ್ನು ತಿಳಿಸಿ.
10. ಅರಸನು ಬ್ರಿಟನ್ನಿನ ಸಂವಿಧಾನಾತ್ಮಕ ವ್ಯವಸ್ಥೆಯ ಭಾಗವಾಗಿದ್ದಾನೆ. ಹೇಗೆ?
11. ಬ್ರಿಟನ್ನಿನಲ್ಲಿ ಪ್ರಧಾನ ಮಂತ್ರಿಯ ಹುದ್ದೆ ಹೇಗೆ ಉಗಮಗೊಂಡಿತು?
12. ಬ್ರಿಟನ್ನಿನಲ್ಲಿನ ಪ್ರಧಾನ ಮಂತ್ರಿಯ ನೇಮಕದ ವಿಧಾನವನ್ನು ಬರೆಯಿರಿ.
13. ಚೀನಾದ ಅಧ್ಯಕ್ಷನ ನೇಮಕದ ವಿಧಾನವನ್ನು ಬರೆಯಿರಿ.
14. ಚೀನಾದ ಅಧ್ಯಕ್ಷನ ಎರಡು ಕಾರ್ಯಗಳನ್ನು ತಿಳಿಸಿರಿ.

### [B.] ಐದು ಅಂಕದ ಪ್ರಶ್ನೆಗಳು:

1. ಅಮೇರಿಕಾದ ಅಧ್ಯಕ್ಷನ ಹುದ್ದೆಯನ್ನು ಕುರಿತು ಟಿಪ್ಪಣಿ ಬರೆಯಿರಿ.



2. ಬ್ರಿಟನ್ನಿನಲ್ಲಿ ಅರಸರ ಅಧಿಕಾರ ಕಾರ್ಯಗಳನ್ನು ವಿವರಿಸಿರಿ.
3. ಬ್ರಿಟಿಷ್ ಪ್ರಧಾನ ಮಂತ್ರಿಯ ಪ್ರಮುಖ ಅಧಿಕಾರಗಳನ್ನು ವಿವರಿಸಿರಿ.
4. ಚೀನಾದ ಕಾರ್ಯಾಂಗವನ್ನು ಕುರಿತು ಟಿಪ್ಪಣಿ ಬರೆಯಿರಿ.

### [C.] ಹತ್ತು ಅಂಕದ ಪ್ರಶ್ನೆಗಳು:

1. ಅಮೇರಿಕಾದ ಅಧ್ಯಕ್ಷನ ಅಧಿಕಾರ ಕಾರ್ಯಗಳನ್ನು ವಿವರಿಸಿರಿ.
2. ಬ್ರಿಟಿಷ್ ಪ್ರಧಾನ ಮಂತ್ರಿಯ ಅಧಿಕಾರ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.
3. ಚೀನಾದ ಅಧ್ಯಕ್ಷನ ಪಾತ್ರವನ್ನು ಪರಿಶೀಲಿಸಿರಿ.

ಅಧ್ಯಾಯ 10:

# ನ್ಯಾಯಾಂಗ ವ್ಯವಸ್ಥೆ

## [Judicial System].

**ಪ್ರಸ್ತಾವನೆ [Introduction]:**

ಸಾಂಪ್ರದಾಯಿಕ, ಸಾಮಾನ್ಯ ಹಾಗೂ ಸಂವಿಧಾನಾತ್ಮಕ ಕಾನೂನುಗಳನ್ನು ಅರ್ಥೈಸಿ ವಿವಾದಗಳನ್ನು ಬಗೆ ಹರಿಸುವ ಸರ್ಕಾರದ ಮೂರನೇಯ ಅಂಗವೇ ನ್ಯಾಯಾಂಗ. ಸರ್ಕಾರದ ಮೂರು ಅಂಗಗಳಲ್ಲಿ ಒಂದಾದ ನ್ಯಾಯಾಂಗವು ಉಳಿದೆರಡು ಅಂಗಗಳಾದ ಶಾಸಕಾಂಗ ಮತ್ತು ಕಾರ್ಯಾಂಗಗಳ ನಡುವೆ ಸಮತೋಲನವನ್ನು ಕಾಪಾಡುವ ಅಂಗವಾಗಿದೆ. ಗಮನಾರ್ಹ ಅಂಶವೇನೆಂದರೆ ನ್ಯಾಯಾಂಗವು ಆಯಾ ದೇಶದ ಸಂವಿಧಾನದ ಸ್ವರೂಪ ಮತ್ತು ಸರ್ಕಾರದ ಮಾದರಿಯನ್ನು ಆಧರಿಸಿ ವಿಭಿನ್ನವಾಗಿ ಅಸ್ತಿತ್ವದಲ್ಲಿರುತ್ತದೆ. ಸಾಮಾನ್ಯವಾಗಿ ಲಿಖಿತ ಸಂವಿಧಾನ, ಸಂಯುಕ್ತ ವ್ಯವಸ್ಥೆ, ಪ್ರಜಾಸತ್ತಾತ್ಮಕ ಸರ್ಕಾರಗಳನ್ನು ಹೊಂದಿರುವ ದೇಶಗಳಲ್ಲಿ ನ್ಯಾಯಾಂಗವು ಶಕ್ತಿಶಾಲಿಯಾಗಿರುತ್ತದೆ. ಮುಂದುವರಿದು ಅಲಿಖಿತ ಸಂವಿಧಾನ, ಏಕಾತ್ಮಕ ವ್ಯವಸ್ಥೆ, ಸರ್ವಾಧಿಕಾರಿ ಸರ್ಕಾರವಿರುವ ದೇಶಗಳಲ್ಲಿ ನ್ಯಾಯಾಂಗವು ದುರ್ಬಲವಾಗಿರುತ್ತದೆ. ಒಟ್ಟಾರೆ ದೇಶವೊಂದರ ಗುಣ ಮಟ್ಟದ ಅಳತೆಗೋಲು ಎಂಬುದಾಗಿ ಪರಿಗಣಿಸಲ್ಪಡುವ ನ್ಯಾಯಾಂಗವು ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಭಿನ್ನ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ಪಡೆದಿರುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಭಿನ್ನ ರಾಜಕೀಯ ವ್ಯವಸ್ಥೆಗಳನ್ನು ಅಳವಡಿಸಿಕೊಂಡಿರುವ ಅಮೇರಿಕಾ. ಬ್ರಿಟನ್ ಮತ್ತು ಚೀನಾ ದೇಶಗಳ ನ್ಯಾಯಾಂಗ ವ್ಯವಸ್ಥೆಯನ್ನು ಸಂಕ್ಷೀಪ್ತವಾಗಿ ವಿವರಿಸಲಾಗಿದೆ.

**[I.] ಅಮೇರಿಕಾ ಸಂಯುಕ್ತ ಸಂಸ್ಥಾನಗಳ ನ್ಯಾಯಾಂಗ ವ್ಯವಸ್ಥೆ**

**[Judicial Systom of United States of America]:**

**ಪೀಠಿಕೆ:** ನ್ಯಾಯಾಂಗವು ಸರ್ಕಾರವೊಂದರ ಮೂರನೇಯ ಹಾಗೂ ಕೊನೆಯ ಅಂಗ. ಆದರೆ, ದೇಶದ ರಾಜಕೀಯ, ಸಾಮಾಜಿಕ, ಆಡಳಿತಾತ್ಮಕ ಮುಂತಾದ ವ್ಯವಸ್ಥೆಗಳನ್ನು ಸರಿಯಾದ ನಿಟ್ಟಿನಲ್ಲಿ ಮುನ್ನಡೆಸುವ ಜವಾಬ್ದಾರಿಯನ್ನು ಹೊಂದಿರುವ ಪ್ರಧಾನ ಅಂಗವೆನಿಸಿದೆ. ಜಗತ್ತಿನ ಮೊದಲ ಲಿಖಿತ ಸಂವಿಧಾನವನ್ನು ಅಳವಡಿಸಿಕೊಂಡ



ಅಮೇರಿಕಾವು ಅಧಿಕಾರ ಪ್ರತ್ಯೇಕತಾ ತತ್ವವನ್ನು ಪಾಲಿಸಲು ಮತ್ತು ಸಂಯುಕ್ತ ವ್ಯವಸ್ಥೆ ಅನುಸರಿಸಲು ನಿರ್ಧರಿಸಿತು. ಫಲವಾಗಿ ಉಳಿದೆಲ್ಲ ದೇಶಗಳಿಗಿಂತ ಪ್ರಬಲವಾದ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದುವಂತಾಯಿತು.

ಅಮೇರಿಕಾದ 13 ವಸಾಹತುಗಳ ಒಕ್ಕೂಟವು ಆರಂಭದಲ್ಲಿ ನ್ಯಾಯಾಂಗವನ್ನು ಬಿಲಿತಂತೆ ಒಕ್ಕೂಟದ ರಾಜ್ಯಗಳಿಗೆ ಅಧಿಕ ಅವಕಾಶಗಳನ್ನು ಒದಗಿಸಿತ್ತು. ನಂತರ ಫಿಲಿಡೆಲ್ಫಿಯಾ ಸಮ್ಮೇಳನದಲ್ಲಿ ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಗಳ ನಿರಂತರತೆಗೆ ಒಕ್ಕೂಟ ನ್ಯಾಯಾಂಗದ ಅಗತ್ಯವನ್ನು ಅಮೇರಿಕಾದ ಸಂವಿಧಾನ ರಚನಾಕಾರರು ಮನಗಂಡರು. ಫಲವಾಗಿ ಅಮೇರಿಕಾದಲ್ಲಿ ಒಕ್ಕೂಟ ನ್ಯಾಯಾಂಗ ಮತ್ತು ರಾಜ್ಯ ಮಟ್ಟದ ನ್ಯಾಯಾಂಗ ಎಂಬ ದ್ವಿ ನ್ಯಾಯಾಂಗ ವ್ಯವಸ್ಥೆಗಳು ರೂಪುಗೊಂಡವು. ಆಸಕ್ತಿದಾಯಕ ಅಂಶವೇನೆಂದರೆ ಪ್ರತ್ಯೇಕ ಅಧಿಕಾರ ವ್ಯಾಪ್ತಿ ಹೊಂದಿರುವ ಒಕ್ಕೂಟ ಮತ್ತು ರಾಜ್ಯ ಮಟ್ಟದ ನ್ಯಾಯಾಂಗ ವ್ಯವಸ್ಥೆಯಲ್ಲಿ ಶ್ರೇಣಾತ್ಮಕ ನ್ಯಾಯಾಲಯಗಳನ್ನು ಕಾಣಬಹುದಾಗಿದೆ. ಈ ಕೆಳಗೆ ಅಮೇರಿಕಾದ ಒಕ್ಕೂಟ ಮತ್ತು ರಾಜ್ಯ ಮಟ್ಟದ ನ್ಯಾಯಾಂಗ ವ್ಯವಸ್ಥೆಯ ರಚನೆ ಹಾಗೂ ಅಧಿಕಾರ ಕಾರ್ಯಗಳನ್ನು ಸಂಕ್ಷೀಪ್ತವಾಗಿ ವಿವರಿಸಲಾಗಿದೆ.

**[A.] ಒಕ್ಕೂಟ ನ್ಯಾಯಾಂಗ [Federal Judiciary]:**

ಅಮೇರಿಕಾ ಸಂವಿಧಾನದ ಮೂರನೇ ವಿಧಿಯು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ನ್ಯಾಯಾಂಗೀಯ ಅಧಿಕಾರವು ಏಕ ಸರ್ವೋಚ್ಚ ನ್ಯಾಯಾಲಯ ಮತ್ತು ಕಾಂಗ್ರೆಸ್ಸು ಕಾಲ ಕಾಲಕ್ಕೆ ನಿರ್ಧರಿಸುವ ಅಧೀನ ನ್ಯಾಯಾಲಯಗಳಿಗೆ ಸೇರಿದೆ ಎಂಬುದಾಗಿ ಸೂಚಿಸಿದೆ. ಇದರನ್ವಯ 1789 ರಲ್ಲಿ ಕಾಂಗ್ರೆಸ್ಸು ಅಂಗೀಕರಿಸಿದ ನ್ಯಾಯಾಂಗ ಕಾಯಿದೆಯಂತೆ ಸಮಕಾಲೀನ ಅಮೇರಿಕಾದ ಒಕ್ಕೂಟ ನ್ಯಾಯಾಲಯಗಳ ರಚನೆ ಕಂಡು ಬರುತ್ತಿದೆ. ಈ ಕೆಳಗೆ ಅಮೇರಿಕಾದ ಒಕ್ಕೂಟ ನ್ಯಾಯಾಂಗ ವ್ಯವಸ್ಥೆಯ ರಚನೆ ಹಾಗೂ ಅಧಿಕಾರ ಕಾರ್ಯಗಳನ್ನು ಚರ್ಚಿಸಲಾಗಿದೆ.

**1. ಜಿಲ್ಲಾ ನ್ಯಾಯಾಲಯಗಳು [District Courts]:** ಇವು ಒಕ್ಕೂಟ ನ್ಯಾಯಾಂಗ ವ್ಯವಸ್ಥೆಯ ಅತ್ಯಂತ ಕೆಳ ನ್ಯಾಯಾಲಯಗಳಾಗಿವೆ. ಜಿಲ್ಲೆ ಅಥವಾ ಡಿಸ್ಟ್ರಿಕ್ಟ್ ಎಂದು ಕರೆಯಲ್ಪಡುವ ನಿರ್ದಿಷ್ಟ ಭೂ ಪ್ರದೇಶದಲ್ಲಿ ಈ ನ್ಯಾಯಾಲಯಗಳು ಸ್ಥಾಪನೆಗೊಂಡಿರುತ್ತವೆ. ಪ್ರಸ್ತುತ ಇಡೀ ಅಮೇರಿಕಾದ ಭೂ ಭಾಗವನ್ನು 94 ಜಿಲ್ಲೆ ಅಥವಾ ಡಿಸ್ಟ್ರಿಕ್ಟ್ ಎಂದು ವಿಂಗಡಿಸಿ ನ್ಯಾಯಾಲಯಗಳನ್ನು ರಚಿಸಲಾಗಿದೆ. ಈ ಜಿಲ್ಲಾ ನ್ಯಾಯಾಲಯಗಳು ಒಕ್ಕೂಟ ಕಾನೂನುಗಳ ಉಲ್ಲಂಘನೆಗೆ ಸಂಬಂಧಿಸಿರುವ ನಾಗರಿಕ ಮತ್ತು ಅಪರಾಧ ಮೊಕದ್ದಮೆಗಳನ್ನು ವಿಚಾರಣೆ ನಡೆಸಿ ತೀರ್ಪು ನೀಡುತ್ತವೆ. ಸಾಮಾನ್ಯವಾಗಿ ದರೋಡೆ, ಮೋಸ, ಕಳ್ಳಸಾಗಾಣೆಯಂತಹ ಅಪರಾಧ ಮೊಕದ್ದಮೆಗಳು ಮತ್ತು ಜಲ ವಿವಾದ, ಅಂತರರಾಜ್ಯ ವ್ಯಾಪಾರ, ಪರಿಸರ

ವಿವಾದದಂತಹ ನಾಗರಿಕ ಮೊಕದ್ದಮೆಗಳನ್ನು ಈ ನ್ಯಾಯಾಲಯಗಳು ಬಗೆ ಹರಿಸುತ್ತವೆ. ಗಮನಾರ್ಹ ಅಂಶವೇನೆಂದರೆ ಅರ್ಧದಷ್ಟು ಮೊಕದ್ದಮೆಗಳನ್ನು ಜ್ಯೂರಿ ಪದ್ಧತಿಯಂತೆ ಇತ್ಯರ್ಥಗೊಳಿಸಲಾಗುತ್ತದೆ. ಮುಂದುವರಿದು ಸಂವಿಧಾನಾತ್ಮಕ ಅಂಶಗಳುಳ್ಳ ಮೊಕದ್ದಮೆಗಳ ಆರಂಭಿಕ ವಿಚಾರಣೆಯೂ ಅಮೇರಿಕಾದಲ್ಲಿ ಇದೇ ನ್ಯಾಯಾಲಯಗಳಲ್ಲಿ ಜರುಗುತ್ತದೆ.

ಆಸಕ್ತಿದಾಯಕ ಅಂಶವೇನೆಂದರೆ ಒಕ್ಕೂಟ ವ್ಯವಸ್ಥೆಯ ನಿರ್ದಿಷ್ಟ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿರುವ ವಿವಾದಗಳ ಇತ್ಯರ್ಥಕ್ಕೆ ಕಾಂಗ್ರೆಸ್ಸು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿದೆ. ತೆರಿಗೆ, ವಿದೇಶಿ ವಿನಿಮಯ, ಸೈನಿಕ ವ್ಯವಹಾರ ನ್ಯಾಯಾಲಯಗಳಂತಹ ವಿಶೇಷ ನ್ಯಾಯಾಲಯಗಳ ತೀರ್ಪಿನ ವಿರುದ್ಧ ಜಿಲ್ಲಾ ನ್ಯಾಯಾಲಯಕ್ಕೆ ಮನವಿ ಸಲ್ಲಿಸಬಹುದಾಗಿದೆ. ಹೀಗೆ ಮೂಲ ಮತ್ತು ಮನವಿಯ ಅಧಿಕಾರವನ್ನು ಹೊಂದಿರುವ ಜಿಲ್ಲಾ ನ್ಯಾಯಾಲಯಗಳು ವರ್ಷದಲ್ಲಿ ಸುಮಾರು 2 ಕೋಟಿ 76 ಲಕ್ಷದಷ್ಟು ಮೊಕದ್ದಮೆಗಳ ವಿಚಾರಣೆ ನಡೆಸುತ್ತವೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ನ್ಯಾಯಾಲಯಗಳು ಅಮೇರಿಕಾದ ಒಕ್ಕೂಟ ನ್ಯಾಯಾಂಗದ ತಳಹದಿ ಎನಿಸಿವೆ.

**2. ಮನವಿಯ ನ್ಯಾಯಾಲಯಗಳು [Courts of Appeal]:** ಇವು ಒಕ್ಕೂಟ ನ್ಯಾಯಾಂಗದ ಎರಡನೇ ಹಂತದ ಅಂದರೆ ಜಿಲ್ಲಾ ನ್ಯಾಯಾಲಯಗಳ ಮೇಲಿನ ಮತ್ತು ಸರ್ವೋಚ್ಛ ನ್ಯಾಯಾಲಯದ ಕೆಳಗಿನ ನ್ಯಾಯಾಲಯಗಳಾಗಿವೆ. ಅಮೇರಿಕಾದಲ್ಲಿ ಪ್ರಸ್ತುತ ಒಟ್ಟು 11 ಮನವಿಯ ನ್ಯಾಯಾಲಯಗಳನ್ನು ಕಾಣಬಹುದಾಗಿದೆ. ಒಂದಕ್ಕಿಂತ ಹೆಚ್ಚು ರಾಜ್ಯಗಳಿಗೆ ಇವುಗಳ ಅಧಿಕಾರ ವ್ಯಾಪ್ತಿ ವ್ಯಾಪಿಸಿದ್ದು ಅಧ್ಯಕ್ಷನಿಂದ ನೇಮಕಗೊಂಡ 3 ರಿಂದ 6 ನ್ಯಾಯಾಧೀಶರನ್ನು ಇವು ಹೊಂದಿರುತ್ತವೆ. ಮನವಿಯ ನ್ಯಾಯಾಲಯಗಳ ಹಿರಿಯ ನ್ಯಾಯಾಧೀಶನೊಬ್ಬ ಪ್ರತಿ ವರ್ಷ ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನ ಅಧ್ಯಕ್ಷತೆಯಲ್ಲಿ ಜರುಗುವ ಸಮ್ಮೇಳನದಲ್ಲಿ ಭಾಗವಹಿಸುತ್ತಾನೆ. 70 ವರ್ಷಗಳ ವಯೋಮಿತಿಯವರೆಗೆ ಈ ನ್ಯಾಯಾಲಯದ ನ್ಯಾಯಾಧೀಶರು ಅಧಿಕಾರದಲ್ಲಿರಲು ಅವಕಾಶ ಪಡೆದಿದ್ದು ಜಿಲ್ಲಾ ನ್ಯಾಯಾಧೀಶರಿಗಿಂತ ಉನ್ನತ ಗೌರವ ಪಡೆದಿರುತ್ತಾರೆ. ಕೆಳ ಹಂತದ ಜಿಲ್ಲಾ ನ್ಯಾಯಾಲಯಗಳಿಂದ ನೀಡಲಾದ ತೀರ್ಪುಗಳ ವಿರುದ್ಧದ ಮನವಿಗಳನ್ನು ಸ್ವೀಕರಿಸಿ ತೀರ್ಪು ನೀಡುವ ಅಧಿಕಾರವನ್ನು ಮನವಿಯ ನ್ಯಾಯಾಲಯಗಳು ಹೊಂದಿವೆ. ಮುಂದುವರಿದು ರಾಜ್ಯ ಮಟ್ಟದ ಕಾನೂನುಗಳ ಸಂವಿಧಾನ ಬದ್ಧತೆಯನ್ನು ಪರಿಶೀಲಿಸಿ ರದ್ದುಗೊಳಿಸುವ ಅಧಿಕಾರವನ್ನೂ ಈ ನ್ಯಾಯಾಲಯಗಳು ಪಡೆದಿರುತ್ತವೆ.

**3. ಸರ್ವೋಚ್ಛ ನ್ಯಾಯಾಲಯ [Supreme Court]:** ಅಮೇರಿಕಾ ಒಕ್ಕೂಟ ನ್ಯಾಯಾಂಗದ ಅತ್ಯುನ್ನತ ನ್ಯಾಯಾಲಯವಾಗಿರುವ ಸರ್ವೋಚ್ಛ ನ್ಯಾಯಾಲಯವು ಸಂವಿಧಾನಾತ್ಮಕ ನ್ಯಾಯಾಲಯವಾಗಿದೆ. ಇದರ ಗಾತ್ರವನ್ನು ಕುರಿತಂತೆ ಸಂವಿಧಾನವು



ಸ್ಪಷ್ಟವಾದ ವಿವರಣೆಯನ್ನು ನೀಡಿಲ್ಲ. ಆರಂಭದಲ್ಲಿ ಒಬ್ಬ ಮುಖ್ಯ ಮತ್ತು ಇತರ ಐದು ನ್ಯಾಯಾಧೀಶರು ಕಾರ್ಯ ನಿರ್ವಹಿಸುತ್ತಿದ್ದು ಪ್ರಸ್ತುತ ಒಬ್ಬ ಮುಖ್ಯ ಮತ್ತು ಇತರ ಎಂಟು ನ್ಯಾಯಾಧೀಶರು ಕಾರ್ಯಾಚರಿಸುತ್ತಿದ್ದಾರೆ. ಸೆನೆಟ್‌ನ ಅಂಗೀಕಾರದೊಡನೆ ಅಧ್ಯಕ್ಷನು ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಿಸುತ್ತಾನೆ. ನ್ಯಾಯಾಧೀಶರು ತಮ್ಮ 70ನೇ ವಯಸ್ಸನ್ನು ತಲುಪಿದಾಗ ನಿವೃತ್ತಗೊಳ್ಳಬಹುದು ಅಥವಾ ಮುಂದುವರಿಯ ಬಹುದಾಗಿದೆ. ಸರ್ವೋಚ್ಛ ನ್ಯಾಯಾಲಯದ ಕಲಾಪಗಳು ಅಕ್ಟೋಬರಿನ ಮೊದಲ ಸೋಮವಾರದಿಂದ ಹಿಡಿದು ಜೂನ್ ತಿಂಗಳವರೆಗೆ ಸಾಮಾನ್ಯವಾಗಿ ಜರುಗುತ್ತವೆ. ವಿಶೇಷ ಅಧಿವೇಶನವನ್ನು ಕರೆಯುವ ಅಧಿಕಾರ ಈ ಬಿಡುವಿನ ಸಮಯದಲ್ಲಿ ಮುಖ್ಯ ನ್ಯಾಯಾಧೀಶನಿಗಿರುತ್ತದೆ.

ಸಂವಿಧಾನದ ಮೂರನೇ ವಿಧಿಯ ಎರಡನೇ ಸೆಕ್ಷನ್ ಸರ್ವೋಚ್ಛ ನ್ಯಾಯಾಲಯದ ಅಧಿಕಾರ ಕಾರ್ಯಗಳನ್ನು ವಿವರಿಸುತ್ತದೆ. ಇದರನ್ವಯ ಸಂವಿಧಾನಾತ್ಮಕ ವಿವಾದಗಳು, ಒಕ್ಕೂಟ ಮತ್ತು ರಾಜ್ಯಗಳ ನಡುವಿನ ವಿವಾದಗಳು, ರಾಜ್ಯ ಮತ್ತು ರಾಜ್ಯಗಳ ನಡುವಿನ ವಿವಾದಗಳು, ಅಮೇರಿಕಾದ ಒಕ್ಕೂಟವು ಭಾಗಿಯಾಗುವ ಒಪ್ಪಂದಗಳು ಸರ್ವೋಚ್ಛ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿಗೆ ಸೇರಿವೆ. ಮುಂದುವರಿದು ಒಕ್ಕೂಟದ ಇತರ ನ್ಯಾಯಾಲಯಗಳ ತೀರ್ಪಿನ ವಿರುದ್ಧದ ಮನವಿಗಳನ್ನು ಸ್ವೀಕರಿಸಿ ತೀರ್ಪು ನೀಡಲು ಸರ್ವೋಚ್ಛ ನ್ಯಾಯಾಲಯವು ಅಧಿಕಾರ ಹೊಂದಿದೆ. ಒಟ್ಟಾರೆ ಅಮೇರಿಕಾದ ಸರ್ವೋಚ್ಛ ನ್ಯಾಯಾಲಯವು ಅಮೇರಿಕಾ ಒಕ್ಕೂಟವನ್ನು ಬಾಧಿಸುವ ಎಲ್ಲ ವಿಷಯಗಳನ್ನು ಕುರಿತು ತೀರ್ಪು ನೀಡುವ ಅಧಿಕಾರವನ್ನು ಸಂವಿಧಾನಾತ್ಮಕವಾಗಿ ಪಡೆದುಕೊಂಡಿದೆ. ಆಸಕ್ತಿದಾಯಕ ಅಂಶವೇನೆಂದರೆ ಭಾರತದ ಸರ್ವೋಚ್ಛ ನ್ಯಾಯಾಲಯದಂತೆ ಸಲಹಾತ್ಮಕ ಅಧಿಕಾರ ಅಂದರೆ ರಾಷ್ಟ್ರಪತಿಗೆ ಸಲಹೆ ನೀಡುವಂತೆ ಅಮೇರಿಕಾದ ಸರ್ವೋಚ್ಛ ನ್ಯಾಯಾಲಯವು ಸಲಹಾತ್ಮಕ ಅಧಿಕಾರವನ್ನು ಪಡೆದಿಲ್ಲ. ಕಾಲಾನುಕ್ರಮದಲ್ಲಿ ನ್ಯಾಯಾಂಗ ವಿಮರ್ಶೆ ಪರಿಕಲ್ಪನೆಗೆ ಜನ್ಮ ನೀಡಿರುವ ಅಮೇರಿಕಾದ ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರು ಇತರ ಲಿಖಿತ ಸಂವಿಧಾನವುಳ್ಳ ದೇಶಗಳಿಗೆ ಪ್ರಭಾವ ಬೀರಿರುವರು.

**[B.] ರಾಜ್ಯ ಮಟ್ಟದ ನ್ಯಾಯಾಂಗ [State Level Judiciary]:**

ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಎಲ್ಲ ರಾಜ್ಯಗಳು ತಮ್ಮದೇಯಾದ ಸಂವಿಧಾನ ಹಾಗೂ ಶಾಸಕಾಂಗಗಳನ್ನು ಹೊಂದಿವೆ. ಮುಂದುವರಿದು ಆಯಾ ರಾಜ್ಯದ ಸಂವಿಧಾನದ ನಿಯಮಾವಳಿಗಳು ಮತ್ತು ಶಾಸಕಾಂಗ ರಚಿಸುವ ಶಾಸನಗಳನ್ನು ಅಮೇರಿಕಾದ ರಾಜ್ಯ ಮಟ್ಟದ ನ್ಯಾಯಾಂಗ ವ್ಯವಸ್ಥೆಯು ಆಧರಿಸಿದೆ. ಹೀಗಾಗಿ ವೈವಿಧ್ಯಮಯ ನ್ಯಾಯಾಂಗ ವ್ಯವಸ್ಥೆಗಳನ್ನು ಅಮೇರಿಕಾದ ರಾಜ್ಯಗಳಲ್ಲಿ ಕಾಣಬಹುದಾಗಿದ್ದು ಆಯಾ ರಾಜ್ಯದ ಹೆಸರಿನೊಡನೆ ಅದರ ನ್ಯಾಯಾಂಗವನ್ನು ಗುರುತಿಸಲಾಗುತ್ತದೆ. ಉದಾ: ಫ್ಲೋರಿಡಾ

ನ್ಯಾಯಾಂಗ ವ್ಯವಸ್ಥೆ, ಮಿಜೊರಿ ನ್ಯಾಯಾಂಗ ವ್ಯವಸ್ಥೆ ಇತ್ಯಾದಿ. ಈ ಕೆಳಗೆ ಸಂಕ್ಷೀಪ್ತವಾಗಿ ರಾಜ್ಯ ಮಟ್ಟದ ನ್ಯಾಯಾಂಗ ವ್ಯವಸ್ಥೆಯನ್ನು ವಿವರಿಸಲಾಗಿದೆ.

**1. ರಾಜ್ಯ ಕೆಳ ನ್ಯಾಯಾಲಯಗಳು[State Lower Courts]:** ಅಮೇರಿಕಾದ ಎಲ್ಲ ರಾಜ್ಯಗಳಲ್ಲಿ ಈ ಕೆಳ ನ್ಯಾಯಾಲಯಗಳನ್ನು ಕಾಣಬಹುದಾಗಿದೆ. ಕೌಂಟಿ ಎನ್ನುವ ನಿರ್ದಿಷ್ಟ ಭೂ ಪ್ರದೇಶದಲ್ಲಿ ಕಾರ್ಯಾಚರಿಸುವ ಈ ನ್ಯಾಯಾಲಯಗಳು ಬೇರೆ ಬೇರೆ ರಾಜ್ಯಗಳಲ್ಲಿ ಭಿನ್ನ ಹೆಸರುಗಳಿಂದ ಕರೆಯಲ್ಪಡುತ್ತವೆ. ಉದಾ: ಡಿಸ್ಟ್ರಿಕ್ಟ್ ಕೋರ್ಟ್, ಟ್ರೈಲ್ ಕೋರ್ಟ್, ಸರ್ಕಿಟ್ ಕೋರ್ಟ್, ಸುಪೀರಿಯರ್ ಕೋರ್ಟ್ ಇತ್ಯಾದಿ. ಕೆಳ ನ್ಯಾಯಾಲಯಗಳು ನಾಗರಿಕ ಮತ್ತು ಅಪರಾಧ ಪ್ರಕರಣಗಳನ್ನು ಸ್ವೀಕರಿಸಿ ವಿಚಾರಣೆ ನಡೆಸುವುದರಿಂದ ಹೆಚ್ಚು ಕಾರ್ಯಭಾರ ಹೊಂದಿರುತ್ತವೆ. ಹೀಗಾಗಿ ಕೆಲವು ರಾಜ್ಯಗಳಲ್ಲಿ ನಿರ್ದಿಷ್ಟ ಪ್ರಕರಣಗಳ ವಿಚಾರಣೆಗಾಗಿ ಒಂದೇ ಕೌಂಟಿಯಲ್ಲಿ ಅಧಿಕ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿರುತ್ತದೆ.

**2. ರಾಜ್ಯ ಮನವಿಯ ನ್ಯಾಯಾಲಯಗಳು [State Appellate Courts]:** ಕೆಳ ನ್ಯಾಯಾಲಯದಲ್ಲಿ ಯಾವುದೇ ವ್ಯಕ್ತಿಗೆ ಸೂಕ್ತ ನ್ಯಾಯ ದೊರಕದಿದ್ದರೆ ಆತ ಅಥವಾ ಆಕೆ ತನ್ನ ರಾಜ್ಯದಲ್ಲಿರುವ ರಾಜ್ಯ ಮನವಿಯ ನ್ಯಾಯಾಲಯಕ್ಕೆ ಮೊಕದ್ದಮೆ ದಾಖಲಿಸಬಹುದಾಗಿದೆ. ಕೆಳ ನ್ಯಾಯಾಲಯದ ತೀರ್ಪಿನಲ್ಲಿ ಕಾನೂನಾತ್ಮಕ ಅಂಶಗಳು ಅಡಕವಾಗಿದ್ದಲ್ಲಿ ಅಂತಹ ಪ್ರಕರಣಗಳನ್ನು ಈ ಮನವಿಯ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಾಗಿದೆ. ಗಮನಾರ್ಹ ಅಂಶವೇನೆಂದರೆ ಕೆಳ ನ್ಯಾಯಾಲಯದಿಂದ ಬರುವ ಎಲ್ಲ ಮನವಿಗಳನ್ನು ರಾಜ್ಯ ಮನವಿಯ ನ್ಯಾಯಾಲಯಗಳು ಸ್ವೀಕರಿಸಬೇಕಿಲ್ಲ. ಕೆಲವೊಮ್ಮೆ ಮೊಕದ್ದಮೆಯಲ್ಲಿನ ನಿರ್ದಿಷ್ಟ ಅಂಶವನ್ನು ಮಾತ್ರ ಪರಿಶೀಲಿಸಲು ಅದು ನಿರ್ಧರಿಸಬಹುದಾಗಿದೆ. ಮುಂದುವರಿದು ರಾಜ್ಯ ಮನವಿಯ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಬಹುಮತದ ಆಧಾರದಲ್ಲಿ ನಿರ್ಣಯಿಸಲಾಗುತ್ತದೆ.

**3. ರಾಜ್ಯ ಸರ್ವೋಚ್ಚ ನ್ಯಾಯಾಲಯ [State Supreme Courts]:** ಕೆಳ ಮತ್ತು ಮನವಿಯ ನ್ಯಾಯಾಲಯಗಳಲ್ಲಿ ಸೂಕ್ತ ನ್ಯಾಯ ದೊರೆಯದ ವ್ಯಕ್ತಿ ರಾಜ್ಯ ಮಟ್ಟದ ಸರ್ವೋನ್ನತ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿ ನ್ಯಾಯ ಪಡೆಯಲು ರಾಜ್ಯ ಸರ್ವೋಚ್ಚ ನ್ಯಾಯಾಲಯಗಳು ನೆರವಾಗುತ್ತವೆ. ಪ್ರತಿಯೊಂದೂ ರಾಜ್ಯದಲ್ಲಿ ಏಕ ಸರ್ವೋಚ್ಚ ನ್ಯಾಯಾಲಯವಿದ್ದು ಸಾಮಾನ್ಯವಾಗಿ ನಾಗರಿಕ ಮತ್ತು ಅಪರಾಧ ಮೊಕದ್ದಮೆ ಕುರಿತು ಅಂತಿಮ ತೀರ್ಪು ನೀಡುತ್ತವೆ. ಆದರೆ, ಟೆಕ್ಸಾಸ್‌ನಲ್ಲಿ ಮಾತ್ರ ನಾಗರಿಕ ಮತ್ತು ಅಪರಾಧ ಮೊಕದ್ದಮೆಗಳನ್ನು ಕುರಿತಂತೆ ವಿಚಾರಣೆ ನಡೆಸುವ ಪ್ರತ್ಯೇಕವಾದ ಎರಡು ಸರ್ವೋಚ್ಚ ನ್ಯಾಯಾಲಯಗಳನ್ನು ಕಾಣಬಹುದಾಗಿದೆ.



## [II.] ಬ್ರಿಟಿಷ್ ನ್ಯಾಯಾಂಗ ವ್ಯವಸ್ಥೆ [British Judicial Systom]:

**ಪೀಠಿಕೆ:** ಬ್ರಿಟನ್ ಅಲಿಖಿತ ಸಂವಿಧಾನ ಹೊಂದಿರುವ ದೇಶ. ಮುಂದುವರಿದು ಬ್ರಿಟನ್ನಿನಲ್ಲಿ ಸಂಸತ್ತು ಪರಮಾಧಿಕಾರವನ್ನು ಪಡೆದಿದೆ. ಜೊತೆಗೆ ಬ್ರಿಟನ್ ಏಕಾತ್ಮಕ ವ್ಯವಸ್ಥೆಯನ್ನು ಅಳವಡಿಸಿಕೊಂಡ ದೇಶವಾಗಿದ್ದು ಕೇಂದ್ರ ಸರ್ಕಾರವೊಂದೇ ಅಸ್ತಿತ್ವದಲ್ಲಿದೆ. ಫಲವಾಗಿ ಸಂವಿಧಾನದ ವ್ಯಾಖ್ಯಾನವಾಗಲಿ, ಕಾನೂನುಗಳ ಸಂವಿಧಾನಬದ್ಧತೆಯ ಪರಿಶೀಲನೆಯಾಗಲಿ ಅಥವಾ ಕೇಂದ್ರ ಹಾಗೂ ಪ್ರಾಂತ್ಯಗಳ ವಿವಾದಗಳ ಇತ್ಯರ್ಥವಾಗಲಿ ಅಗತ್ಯವಿರುವುದಿಲ್ಲ. ಹೀಗಾಗಿ ದುರ್ಬಲ ನ್ಯಾಯಾಂಗವನ್ನು ಬ್ರಿಟನ್ ಹೊಂದಿದೆ.

ಬ್ರಿಟನ್ನಿನಲ್ಲಿ ನ್ಯಾಯಾಂಗವು ಆರಂಭದಲ್ಲಿ ಏಕರೂಪವಾಗಿರಲಿಲ್ಲ. ನಾಗರಿಕ ನ್ಯಾಯಾಲಯಗಳು, ಅಪರಾಧ ನ್ಯಾಯಾಲಯಗಳು, ವಿಚ್ಛೇಧನ ನ್ಯಾಯಾಲಯಗಳು ಸೇರಿದಂತೆ ವೈವಿಧ್ಯಮಯ ನ್ಯಾಯಾಲಯಗಳು ಬ್ರಿಟನ್ನಿನಲ್ಲಿ ಅಸ್ತಿತ್ವದಲ್ಲಿದ್ದವು. ಇವುಗಳ ವ್ಯಾಪ್ತಿ ಮತ್ತು ಪ್ರಕ್ರಿಯೆಗಳಲ್ಲಿಯೂ ಏಕರೂಪತೆ ಜಾರಿಯಲ್ಲಿರಲಿಲ್ಲ. ಅಂತಿಮವಾಗಿ 1873 ರಿಂದ 1876 ರ ನಡುವೆ ಬ್ರಿಟನ್ನಿನ ನ್ಯಾಯಾಂಗ ವ್ಯವಸ್ಥೆಯನ್ನು ಪುನರ್ರಚಿಸಲಾಯಿತು. ಫಲವಾಗಿ ಬ್ರಿಟನ್ನಿನಲ್ಲಿ ಪ್ರಸ್ತುತ ಜಾರಿಯಲ್ಲಿರುವಂತೆ ಎರಡು ಬಗೆಯ ನ್ಯಾಯಾಲಯಗಳು ಕಾರ್ಯಾಚರಿಸಲು ಆಸ್ಪದ ಕಲ್ಪಿಸಲಾಯಿತು. ಬ್ರಿಟನ್ನಿನಲ್ಲಿ ಪ್ರಸ್ತುತ ಅಪರಾಧ ನ್ಯಾಯಾಲಯಗಳು ಮತ್ತು ನಾಗರಿಕ ನ್ಯಾಯಾಲಯಗಳು ಎಂಬ ಎರಡು ಬಗೆಯ ನ್ಯಾಯಾಲಯಗಳು ಕಾರ್ಯ ನಿರ್ವಹಿಸುತ್ತಿದ್ದು ಅವುಗಳೊಡನೆ ಹೌಸ್ ಆಫ್ ಲಾರ್ಡ್ಸ್ ಮತ್ತು ಪ್ರೀವಿ ಕೌನ್ಸಿಲ್ ಬ್ರಿಟಿಷ್ ನ್ಯಾಯಾಂಗದ ಭಾಗವಾಗಿವೆ. ಈ ಕೆಳಗೆ ವಿವಿಧ ಬಗೆಯ ಬ್ರಿಟಿಷ್ ನ್ಯಾಯಾಲಯಗಳ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ಸಂಕ್ಷೀಪ್ತವಾಗಿ ಚರ್ಚಿಸಲಾಗಿದೆ.

### [A.] ಅಪರಾಧ ನ್ಯಾಯಾಲಯಗಳು [Criminal Courts]:

ಬ್ರಿಟನ್ನಿನಲ್ಲಿ ಅಪರಾಧ ಮೊಕದ್ದಮೆಗಳನ್ನು ವಿಚಾರಣೆ ನಡೆಸಲು ಹಲವು ನ್ಯಾಯಾಲಯಗಳು ಕಾರ್ಯಾಚರಿಸುತ್ತಿವೆ. ಅವುಗಳಲ್ಲಿ ಪ್ರಧಾನವಾದವುಗಳೆಂದರೆ

**1. ಜಸ್ಟಿಸ್ ಆಫ್ ದಿ ಪೀಸ್ (Justices of the Peace):** ಈ ಹೆಸರಿನ ನ್ಯಾಯಾಲಯಗಳು ಅಪರಾಧ ಮೊಕದ್ದಮೆಗಳನ್ನು ವಿಚಾರಣೆ ನಡೆಸುವ ಅತ್ಯಂತ ಕೆಳ ದರ್ಜೆಯ ನ್ಯಾಯಾಲಯಗಳಾಗಿವೆ. ಸಮಾಜದ ವಿವಿಧ ವರ್ಗದ ಗೌರವಾನ್ವಿತರನ್ನು ಲಾರ್ಡ್ ಛಾನ್ಸಲರ್ ಈ ನ್ಯಾಯಾಲಯಗಳಿಗೆ ನೇಮಕ ಮಾಡುತ್ತಾನೆ. ಈ ನ್ಯಾಯಾಧೀಶರಿಗೆ ಸೂಕ್ತ ತರಭೇತಿ ಇಲ್ಲದಿದ್ದರೂ ಅನುಭವದ ಮೇಲೆ ನ್ಯಾಯದಾನ ಮಾಡುತ್ತಾರೆ. ಬ್ರಿಟನ್ನಿನ ಮಹಾ ನಗರಗಳಲ್ಲಿ ಜಸ್ಟಿಸಸ್ ಆಫ್ ದಿ ಪೀಸ್‌ಗೆ ಸಮಾನವಾದ ಸ್ಟೈಪೆಂಡಿಯರಿ ಮ್ಯಾಜಿಸ್ಟ್ರೇಟರ್ ಎಂಬ ನ್ಯಾಯಾಲಯವಿದ್ದು ಅದರ ನ್ಯಾಯಾಧೀಶರನ್ನು ಗೃಹ ಕಾರ್ಯದರ್ಶಿ ನೇಮಿಸುತ್ತಾನೆ. ಸಾಮಾನ್ಯವಾಗಿ ಚಿಕ್ಕ ಪುಟ್ಟ ಅಪರಾಧಗಳನ್ನು

ವಿಚಾರಣೆ ನಡೆಸುವ ಈ ಬಗೆಯ ನ್ಯಾಯಾಲಯಗಳು ಒಂಬತ್ತು ಪೌಂಡ್ ದಂಡ ಅಥವಾ 14 ದಿನಗಳ ಜೈಲುವಾಸದ ಶಿಕ್ಷೆಯನ್ನು ನೀಡಬಹುದಾಗಿದೆ. ಗಂಭೀರ ಸ್ವರೂಪದ ಮೊಕದ್ದಮೆಗಳನ್ನು ಕೋರ್ಟ್ ಆಫ್ ಸಮರಿ ಹೆಸರಿನ ನ್ಯಾಯಾಲಯವು ವಿಚಾರಣೆ ನಡೆಸಬಹುದಾಗಿದ್ದು ಇಬ್ಬರು ಜಸ್ಟಿಸಸ್ ಆಫ್ ಪೀಸ್ ಅಥವಾ ಸ್ಟೈಪೆಂಡಿಯರಿ ಮ್ಯಾಜಿಸ್ಟ್ರೇಟ್‌ರನ್ನು ಒಳಗೊಂಡಿರುತ್ತದೆ. ಇದು 100 ರಿಂದ 500 ಪೌಂಡ್ ದಂಡ ಹಾಗೂ ಆರು ತಿಂಗಳವರೆಗೆ ಜೈಲುವಾಸದ ಶಿಕ್ಷೆ ನೀಡಬಹುದು.

**2. ಕೋರ್ಟ್ ಆಫ್ ಕ್ವಾಟರ್ ಸೆಷನ್ಸ್ (Court of Quarter Sessions]:** ಈ ನ್ಯಾಯಾಲಯವು ಬ್ರಿಟನ್ನಿನ ಎಲ್ಲ ಜಸ್ಟಿಸಸ್ ಆಫ್ ಪೀಸ್‌ಗಳ ನ್ಯಾಯಾಧೀಶರನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಈ ನ್ಯಾಯಾಲಯವು ವರ್ಷದಲ್ಲಿ ನಾಲ್ಕು ಬಾರಿ ಅಧಿವೇಶನಗೊಂಡು ಕಾರ್ಯಾಚರಿಸುತ್ತದೆ. ಗಂಭೀರ ಸ್ವರೂಪದ ಅಪರಾಧ ಮೊಕದ್ದಮೆಗಳನ್ನು ನೇರವಾಗಿ ಸ್ವೀಕರಿಸಿ ವಿಚಾರಣೆ ನಡೆಸುವ ಈ ನ್ಯಾಯಾಲಯವು ಕೆಳ ಹಂತದ ನ್ಯಾಯಾಲಯಗಳ ತೀರ್ಪಿನ ವಿರುದ್ಧದ ಮೇಲ್ಮನವಿಗಳನ್ನೂ ಸ್ವೀಕರಿಸಿ ವಿಚಾರಣೆ ನಡೆಸುವ ಅಧಿಕಾರ ಹೊಂದಿದೆ.

**3. ಕೋರ್ಟ್ ಆಫ್ ಅಸ್ಸೈಜಸ್ (Court of Assizes):** ಈ ನ್ಯಾಯಾಲಯಗಳು ಹೈಕೋರ್ಟ್ ಆಫ್ ಜಸ್ಟಿಸ್‌ನ ಶಾಖೆಗಳಾಗಿವೆ. ಒಬ್ಬ ಅಥವಾ ಇಬ್ಬರು ಹೈಕೋರ್ಟ್ ನ್ಯಾಯಾಧೀಶರನ್ನು ಒಳಗೊಂಡಿರುವ ಈ ನ್ಯಾಯಾಲಯಗಳು ವರ್ಷದಲ್ಲಿ ಮೂರು ಬಾರಿ ಬ್ರಿಟನ್ನಿನ ವಿವಿಧ ಪ್ರಾಂತ್ಯ ಅಥವಾ ನಗರಗಳಲ್ಲಿ ಸಮಾವೇಶಗೊಳ್ಳುತ್ತವೆ. ಸಂಚಾರಿ ಸ್ವರೂಪದ ಈ ನ್ಯಾಯಾಲಯಗಳು ಗಂಭೀರ ಸ್ವರೂಪದ ಕೊಲೆ, ಅಪಹರಣ, ದೈಹಿಕ ಹಲ್ಲೆ, ದರೋಡೆಯಂತಹ ಅಪರಾಧ ಪ್ರಕರಣಗಳ ವಿಚಾರಣೆ ನಡೆಸುತ್ತವೆ. ಈ ಮಾದರಿಯ ಲಂಡನ್ನಿನ ನ್ಯಾಯಾಲಯವನ್ನು ಸೆಂಟ್ರಲ್ ಕ್ರಿಮಿನಲ್ ಕೋರ್ಟ್ ಎಂದು ಕರೆಯಲಾಗುತ್ತದೆ. ಆಸಕ್ತಿದಾಯಕ ಅಂಶವೇನೆಂದರೆ ಈ ಬಗೆಯ ನ್ಯಾಯಾಲಯದಲ್ಲಿ ಜ್ಯೂರಿ ಪದ್ಧತಿ ಜಾರಿಯಲ್ಲಿರುವುದು. ಈ ಜ್ಯೂರಿ ತೀರ್ಮಾನಗಳನ್ನು ಆಧರಿಸಿಯೇ ಶಿಕ್ಷೆಯನ್ನು ನ್ಯಾಯಾಧೀಶರು ನೀಡುತ್ತಾರೆ. 1907 ರ ಕಾಯಿದೆಯೊಂದು ಜ್ಯೂರಿ ತೀರ್ಮಾನವನ್ನು ಪ್ರಶ್ನಿಸಲು ಕೋರ್ಟ್ ಆಫ್ ಕ್ರಿಮಿನಲ್ ಅಪೀಲ್ ಸ್ಥಾಪನೆಗೆ ಅವಕಾಶ ಕಲ್ಪಿಸಿದ್ದು ನಿರಪರಾಧಿಗಳ ನೆಮ್ಮದಿಗೆ ಕಾರಣವಾಗಿದೆ.

### [B.] ನಾಗರಿಕ ನ್ಯಾಯಾಲಯಗಳು [Civil Courts]:

ಬ್ರಿಟನ್ನಿನಲ್ಲಿ ನಾಗರಿಕ ಮೊಕದ್ದಮೆಗಳನ್ನು ಬಗೆ ಹರಿಸಲು ಈ ಕೆಳಕಂಡ ವಿವಿಧ ನ್ಯಾಯಾಲಯಗಳು ಕಾರ್ಯಾಚರಿಸುತ್ತಿವೆ.



**1. ಕೌಂಟಿ ನ್ಯಾಯಾಲಯಗಳು [County Courts]:** ಈ ನ್ಯಾಯಾಲಯಗಳು ನಾಗರಿಕ ಮೊಕದ್ದಮೆಗಳನ್ನು ವಿಚಾರಣೆ ನಡೆಸುವ ಅತ್ಯಂತ ಕೆಳ ದರ್ಜೆಯ ನ್ಯಾಯಾಲಯಗಳಾಗಿವೆ. ಏಳು ವರ್ಷಗಳ ಅನುಭವವುಳ್ಳ ಬ್ಯಾರಿಸ್ಟರರು ಲಾರ್ಡ್ ಛಾನ್ಸಲರ್‌ನಿಂದ ನ್ಯಾಯಾಧೀಶರಾಗಿ ಈ ನ್ಯಾಯಾಲಯಗಳಿಗೆ ನೇಮಕಗೊಳ್ಳುವರು. ಈ ನ್ಯಾಯಾಲಯಗಳು 400 ರಿಂದ 500 ಪೌಂಡುಗಳ ಮೌಲ್ಯಕ್ಕೆ ಸಂಬಂಧಿಸಿದ ನಾಗರಿಕ ವಿವಾದಗಳನ್ನು ಬಗೆ ಹರಿಸುವ ಅಧಿಕಾರ ಹೊಂದಿವೆ. ಬ್ರಿಟನ್ ಹಾಗೂ ವೇಲ್ಸ್‌ನಲ್ಲಿ ಸುಮಾರು 500 ಕೌಂಟಿ ನ್ಯಾಯಾಲಯಗಳು ಅಸ್ತಿತ್ವದಲ್ಲಿದ್ದು ನಾಗರಿಕ ಮೊಕದ್ದಮೆಗಳನ್ನು ಇತ್ಯರ್ಥಗೊಳಿಸುತ್ತಿವೆ. ಆಸಕ್ತಿಕರ ಅಂಶವೇನೆಂದರೆ ಕೌಂಟಿ ನ್ಯಾಯಾಲಯಗಳು ಸರಳ ನ್ಯಾಯದಾನ ಪ್ರಕ್ರಿಯೆಯನ್ನು ಅಳವಡಿಸಿಕೊಂಡಿದ್ದು ಬಹುತೇಕ ಮೊಕದ್ದಮೆಗಳನ್ನು ಈ ನ್ಯಾಯಾಲಯಗಳ ಭಾಗವಾಗಿರುವ ರಜಿಸ್ಟ್ರಾರ್ ಹೆಸರಿನ ಅಧಿಕಾರಿಯೇ ಬಗೆ ಹರಿಸುತ್ತಾನೆ.

**2. ಸುಪ್ರಿಂ ಕೋರ್ಟ್ ಆಫ್ ಜುಡಿಕೆಚುರ್ [Supreme Court of Judicature]:** ಇದು ಕೌಂಟಿ ನ್ಯಾಯಾಲಯಗಳ ಮೇಲಿನ ಹಂತದ ನ್ಯಾಯಾಲಯವಾಗಿದ್ದು ಇದರಲ್ಲಿ ಹೈಕೋರ್ಟ್ ಆಫ್ ಜಸ್ಟಿಸ್ ಮತ್ತು ಕೋರ್ಟ್ ಆಫ್ ಅಪೀಲ್ ಎಂಬ ಕೆಳಗಿನ ಎರಡು ಬಗೆಯ ನ್ಯಾಯಾಲಯಗಳನ್ನು ಗುರುತಿಸಬಹುದಾಗಿದೆ.

- **ಹೈಕೋರ್ಟ್ ಆಫ್ ಜಸ್ಟಿಸ್ [High Court of Justice]:** ಈ ನ್ಯಾಯಾಲಯವು ಮರಳಿ ಕ್ವೀನ್ಸ್ ಬೆಂಚ್ ಡಿವಿಜನ್, ಚಾನ್ಸರಿ ಡಿವಿಜನ್ ಮತ್ತು ಪ್ರೊಬೆಟ್ ಡಿವಿಜನ್ ಎಂಬ ಮೂರು ವಿಭಾಗಗಳಾಗಿ ರಚನೆಗೊಂಡಿರುತ್ತದೆ. ಸಾಮಾನ್ಯವಾಗಿ ಈ ಮೂರು ಬಗೆಯ ನ್ಯಾಯಾಲಯಗಳು ಏಕ ಸದಸ್ಯ ಅಥವಾ ತ್ರಿ ಸದಸ್ಯ ಪೀಠಗಳಿಂದ ವಿಚಾರಣೆ ನಡೆಸುತ್ತವೆ. ಕ್ವೀನ್ಸ್ ಬೆಂಚಿನ ಅಧ್ಯಕ್ಷತೆಯನ್ನು ಬ್ರಿಟನ್ನಿನ ಲಾರ್ಡ್ ಚೀಫ್ ಜಸ್ಟಿಸ್ ವಹಿಸಿದ್ದು ಇತರ 17 ನ್ಯಾಯಾಧೀಶರಿಂದ ಕೂಡಿರುತ್ತದೆ. ಸಾಮಾನ್ಯ ಕಾಯಿದೆಗಳನ್ನು ಅನ್ವಯಿಸಿ ಚುನಾವಣೆ, ಅಕ್ರಮ ಬಂಧನ, ಆಸ್ತಿ ನಾಶದಂತಹ ಮೊಕದ್ದಮೆಗಳನ್ನು ವಿಚಾರಣೆ ನಡೆಸಿ ತೀರ್ಪು ನೀಡುತ್ತದೆ. ಮುಂದುವರಿದು ಚಾನ್ಸರಿ ಡಿವಿಜನ್ ಅಧ್ಯಕ್ಷತೆಯನ್ನು ಲಾರ್ಡ್ ಹೈ ಚಾನ್ಸಲರ್ ವಹಿಸುತ್ತಿದ್ದು ಇತರ ಎಂಟು ನ್ಯಾಯಾಧೀಶರನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಕಾನೂನಾತ್ಮಕ ಪರಿಹಾರದ ಕೊರತೆಯುಳ್ಳ ಮೊಕದ್ದಮೆಗಳನ್ನು ಅಂದರೆ ಆದಾಯ ತೆರಿಗೆಯಂತಹ ವಿವಾದಗಳನ್ನು ಬಗೆ ಹರಿಸುತ್ತದೆ. ಇದರೊಡನೆ ಪ್ರೊಬೆಟ್ ಡಿವಿಜನ್ 10 ನ್ಯಾಯಾಧೀಶರಿಂದ ಕೂಡಿದ್ದು ಕರಾರು, ಉಯ್ಲು, ವಿವಾಹದಂತಹ ನಾಗರಿಕ ವಿವಾದಗಳನ್ನು ಇತ್ಯರ್ಥಗೊಳಿಸುತ್ತದೆ. ಆಸಕ್ತಿದಾಯಕ ಅಂಶವೇನೆಂದರೆ ಈ ಮೂರು ಬಗೆಯ ನ್ಯಾಯಾಲಯಗಳ ನ್ಯಾಯಾಧೀಶರು ಯಾವುದೇ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಅಧಿಕಾರ ಹೊಂದಿದ್ದು ಸಾಮಾನ್ಯ ಕಾನೂನುಗಳನ್ನಾಧರಿಸಿ ತೀರ್ಪು ನೀಡಬೇಕಾದುದು.

* **ಕೋರ್ಟ್ ಆಫ್ ಅಫೀಲ್ [Court of Appeal]:** ಈ ನ್ಯಾಯಾಲಯವು ಕೌಂಟಿ ಕೋರ್ಟುಗಳು ಮತ್ತು ಹೈಕೋರ್ಟ್ ಆಫ್ ಜಸ್ಟಿಸ್‌ನಿಂದ ನೀಡಲಾದ ತೀರ್ಪುಗಳ ವಿರುದ್ಧದ ಮನವಿಗಳನ್ನು ಸ್ವೀಕರಿಸಿ ವಿಚಾರಣೆ ನಡೆಸಲು ಅಧಿಕಾರ ಹೊಂದಿವೆ. ಸಾಮಾನ್ಯವಾಗಿ ಕೆಳ ನ್ಯಾಯಾಲಯಗಳ ತೀರ್ಪಿನಲ್ಲಿರುವ ಕಾನೂನಾತ್ಮಕ ಅಂಶಗಳನ್ನು ಆಧರಿಸಿ ಮನವಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬಹುದಾಗಿದೆ. ಈ ನ್ಯಾಯಾಲಯವು 17 ನ್ಯಾಯಾಧೀಶರಿಂದ ಕೂಡಿರುತ್ತದೆ. ಇದರ ತೀರ್ಪಿನಿಂದ ತೃಪ್ತವಾಗದವರು ಅಂತಿಮವಾಗಿ ಹೌಸ್ ಆಫ್ ಲಾರ್ಡ್ಸ್ ಬಳಿಗೆ ಮನವಿ ಸಲ್ಲಿಸಬಹುದಾಗಿದೆ.

### [C.] ಸರ್ವೋಚ್ಛ ನ್ಯಾಯಾಲಯ [Supreme Court]:

ಬ್ರಿಟನ್ನಿನಲ್ಲಿ ಸಂಸತ್ತಿನ ಮೇಲ್ಮನೆಯಾದ ಹೌಸ್ ಆಫ್ ಲಾರ್ಡ್ಸ್ ಶಾಸನ ರಚನಾಂಗವಲ್ಲದೇ ನ್ಯಾಯಾಲಯವಾಗಿಯೂ ಕಾರ್ಯ ನಿರ್ವಹಿಸುತ್ತದೆ. ಸರಳಾರ್ಥದಲ್ಲಿ ಬ್ರಿಟನ್ನಿನ ಅಪರಾಧ ಮತ್ತು ನಾಗರಿಕ ಮೊಕದ್ದಮೆ ಕುರಿತಂತೆ ಅಂತಿಮ ತೀರ್ಪು ನೀಡುವ ಅಧಿಕಾರವನ್ನು ಹೌಸ್ ಆಫ್ ಲಾರ್ಡ್ಸ್ ಪಡೆದಿದೆ. ಆಸಕ್ತಿದಾಯಕ ಅಂಶವೇನೆಂದರೆ ಹೌಸ್ ಆಫ್ ಲಾರ್ಡ್ಸ್‌ನ ಎಲ್ಲ ಸದಸ್ಯರೂ ನ್ಯಾಯಿಕ ಕಾರ್ಯಗಳಲ್ಲಿ ಭಾಗಿಯಾಗದಿರುವುದು. ಕೇವಲ ಲಾರ್ಡ್ ಛಾನ್ಸಲರ್ ಮತ್ತು 21 ಲಾ ಲಾರ್ಡ್‌ಗಳು ಮಾತ್ರ ನ್ಯಾಯಿಕ ಕಾರ್ಯಗಳನ್ನು ನಿರ್ವಹಿಸುತ್ತಾರೆ. ತಮ್ಮಲ್ಲಿಗೆ ಬರುವ ಮನವಿಗಳನ್ನು ಸ್ವೀಕರಿಸುವ ಲಾ ಲಾರ್ಡ್‌ಗಳು ಲಾರ್ಡ್ ಛಾನ್ಸಲರ್‌ನ ಅಧ್ಯಕ್ಷತೆಯ ತ್ರಿ ಸದಸ್ಯ ಅಥವಾ ಪಂಚ ಸದಸ್ಯ ಪೀಠದಡಿ ವಿಚಾರಣೆ ನಡೆಸುತ್ತಾರೆ. ಸಂಸತ್ತಿನ ಅಧಿವೇಶನ ಜಾರಿಯಲ್ಲಿರದಿದ್ದರೂ ಲಾ ಲಾರ್ಡ್‌ಗಳು ಸಭೆ ಸೇರಿ ಮೊಕದ್ದಮೆಗಳ ವಿಚಾರಣೆ ನಡೆಸಬಹುದಾಗಿದೆ. ಶ್ರೀಮಂತರ ಸಭೆಯು ಸ್ಕಾಟ್‌ಲ್ಯಾಂಡ್ ಮತ್ತು ವೇಲ್ಸ್‌ನ ಉನ್ನತ ನ್ಯಾಯಾಲಯಗಳ ತೀರ್ಪಿನ ವಿರುದ್ಧದ ಮನವಿಗಳನ್ನೂ ಸ್ವೀಕರಿಸಿ ತೀರ್ಪು ನೀಡುವ ಅಧಿಕಾರವುಳ್ಳ ಏಕೈಕ ನ್ಯಾಯಾಲಯವಾಗಿದೆ. ಗಮನಾರ್ಹ ಸಂಗತಿ ಏನೆಂದರೆ 2005 ರ ಸಂಸತ್ತಿನ ಸುಧಾರಣಾ ಕಾಯಿದೆಯಂತೆ 2009 ರಿಂದ ಶ್ರೀಮಂತರ ಸದನದ ಲಾ ಲಾರ್ಡ್‌ಗಳೇ ಬ್ರಿಟನ್ನಿನ ಸರ್ವೋಚ್ಛ ನ್ಯಾಯಾಲಯವಾಗಿ ಪರಿಗಣಿಸಲ್ಪಡುತ್ತಿರುವರು.

### [D.] ಪ್ರೀವಿ ಪರಿಷತ್ತಿನ ನ್ಯಾಯಾಂಗೀಯ ಸಮಿತಿ [The Judicial Committee of the Privy Council]:

ಈ ಸಮಿತಿಯು 1833 ರ ಸಂಸತ್ತಿನ ಕಾಯಿದೆಯಂತೆ ರಚನೆಗೊಂಡಿದೆ. ಲಾರ್ಡ್ ಛಾನ್ಸಲರ್, 21 ಲಾ ಲಾರ್ಡ್‌ಗಳು, ಲಾರ್ಡ್ ಪ್ರೆಸಿಡೆಂಟ್ ಆಫ್ ಪ್ರೀವಿ ಕೌನ್ಸಿಲ್ ಸೇರಿದಂತೆ 30 ಸದಸ್ಯರು ಈ ಸಮೀತಿಯಲ್ಲಿರುತ್ತಾರೆ. ವಸಾಹತು ಹಾಗೂ ಡೊಮಿನಿಯನ್ ಪ್ರದೇಶಗಳ ಉನ್ನತ ನ್ಯಾಯಾಲಯಗಳ ತೀರ್ಪಿನ ವಿರುದ್ಧದ ಮನವಿಗಳನ್ನು ಸ್ವೀಕರಿಸಿ



ಅರಸನಿಗೆ ಸೂಕ್ತ ಸಲಹೆ ನೀಡುವ ಅಂಗವಾಗಿ ಈ ಸಮಿತಿಯು ಗುರುತಿಸಿಕೊಂಡಿದೆ. ಈ ಹಿನ್ನಲೆಯಲ್ಲಿ ಔಪಚಾರಿಕವಾಗಿ ಇದನ್ನು ನ್ಯಾಯಾಲಯ ಎನ್ನಲು ಸಾಧ್ಯವಿಲ್ಲವಾದರೂ ಬ್ರಿಟನ್ನಿನ ನ್ಯಾಯಿಕ ವ್ಯವಸ್ಥೆಯ ಭಾಗವಾಗಿ ಪರಿಗಣಿಸಲಾಗುತ್ತದೆ.

ಈ ಮೇಲೆ ಬ್ರಿಟಿಷ್ ನ್ಯಾಯಾಂಗ ವ್ಯವಸ್ಥೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದ್ದು ಬ್ರಿಟನ್ ಮೂಲದ ನ್ಯಾಯದರ್ಶಿ ಮಂಡಳಿ ಅಥವಾ ಜ್ಯೂರಿ ಪದ್ಧತಿಯು ಆ ದೇಶದ ನ್ಯಾಯಾಂಗಕ್ಕೆ ಉದಾರ ತಳಹದಿಯನ್ನು ಒದಗಿಸಿದೆ. ಈ ಜ್ಯೂರಿ ಪದ್ಧತಿಯಂತೆ ಗಂಭೀರ ಅಪರಾಧವೆಸಗಿದ ವ್ಯಕ್ತಿಯ ಮನವಿಯಂತೆ ನ್ಯಾಯಾಧೀಶರು ನ್ಯಾಯದರ್ಶಿ ಮಂಡಳಿಯ ಸಮ್ಮುಖದಲ್ಲಿ ವಿಚಾರಣೆ ನಡೆಸಬೇಕಾಗುತ್ತದೆ. ಈ ಸಮಯದಲ್ಲಿ ಕಾನೂನಾತ್ಮಕ ದೃಷ್ಟಿಯಿಂದ ಅಪರಾಧಿಯಾದ ವ್ಯಕ್ತಿ ಸಾರ್ವಜನಿಕ ಅಭಿಪ್ರಾಯದಡಿ ನಿರಪರಾಧಿ ಎನಿಸಬಹುದು. ಆಗ ಅಪರಾಧಿಯೊಬ್ಬ ನಿರಪರಾಧಿಯಾಗಿ ಶಿಕ್ಷೆಯಿಂದ ಹೊರಗುಳಿಯಬಹುದಾಗಿದೆ. ಹೀಗೆ ಉಳಿದೆಲ್ಲ ದೇಶಗಳು ಕಾನೂನಾತ್ಮಕ ತಳಹದಿಯ ಮೇಲೆ ನ್ಯಾಯದಾನ ಮಾಡಿದರೆ ಬ್ರಿಟನ್ನಿನಲ್ಲಿ ಕಾನೂನುಗಳ ಹೊರತಾಗಿಯೂ ಒಬ್ಬ ವ್ಯಕ್ತಿಯ ವಿಚಾರಣೆ ನಡೆಸಿ ತೀರ್ಮಾನ ಕೈಗೊಳ್ಳಲು ಅವಕಾಶವಿರುವ ವಿಶಿಷ್ಟ ನ್ಯಾಯಾಂಗ ವ್ಯವಸ್ಥೆಯನ್ನು ಕಾಣಬಹುದಾಗಿದೆ.

## [III.] ಚೀನಾದ ನ್ಯಾಯಾಂಗ ವ್ಯವಸ್ಥೆ [Judicial System of China]:

**ಪೀಠಿಕೆ:** ಸಮತಾವಾದಿ ರಾಷ್ಟ್ರಗಳು ಆಂಗ್ಲೊ ಸ್ಯಾಕ್ಸನ್ ನ್ಯಾಯ ಶಾಸ್ತ್ರವನ್ನಾಗಲಿ ಅಥವಾ ಅಧಿಕಾರ ಪ್ರತ್ಯೇಕತಾ ಸಿದ್ಧಾಂತವನ್ನಾಗಲಿ ಬೆಂಬಲಿಸುವುದಿಲ್ಲ. ಫಲವಾಗಿ ಸಮತಾವಾದಿ ರಾಷ್ಟ್ರಗಳಲ್ಲಿ ನ್ಯಾಯಾಂಗವು ಕಡಿಮೆ ಮಹತ್ವವನ್ನು ತಾಳಿರುತ್ತದೆ. ನ್ಯಾಯಾಂಗವೆಂಬುದು ಅವರ ದೃಷ್ಟಿಯಲ್ಲಿ ಸಮಾಜವಾದಿ ಸಿದ್ಧಾಂತದ ಜಾಗೃತಿಯನ್ನು ಮೂಡಿಸುವ ಸಾಧನವಾಗಿರುತ್ತದೆ. ಇದರೊಡನೆ ಸಮಾಜವಾದಿ ರಾಷ್ಟ್ರಗಳಲ್ಲಿ ನ್ಯಾಯಾಂಗವು ಸರ್ಕಾರದ ಅಂಗವಾಗಿರದೇ ಕೇವಲ ಒಂದು ಆಡಳಿತಾತ್ಮಕ ಇಲಾಖೆಯಾಗಿರುತ್ತದೆ. ಮುಂದುವರಿದು, ನ್ಯಾಯಾಂಗವು ನ್ಯಾಯಾಲಯಗಳೊಡನೆ ಪ್ರೊಕ್ಯುರೇಟರೇಟ್ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ. ಈ ವಿಚಾರದಲ್ಲಿ ಸಮತಾವಾದಿ ಚೀನಾ ಕೂಡ ಭಿನ್ನವಾಗಿಲ್ಲ. ಚೀನಾದ 1954 ರ ಸಂವಿಧಾನವು ಕೇವಲ 12, 1978 ರ ಸಂವಿಧಾನವು 3 ಮತ್ತು 1982 ರ ಸಂವಿಧಾನವು 13 ವಿಧಿಗಳನ್ನು ಮಾತ್ರ ನ್ಯಾಯಾಂಗವನ್ನು ವಿವರಿಸಲು ಮೀಸಲಾಗಿಡುವ ಮೂಲಕ ಅದರ ಕಡಿಮೆ ಮಹತ್ವವನ್ನು ಸೂಚಿಸಿದ್ದವು. ಪ್ರಸ್ತುತ ಚೀನಾದ ಜನತಾ ಗಣರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ನ್ಯಾಯಾಂಗ ವ್ಯವಸ್ಥೆಯ ರಚನೆ ಹಾಗೂ ಅಧಿಕಾರ ಕಾರ್ಯಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**[A.] ಮೂಲ ಜನತಾ ನ್ಯಾಯಾಲಯಗಳು [Basic People's Courts]:** ಈ ಪ್ರಾಥಮಿಕ ನ್ಯಾಯಾಲಯಗಳು ಕೌಂಟಿ, ನಗರಗಳು, ಸ್ವಾಯತ್ತ ಕೌಂಟಿಗಳು, ಜಿಲ್ಲಾ

ಕೇಂದ್ರದಂತಿರುವ ನಗರಗಳಲ್ಲಿ ಕಂಡು ಬರುತ್ತವೆ. ಈ ಬಗೆಯ ನ್ಯಾಯಾಲಯಗಳು ಒಬ್ಬ ಅಧ್ಯಕ್ಷ, ಇಬ್ಬರು ಉಪಾಧ್ಯಕ್ಷರು ಹಾಗೂ ನ್ಯಾಯಾಧೀಶರಿಂದ ಕೂಡಿರುತ್ತವೆ. ಮೂಲ ಜನತಾ ನ್ಯಾಯಾಲಯಗಳು ತಮ್ಮ ವ್ಯಾಪ್ತಿಗೊಳಪಡುವ ಜನಸಂಖ್ಯೆ, ಭೂಪ್ರದೇಶದ ವಿಶಾಲತೆ ಹಾಗೂ ಮೊಕದ್ದಮೆ ಆಧರಿಸಿ ಅಗತ್ಯವಿದ್ದಲ್ಲಿ ಜನತಾ ನ್ಯಾಯ ಮಂಡಳಿಗಳನ್ನು ರಚಿಸಿಕೊಳ್ಳಲು ಅವಕಾಶ ಪಡೆದಿರುತ್ತವೆ. ಹೀಗೆ ರಚನೆಗೊಂಡ ಮಂಡಳಿಗಳ ತೀರ್ಮಗಳು ಮೂಲ ಜನತಾ ನ್ಯಾಯಾಲಯಗಳ ತೀರ್ಪುಗಳಿಗೆ ಸಮಾನವಾಗಿರುತ್ತವೆ. ಜೊತೆಗೆ ಈ ಬಗೆಯ ನ್ಯಾಯಾಲಯಗಳಲ್ಲಿ ಅಪರಾಧ ಹಾಗೂ ನಾಗರಿಕ ಮೊಕದ್ದಮೆಗಳ ಇತ್ಯರ್ಥಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಬಹುದಾಗಿರುತ್ತದೆ.

### [B.] ಮಧ್ಯಂತರ ಜನತಾ ನ್ಯಾಯಾಲಯಗಳು [Intermediate People's Courts]:

ಈ ನ್ಯಾಯಾಲಯಗಳು ಪ್ರಾಂತ್ಯವೊಂದರ ವಿವಿದ ಭಾಗಗಳು, ಸ್ವತಂತ್ರ ಪ್ರದೇಶಗಳು, ಕೇಂದ್ರ ಸರ್ಕಾರದ ಅಧೀನದಲ್ಲಿರುವ ನಗರಗಳಲ್ಲಿ ಸ್ಥಾಪಿಸಲ್ಪಟ್ಟಿರುತ್ತವೆ. ಈ ನ್ಯಾಯಾಲಯಗಳಲ್ಲಿ ಒಬ್ಬ ಅಧ್ಯಕ್ಷ, ಇಬ್ಬರು ಉಪಾಧ್ಯಕ್ಷರು, ಮುಖ್ಯ ನ್ಯಾಯಾಧೀಶ ಹಾಗೂ ಇತರ ನ್ಯಾಯಾಧೀಶರನ್ನು ಕಾಣಬಹುದಾಗಿದೆ. ಇಲ್ಲಿ ಅಪರಾಧ ಹಾಗೂ ನಾಗರಿಕ ವಿಭಾಗಗಳಿದ್ದು ಅಗತ್ಯವಿದ್ದಲ್ಲಿ ಅನ್ಯ ವಿಭಾಗಗಳನ್ನು ರಚಿಸಿಕೊಳ್ಳಬಹುದಾಗಿದೆ. ಮಧ್ಯಂತರ ಜನತಾ ನ್ಯಾಯಾಲಯಗಳಿಗೆ ಸ್ಥಾಪಿತ ಕಾನೂನು ಸೂಚಿತ ಮೂಲ ಮೊಕದ್ದಮೆಗಳು, ಮೂಲ ಜನತಾ ನ್ಯಾಯಾಲಯಗಳಿಂದ ಬರುವ ಮನವಿಯ ಮೊಕದ್ದಮೆಗಳು ಹಾಗೂ ಪ್ರೊಕ್ಯುರೇಟರೇಟರು ದಾಖಲಿಸುವ ಮೊಕದ್ದಮೆಗಳು ವಿಚಾರಣೆಗೆ ಬರುತ್ತವೆ.

### [C.] ಉನ್ನತ ಜನತಾ ನ್ಯಾಯಾಲಯಗಳು [Higher People's Courts]:

ಈ ಬಗೆಯ ನ್ಯಾಯಾಲಯಗಳು ಪ್ರಾಂತ್ಯ, ಸ್ವತಂತ್ರ ಪ್ರದೇಶಗಳು ಹಾಗೂ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ ಭೂಪ್ರದೇಶದಲ್ಲಿ ಕಂಡು ಬರುತ್ತವೆ. ಇಲ್ಲಿ ಅಧ್ಯಕ್ಷ, ಉಪಾಧ್ಯಕ್ಷರು, ವಿಭಾಗಗಳ ಮುಖ್ಯ ನ್ಯಾಯಾಧೀಶರು ಹಾಗೂ ಇತರ ನ್ಯಾಯಾಧೀಶರು ಕಾರ್ಯ ನಿರ್ವಹಿಸುತ್ತಾರೆ. ಉನ್ನತ ಜನತಾ ನ್ಯಾಯಾಲಯಗಳು ಸಾಮಾನ್ಯವಾಗಿ ತಮ್ಮ ವ್ಯಾಪ್ತಿಗೊಳಪಡುವ ಮೂಲ ಮೊಕದ್ದಮೆ, ಕೆಳ ಹಂತದ ವಿವಿಧ ನ್ಯಾಯಾಲಯಗಳಿಂದ ಬರುವ ಮನವಿಯ ಮೊಕದ್ದಮೆ ಹಾಗೂ ಪ್ರೊಕ್ಯುರೇಟರೇಟರು ದಾಖಲಿಸುವ ಮೊಕದ್ದಮೆಗಳನ್ನು ಸ್ವೀಕರಿಸಿ ವಿಚಾರಣೆ ನಡೆಸುತ್ತವೆ.

### [D.] ಸರ್ವೋಚ್ಛ ಜನತಾ ನ್ಯಾಯಾಲಯ [The Supreme People's Court]:



ಇದು ಚೀನಾದ ನ್ಯಾಯಾಂಗ ವ್ಯವಸ್ಥೆಯ ಅತ್ಯುನ್ನತ ನ್ಯಾಯಾಲಯವಾಗಿದೆ. ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ ನ್ಯಾಯಾಧೀಶರಿಂದ ಕೂಡಿರುವ ಸರ್ವೋಚ್ಛ ನ್ಯಾಯಾಲಯದ ಅಧ್ಯಕ್ಷನನ್ನು ರಾಷ್ಟ್ರೀಯ ಜನತಾ ಕಾಂಗ್ರೆಸ್ ನೇಮಿಸಿದರೆ ಉಪಾಧ್ಯಕ್ಷ ಹಾಗೂ ನ್ಯಾಯಾಧೀಶರನ್ನು ಸ್ಥಾಯಿ ಸಮಿತಿ ನೇಮಿಸುತ್ತದೆ. ಈ ನ್ಯಾಯಾಲಯದ ನ್ಯಾಯಾಧೀಶರ ಅಧಿಕಾರಾವಧಿಯು ಐದು ವರ್ಷಗಳು. ಸಂವಿಧಾನವು ಈ ನ್ಯಾಯಾಲಯದ ಅಧಿಕಾರಗಳನ್ನು ಕುರಿತಂತೆ ಮೌನವಾಗಿದ್ದರೂ ವಿವಿಧ ಕಾನೂನುಗಳಡಿ ಕೆಳಗಿನ ಕಾರ್ಯಗಳನ್ನು ಸರ್ವೋಚ್ಛ ನ್ಯಾಯಾಲಯವು ಚೀನಾದಲ್ಲಿ ನಿರ್ವಹಿಸುತ್ತಿದೆ.

1. ಸ್ಥಳೀಯ ಮಟ್ಟದ ವಿವಿಧ ನ್ಯಾಯಾಲಯಗಳ ಮೇಲ್ವಿಚಾರಣೆ ನಡೆಸುವುದು.
2. ರಾಷ್ಟ್ರೀಯ ಜನತಾ ಕಾಂಗ್ರೇಸ್ಸು ಸೂಚಿಸುವ ವಿವಿಧ ಕಾರ್ಯವನ್ನು ನಿರ್ವಹಿಸುವುದು.
3. ರಾಷ್ಟ್ರೀಯ ಮಹತ್ವವುಳ್ಳ ಮೊಕದ್ದಮೆಗಳನ್ನು ನೇರವಾಗಿ ಸ್ವೀಕರಿಸಿ ವಿಚಾರಣೆ ನಡೆಸುವುದು.
4. ಪ್ರಾಂತ್ಯ ಹಾಗೂ ಸ್ವತಂತ್ರ ಪ್ರದೇಶಗಳ ಮಟ್ಟದ ಉನ್ನತ ನ್ಯಾಯಾಲಯಗಳ ತೀರ್ಪಿನ ವಿರುದ್ಧ ಬರುವ ಮನವಿಗಳನ್ನು ಸ್ವೀಕರಿಸಿ ವಿಚಾರಣೆ ನಡೆಸುವುದು.

ಈ ಮೇಲೆ ವಿವರಿಸಿದಂತೆ ಚೀನಾದ ನ್ಯಾಯಾಂಗ ವ್ಯವಸ್ಥೆಯ ಸಂಘಟನೆಯನ್ನು ಅವಲೋಕಿಸಿದರೆ ಅದು ಏಕೀಕೃತ ಮತ್ತು ಶ್ರೇಣಾತ್ಮಕ ಸ್ವರೂಪವನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಅಮೇರಿಕಾ ಹಾಗೂ ಭಾರತಕ್ಕೆ ಹೋಲಿಸಿದರೆ ಚೀನಾವು ನ್ಯಾಯಾಂಗ ಸ್ವಾತಂತ್ರ್ಯವನ್ನಾಗಲಿ ಅಥವಾ ನ್ಯಾಯಿಕ ವಿಮರ್ಶಾಧಿಕಾರವನ್ನಾಗಲಿ ಹೊಂದಿಲ್ಲದಿರುವುದು ಗಮನಾರ್ಹ. ಇದರೊಡನೆ ಪಕ್ಷದ ನಾಯಕರೇ ನ್ಯಾಯಾಂಗದಲ್ಲಿ ಭಾಗವಹಿಸುವುದು, ಶಾಸಕಾಂಗದಿಂದ ನ್ಯಾಯಾಧೀಶರು ನೇಮಕಗೊಳ್ಳುವುದು, ಕಡಿಮೆ ಅಧಿಕಾರಾವಧಿ ಒದಗಿಸಿದುದು ಚೀನಾದ ನ್ಯಾಯಾಂಗ ವ್ಯವಸ್ಥೆಯ ದೌರ್ಬಲ್ಯಗಳಾಗಿವೆ. ಜೊತೆಗೆ ಪ್ರೊಕ್ಯುರೇಟರೇಟ್ ವ್ಯವಸ್ಥೆ ಅಸ್ತಿತ್ವದಲ್ಲಿದ್ದುದು ಚೀನಾದ ನ್ಯಾಯಾಂಗ ವ್ಯವಸ್ಥೆ ಪ್ರಬಲವಾಗಿರದಿರಲು ಕಾರಣವೆಂದರೆ ತಪ್ಪಾಗಲಾರದು.

## ಮಾದರಿ ಪ್ರಶ್ನೆಗಳು [Model Questions]:

### [A.] ಎರಡು ಅಂಕದ ಪ್ರಶ್ನೆಗಳು:

1. ನ್ಯಾಯಾಂಗ ಎಂದರೇನು?
2. ನ್ಯಾಯಾಂಗವು ಎಂತಹ ದೇಶಗಳಲ್ಲಿ ಪ್ರಬಲವಾಗಿರುತ್ತದೆ?
3. ಬ್ರಿಟಿಷ್ ನ್ಯಾಯಾಂಗ ದುರ್ಬಲವಾಗಿರಲು ಕಾರಣಗಳಾವುವು?

4. ಜ್ಯೂರಿ ಪದ್ಧತಿ ಎಂದರೇನು?
5. ಕೋರ್ಟ್ ಆಫ್ ಕ್ವಾಟರ್ ಸೆಷನ್ಸ್ ಹೊಂದಿರುವ ಎರಡು ಅಧಿಕಾರಗಳನ್ನು ಬರೆಯಿರಿ.
6. ಶ್ರೀಮಂತರ ಸದನದ ಯಾವ ಸದಸ್ಯರು ನ್ಯಾಯಿಕ ಅಧಿಕಾರಗಳನ್ನು ಚಲಾಯಿಸುತ್ತಾರೆ?
7. ಅಮೇರಿಕಾವು ಏಕೆ ಪ್ರಬಲ ನ್ಯಾಯಾಂಗವನ್ನು ಹೊಂದಿದೆ?
8. ನ್ಯಾಯಾಂಗ ವಿಮರ್ಶೆ ಎಂದರೇನು?
9. ಅಮೇರಿಕಾ ಸಂವಿಧಾನದ ಮೂರನೇ ವಿಧಿಯು ಏನನ್ನು ಸೂಚಿಸುತ್ತದೆ?
10. ಅಮೇರಿಕಾದಲ್ಲಿ ಕೆಳ ನ್ಯಾಯಾಲಯಗಳ ಇತರ ಹೆಸರುಗಳನ್ನು ಬರೆಯಿರಿ.
11. ಸಮತಾವಾದಿ ರಾಷ್ಟ್ರಗಳಲ್ಲಿ ನ್ಯಾಯಾಂಗಕ್ಕೆ ಕಡಿಮೆ ಪ್ರಾಶಸ್ತ್ಯ ನೀಡಲು ಕಾರಣವೇನು?
12. ಮೂಲ ಜನತಾ ನ್ಯಾಯಾಲಯಗಳ ಬಗೆಗೆ ನಿಮಗೇನು ತಿಳಿದಿದೆ?
13. ಚೀನಾದ ಸರ್ವೋಚ್ಛ ಜನತಾ ನ್ಯಾಯಾಲಯದ ಎರಡು ಕಾರ್ಯಗಳನ್ನು ಬರೆಯಯಿರಿ.

[B.] ಐದು ಅಂಕದ ಪ್ರಶ್ನೆಗಳು:

1. ಅಮೇರಿಕಾ ಒಕ್ಕೂಟದ ನ್ಯಾಯಾಂಗ ವ್ಯವಸ್ಥೆಯನ್ನು ವಿವರಿಸಿರಿ.
2. ಬ್ರಿಟನ್ನಿನ ಅಪರಾಧ ನ್ಯಾಯಾಲಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
3. ಅಮೇರಿಕಾದ ಸರ್ವೋಚ್ಛ ನ್ಯಾಯಾಲಯ ಕುರಿತು ಟಿಪ್ಪಣಿ ಬರೆಯಿರಿ.
4. ಚೀನಾದ ನ್ಯಾಯಾಂಗ ವ್ಯವಸ್ಥೆಯನ್ನು ಪರಿಶೀಲಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಬ್ರಿಟಿಷ್ ನ್ಯಾಯಾಂಗ ವ್ಯವಸ್ಥೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.
2. ಅಮೇರಿಕಾದ ನ್ಯಾಯಾಂಗದ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ಚರ್ಚಿಸಿರಿ.
3. ಚೀನಾದ ನ್ಯಾಯಾಂಗ ವ್ಯವಸ್ಥೆಯನ್ನು ವಿವರಿಸಿರಿ.



ಅಧ್ಯಾಯ 11:

# ಪಕ್ಷ ಪದ್ಧತಿ
# [Party System].

## ಪ್ರಸ್ತಾವನೆ [Introduction]:

ಜಗತ್ತಿನಲ್ಲಿ ಇಂದು ಪ್ರಜಾಪ್ರಭುತ್ವವು ಜನಪ್ರಿಯವಾದ ರಾಜಕೀಯ ವ್ಯವಸ್ಥೆಯಾಗಿದೆ. ಸಾಮಾನ್ಯವಾಗಿ ಪ್ರತಿಯೊಂದು ಸಮಕಾಲೀನ ದೇಶವು ಪ್ರಾತಿನಿಧಿಕ ಪ್ರಜಾಪ್ರಭುತ್ವವನ್ನು ಅನುಸರಿಸುತ್ತಿವೆ. ಪ್ರಾತಿನಿಧಿಕ ಪ್ರಜಾಪ್ರಭುತ್ವದ ಯಶಸ್ಸಿಗೆ ರಾಜಕೀಯ ಪಕ್ಷಗಳ ಕಾರ್ಯಾಚರಣೆ ಅನಿವಾರ್ಯ. ಹೀಗಾಗಿ ಪ್ರಜಾಪ್ರಭುತ್ವ ಹಾಗೂ ರಾಜಕೀಯ ಪಕ್ಷಗಳು ಒಂದೇ ನಾಣ್ಯದ ಎರಡು ಮುಖಗಳೆಂದು ಪರಿಗಣಿಸಲ್ಪಟ್ಟಿವೆ. ಆದ್ದರಿಂದಲೇ ಬೆಗ್ಹಾಟ್ ಎಂಬ ಚಿಂತಕ ಪಕ್ಷ ಸರ್ಕಾರವು ಪ್ರಾತಿನಿಧಿಕ ಸರ್ಕಾರದ ಪ್ರಧಾನ ತತ್ವ ಎಂದಿರುವರು. ಪ್ರಜಾಪ್ರಭುತ್ವದಲ್ಲಿ ಸರ್ಕಾರ ಹಾಗೂ ಪ್ರಜೆಗಳ ನಡುವೆ ರಾಜಕೀಯ ಪಕ್ಷಗಳು ಸಂಬಂಧ ಕಲ್ಪಿಸುತ್ತವೆ. ಆಡಳಿತ ಅಥವಾ ವಿರೋಧ ಪಕ್ಷವಾಗಿ ಜನಹಿತ ರಕ್ಷಿಸಲು ರಾಜಕೀಯ ಪಕ್ಷಗಳು ಸಹಕಾರಿಯಾಗುತ್ತವೆ. ಈ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳನ್ನು ಪ್ರಜಾಪ್ರಭುತ್ವದ ಬೆನ್ನೆಲುಬು ಎಂಬುದಾಗಿ ಪರಿಗಣಿಸಲಾಗುತ್ತದೆ. ಆಸಕ್ತಿದಾಯಕ ಅಂಶವೇನೆಂದರೆ, ಸರ್ವಾಧಿಕಾರಿ ವ್ಯವಸ್ಥೆಗೂ ಸಹ ರಾಜಕೀಯ ಪಕ್ಷಗಳು ಅನಿವಾರ್ಯ ಅಂಶವಾಗಿರುತ್ತದೆ.

ದೇಶವೊಂದರ ರಾಜಕೀಯ ವ್ಯವಸ್ಥೆಯಲ್ಲಿ ಪಕ್ಷ ಸ್ಥಾಪನೆಗಿರುವ ಸ್ವಾತಂತ್ರ್ಯ, ಪಕ್ಷಗಳ ಸಂಖ್ಯೆ, ಪಕ್ಷಗಳ ವಿಧಗಳು ಹಾಗೂ ಉದ್ದೇಶಗಳನ್ನು ಒಳಗೊಂಡ ಪರಿಕಲ್ಪನೆಯೇ ಪಕ್ಷಪದ್ಧತಿ. ಆಯಾ ದೇಶಗಳು ಅಳವಡಿಸಿಕೊಂಡ ರಾಜಕೀಯ ವ್ಯವಸ್ಥೆಯನ್ನಾಧರಿಸಿ ಪಕ್ಷ ಪದ್ಧತಿಯು ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತದೆ. ಹೀಗಾಗಿ ಚಿಂತಕರು ಪ್ರಧಾನವಾಗಿ ಏಕ ಪಕ್ಷ ಪದ್ಧತಿ, ದ್ವಿಪಕ್ಷ ಪದ್ಧತಿ ಮತ್ತು ಬಹು ಪಕ್ಷ ಪದ್ಧತಿ ಎಂದು ವಿಶ್ವದ ವಿವಿಧ ರಾಷ್ಟ್ರಗಳ ಪಕ್ಷ ಪದ್ಧತಿಯನ್ನು ವರ್ಗೀಕರಿಸಿದ್ದಾರೆ. ಬ್ರಿಟನ್ ಮತ್ತು ಅಮೇರಿಕಾ ದೇಶಗಳು ಜಗತ್ತಿನ ಎರಡು ಪ್ರಬಲ ಪ್ರಜಾಸತ್ತಾತ್ಮಕ ದೇಶಗಳಾಗಿದ್ದು ದ್ವಿ ಪಕ್ಷ ಪದ್ಧತಿಯನ್ನು ಮೈಗೂಡಿಸಿಕೊಂಡಿವೆ. ಆದರೆ, ಸಮಾಜವಾದಿ ತಳಹದಿಯುಳ್ಳ ಪ್ರಜಾಸತ್ತಾತ್ಮಕ ಕೇಂದ್ರಿಕರಣದ ರಾಜಕೀಯ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ಚೀನಾವು ಏಕಪಕ್ಷ ಪದ್ಧತಿಯನ್ನು ಅನುಸರಿಸುತ್ತಿದೆ. ಪ್ರಸ್ತುತ ಅಧ್ಯಾಯದಲ್ಲಿ ಅಮೇರಿಕಾ, ಬ್ರಿಟನ್ ಮತ್ತು ಚೀನಾ ದೇಶಗಳಲ್ಲಿನ ಪಕ್ಷ ಪದ್ಧತಿಯನ್ನು

ಮನವರಿಕೆ ಮಾಡಿಕೊಳ್ಳಲು ನೆರವಾಗುವ ಪ್ರಾಥಮಿಕ ವಿವರಗಳನ್ನು ಸಂಕ್ಷಿಪ್ತವಾಗಿ ಒದಗಿಸಲಾಗಿದೆ.

## [I.] ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಪಕ್ಷ ಪದ್ಧತಿ [Party System of United States of America]:

### [A.] ಅಮೇರಿಕಾದ ರಾಜಕೀಯ ಪಕ್ಷಗಳ ಉಗಮ ಮತ್ತು ಬೆಳವಣಿಗೆ [Origin and Growth of American Political Parties]:

ಅಮೇರಿಕಾದಲ್ಲಿ ರಾಜಕೀಯ ಪಕ್ಷಗಳ ಉಗಮವನ್ನು ಸಂವಿಧಾನ ಜಾರಿಗೂ ಮುನ್ನವೇ ಗುರುತಿಸಬಹುದಾಗಿದೆ. ಮುಂದೆ ಅಮೇರಿಕಾದ ಸಂವಿಧಾನ ರಚಿಸಲು ರಚನೆಗೊಂಡ ಫಿಲಿಡೆಲ್ಫಿಯಾ ಸಮ್ಮೇಳನದಲ್ಲಿ ರಾಜಕೀಯವಾಗಿ ಭಿನ್ನ ವಿಚಾರಧಾರೆ ಹೊಂದಿದ್ದ ಎರಡು ಬಣಗಳು ಕಾಣಿಸಿಕೊಂಡವು. ಸಂವಿಧಾನ ಜಾರಿಗೊಳ್ಳುವ ಮುನ್ನ ಅಮೇರಿಕಾದ ವಿವಿಧ ರಾಜ್ಯಗಳ ಅನುಮೋದನೆಗೆ ಕಳುಹಿಸಲ್ಪಟ್ಟ ವೇಳೆಗಾಗಲೇ ಅಮೇರಿಕಾದಲ್ಲಿ ಒಕ್ಕೂಟವಾದಿಗಳು ಮತ್ತು ಒಕ್ಕೂಟ ವಿರೋಧಿಗಳು ಎಂಬ ಎರಡು ಪಕ್ಷಗಳು ರಚನೆಗೊಂಡವು. ಅಮೇರಿಕಾದ ಮೊದಲ ಅಧ್ಯಕ್ಷನಾಗಿದ್ದ ಜಾರ್ಜ್ ವಾಷಿಂಗ್ಟನ್ ರಾಜಕೀಯ ಪಕ್ಷಗಳ ದೋಷಗಳನ್ನು ಕುರಿತಂತೆ ರಾಷ್ಟ್ರದ ಜನರಿಗೆ ಎಚ್ಚರಿಕೆಯನ್ನು ನೀಡಿದ್ದರು. ಇವರ ನಂತರ ಎರಡನೇ ಅಧ್ಯಕ್ಷರಾಗಿ ಅಧಿಕಾರಕ್ಕೆ ಬಂದ ಜಾನ್ ಆಡೆಂಮ್ಸ್ ಒಕ್ಕೂಟವಾದಿ ಮತ್ತು ಒಕ್ಕೂಟ ವಿರೋಧಿಗಳ ನಡುವಿನ ಸ್ಪರ್ಧೆಯನ್ನು ನಿಯಂತ್ರಿಸಲಾಗಲಿಲ್ಲ. ಅಂತಿಮವಾಗಿ 1800 ರ ಚುನಾವಣೆಯ ವೇಳೆಗೆ ಆಡೆಂಮ್ಸ್ ನೇತೃತ್ವದ ಒಕ್ಕೂಟವಾದಿಗಳು ಮತ್ತು ಜಫರ್‌ಸನ್ ನೇತೃತ್ವದ ಒಕ್ಕೂಟ ವಿರೋಧಿಗಳು ಎಂಬ ಎರಡು ಪಕ್ಷಗಳು ಅಮೇರಿಕಾದಲ್ಲಿ ಸ್ಪಷ್ಟವಾಗಿ ಅಸ್ತಿತ್ವಕ್ಕೆ ಬಂದವು. ಗಮನಾರ್ಹ ಅಂಶವೇನೆಂದರೆ ಒಕ್ಕೂಟವಾದಿಗಳು ಕೈಗಾರಿಕೆ ಮತ್ತು ವ್ಯಾಪಾರವನ್ನು ಬಲಗೊಳಿಸಿ ಕೇಂದ್ರ ಸರ್ಕಾರವನ್ನು ಪ್ರಬಲಗೊಳಿಸುವ ತತ್ವದಲ್ಲಿ ನಂಬಿಕೆ ಹೊಂದಿದ್ದರು. ಇದಕ್ಕೆ ವ್ಯತಿರಿಕ್ತವಾಗಿ ಒಕ್ಕೂಟ ವಿರೋಧಿಗಳು ಕೃಷಿಕರನ್ನು ಬಲಗೊಳಿಸಿ ಪ್ರಾದೇಶಿಕತೆಗೆ ಆದ್ಯತೆ ನೀಡಿದ್ದರು.

1820 ರ ಚುನಾವಣೆಯ ವೇಳೆಗೆ ಒಕ್ಕೂಟವಾದಿಗಳು ತಮ್ಮ ಜನಪ್ರಿಯತೆಯನ್ನು ಕಳೆದುಕೊಂಡರಲ್ಲದೇ ತಮ್ಮ ಅಭ್ಯರ್ಥಿಯನ್ನು ಕಣಕ್ಕಿಳಿಸಲಿಲ್ಲ. ಆದರೆ, ಒಕ್ಕೂಟ ವಿರೋಧಿಗಳು ಪ್ರಜೆಗಳ ಸ್ವಾಭಾವಿಕ ಹಕ್ಕುಗಳನ್ನು ಪ್ರತಿಪಾದಿಸುತ್ತಾ ಅಮೇರಿಕಾದ ರಾಜಕೀಯದಲ್ಲಿ ಬಿಗಿ ಹಿಡಿತ ಹೊಂದಿದ್ದರು. ಮುಂದುವರಿದು ಒಕ್ಕೂಟ ವಿರೋಧಿಗಳು ತಮ್ಮನ್ನು ರಿಪಬ್ಲಿಕನ್ಸ್ ಎಂಬುದಾಗಿ ಗುರುತಿಸಿಕೊಂಡರು. ಗಮನಾರ್ಹ ಅಂಶವೇನೆಂದರೆ ರಿಪಬ್ಲಿಕನ್ ಪಕ್ಷದ ನಾಯಕರ ನಡುವೆ ವೈಯಕ್ತಿಕ ಸ್ಪರ್ಧೆ ಮತ್ತು ಭಿನ್ನಾಭಿಪ್ರಾಯ ಅಧಿಕಗೊಂಡವು. ಹೀಗಾಗಿ 1824 ರ ಚುನಾವಣೆಯಲ್ಲಿ ಅಧ್ಯಕ್ಷೀಯ ಹುದ್ದೆಗೆ ಸ್ಪರ್ಧಿಸಿದ್ದ ಯಾವುದೇ ಅಭ್ಯರ್ಥಿ ಅಗತ್ಯ ಮತಗಳನ್ನು ಪಡೆಯದೇ ಕಾಂಗ್ರೆಸ್ಸು ಅಧ್ಯಕ್ಷನನ್ನು



ಚುನಾಯಿಸುವಂತಾಯಿತು. ಆಗ ಒಕ್ಕೂಟ ವಿರೋಧಿಗಳು ಅಂದರೆ ರಿಪಬ್ಲಿಕನ್ಸ್ ಎಂಬ ಪಕ್ಷವು ಆಂಡ್ರೂ ಜಾಕ್ಸನ್ ನೇತೃತ್ವದಲ್ಲಿ ಡೆಮಾಕ್ರೆಟಿಕ್ ರಿಪಬ್ಲಿಕನ್ಸ್ [Democratic Republicans] ಮತ್ತು ಆಡೆಂಮ್ಸ್ ನೇತೃತ್ವದಲ್ಲಿ ನ್ಯಾಷನಲ್ ರಿಪಬ್ಲಿಕನ್ಸ್ [National Republicans] ಎಂದು ವಿಭಜನೆಗೊಂಡಿತು. ನಂತರ 1828 ರಲ್ಲಿ ಜರುಗಿದ ಚುನಾವಣೆಯಲ್ಲಿ ಡೆಮಾಕ್ರೆಟಿಕ್ ರಿಪಬ್ಲಿಕನ್ಸ್ ಪಕ್ಷ ಜಯಶಾಲಿಯಾಯಿತಲ್ಲದೇ ಅತ್ಯಂತ ಪ್ರಬಲ ಪಕ್ಷವಾಗಿ ಗುರುತಿಸಿಕೊಂಡಿತು. ಈ ನಡುವೆ ಸತತ ಸೋಲಿನಿಂದ ಕಂಗೆಟ್ಟ ನ್ಯಾಷನಲ್ ರಿಪಬ್ಲಿಕನ್ಸ್ ಹಾಗೂ ಡೆಮಾಕ್ರೆಟಿಕ್ ರಿಪಬ್ಲಿಕನ್ಸ್ ಪಕ್ಷದ ಭಿನ್ನಮತೀಯ ನಾಯಕರು ವಿಗ್ [Whig] ಎಂಬ ಪಕ್ಷವನ್ನು 1834 ರಲ್ಲಿ ಸ್ಥಾಪಿಸಿದರು.

1860 ರ ಚುನಾವಣೆಯ ವೇಳೆಗೆ ವಿಗ್ ಪಕ್ಷವು ಗಣರಾಜ್ಯವಾದಿ ಪಕ್ಷ [Republican Party] ಎಂದು ಮರು ನಾಮಕರಣಗೊಂಡಿತಲ್ಲದೇ ಅದರ ಅಭ್ಯರ್ಥಿ ಅಬ್ರಹಾಂ ಲಿಂಕನ್ ಅಧ್ಯಕ್ಷನಾಗಿ ಚುನಾಯಿತಗೊಂಡರು. ನಾಗರಿಕ ಯುದ್ಧವನ್ನು ಸಮರ್ಥವಾಗಿ ನಿರ್ವಹಿಸಿದ ಗಣರಾಜ್ಯವಾದಿ ಪಕ್ಷವು ಮುಂದಿನ 24 ವರ್ಷಗಳ ಕಾಲ ಅಧಿಕಾರದಲ್ಲಿತ್ತು. ನಂತರದ ದಿನಗಳಲ್ಲಿ ಅಮೇರಿಕಾದ ಅಧ್ಯಕ್ಷನ ಹುದ್ದೆಯು ಪ್ರಜಾಸತ್ತಾತ್ಮಕ ಪಕ್ಷ ಅಥವಾ ಗಣರಾಜ್ಯವಾದಿ ಪಕ್ಷಗಳ ನಡುವೆ ಕೈ ಬದಲಾಗುತ್ತಾ ಬಂದಿದೆ.

ಆಸಕ್ತಿದಾಯಕ ಅಂಶವೇನೆಂದರೆ ಅಮೇರಿಕಾದಲ್ಲಿ ಪ್ರಜಾಸತ್ತಾತ್ಮಕ ಪಕ್ಷ ಮತ್ತು ಗಣರಾಜ್ಯವಾದಿ ಪಕ್ಷಗಳ ನಡುವೆ ಇತರ ಪುಟ್ಟ ಪಕ್ಷಗಳೂ ಕಾರ್ಯಾಚರಿಸಿದ ನಿದರ್ಶನಗಳಿವೆ. 1872 ರಲ್ಲಿ ಉಗಮಗೊಂಡ ಪ್ರೋಹಿಬಿಷನ್ ಪಕ್ಷವು ಮಾದಕ ವಸ್ತುಗಳ ಉತ್ಪಾದನೆ ಮತ್ತು ವಿತರಣೆಯನ್ನು ನಿಷೇಧಿಸುವ ಉದ್ದೇಶಕ್ಕಾಗಿ ಜನ್ಮ ತಾಳಿದ್ದು 1933 ರಲ್ಲಿ ತನ್ನ ಗುರಿ ತಲುಪಿದೊಡನೆ ಕಣ್ಮರೆಯಾಯಿತು. ಅಂತೆಯೇ ಸಮಾಜವಾದಿ ಪಕ್ಷವು ಸಮಾಜವಾದಿ ಕಾರ್ಮಿಕ ಪಕ್ಷ ಹಾಗೂ ಸಮಾಜವಾದಿ ಪ್ರಜಾಸತ್ತಾತ್ಮಕ ಪಕ್ಷಗಳ ವಿಲೀನದಿಂದ ಅಸ್ತಿತ್ವಕ್ಕೆ ಬಂದು ಸಾಮಾಜಿಕ ಹಾಗೂ ರಾಜಕೀಯ ಗುರಿಗಳೊಡನೆ ಕಾರ್ಯಾಚರಿಸಿತು. ಇವುಗಳೊಡನೆ ಕಮ್ಯುನಿಸ್ಟ್ ಪಕ್ಷ ಹಾಗೂ ಕಾರ್ಮಿಕ ಪಕ್ಷಗಳು ಅಮೇರಿಕಾದಲ್ಲಿ ರಚನೆಗೊಂಡವಾದರೂ ಅಧಿಕ ಪ್ರಭಾವವನ್ನು ಬೀರುವಲ್ಲಿ ಯಶಸ್ವಿಯಾಗಲಿಲ್ಲ.

### [B.] ಅಮೇರಿಕಾದ ರಾಜಕೀಯ ಪಕ್ಷ ಪದ್ಧತಿಯ ಲಕ್ಷಣಗಳು [Features of American Political Party System]:

ಅಮೇರಿಕಾದ ರಾಜಕೀಯ ಪಕ್ಷಗಳ ಉಗಮ ಮತ್ತು ಬೆಳವಣಿಗೆಯನ್ನು ಆಧರಿಸಿ ಆ ದೇಶದ ರಾಜಕೀಯ ಪಕ್ಷಗಳ ಪ್ರಧಾನ ಲಕ್ಷಣಗಳನ್ನು ಕೆಳಗಿನಂತೆ ಗುರುತಿಸಬಹುದಾಗಿದೆ.

**1. ಸಂವಿಧಾನಾತ್ಮಕ ಅಸ್ತಿತ್ವವಿಲ್ಲದಿರುವುದು:** ರಾಜಕೀಯ ಪಕ್ಷಗಳು ರಾಷ್ಟ್ರದ ಏಕತೆಗೆ ಮಾರಕವೆಂಬುದಾಗಿ ಅಮೇರಿಕಾದ ಸಂವಿಧಾನ ರಚನಾಕಾರರು ನಂಬಿದ್ದರು. ಮುಂದುವರಿದು ಅಮೇರಿಕಾದ ಅಧ್ಯಕ್ಷನ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ

ಪ್ರಭಾವವನ್ನು ತಡೆಯಲು ಪರೋಕ್ಷ ಚುನಾವಣಾ ಪದ್ಧತಿಯನ್ನು ಅಳವಡಿಸಲು ನಿರ್ಧರಿಸಿದ್ದರು. ಈ ಹಿನ್ನಲೆಯಲ್ಲಿ ರಾಜಕೀಯ ಪಕ್ಷಗಳು ಅಮೇರಿಕಾದ ಸಂವಿಧಾನದಲ್ಲಿ ಮಾನ್ಯತೆ ಅಥವಾ ಸ್ಥಾನ ಪಡೆಯಲು ವಿಫಲವಾದವು. ರಾಜಕೀಯ ಪಕ್ಷಗಳನ್ನು ಕುರಿತಂತೆ ಅಮೇರಿಕಾದ ಸಂವಿಧಾನವು ಮೌನವಾಗಿದ್ದರೂ ರಾಜಕೀಯ ಪಕ್ಷಗಳು ಸಂವಿಧಾನೇತರ ವ್ಯವಸ್ಥೆಯಾಗಿ ಅಮೇರಿಕಾದಲ್ಲಿ ಸಂವಿಧಾನ ರಚನಾ ಸಮಯದಲ್ಲಿಯೇ ಉಗಮಗೊಂಡು ಕಾರ್ಯಾಚರಿಸುತ್ತಿವೆ. ಕಾಲಾನುಕ್ರಮದಲ್ಲಿ ಒಕ್ಕೂಟ ಶಾಸಕಾಂಗವಾದ ಕಾಂಗ್ರೇಸ್ಸು ಮತ್ತು ರಾಜ್ಯ ಶಾಸಕಾಂಗಗಳು ರಾಜಕೀಯ ಪಕ್ಷಗಳಿಗೆ ಹಲವು ಕಾನೂನುಗಳನ್ನು ಜಾರಿಗೊಳಿಸಿದ್ದು ಶಾಸನಾತ್ಮಕ ಮಾನ್ಯತೆಯನ್ನು ಒದಗಿಸಿವೆ. ಪ್ರಸ್ತುತ ಅಮೇರಿಕಾದಲ್ಲಿ ರಾಜಕೀಯ ಪಕ್ಷಗಳ ಸದಸ್ಯತ್ವ, ಸಂಘಟನೆ, ಕಾರ್ಯ ಚಟುವಟಿಕೆ, ಆರ್ಥಿಕ ಸಂಪನ್ಮೂಲಗಳ ನಿಯಂತ್ರಣ ಮುಂತಾದ ವ್ಯವಹಾರಗಳನ್ನು ಒಕ್ಕೂಟ ಮತ್ತು ರಾಜ್ಯ ಶಾಸನಗಳು ನಿರ್ಧರಿಸುತ್ತಿವೆ. ಹೀಗೆ ಅಮೇರಿಕಾದ ರಾಜಕೀಯ ಪಕ್ಷಗಳು ಬ್ರಿಟನ್ನಿನಂತೆ ಸಂವಿಧಾನೇತರ ಬೆಳವಣಿಗೆಯಾಗಿ ಅಸ್ತಿತ್ವದಲ್ಲಿರುವುದು ಅವುಗಳ ಪ್ರಧಾನ ಲಕ್ಷಣವೆನಿಸಿದೆ.

**2. ಎರಡೇ ಪಕ್ಷಗಳ ಪ್ರಭಾವ:** ಅಮೇರಿಕಾದ ರಾಜಕೀಯ ಪಕ್ಷಗಳ ಇತಿಹಾಸವನ್ನು ಅವಲೋಕಿಸಿದರೆ ನಿರಂತರವಾಗಿ ಎರಡೇ ರಾಜಕೀಯ ಪಕ್ಷಗಳ ಪ್ರಭಾವವನ್ನು ರಾಷ್ಟ್ರ ಮಟ್ಟದಲ್ಲಿ ಕಾಣಬಹುದಾಗಿದೆ. ಆಂಟಿ ಮೇಸನ್ಸ್ (Anti-Masons), ಫ್ರಿ ಸೊಯ್ಲ್ ಪಾರ್ಟಿ [Free Soil Party), ಗ್ರೀನ್ ಬ್ಯಾಕರ್ಸ್ (Green Backers), ಪಾಪ್ಯುಲಿಸ್ಟ್ಸ್ (Populists), ನ್ಯಾಷನಲ್ ಪ್ರೋಗ್ರೆಸ್ಸಿವ್ ಪಾರ್ಟಿ (National Progressive party) ಮುಂತಾದ ಹಲವು ರಾಜಕೀಯ ಪಕ್ಷಗಳು ಕಾಲಾನುಕ್ರಮದಲ್ಲಿ ಮತ್ತು ವಿವಿಧ ಪ್ರದೇಶಗಳಲ್ಲಿ ಅಸ್ತಿತ್ವಕ್ಕೆ ಬಂದು ನಂತರ ಮಾಯವಾದವು. ಅಂತೆಯೇ ಸಮಾಜವಾದಿ ಪಕ್ಷ, ಸಮತಾವಾದಿ ಪಕ್ಷ ಹಾಗೂ ಕಾರ್ಮಿಕರ ಪಕ್ಷಗಳು ಜನ್ಮ ತಾಳಿದವಾದರೂ ರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವ ಹೊಂದಿ ಅಧ್ಯಕ್ಷೀಯ ಚುನಾವಣೆಯಲ್ಲಿ ಸಾಧನೆ ತೋರಲು ವಿಫಲವಾಗಿವೆ. ಅಮೇರಿಕಾದಲ್ಲಿನ ಈ ಬೆಳವಣಿಗೆಗೆ ಬ್ರಿಟನ್ನಿನ ರಾಜಕೀಯ ಪಕ್ಷಗಳ ಪ್ರಭಾವವನ್ನು ಗುರುತಿಸಬಹುದಾಗಿದೆ. ಒಟ್ಟಿನಲ್ಲಿ ಪ್ರಸ್ತುತ ಪ್ರಜಾಸತ್ತಾತ್ಮಕ ಪಕ್ಷ ಮತ್ತು ಗಣರಾಜ್ಯವಾದಿ ಪಕ್ಷಗಳು ಮಾತ್ರ ಅಮೇರಿಕಾದ ರಾಜಕೀಯ ವ್ಯವಸ್ಥೆಯಲ್ಲಿ ಅಗಾಧ ಪ್ರಭಾವವನ್ನು ಬೀರಿಕೊಂಡಿದ್ದು ಅಲ್ಲಿನ ರಾಜಕೀಯ ಪಕ್ಷಗಳ ಲಕ್ಷಣವೆನಿಸಿದೆ.

**3. ಮೂಲಭೂತ ಸೈದ್ಧಾಂತಿಕ ವ್ಯತ್ಯಾಸವಿಲ್ಲದಿರುವುದು:** ಸಾಮಾನ್ಯವಾಗಿ ಪ್ರತಿಯೊಂದೂ ರಾಜಕೀಯ ಪಕ್ಷವು ನಿರ್ದಿಷ್ಟ ಸೈದ್ಧಾಂತಿಕ ತಳಹದಿಯನ್ನು ಹೊಂದಿರುತ್ತದೆ. ಸಮಾಜವಾದ, ಜಾತ್ಯಾತೀತತೆ, ಬಂಡವಾಳಶಾಹಿತ್ವ, ಕೋಮುವಾದ, ಪ್ರಾದೇಶಿಕತಾವಾದ ಇತ್ಯಾದಿ ಸೈದ್ಧಾಂತಿಕ ತತ್ವಗಳು ವಿವಿಧ ರಾಜಕೀಯ ಪಕ್ಷಗಳ ನಡುವೆ ವ್ಯತ್ಯಾಸವನ್ನು ಗುರುತಿಸಲು ನೆರವಾಗುತ್ತವೆ. ಉದಾ: ಬ್ರಿಟನ್ನಿನಲ್ಲಿ ಲೇಬರ್ ಪಕ್ಷವು ಕಾರ್ಮಿಕರ



ಹಿತಾಸಕ್ತಿಗಳನ್ನು ರಕ್ಷಿಸುವ ಸಮಾಜವಾದಿ ಸಿದ್ಧಾಂತದ ತಳಹದಿಯನ್ನು ಹೊಂದಿದ್ದರೆ ಕಂಜರ್ವೇಟಿವ್ ಪಕ್ಷವು ಶ್ರೀಮಂತರ ಹಿತಾಸಕ್ತಿಯನ್ನು ರಕ್ಷಿಸುವ ಬಂಡವಾಳಶಾಹಿತ್ವವನ್ನು ಆಧರಿಸಿದುದು. ಆದರೆ, ಅಮೇರಿಕಾದ ಪ್ರಧಾನ ರಾಜಕೀಯ ಪಕ್ಷಗಳೆನಿಸಿಕೊಂಡಿರುವ ಡೆಮಾಕ್ರೆಟಿಕ್ ಮತ್ತು ರಿಪಬ್ಲಿಕನ್ ಪಕ್ಷಗಳು ಸೈದ್ಧಾಂತಿಕವಾಗಿ ವ್ಯತ್ಯಾಸವನ್ನು ಹೊಂದಿಲ್ಲ. ಸಾಮಾನ್ಯವಾಗಿ ಪ್ರಜಾಸತ್ತಾತ್ಮಕ ನೀತಿಯನ್ನು ಬೆಂಬಲಿಸುವ ಅಮೇರಿಕಾದ ಈ ಎರಡೂ ಪಕ್ಷಗಳ ನಡುವೆ ಸೈದ್ಧಾಂತಿಕ ಅಂತರದ ಬದಲು ವಿಧಾನಗಳ ಅಂತರವನ್ನು ಗಮನಿಸಬಹುದಾಗಿದೆ. ಆದ್ದರಿಂದಲೇ ಹರ್ಮನ್ ಫೈನರ್ 'ಅಮೇರಿಕಾವು ಏಕ ಪಕ್ಷವನ್ನು ಹೊಂದಿದ್ದು ಅದುವೇ ಡೆಮಾಕ್ರೆಟಿಕ್ ಮತ್ತು ರಿಪಬ್ಲಿಕನ್' ಎಂದಿರುವರು. ಮುಂದುವರಿದು ಲಾರ್ಡ್ ಬ್ರೈಸ್ 'ಅಮೇರಿಕಾದ ಎರಡು ರಾಜಕೀಯ ಪಕ್ಷಗಳು ಮದ್ಯದ ಪ್ರಕಾರಗಳ ಹೆಸರನ್ನುಳ್ಳ ಖಾಲಿ ಸೀಸೆಗಳು' ಎಂದಿರುವರು. ಒಟ್ಟಾರೆ ಮುಕ್ತ ಮಾರುಕಟ್ಟೆಗೆ ಬೆಂಬಲ, ಬಂಡವಾಳಶಾಹಿತ್ವಕ್ಕೆ ಪ್ರೋತ್ಸಾಹ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಘೋಷಣೆ, ಸಮಾಜ ಕಲ್ಯಾಣ ಕ್ರಮಗಳ ಜಾರಿ ಸೇರಿದಂತೆ ವಿವಿಧ ನೀತಿಗಳಲ್ಲಿ ಗಾಢ ಅಂತರವನ್ನು ಹೊಂದಿರದ ರಾಜಕೀಯ ಪಕ್ಷಗಳನ್ನು ಅಮೇರಿಕಾದಲ್ಲಿ ಕಾಣಬಹುದಾಗಿದೆ.

**4. ಭೌಗೋಳಿಕ ಮತ್ತು ಸಾಂಪ್ರದಾಯಿಕ ವ್ಯತ್ಯಾಸಗಳು:** ಅಮೇರಿಕಾದ ರಾಜಕೀಯ ಪಕ್ಷಗಳ ನಡುವೆ ಸೈದ್ಧಾಂತಿಕ ವ್ಯತ್ಯಾಸ ಕಂಡು ಬರದಿದ್ದರೂ ಭೌಗೋಳಿಕ ಮತ್ತು ಸಾಂಪ್ರದಾಯಿಕ ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ. ಸಾಮಾನ್ಯವಾಗಿ ಅಮೇರಿಕಾದಲ್ಲಿ ರಿಪಬ್ಲಿಕನ್ ಪಕ್ಷವು ಕೈಗಾರಿಕೆಯಲ್ಲಿ ಮುಂದುವರಿದ ನಗರ ಪ್ರದೇಶಗಳಲ್ಲಿ ತನ್ನ ಬೇರುಗಳನ್ನು ಹೊಂದಿದ್ದರೆ ಡೆಮಾಕ್ರೆಟಿಕ್ ಪಕ್ಷವು ಕೃಷಿ ಪ್ರಧಾನ ಹಳ್ಳಿಗಳಲ್ಲಿ ತನ್ನ ಬಾಹುಗಳನ್ನು ಚಾಚಿಕೊಂಡಿದೆ. ಮುಂದುವರಿದು ಮೊದಲನೇಯದು ಆರ್ಥಿಕವಾಗಿ ಸುಸ್ಥಿತಿಯ ಜನರನ್ನು ಪ್ರತಿನಿಧಿಸಿದರೆ ಎರಡನೇಯದು ಬಡ ವರ್ಗದ ಜನರನ್ನು ಪ್ರತಿನಿಧಿಸುತ್ತದೆ. ಹೀಗೆ ಅಮೇರಿಕಾದ ರಾಜಕೀಯ ಪಕ್ಷಗಳು ಭೌಗೋಳಿಕ ಹಾಗೂ ಸಾಂಪ್ರದಾಯಿಕ ವರ್ಗದ ವಿಚಾರದಲ್ಲಿ ವ್ಯತ್ಯಾಸವನ್ನು ಹೊಂದಿವೆ.

**5. ಸ್ಥಳೀಯ ಸಮಸ್ಯೆಗಳಿಗೆ ಆದ್ಯತೆ:** ಅಮೇರಿಕಾದ ರಾಜಕೀಯ ಪಕ್ಷಗಳು ರಾಷ್ಟ್ರೀಯ ಸಮಸ್ಯೆಗಳಿಗಿಂತ ಸ್ಥಳೀಯ ಸಮಸ್ಯೆಗಳಿಗೆ ಮಹತ್ವ ನೀಡುತ್ತವೆ. ಫಲವಾಗಿ ಅಮೇರಿಕಾದ ಬೇರೆ ಬೇರೆ ರಾಜ್ಯಗಳಲ್ಲಿ ರಾಜಕೀಯ ಪಕ್ಷವೊಂದರ ನಿಲುವು ಭಿನ್ನವಾಗಿರುತ್ತದೆ. ಜನರು ಕೇಂದ್ರ ಶಾಸಕಾಂಗವಾದ ಕಾಂಗ್ರೆಸ್ಸಿನ ಸದಸ್ಯರನ್ನು ಅಥವಾ ಅಧ್ಯಕ್ಷೀಯ ಮತದಾರ ವರ್ಗದ ಸದಸ್ಯರನ್ನು ಚುನಾಯಿಸುವಾಗ ಸ್ಥಳೀಯ ಸಮಸ್ಯೆಗಳೇ ಪ್ರಾಶಸ್ತ್ಯ ಪಡೆದಿರುತ್ತವೆ.

ಈ ಮೇಲಿನವು ಅಮೇರಿಕಾದ ರಾಜಕೀಯ ಪಕ್ಷಗಳ ಪ್ರಧಾನ ಲಕ್ಷಣಗಳಾಗಿದ್ದು ಅಮೇರಿಕಾದ ಆಡಳಿತದಲ್ಲಿ ಅವುಗಳ ಪ್ರಭಾವವನ್ನು ಸೂಚಿಸುತ್ತವೆ. ಮುಂದುವರಿದು ಪ್ರಸ್ತಾಪಿತ ವಿಶೇಷ ಲಕ್ಷಣಗಳು ಸಂವಿಧಾನಾತ್ಮಕ ಅಸ್ತಿತ್ವದ ಕೊರತೆಯ ನಡುವೆಯೂ

ಅಮೇರಿಕಾದಲ್ಲಿ ರಾಜಕೀಯ ಪಕ್ಷಗಳ ಬೆಳವಣಿಗೆಗೆ ಸಹಕಾರಿಯಾಗಿದುದು ಸ್ಪಷ್ಟವಾಗುತ್ತದೆ. ಗಮನಿಸಬೇಕಾದ ಅಂಶವೇನೆಂದರೆ ಸಂಘಟನಾ ಅದಕ್ಷತೆ, ಶಿಸ್ತಿನ ಅಭಾವ, ಪ್ರಭಾವಿ ನಾಯಕತ್ವದ ಕೊರತೆ ಮುಂತಾದ ಸಮಸ್ಯೆಗಳಿಂದ ಅಮೇರಿಕಾದ ರಾಜಕೀಯ ಪಕ್ಷಗಳು ಮುಕ್ತವಾಗಿಲ್ಲದಿರುವುದು.

### [II.] ಬ್ರಿಟನ್ನಿನ ಪಕ್ಷ ಪದ್ಧತಿ [Party System of Briton]:

### [A.] ಬ್ರಿಟನ್ನಿನಲ್ಲಿ ರಾಜಕೀಯ ಪಕ್ಷಗಳ ಉಗಮ ಮತ್ತು ಬೆಳವಣಿಗೆ [Origin and Growth of Political Parties in United Kingdom]:

ಜಗತ್ತಿಗೆ ರಾಜಕೀಯ ಪಕ್ಷಗಳ ಪರಿಕಲ್ಪನೆಯು ಬ್ರಿಟಿಷ್ ರಾಜಕೀಯ ವ್ಯವಸ್ಥೆಯ ಮಹತ್ವದ ಕೊಡುಗೆಯಾಗಿದೆ. ಹೀಗಾಗಿ ಪ್ರಪಂಚದ ಅನೇಕ ದೇಶಗಳು ಬ್ರಿಟನ್ನಿನ ರಾಜಕೀಯ ಪಕ್ಷಗಳಿಂದ ಪ್ರಭಾವಿತಗೊಂಡಿವೆ. ಬ್ರಿಟಿಷ್ ರಾಜಕೀಯ ಪಕ್ಷಗಳ ಉಗಮ ಮತ್ತು ಬೆಳವಣಿಗೆಯು ಅತ್ಯಂತ ಸ್ವಾರಸ್ಯಕರವಾಗಿದ್ದು ಸಂಕ್ಷೇಪ್ತವಾಗಿ ಈ ಕೆಳಗೆ ವಿವರಿಸಲಾಗಿದೆ.

ಬ್ರಿಟನ್ನಿನಲ್ಲಿ ಸ್ಟುವರ್ಟ್ ಮನೆತನದ ಆಡಳಿತಾವಧಿಯಲ್ಲಿ ಕವಲಿಯರ್ಸ್ [Cavaliers] ಹಾಗೂ ರೌಂಡ್‌ಹೆಡ್ಸ್ [Roundheads] ಎಂಬ ಎರಡು ಗುಂಪುಗಳು ಕಾಣಿಸಿಕೊಂಡವು. ಈ ಪೈಕಿ ಮೊದಲನೇ ಗುಂಪು ದೊರೆಗಳು ಮತ್ತು ಚರ್ಚಿನ ಸ್ಥಾಪಿತ ಹಕ್ಕುಗಳನ್ನು ಬೆಂಬಲಿಸಿದರೆ ಎರಡನೇ ಗುಂಪು ದೊರೆಗಳ ಮತ್ತು ಚರ್ಚಿನ ಪರಮಾಧಿಕಾರವನ್ನು ವಿರೋಧಿಸುತ್ತಿತ್ತು. ಈ ಭಿನ್ನ ಗುಂಪುಗಳ ಕಾರ್ಯಾಚರಣೆಯಲ್ಲಿ ಬ್ರಿಟನ್ನಿನ ರಾಜಕೀಯ ಪಕ್ಷಗಳ ಮೂಲವನ್ನು ಗುರುತಿಸಬಹುದಾಗಿದೆ. 17 ನೇ ಶತಮಾನದ ಕೊನೆಯ ಹೊತ್ತಿಗೆ ಕವಲಿಯರ್ಸ್ ಟೋರಿಸ್ [Tories] ಎಂಬ ಮತ್ತು ರೌಂಡ್‌ಹೆಡ್ಸ್ ವಿಗ್ಸ್ [Whigs] ಎಂಬ ಹೆಸರಿನ ಪಕ್ಷಗಳಾಗಿ ಪರಿವರ್ತನೆಗೊಂಡರು. ಟೋರಿಗಳು ಅರಸರ ಹಕ್ಕುಗಳನ್ನು ಬೆಂಬಲಿಸುವ ಸಮಾಜದ ಮೇಲ್ವರ್ಗವನ್ನು ಪ್ರತಿನಿಧಿಸಿದರೆ ವಿಗ್ ಅನುಯಾಯಿಗಳು ಅರಸನ ಅಧಿಕಾರಗಳ ಮೇಲಿನ ಮಿತಿಯನ್ನು ಪ್ರತಿಪಾದಿಸುತ್ತಾ ಸಮಾಜದಲ್ಲಿನ ಕೆಳ ವರ್ಗದವರನ್ನು ಪ್ರತಿನಿಧಿಸುತ್ತಿತ್ತು. ಹೀಗೆ ಅಸ್ತಿತ್ವಕ್ಕೆ ಬಂದ ಟೋರಿ ಮತ್ತು ವಿಗ್ ಎಂಬ ರಾಜಕೀಯ ಗುಂಪುಗಳೇ ಆಧುನಿಕ ಅರ್ಥದಲ್ಲಿ ಬ್ರಿಟನ್ನಿನ ಆರಂಭಿಕ ರಾಜಕೀಯ ಪಕ್ಷಗಳೆನಿಸಿಕೊಂಡವು.

ಮುಂದೆ 1832 ರ ಸುಧಾರಣಾ ಕಾಯಿದೆ ಜಾರಿಗೊಂಡಾಗ ಟೋರಿಗಳು ಸಂಪ್ರದಾಯವಾದಿ ಪಕ್ಷ [Conservative Party] ಮತ್ತು ವಿಗ್ಸ್‌ಗಳು ಉದಾರವಾದಿ ಪಕ್ಷ [Liberal Party] ಎಂದು ಮರು ನಾಮಕರಣಗೊಂಡರು. ಉದಾರವಾದಿ ಪಕ್ಷ ಮತ್ತು ಸಂಪ್ರದಾಯವಾದಿ ಪಕ್ಷಗಳು ಬ್ರಿಟನ್ನಿನ ಚುನಾವಣೆಗಳಲ್ಲಿ ಪರಸ್ಪರ ಅಧಿಕಾರಕ್ಕಾಗಿ



ಹೋರಾಡುತ್ತಿದ್ದವು. ಈ ನಡುವೆ 1840 ರಿಂದ 1859 ರವರೆಗೆ ರಾಜಕೀಯ ಪಕ್ಷಗಳ ಬದಲು ಅವುಗಳ ನಾಯಕರ ವೈಯಕ್ತಿಕ ಶ್ರೇಷ್ಠತೆಗೆ ಬ್ರಿಟನ್ ಸಾಕ್ಷಿಯಾಯಿತಲ್ಲದೇ ಅಲ್ಪಮತ ಸರ್ಕಾರದ ಆಡಳಿತ ಎದುರಿಸಬೇಕಾಯಿತು. ಮುಂದೆ ಗ್ಲ್ಯಾಡ್‌ಸ್ಟೋನ್ ನೇತೃತ್ವದಲ್ಲಿ ಉದಾರವಾದಿ ಪಕ್ಷ ಮತ್ತು ಡಿಸ್ರೇಲಿ ನೇತೃತ್ವದಲ್ಲಿ ಸಂಪ್ರದಾಯವಾದಿ ಪಕ್ಷ ಸಂಘಟನೆಗೊಂಡು 20 ನೇ ಶತಮಾನದ ಮೊದಲೆರಡು ದಶಕಗಳವರೆಗೆ ಹಲವು ಇತರ ರಾಜಕೀಯ ಪಕ್ಷಗಳ ನಡುವೆಯೂ ಇವೆರಡೇ ಪಕ್ಷಗಳು ಬ್ರಿಟನ್ನಿನಲ್ಲಿ ಪ್ರಭಾವ ಹೊಂದಿದ್ದವು. 1924 ರಲ್ಲಿ ಕಾರ್ಮಿಕ ಪಕ್ಷವು [Labor Party] ಬ್ರಿಟನ್ನಿನ ರಾಜಕೀಯ ವ್ಯವಸ್ಥೆಯಲ್ಲಿ ಮುನ್ನೆಲೆಗೆ ಬಂದಾಗ ಉದಾರವಾದಿ ಪಕ್ಷವು ಕ್ಷೀಣಿಸುತ್ತಾ ಸಾಗಿತು. ಇದರಿಂದಾಗಿ ಕಾರ್ಮಿಕ ಪಕ್ಷ ಮತ್ತು ಸಂಪ್ರದಾಯವಾದಿ ಪಕ್ಷ ಮಾತ್ರ ಪ್ರಸ್ತುತ ಬ್ರಿಟಿಷ್ ರಾಜಕೀಯ ವ್ಯವಸ್ಥೆಯಲ್ಲಿ ಪ್ರಭಾವಿ ಪಕ್ಷಗಳಾಗಿ ಕಾರ್ಯಾಚರಿಸುತ್ತಿವೆ.

### [B.] ಬ್ರಿಟನ್ನಿನ ರಾಜಕೀಯ ಪಕ್ಷಗಳ ಲಕ್ಷಣಗಳು [Features of Political Parties of United Kingdom]:

ಬ್ರಿಟನ್ನಿನಲ್ಲಿ ಜವಾಬ್ದಾರಿ ಸರ್ಕಾರದ ಬೆಳವಣಿಗೆಯೊಡನೆ ರಾಜಕೀಯ ಪಕ್ಷಗಳು ಸಹಜವಾಗಿ ಬೆಳೆದು ಬಂದಿವೆ. ಈ ರಾಜಕೀಯ ಪಕ್ಷಗಳು ನಿರಂಕುಶ ಅರಸೊತ್ತಿಗೆಯನ್ನು ಸೀಮಿತ ಅರಸೊತ್ತಿಗೆಯಾಗಿ ಪರಿವರ್ತಿಸುವ ಸಾಧನವಾಗಿ ಬ್ರಿಟನ್ನಿನ ರಾಜಕೀಯ ವ್ಯವಸ್ಥೆಯಲ್ಲಿ ಪರಿಗಣಿಸಲ್ಪಡುತ್ತವೆ. ಇಂತಹ ರಾಜಕೀಯ ಪಕ್ಷಗಳು ಹೊಂದಿರುವ ಪ್ರಧಾನ ಲಕ್ಷಣಗಳನ್ನು ಈ ಕೆಳಗೆ ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

**1. ಸ್ವಾಭಾವಿಕ ಬೆಳವಣಿಗೆಯ ಫಲ:** ಬ್ರಿಟನ್ನಿನಲ್ಲಿ ರಾಜಕೀಯ ಪಕ್ಷಗಳು ನಿರ್ದಿಷ್ಟ ಸಮಯದಲ್ಲಿ ಜನ್ಮ ತಾಳಿಲ್ಲ. ದೇಶದ ರಾಜಕೀಯ ವ್ಯವಸ್ಥೆಯ ವಿಕಾಸದೊಡನೆ ಕಾಲಾನುಕ್ರಮದಲ್ಲಿ ರಾಜಕೀಯ ಪಕ್ಷಗಳು ರೂಪುಗೊಳ್ಳುತ್ತಾ ಬಂದಿವೆ. ಬ್ರಿಟನ್ನಿನಲ್ಲಿ ಪ್ರಾತಿನಿಧಿಕ ಪ್ರಜಾಪ್ರಭುತ್ವ ಹಂತ ಹಂತವಾಗಿ ಬೆಳೆದು ಬಂದಂತೆ ರಾಜಕೀಯ ಪಕ್ಷಗಳೂ ಅಸ್ತಿತ್ವಕ್ಕೆ ಬಂದಿರುವವು. ಜಗತ್ತಿಗೆ ರಾಜಕೀಯ ಪಕ್ಷಗಳ ವಿಚಾರದಲ್ಲಿ ಪ್ರಭಾವ ಬೀರಿರುವ ಬ್ರಿಟನ್ನಿನ ರಾಜಕೀಯ ಪಕ್ಷಗಳು ಪರಿವರ್ತನೆಯೊಡನೆ ಬೆಳೆದು ಬಂದಿರುವುದು ಅವುಗಳ ಪ್ರಧಾನ ಲಕ್ಷಣವೆನಿಸಿದೆ.

**2. ಎರಡೇ ಪಕ್ಷಗಳ ಪ್ರಭಾವ:** ಬ್ರಿಟನ್ನಿನಲ್ಲಿ ಅಮೇರಿಕದಂತೆ ಹಲವು ಪಕ್ಷಗಳಿದ್ದರೂ ಎರಡೇ ಪಕ್ಷಗಳ ಪ್ರಭಾವವನ್ನು ಗುರುತಿಸಬಹುದಾಗಿದೆ. 17ನೇ ಶತಮಾನದಿಂದ ಸೈದ್ಧಾಂತಿಕವಾಗಿ ಭಿನ್ನ ನಂಬಿಕೆಗಳನ್ನು ಹೊಂದಿದ್ದ ಎರಡು ಗುಂಪುಗಳು ಬ್ರಿಟನ್ನಿನಲ್ಲಿ ಅಸ್ತಿತ್ವದಲ್ಲಿದ್ದವು. ಮುಂದೆ ಆ ಗುಂಪು ಟೋರಿ ಮತ್ತು ವಿಗ್ ಪಕ್ಷಗಳ ಕಾರ್ಯಾಚರಣೆಗೆ ಕಳಹದಿ ಒದಗಿಸಿದವು. ಈ ಪಕ್ಷಗಳಲ್ಲಿ ಹಲವು ಮಾರ್ಪಾಡುಗಳು ಉಂಟಾದಾಗಲೂ ಬ್ರಿಟನ್ನಿನ ರಾಜಕೀಯ ವ್ಯವಸ್ಥೆಯಲ್ಲಿ ಎರಡೇ ಪಕ್ಷಗಳು ಪ್ರಭಾವ ಉಳಿಸಿಕೊಂಡಿದ್ದವು.

ಗಮನಾರ್ಹ ಅಂಶವೇನೆಂದರೆ ಎರಡಕ್ಕಿಂತ ಹೆಚ್ಚಿನ ಪಕ್ಷಗಳನ್ನು ಬ್ರಿಟಿಷ್ ರಾಜಕೀಯ ಇತಿಹಾಸದಲ್ಲಿ ಕಾಣಬಹುದಾದರೂ ಏಕ ಕಾಲದಲ್ಲಿ ಎರಡು ಪಕ್ಷಗಳು ಮಾತ್ರ ತಮ್ಮ ಪ್ರಭಾವವನ್ನು ಬಹು ಕಾಲದಿಂದ ಉಳಿಸಿಕೊಂಡು ಬಂದಿವೆ. ಉದಾ: ಆರಂಭದಲ್ಲಿ ಟೋರಿ ಮತ್ತು ವಿಗ್ ಪಕ್ಷಗಳು. ನಂತರದಲ್ಲಿ ಲಿಬರಲ್ ಮತ್ತು ಕಂಜರ್ವೇಟಿವ್ ಪಕ್ಷಗಳು. ಎರಡನೇ ಮಹಾ ಯುದ್ಧದ ಬಳಿಕ ಲೇಬರ್ ಮತ್ತು ಕಂಜರ್ವೇಟಿವ್ ಪಕ್ಷಗಳು ಪ್ರಭಾವ ಹೊಂದಿದುದು. ಆಸಕ್ತಿದಾಯಕ ಅಂಶವೇನೆಂದರೆ ಎರಡು ಪಕ್ಷಗಳ ಪ್ರಭಾವದ ನಡುವೆಯೂ ಕೆಲವೊಮ್ಮೆ ಇತರ ಪಕ್ಷಗಳ ನೆರವಿನಿಂದ ಸಮ್ಮಿಶ್ರ ಸರ್ಕಾರಗಳು ರಚನೆಗೊಂಡ ನಿದರ್ಶನಗಳನ್ನು ಬ್ರಿಟನ್ನಿನಲ್ಲಿ ಗಮನಿಸಬಹುದಾಗಿದೆ. ಒಟ್ಟಾರೆ ಎರಡೇ ಪಕ್ಷಗಳು ಕಾಲಾನುಕ್ರಮದಲ್ಲಿ ಪ್ರಭಾವ ಹೊಂದಿರುವುದು ಬ್ರಿಟಿಷ್ ರಾಜಕೀಯ ಪಕ್ಷಗಳ ಪ್ರಧಾನ ಲಕ್ಷಣವೆನಿಸಿದೆ.

**3. ಅಧಿಕ ಕೇಂದ್ರೀಕರಣಕ್ಕೆ ಒಲವು:** ಬ್ರಿಟನ್ನಿನ ಪ್ರತಿ ರಾಜಕೀಯ ಪಕ್ಷಗಳ ಸಂಘಟನೆಯು ಪ್ರಬಲವಾಗಿರುತ್ತದೆ. ಸ್ಥಳೀಯ ಮಟ್ಟದಿಂದ ಹಿಡಿದು ರಾಷ್ಟ್ರೀಯ ಮಟ್ಟದವರೆಗೆ ಶಿಸ್ತುಬದ್ಧ ಸಂಪರ್ಕ ಕಂಡು ಬರುತ್ತದೆ. ನಿರ್ಧಾರ ಕೈಗೊಳ್ಳುವ ಅಧಿಕಾರವೆಲ್ಲ ರಾಜಕೀಯ ಪಕ್ಷದ ಕೇಂದ್ರ ಸಮಿತಿಯ ನಾಯಕರ ಕೈಯಲ್ಲಿರುತ್ತದೆ. ಆಕರ್ಷಕ ವ್ಯಕ್ತಿತ್ವದ ನಾಯಕರನ್ನು ಹೊಂದಿರುವ ರಾಜಕೀಯ ಪಕ್ಷಗಳ ಸದಸ್ಯರು ತಮ್ಮ ಪಕ್ಷದ ನಾಯಕರನ್ನು ಬೆಂಬಲಿಸುತ್ತಾರೆ. ಮುಂದುವರಿದು ಬ್ರಿಟನ್ನಿನಲ್ಲಿ ಆಯಾ ರಾಜಕೀಯ ಪಕ್ಷವು ತನ್ನ ಪ್ರತಿನಿಧಿಗಳ ಸಂಸತ್ತಿನ ಚಟುವಟಿಕೆಗಳನ್ನು ಕುರಿತಂತೆ ಮೇಲ್ವಿಚಾರಣೆ ನಡೆಸುತ್ತದೆ. ಇದರೊಡನೆ ಸಂಸತ್ತಿನಲ್ಲಿ ಸದಸ್ಯರು ಮತದಾನದ ವೇಳೆಯಲ್ಲಿ ತಮ್ಮ ರಾಜಕೀಯ ಪಕ್ಷದ ಸೂಚನೆಗಳನ್ನು ಉಲ್ಲಂಘಿಸುವಂತಿಲ್ಲ. ಅಲ್ಲದೇ ಚುನಾವಣೆಯಲ್ಲಿ ಕೇಂದ್ರ ಸಮಿತಿಯೇ ಆಯಾ ಮತಕ್ಷೇತ್ರದ ಹುರಿಯಾಳನ್ನು ನಿರ್ಧರಿಸುತ್ತದೆ. ಹೀಗೆ ಬ್ರಿಟನ್ನಿನ ರಾಜಕೀಯ ಪಕ್ಷಗಳು ಸ್ಥಳೀಯ ಘಟಕಗಳಿಗೆ ಸ್ವಾತಂತ್ರ್ಯ ನೀಡದಿರುವ ಕೇಂದ್ರೀಕರಣವನ್ನು ಮೈಗೂಡಿಸಿಕೊಂಡಿದುದು ಅವುಗಳ ಪ್ರಧಾನ ಲಕ್ಷಣವೆನಿಸಿದೆ.

**4. ನಿರಂತರ ಕಾರ್ಯಾಚರಣೆಗೆ ಆದ್ಯತೆ:** ಬ್ರಿಟಿಷ್ ರಾಜಕೀಯ ಪಕ್ಷಗಳು ಸದಾ ಕ್ರಿಯಾಶೀಲವಾಗಿರುತ್ತವೆ. ಚುನಾವಣೆಯಲ್ಲಿ ಸೋತ ಮತ್ತು ಜಯಶಾಲಿಯಾದ ಎರಡೂ ಪಕ್ಷಗಳು ನಂತರದ ಚುನಾವಣೆಗೆ ಪೂರಕವಾದ ಹಲವು ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತವೆ. ಆಡಳಿತ ಪಕ್ಷವು ಜನ ಪರವಾದ ಕ್ರಮಗಳ ಮೂಲಕ ಮತ್ತು ವಿರೋಧ ಪಕ್ಷವು ಆಡಳಿತಾತ್ಮಕ ದೋಷಗಳ ಮೂಲಕ ತಮ್ಮ ಪ್ರಚಾರ ಅಥವಾ ಜಾಗೃತಿಗೆ ಶ್ರಮಿಸುತ್ತವೆ. ಸಭೆಗಳ ಏರ್ಪಾಟು, ವಾರಾಂತ್ಯದ ತರಬೇತಿ, ಬೇಸಿಗೆ ಶಿಬಿರದ ನೆರವಿನಿಂದ ಎರಡೂ ಪಕ್ಷಗಳು ನಿರಂತರವಾಗಿ ಕಾರ್ಯಾಚರಿಸುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಬ್ರಿಟನ್ನಿನ ರಾಜಕೀಯ ಪಕ್ಷಗಳು ನಿರಂತರವಾಗಿರುವುದು ರಾಜಕೀಯ ಪಕ್ಷಗಳ ಪ್ರಮುಖ



ಲಕ್ಷಣವೆನಿಸಿದೆ.

**5. ಸೈದ್ಧಾಂತಿಕ ಬದ್ಧತೆ ಮತ್ತು ಹೊಂದಾಣಿಕೆ:** ಬ್ರಿಟನ್ನಿನ ರಾಜಕೀಯ ಪಕ್ಷಗಳು ತಮ್ಮ ಸೈದ್ಧಾಂತಿಕ ನಂಬಿಕೆಗಳನ್ನು ಪಾಲಿಸುವುದರೊಡನೆ ಅಗತ್ಯ ಹೊಂದಾಣಿಕೆಗೂ ಒಳಪಟ್ಟಿವೆ. ಕಂಜರ್ವೇಟಿವ್ ಪಕ್ಷವು ನಿರಂತರವಾಗಿ ಸಂಪ್ರದಾಯಶೀಲತೆಯನ್ನು ಮತ್ತು ಲಿಬರಲ್ ಪಕ್ಷವು ನಿರಂತರವಾಗಿ ಉದಾರವಾದಿ ಧೋರಣೆಗಳನ್ನು ಅನುಸರಿಸುವಲ್ಲಿ ವಿಫಲಗೊಂಡಿವೆ. ನಂತರದ ಲೇಬರ್ ಪಕ್ಷವು ಪರಿಪೂರ್ಣ ರಾಷ್ಟ್ರೀಕರಣವನ್ನು ಸಮ್ಮತಿಸದಿರಲು ಪ್ರಯತ್ನಿಸುತ್ತದೆ. ಇದರರ್ಥವೇನೆಂದರೆ ಬ್ರಿಟಿಷ್ ರಾಜಕೀಯ ಪಕ್ಷಗಳು ಸಂಪೂರ್ಣವಾಗಿ ತಮ್ಮ ಸೈದ್ಧಾಂತಿಕ ತತ್ವಗಳಿಗೆ ಬದ್ಧತೆ ತೋರದೇ ಸಮಯಾನುಸಾರ ತಮ್ಮ ಸೈದ್ಧಾಂತಿಕ ಧೋರಣೆಗಳಲ್ಲಿ ಹೊಂದಾಣಿಕೆ ಮಾಡಿಕೊಂಡು ರಾಜಕೀಯ ಲಾಭ ಗಳಿಸಲು ಪ್ರಯತ್ನಿಸುತ್ತವೆ ಎಂದಾಗುತ್ತದೆ. ಆಸಕ್ತಿದಾಯಕ ಅಂಶವೇನೆಂದರೆ ಕಂಜರ್ವೇಟಿವ್ ಪಕ್ಷದಲ್ಲಿ ಭೂ ಮಾಲೀಕರು, ವ್ಯಾಪಾರಿಗಳು, ಉದ್ಯಮಿಗಳ ಜೊತೆಗೆ ಬಡ ವರ್ಗದವರೂ ಗುರುತಿಸಿಕೊಂಡಿದ್ದು ಲೇಬರ್ ಪಕ್ಷದಲ್ಲಿ ಕಾರ್ಮಿಕರೊಡನೆ ಶ್ರೀಮಂತ ವರ್ಗವೂ ತನ್ನನ್ನು ತೊಡಗಿಸಿಕೊಂಡಿದೆ. ಹೀಗೆ ಬ್ರಿಟನ್ನಿನ ರಾಜಕೀಯ ಪಕ್ಷಗಳು ಸೈದ್ಧಾಂತಿಕ ಬದ್ಧತೆಯೊಡನೆ ಅಗತ್ಯ ಹೊಂದಾಣಿಕೆಗೂ ಒಳಪಡುವುದು ಅವುಗಳ ಪ್ರಧಾನ ಲಕ್ಷಣವೆನಿಸಿವೆ.

ಈ ಮೇಲೆ ಸಂಕ್ಷೇಪ್ತವಾಗಿ ವಿವರಿಸಲಾದ ಅಂಶಗಳು ಬ್ರಿಟನ್ನಿನ ರಾಜಕೀಯ ಪಕ್ಷದ ಲಕ್ಷಣಗಳನ್ನು ಮನವರಿಕೆ ಮಾಡಿಕೊಡಲು ನೆರವಾಗುತ್ತವೆ. ಗಮನಾರ್ಹ ಅಂಶವೇನೆಂದರೆ ಬ್ರಿಟನ್ನಿನಲ್ಲಿ ಹಲವು ರಾಜಕೀಯ ಪಕ್ಷಗಳು ಕಾಲಾನುಕ್ರಮದಲ್ಲಿ ಕಂಡು ಬಂದರೂ ಎರಡೇ ಪಕ್ಷಗಳು ತಮ್ಮ ಪ್ರಭಾವವನ್ನು ಉಳಿಸಿಕೊಳ್ಳುತ್ತಾ ಬಂದಿವೆ. ಮುಂದುವರಿದು ಚಿಕ್ಕ ಪುಟ್ಟ ಪಕ್ಷಗಳು ಅಸ್ತಿತ್ವದಲ್ಲಿರುವ ಎರಡು ಪಕ್ಷಗಳ ಜೊತೆಗೆ ತಮ್ಮನ್ನು ಗುರುತಿಸಿಕೊಂಡು ದ್ವಿ ಪಕ್ಷಗಳ ಸಂಪ್ರದಾಯವನ್ನು ಮುಂದುವರಿಸಿಕೊಂಡೇ ಸಾಗಿವೆ.

## [III.] ಚೀನಾದ ಪಕ್ಷ ಪದ್ಧತಿ [Party System of China]:

### [A.] ಚೀನಾದ ಜನತಾ ಗಣರಾಜ್ಯದಲ್ಲಿ ರಾಜಕೀಯ ಪಕ್ಷದ ಉಗಮ ಮತ್ತು ಬೆಳವಣಿಗೆ [Origin and Growth of Political Party in People's Republic of China]:

20ನೇ ಶತಮಾನದ ಆರಂಭದೊಡನೆ ರಾಜಕೀಯವಾಗಿ ಚೀನಾ ಸಕ್ರಿಯವಾಯಿತು. 1911 ರಲ್ಲಿ ಜರುಗಿದ ಡಾ. ಸನ್ಯಾತ್ ಸೇನ್ ನೇತೃತ್ವದ ಚೀನಾ ಕ್ರಾಂತಿಯು ರಾಜಕೀಯ ಸುಧಾರಣೆಗಳಿಗೆ ಚಾಲನೆ ನೀಡಿತು. ನಂತರದ ದಶಕಗಳಲ್ಲಿ ಹಲವು ರಾಜಕೀಯ ಗುಂಪುಗಳು ರಾಜಕೀಯ ಪಕ್ಷಗಳ ಸ್ಥಾಪನೆಗೆ ಶ್ರಮಿಸಿದವು. ಗಮನಾರ್ಹ ಅಂಶವೇನೆಂದರೆ, ಚೀನಿ ರಾಜಕೀಯ ಪಕ್ಷಗಳಲ್ಲಿ ಕಮ್ಯುನಿಸ್ಟ್ ಪಕ್ಷವೇ ಅತ್ಯಂತ

ಪ್ರಬಲವಾದ ರಾಜಕೀಯ ಪಕ್ಷವಾಗಿ ಬೆಳೆಯಿತು. ಚೀನಾದ ಕಮ್ಯುನಿಸ್ಟ್ ಪಕ್ಷವು ಜುಲೈ 1, 1921 ರಂದು ಸ್ಥಾಪಿಸಲ್ಪಟ್ಟಿತು. ಡಾ. ಸನ್ಯಾತ್ ಸೇನ್ ಸೇರಿದಂತೆ ಕೇವಲ 13 ಕ್ರಾಂತಿಕಾರಿ, ಅರಾಜಕವಾದಿ, ಮಾರ್ಕ್ಸ್‌ವಾದಿ ನಾಯಕರು ಭಾಗವಹಿಸಿದ್ದ ಶಾಂಘೈನ ಸಭೆಯಲ್ಲಿ ಕಮ್ಯುನಿಸ್ಟ್ ಪಕ್ಷ ಜನ್ಮ ತಾಳಿತು. ಸೋವಿಯತ್ ಒಕ್ಕೂಟದ ಅಂದಿನ ಕಮ್ಯುನಿಸ್ಟ್ ಪಕ್ಷದ ನಿರ್ದೇಶನದಂತೆ ಕಾರ್ಯಾಚರಿಸುತ್ತಿದ್ದ ಚೀನಿ ಕಮ್ಯುನಿಸ್ಟ್ ಪಕ್ಷವು 1925 ರವರೆಗಿನ ಆರಂಭಿಕ ದಿನಗಳಲ್ಲಿ ಸೀಮಿತ ಸದಸ್ಯರನ್ನು ಹೊಂದಲು ಶಕ್ತವಾಯಿತು. 1927 ರಲ್ಲಿ ಸೋವಿಯತ್ ಒಕ್ಕೂಟವು ಚೀನಾದ ಮುಖ್ಯಸ್ಥ ಚಿಯಾಂಗ್ ಕೈ ಶೇಕ್‌ನೊಡನೆ ಸಹಕರಿಸಲು ಮುಂದಾದಾಗ ಚೀನಾದ ಕಮ್ಯುನಿಸ್ಟ್ ಪಕ್ಷ ಹಿನ್ನಡೆ ಅನುಭವಿಸಿತು. ಮುಂದೆ 1935 ರ ಹೊತ್ತಿಗೆ ಮಾವೋತ್ಸೆ ತುಂಗ ಚೀನಿ ಕಮ್ಯುನಿಸ್ಟ್ ಪಕ್ಷದಲ್ಲಿ ಪ್ರಖ್ಯಾತ ನಾಯಕನಾಗಿ ಬೆಳೆದು ಚೀನಾದ ಸನ್ನಿವೇಶಕ್ಕೆ ಅನುಗುಣವಾಗಿ ಕಮ್ಯುನಿಸ್ಟ್ ಸಿದ್ಧಾಂತವನ್ನು ಮಾರ್ಪಡಿಸಿದಾಗ ಪಕ್ಷ ಬಲಗೊಳ್ಳತೊಡಗಿತು.

ಸೋವಿಯತ್ ಒಕ್ಕೂಟದ ನಿರ್ದೇಶನದಂತೆ ಎರಡನೇ ವಿಶ್ವ ಸಮರದ ಸಮಯದಲ್ಲಿ ಚೀನಾದ ಕಮ್ಯುನಿಸ್ಟ್ ಪಕ್ಷ ಚಿಯಾಂಗ್ ಕೈ ಶೇಕ್‌ನ ರಾಷ್ಟ್ರೀಯವಾದಿ ಸರ್ಕಾರದೊಡನೆ ಸಹಕರಿಸಲು ಮುಂದಾಯಿತು. ಚಿಯಾಂಗ್ ಅಮೇರಿಕಾದ ನೆರವಿನೊಂದಿಗೆ ಆರ್ಥಿಕ ಸುಧಾರಣೆಗೆ ಪ್ರಯತ್ನಿಸಿದಾಗ ಕಮ್ಯುನಿಸ್ಟ್ ಪಕ್ಷ ಅಸಮಾಧಾನಗೊಂಡಿತು. ಆಗ ಚಿಯಾಂಗ್ ನಿರ್ಧಾರದ ವಿರುದ್ಧ ಚೀನಾದ ರೈತರನ್ನು ಗುಪ್ತವಾಗಿ ಸಂಘಟಿಸಲು ಕಮ್ಯುನಿಸ್ಟ್ ಪಕ್ಷದ ಮಾವೋ ಮುಂದಾದರು. ಕಮ್ಯುನಿಸ್ಟರನ್ನು ಸಂಶಯದಿಂದಲೇ ಕಾಣುತ್ತಿದ್ದ ಚಿಯಾಂಗ್ ವಿರುದ್ಧ ಕಮ್ಯುನಿಸ್ಟ್ ಪಕ್ಷ 1945 ರಲ್ಲಿ ಜನತಾ ಸ್ವಾತಂತ್ರ್ಯ ಹೋರಾಟ ಕೈಗೊಂಡಿತು. ಅಂತಿಮವಾಗಿ ಸೋವಿಯತ್ ಒಕ್ಕೂಟದ ಬೆಂಬಲವಿದ್ದ ಚೀನಿ ಕಮ್ಯುನಿಸ್ಟ್ ಪಕ್ಷ 1949 ರಲ್ಲಿ ಇಡೀ ಚೀನಾವನ್ನು ತನ್ನ ನಿಯಂತ್ರಣಕ್ಕೆ ಪಡೆಯಿತು. ಚಿಯಾಂಗ್ ನೇತೃತ್ವದ ರಾಷ್ಟ್ರೀಯವಾದಿಗಳು ಫಾರ್ಮೋಸಾಗೆ ಪಲಾಯನ ಮಾಡಿದಾಗ ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷವು ಅಕ್ಟೋಬರ್ 1, 1949 ರಂದು ಜನತಾ ಪ್ರಜಾಸತ್ತಾತ್ಮಕ ಸರ್ವಾಧಿಕಾರತ್ವ ಸ್ಥಾಪಿಸಿತು.

ಮಾವೋ ನೇತೃತ್ವದ ಕಮ್ಯುನಿಸ್ಟ್ ಪಕ್ಷವು ಚೀನಾದಲ್ಲಿ 1949 ರ ಬಳಿಕ ಭದ್ರವಾಗಿ ನೆಲೆಯೂರಿತು. ಚೀನಾವನ್ನು ಜನತಾ ಗಣರಾಜ್ಯವೆಂದು ಘೋಷಿಸಿದ ಕಮ್ಯುನಿಸ್ಟ್ ಪಕ್ಷವು ಪ್ರಜಾಸತ್ತಾತ್ಮಕ ಕೇಂದ್ರೀಕರಣವನ್ನು ಅಳವಡಿಸಿಕೊಂಡಿತು. ಜೊತೆಗೆ ಪಕ್ಷದ ಮಾರ್ಗದರ್ಶನದಂತೆ ಚೀನಿ ಸರ್ಕಾರ ನಡೆದುಕೊಳ್ಳಲು ಪೂರಕವಾದ ಸಂವಿಧಾನವನ್ನು 1954 ರಲ್ಲಿ ರಚಿಸಿ ಜಾರಿಗೊಳಿಸಿತು. ಸಮಾಜವಾದಿ ಸಿದ್ಧಾಂತವನ್ನು ಆಧರಿಸಿದ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಲು ಅಗತ್ಯವಾದ ಅವಕಾಶಗಳನ್ನು ಹೊಂದಿ ಚೀನಾದ ಪ್ರಬಲ ರಾಜಕೀಯ ಪಕ್ಷವಾಗಿ ಕಮ್ಯುನಿಸ್ಟ್ ಪಕ್ಷ ಬೆಳೆಯಿತು. ಈ ಮಧ್ಯೆ ಆರ್ಥಿಕವಾಗಿ



ದುರ್ಬಲಗೊಂಡ ಚೀನಾದಲ್ಲಿ ಮಾವೋ ನೇತೃತ್ವದಲ್ಲಿ ಮುಂಚೂಣಿ ನೀತಿ ಮತ್ತು ಸಾಂಸ್ಕೃತಿಕ ಕ್ರಾಂತಿಯನ್ನು ರೂಪಿಸಿದ ಕಮ್ಯುನಿಸ್ಟ್ ಪಕ್ಷ ಮತ್ತಷ್ಟು ಬಲಗೊಂಡಿತು. ಸೋವಿಯತ್ ಒಕ್ಕೂಟದ ವಿಘಟನೆಯ ಬಳಿಕ ಚೀನಾದ ಕಮ್ಯುನಿಸ್ಟ್ ಪಕ್ಷ ಜಾಗತಿಕ ಸಮಾಜವಾದಿ ವಲಯದಲ್ಲಿ ತನ್ನ ಪ್ರಭಾವವನ್ನು ಬೆಳೆಸಿಕೊಳ್ಳಲು ಯಶಸ್ವಿಯಾಯಿತು.

ಕೇವಲ 13 ಸದಸ್ಯರಿಂದ ಆರಂಭಗೊಂಡಿದ್ದ ಚೀನಿ ಕಮ್ಯುನಿಸ್ಟ್ ಪಕ್ಷವು ಪ್ರಸ್ತುತ 8 ಮಿಲಿಯನ್ ಸದಸ್ಯರನ್ನು ಒಳಗೊಂಡ ಪ್ರಬಲ ರಾಜಕೀಯ ಪಕ್ಷವಾಗಿದೆ. ಈ ಮಧ್ಯೆ ಚೀನಾದಲ್ಲಿ ಹಲವು ಸಮಾಜವಾದಿ ನೆಲೆಗಟ್ಟಿನ ರಾಜಕೀಯ ಪಕ್ಷಗಳು ಅಸ್ತಿತ್ವಕ್ಕೆ ಬಂದಿದ್ದರೂ ಅವು ಕಮ್ಯುನಿಸ್ಟ್ ಪಕ್ಷಕ್ಕೆ ಸಹಕರಿಸಿ ಕಾರ್ಯಾಚರಿಸುತ್ತಿವೆ. 2012 ರಿಂದ ಕ್ಸಿ ಜಿನ್‌ಪಿಂಗ್ ಚೀನಾದ ಕಮ್ಯುನಿಸ್ಟ್ ಪಕ್ಷದ ನಾಯಕನಾಗಿದ್ದು ಮಾವೋ ನಂತರದ ಅತ್ಯುತ್ತಮ ನಾಯಕನೆಂದು ಪರಿಗಣಿಸಲ್ಪಟ್ಟಿರುವರು. ಭ್ರಷ್ಟಾಚಾರ, ಬಡತನ, ನಿರುದ್ಯೋಗ ನಿವಾರಣೆಯೊಡನೆ ಭವಿಷ್ಯದ ಜಾಗತಿಕ ಶಕ್ತಿಯಾಗಿ ಚೀನಾವನ್ನು ರೂಪಿಸುವ ಗುರಿ ಇವರದ್ದಾಗಿರುವುದು ಗಮನಾರ್ಹ.

### III.] ಚೀನಾದ ರಾಜಕೀಯ ಪಕ್ಷ ಪದ್ಧತಿಯ ಲಕ್ಷಣಗಳು [Features of China's Political Party System]:

ಚೀನಾದ ರಾಜಕೀಯ ಪಕ್ಷಗಳ ಉಗಮ ಮತ್ತು ಬೆಳವಣಿಗೆಯನ್ನು ಆಧರಿಸಿ ಆ ದೇಶದ ರಾಜಕೀಯ ಪಕ್ಷಗಳ ಪ್ರಧಾನ ಲಕ್ಷಣಗಳನ್ನು ಕೆಳಗಿನಂತೆ ಗುರುತಿಸಬಹುದಾಗಿದೆ.

1. ಒಂದೇ ಪಕ್ಷದ ಪ್ರಾಬಲ್ಯ: ಚೀನಾದಲ್ಲಿ ಚೈನಾ ಡೆಮಾಕ್ರಟಿಕ್ ಲೀಗ್, ಚೈನಾ ಡೆಮಾಕ್ರಟಿಕ್ ಕನ್‌ಸ್ಟ್ರಕ್ಷನ್ ಅಸೋಸಿಯೇಷನ್, ದಿ ಚೈನೀಸ್ ಪೆಸೆಂಟ್ಸ್ ಅಂಡ್ ವರ್ಕರ್ಸ್ ಡೆಮಾಕ್ರಟಿಕ್ ಪಾರ್ಟಿ ಮುಂತಾದ ಸುಮಾರು ಎಂಟು ರಾಜಕೀಯ ಪಕ್ಷಗಳು ಅಸ್ತಿತ್ವದಲ್ಲಿವೆ. ಆದರೆ, ಅವುಗಳ ಸದಸ್ಯರ ಸಂಖ್ಯೆ ಅತ್ಯಂತ ಸೀಮಿತವಾಗಿದ್ದು ಚೀನಾದ ರಾಜಕೀಯದಲ್ಲಿ ಅವುಗಳು ಗುರುತರ ಪ್ರಭಾವ ಹೊಂದಲಾಗುತ್ತಿಲ್ಲ. ಇದರೊಡನೆ ಚೀನಾದ ಪಕ್ಷಗಳೆಲ್ಲ ಸಮಾಜವಾದಿ ಉದ್ದೇಶಗಳನ್ನೇ ಹೊಂದಿದ್ದು ಪ್ರಬಲ ಕಮ್ಯುನಿಸ್ಟ್ ಪಕ್ಷದ ಮುಂದಾಳತ್ವದಲ್ಲಿ ಕಾರ್ಯಾಚರಿಸುತ್ತವೆ. ಹೀಗಾಗಿ ಕಮ್ಯುನಿಸ್ಟ್ ಪಕ್ಷವು ಚೀನಾದಲ್ಲಿ ಪ್ರಬಲ ಪಕ್ಷವಾಗಿ ತನ್ನ ಪ್ರಭಾವ ಉಳಿಸಿಕೊಂಡಿದೆ.

2. ಸರ್ಕಾರ ಮತ್ತು ಪಕ್ಷದ ನಡುವೆ ಅಂತರವಿಲ್ಲದಿರುವುದು: ಚೀನಾದಲ್ಲಿ ಸ್ಥಳೀಯ ಮಟ್ಟದಿಂದ ರಾಷ್ಟ್ರೀಯ ಮಟ್ಟದ ಸರ್ಕಾರಗಳನ್ನು ಕಮ್ಯುನಿಸ್ಟ್ ಪಕ್ಷದ ನಾಯಕರು ನಿಯಂತ್ರಿಸುತ್ತಾರೆ. 1970 ರವರೆಗೆ ಪ್ರಧಾನ ನಿರ್ಧಾರಗಳನ್ನು ಮಾತ್ರ ಪಕ್ಷದ ನಾಯಕರು ಕೈಗೊಂಡು ಅಳಿದುಳಿದ ನಿರ್ಧಾರಗಳನ್ನು ಸರ್ಕಾರದ ವಿವೇಚನೆಗೆ ಬಿಡಲಾಗುತ್ತಿತ್ತು.

ಕಾಲಾಂತರದಲ್ಲಿ ಕಮ್ಯುನಿಸ್ಟ್ ಪಕ್ಷದ ಹಿಡಿತ ಅಧಿಕಗೊಳ್ಳುತ್ತಾ ಸಾಗಿದೆ. ಪಕ್ಷದ ಮತ್ತು ಸರ್ಕಾರದ ಹುದ್ದೆಗಳನ್ನು ಏಕಕಾಲದಲ್ಲಿ ಕಮ್ಯುನಿಸ್ಟ್ ನಾಯಕರು ನಿರ್ವಹಿಸುತ್ತಾರೆ. ಹೀಗಾಗಿ ಚೀನ ಸರ್ಕಾರ ಮತ್ತು ಪಕ್ಷದ ನಡುವೆ ಅಂತರವಿಲ್ಲದಿರುವುದು ಆ ದೇಶದ ಪಕ್ಷ ಪದ್ಧತಿಯ ಲಕ್ಷಣವೆನಿಸಿದೆ.

**3. ವಿರೋಧ ಪಕ್ಷದ ಅನುಪಸ್ಥಿತಿ:** ಚೀನಾದಲ್ಲಿ ಆರೆಂಟು ರಾಜಕೀಯ ಪಕ್ಷಗಳಿದ್ದರೂ ಅವುಗಳು ಪ್ರಬಲವಾಗಿಲ್ಲ. ಜೊತೆಗೆ ಎಲ್ಲ ರಾಜಕೀಯ ಪಕ್ಷಗಳು ಕಮ್ಯುನಿಸ್ಟ್ ಪಕ್ಷದ ಮುಂದಾಳತ್ವದಲ್ಲಿ ಕಾರ್ಯಾಚರಿಸುತ್ತಾ ಅದಕ್ಕೆ ಸಹಕರಿಸುತ್ತವೆ. ಫಲವಾಗಿ ಉದಾರವಾದಿ ಪ್ರಜಾಸತ್ತಾತ್ಮಕ ದೇಶಗಳಲ್ಲಿರುವಂತೆ ವಿರೋಧ ಪಕ್ಷ ಚೀನಾದಲ್ಲಿ ಅಸ್ತಿತ್ವದಲ್ಲಿಲ್ಲ.

**4. ಪ್ರಜಾಸತ್ತಾತ್ಮಕ ಕೇಂದ್ರೀಕರಣಕ್ಕೆ ಆಧ್ಯತೆ:** ಪ್ರಜಾಸತ್ತಾತ್ಮಕ ಕೇಂದ್ರೀಕರಣವು ಚೀನಾದ ಪಕ್ಷ ಪದ್ಧತಿಯಲ್ಲಿನ ವಿಶೇಷ ಲಕ್ಷಣವಾಗಿದೆ. ಪ್ರಜೆಗಳಿಗೆ ಮುಕ್ತ ಸ್ವಾತಂತ್ರ್ಯ ಒದಗಿಸುವುದು ಪ್ರಜಾಸತ್ತಾತ್ಮಕತೆಯನ್ನು ಹಾಗೂ ಪಕ್ಷದ ನಿರ್ಧಾರಗಳನ್ನು ಪ್ರಶ್ನಿಸದೇ ಪಾಲಿಸುವುದು ಕೇಂದ್ರೀಕರಣವನ್ನು ಪ್ರತಿನಿಧಿಸುತ್ತದೆ. ಚೀನಿ ಕಮ್ಯುನಿಸ್ಟ್ ಪಕ್ಷವು ಈ ಪರಸ್ಪರ ವಿರುದ್ಧವಾದ ಪ್ರಜಾಪ್ರಭುತ್ವ ಹಾಗೂ ಕೇಂದ್ರೀಕರಣಗಳನ್ನು ಬೆಸೆದು ಅಸ್ತಿತ್ವಕ್ಕೆ ತಂದಿದೆ. ಉದಾ: ವ್ಯಕ್ತಿಗಳು ಪಕ್ಷದ, ಅಲ್ಪಸಂಖ್ಯಾತರು ಬಹುಸಂಖ್ಯಾತರ, ಕೆಳ ಸಮಿತಿಗಳು ರಾಷ್ಟ್ರೀಯ ಕಮ್ಯುನಿಸ್ಟ್ ಪಕ್ಷದ ಸಮಿತಿಗೆ ವಿಧೇಯರಾಗಿರುವುದು.

**5. ಆರ್ಥಿಕ ಮತ್ತು ಸಾಮಾಜಿಕ ರಂಗಗಳ ನಿಯಂತ್ರಣ:** ಚೀನಾದ ರಾಜಕೀಯ ಪಕ್ಷವಾಗಿರುವ ಕಮ್ಯುನಿಸ್ಟ್ ಪಕ್ಷವು ದೇಶದ ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ನಿರ್ದೇಶಿಸುವ ಅಧಿಕಾರ ಪಡೆದಿದೆ.

ಈ ಮೇಲೆ ಪ್ರಸ್ತಾಪಿಸಲಾದ ಅಂಶಗಳ ನೆರವಿನಿಂದ ಚೀನಾದ ರಾಜಕೀಯ ಪಕ್ಷ ಪದ್ಧತಿಯ ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಏಕಪಕ್ಷದ ಪ್ರಾಬಲ್ಯದೊಡನೆ ಚೀನಾವನ್ನು ಜಾಗತಿಕವಾಗಿ ಸೂಪರ್ ಪವರ್ ರಾಷ್ಟ್ರವನ್ನಾಗಿಸುವ ಪ್ರಯತ್ನ ಸ್ವಾಗತಾರ್ಹವಾದರೂ ಕೇಂದ್ರೀಕರಣದ ಹೆಸರಿನಲ್ಲಿ ಪ್ರಜಾಸತ್ತಾತ್ಮಕ ಅಂಶಗಳನ್ನು ಹತ್ತಿಕ್ಕಲು ಮುಂದಾಗುವುದು ಚೀನಾದ ಪಕ್ಷ ಪದ್ಧತಿಯ ದೋಷವೆನಿಸಿದೆ. ಈ ವಿಶಿಷ್ಟ ಪಕ್ಷ ಪದ್ಧತಿಯನ್ನು ಸುಧಾರಿಸುವ ಕೂಗು ಚೀನಾದ ಒಳಗಿನಿಂದಲೇ ಕೇಳಿ ಬರುತ್ತಿರುವುದು ಗಮನಾರ್ಹ ಸಂಗತಿ.



## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ರಾಜಕೀಯ ಪಕ್ಷಗಳನ್ನು ಪ್ರಜಾಪ್ರಭುತ್ವದ ಬೆನ್ನೆಲುಬು ಎನ್ನಲು ಕಾರಣವೇನು?
2. ಪಕ್ಷ ಪದ್ಧತಿ ಎಂದರೇನು?
3. ಪಕ್ಷ ಪದ್ಧತಿಯ ವಿಧಗಳನ್ನು ಹೆಸರಿಸಿರಿ.
4. ಸಂವಿಧಾನ ಜಾರಿಗೊಳ್ಳುವ ವೇಳೆಯಲ್ಲಿ ಅಮೇರಿಕಾದಲ್ಲಿದ್ದ ರಾಜಕೀಯ ಪಕ್ಷಗಳನ್ನು ಬರೆಯಿರಿ.
5. ಅಮೇರಿಕಾದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಎರಡು ಪಕ್ಷಗಳನ್ನು ಹೆಸರಿಸಿರಿ.
6. ಬ್ರಿಟನ್ನಿನಲ್ಲಿ ಅಸ್ತಿತ್ವದಲ್ಲಿರುವ ಎರಡು ರಾಜಕೀಯ ಪಕ್ಷಗಳನ್ನು ಹೆಸರಿಸಿರಿ.
7. ಚೀನಾದಲ್ಲಿರುವ ಯಾವುದಾದರೂ ಮೂರು ರಾಜಕೀಯ ಪಕ್ಷಗಳನ್ನು ಹೆಸರಿಸಿರಿ.
8. ಪ್ರಜಾಸತ್ತಾತ್ಮಕ ಕೇಂದ್ರೀಕರಣ ಎಂದರೇನು?
9. ಚೀನಾದಲ್ಲಿ ಸರ್ಕಾರ ಮತ್ತು ಪಕ್ಷದ ನಡುವೆ ವ್ಯತ್ಯಾಸವಿಲ್ಲ. ಹೇಗೆ?

**[B.] ಐದು ಅಂಕದ ಪ್ರಶ್ನೆಗಳು:**

1. ಅಮೇರಿಕಾದ ರಾಜಕೀಯ ಪಕ್ಷಗಳ ಉಗಮ ಮತ್ತು ಬೆಳವಣಿಗೆ ಕುರಿತು ಟಿಪ್ಪಣಿ ಬರೆಯಿರಿ.
2. ಅಮೇರಿಕಾದ ಪಕ್ಷ ಪದ್ಧತಿಯ ಲಕ್ಷಣಗಳನ್ನು ಚರ್ಚಿಸಿರಿ.
3. ಬ್ರಿಟನ್ನಿನಲ್ಲಿ ರಾಜಕೀಯ ಪಕ್ಷಗಳ ಉಗಮ ಮತ್ತು ಬೆಳವಣಿಗೆಯನ್ನು ಚರ್ಚಿಸಿರಿ.
4. ಚೀನಾದ ಕಮ್ಯುನಿಸ್ಟ್ ಪಕ್ಷ ಕುರಿತು ಟಿಪ್ಪಣಿ ಬರೆಯಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ಅಮೇರಿಕಾದ ರಾಜಕೀಯ ಪಕ್ಷ ಪದ್ಧತಿಯ ಬೆಳವಣಿಗೆ ಮತ್ತು ಲಕ್ಷಣಗಳನ್ನು ವಿವರಿಸಿರಿ.
2. ಬ್ರಿಟಿಷ್ ರಾಜಕೀಯ ಪಕ್ಷ ಪದ್ಧತಿಯ ಬೆಳವಣಿಗೆ ಮತ್ತು ಲಕ್ಷಣಗಳನ್ನು ಪರಿಶೀಲಿಸಿರಿ.
3. ಚೀನಾದ ರಾಜಕೀಯ ಪಕ್ಷ ಪದ್ಧತಿಯ ಬೆಳವಣಿಗೆ ಮತ್ತು ಲಕ್ಷಣಗಳನ್ನು ವಿವರಿಸಿರಿ.

ಅಧ್ಯಾಯ 12:

# ಚುನಾವಣಾ ಪ್ರಕ್ರಿಯೆ

## [Election Process].

### ಪ್ರಸ್ತಾವನೆ [Introduction]:

ಚುನಾವಣೆಗಳು ಪ್ರಜಾಪ್ರಭುತ್ವದಲ್ಲಿ ಆಳಿಸಿಕೊಳ್ಳುವ ಪ್ರಜೆಗಳು ಮತ್ತು ಆಳುವ ಪ್ರತಿನಿಧಿಗಳ ನಡುವೆ ಸಂಪರ್ಕ ಏರ್ಪಡಿಸುವ ಸಾಧನಗಳಾಗಿವೆ. ಜೊತೆಗೆ ಪ್ರಜೆಗಳಲ್ಲಿ ರಾಜಕೀಯ ಜಾಗೃತಿಯನ್ನು ಹಾಗೂ ಪ್ರತಿನಿಧಿಗಳಲ್ಲಿ ಜವಾಬ್ದಾರಿಯನ್ನು ಬಲಗೊಳಿಸಿ ರಾಷ್ಟ್ರ ನಿರ್ಮಾಣಕ್ಕೆ ಚುನಾವಣೆಗಳು ಸಹಕಾರಿಯಾಗುತ್ತವೆ. ಇದಲ್ಲದೇ ಚುನಾವಣೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾರ್ವಜನಿಕ ಹಿತಾಸಕ್ತಿಯನ್ನು ಚರ್ಚಿಸಲು ಮತ್ತು ಸಾರ್ವಜನಿಕಾಭಿಪ್ರಾಯ ರೂಪಿಸಲು ವೇದಿಕೆ ಒದಗಿಸುತ್ತವೆ. ಮುಂದುವರೆದು ಪ್ರಜೆಗಳು ತಮಗಿಷ್ಟವಾದ ಪ್ರತಿನಿಧಿಯನ್ನು ಚುನಾಯಿಸಿಕೊಳ್ಳಲು ಅವಕಾಶ ಕಲ್ಪಿಸಿ ಅವರ ಆತ್ಮ ಗೌರವವನ್ನು ಹೆಚ್ಚಿಸುತ್ತವೆ. ಇದರೊಡನೆ ತಾರತಮ್ಯ ತೋರದೇ ಸರ್ವರಿಗೂ ಸಮಾನ ಸ್ವಾತಂತ್ರ್ಯದ ಭರವಸೆಯನ್ನು ಚುನಾವಣೆಗಳು ಒದಗಿಸುತ್ತವೆ. ನಿಯತಕಾಲಿಕ ಚುನಾವಣೆಗಳು ಜನ ಹಿತವನ್ನು ಕಡೆಗಣಿಸುವ ಪ್ರತಿನಿಧಿಗಳನ್ನು ಅಧಿಕಾರದಿಂದ ದೂರವಿಟ್ಟು ಜನಪರ ನಾಯಕರಿಗೆ ಅಧಿಕಾರವನ್ನು ಹೊಂದಲು ಆಸ್ಪದ ಮಾಡಿಕೊಡುತ್ತವೆ. ಅಂತೆಯೇ ಒಂದು ರಾಜಕೀಯ ಪಕ್ಷದಿಂದ ಬೇರೊಂದು ರಾಜಕೀಯ ಪಕ್ಷಕ್ಕೆ ಶಾಂತಿಯುತವಾಗಿ ಅಧಿಕಾರ ವರ್ಗಾವಣೆಗೆ ಸಾಧನವಾಗಿರುವ ಚುನಾವಣೆಗಳು ಪ್ರಜಾಪ್ರಭುತ್ವದ ನಿರಂತರತೆಗೆ ಕಾರಣವಾಗುತ್ತವೆ. ಈ ಹಿನ್ನೆಲೆಯಲ್ಲಿ ಮಾನವನ ದೇಹಕ್ಕೆ ಆಮ್ಲಜನಕವಿದ್ದಂತೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಚುನಾವಣೆಗಳು ಅನಿವಾರ್ಯ ಎನ್ನಬಹುದು.

ಮತಕ್ಷೇತ್ರಗಳ ರಚನೆ, ಮತದಾರರಪಟ್ಟಿಯ ಸಿದ್ಧತೆ, ಚುನಾವಣಾ ಘೋಷಣೆ, ಪ್ರಚಾರ, ಮತದಾನ, ಫಲಿತಾಂಶ ಪ್ರಕಟಣೆ ಹಾಗೂ ಚುನಾವಣಾ ವಿವಾದಗಳ ಇತ್ಯರ್ಥದಂತಹ ವಿವಿಧ ಪ್ರಕ್ರಿಯೆಗಳನ್ನು ಚುನಾವಣಾ ಪ್ರಕ್ರಿಯೆ ಪ್ರತಿನಿಧಿಸುತ್ತದೆ. ಚುನಾವಣಾ ಪ್ರಕ್ರಿಯೆಯು ಜಗತ್ತಿನಾದ್ಯಂತ ಏಕರೂಪವಾಗಿರದೇ ದೇಶದಿಂದ ದೇಶಕ್ಕೆ ವ್ಯತ್ಯಾಸಗೊಳ್ಳುತ್ತದೆ. ಆಯಾ ದೇಶಗಳು ತಮಗೆ ಅನುರೂಪವಾದ ವಿಭಿನ್ನ ಚುನಾವಣಾ ಪ್ರಕ್ರಿಯೆಯನ್ನು ಮೈಗೂಡಿಸಿಕೊಂಡಿರುತ್ತವೆ. ಪ್ರಸ್ತುತ ಅಧ್ಯಾಯದಲ್ಲಿ ಅಮೇರಿಕಾ, ಬ್ರಿಟನ್



ಹಾಗೂ ಚೀನಾಗಳ ಚುನಾವಣಾ ಪ್ರಕ್ರಿಯೆಯ ಸಮಗ್ರ ವಿವರಗಳ ಬದಲು ತೌಲನಿಕ ಅಧ್ಯಯನಕ್ಕೆ ಸಹಕಾರಿಯಾಗುವ ಪ್ರಧಾನ ಅಂಶಗಳನ್ನು ಮಾತ್ರ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

### [I.] ಅಮೇರಿಕಾದಲ್ಲಿನ ಚುನಾವಣಾ ಪ್ರಕ್ರಿಯೆ [Election Process in America]:

ಅಮೇರಿಕಾವು ಜಗತ್ತಿನ ವಿಶಾಲ ಪ್ರಜಾಪ್ರಭುತ್ವಗಳಲ್ಲೊಂದಾಗಿದ್ದು ಪ್ರಬಲ ಪ್ರಜಾಸತ್ತಾತ್ಮಕ ರಾಷ್ಟ್ರವೆನಿಸಿದೆ. ಅಧ್ಯಕ್ಷೀಯ ಮಾದರಿ ಸರ್ಕಾರವನ್ನು ಅಳವಡಿಸಿಕೊಂಡಿರುವ ಅಮೇರಿಕಾವು ಸಂಯುಕ್ತ ವ್ಯವಸ್ಥೆಯನ್ನು ಮೈಗೂಡಿಸಿಕೊಂಡಿದೆ. ಹೀಗಾಗಿ ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಸುಮಾರು 1 ಮಿಲಿಯನ್ ವಿವಿಧ ಹುದ್ದೆಗಳ ನೇಮಕಕ್ಕೆ ಚುನಾವಣೆ ಅನಿವಾರ್ಯ. ಗಣರಾಜ್ಯವಾದ ಬೆಂಬಲಿಸುವ ಅಮೇರಿಕಾದ ಚುನಾವಣಾ ಪ್ರಕ್ರಿಯೆಯು ವಿಶಾಲ ಸ್ವರೂಪ ತಾಳಿದ್ದು ಪ್ರಸ್ತುತ ನಾವು ಕೇಂದ್ರ ಶಾಸಕಾಂಗವಾದ ಕಾಂಗ್ರೇಸ್ ಸದಸ್ಯರು ಮತ್ತು ದೇಶ ಹಾಗೂ ಸರ್ಕಾರದ ಮುಖ್ಯಸ್ಥನಾದ ಅಧ್ಯಕ್ಷನ ಹುದ್ದೆಗೆ ಸಂಬಂಧಿಸಿದ ಚುನಾವಣಾ ಪ್ರಕ್ರಿಯೆಗಳನ್ನು ಮಾತ್ರ ಸಾಂಕೇತಿಕವಾಗಿ ಅರಿತುಕೊಳ್ಳಲು ಪ್ರಯತ್ನಿಸೋಣ.

### [A.] ಅಧ್ಯಕ್ಷೀಯ ಚುನಾವಣಾ ಪ್ರಕ್ರಿಯೆ [Presidential Election Process]:

ಅಮೇರಿಕಾದ ಸಂವಿಧಾನದನ್ವಯ ಅಧ್ಯಕ್ಷನು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆಗೊಳ್ಳುತ್ತಾನೆ. ಅಮೇರಿಕಾದ ಪ್ರತಿ ರಾಜ್ಯವು ಕೇಂದ್ರ ಶಾಸಕಾಂಗವಾದ ಕಾಂಗ್ರೆಸ್ಸಿನ ಪ್ರತಿನಿಧಿಗಳ ಸಭೆ ಮತ್ತು ಸೆನೆಟ್‌ನಲ್ಲಿ ತಾನು ಹೊಂದಿರುವ ಸ್ಥಾನಗಳಷ್ಟು ಸದಸ್ಯರನ್ನು ಅಧ್ಯಕ್ಷೀಯ ಚುನಾವಣೆಯಲ್ಲಿ ಮತದಾನ ಮಾಡುವ ಮತದಾರ ವರ್ಗಕ್ಕೆ (Electoral College) ಚುನಾಯಿಸುತ್ತದೆ. ಈ ಮತದಾತೃ ವರ್ಗವು ಅಧ್ಯಕ್ಷನ ಚುನಾವಣೆಯಲ್ಲಿ ಮತ ಚಲಾಯಿಸುವ ಮೂಲಕ ಅಧ್ಯಕ್ಷನನ್ನು ಚುನಾಯಿಸುತ್ತದೆ. ಆಸಕ್ತಿದಾಯಕ ಅಂಶವೇನೆಂದರೆ ಆರಂಭದಲ್ಲಿ ಅಧ್ಯಕ್ಷೀಯ ಚುನಾವಣೆಯ ಮತದಾರರನ್ನು ಆಯಾ ರಾಜ್ಯ ಶಾಸಕಾಂಗಗಳು ಚುನಾಯಿಸುತ್ತಿದ್ದು ಪ್ರಸ್ತುತ ಜನರಿಂದ ಅವರನ್ನು ಆಯ್ಕೆ ಮಾಡಲಾಗುತ್ತಿದೆ. ಒಟ್ಟಾರೆ ಜನರಿಂದ ಅಧ್ಯಕ್ಷನ ಚುನಾವಣೆಯಲ್ಲಿ ಮತ ನೀಡುವ ಮತದಾರರನ್ನು ಮೊದಲು ಆಯ್ಕೆ ಮಾಡಲಾಗುತ್ತಿದ್ದು ಅವರು ನಿರ್ದಿಷ್ಟ ದಿನದಂದು ಅಧ್ಯಕ್ಷನಿಗೆ ಮತ ಚಲಾಯಿಸುವುದರಿಂದ ಅಧ್ಯಕ್ಷನ ಚುನಾವಣೆಯನ್ನು ಪರೋಕ್ಷ ಚುನಾವಣೆ ಎನ್ನಲಾಗುತ್ತದೆ.

ಸಾಮಾನ್ಯವಾಗಿ ಅಮೇರಿಕಾದಲ್ಲಿ ಅಧ್ಯಕ್ಷನ ಚುನಾವಣೆಯು ನಾಲ್ಕು ವರ್ಷಕ್ಕೊಮ್ಮೆ ಅಂದರೆ ಪ್ರತಿ ಅಧಿಕ ವರ್ಷದಲ್ಲಿ ಜರುಗುತ್ತದೆ. ಚುನಾವಣಾ ವರ್ಷದ ನವೆಂಬರ್ ತಿಂಗಳಿನ ಮೊದಲ ಸೋಮವಾರದ ನಂತರ ಬರುವ ಮಂಗಳವಾರದಂದು ಅಧ್ಯಕ್ಷೀಯ ಚುನಾವಣೆ ಜರುಗುತ್ತದೆ. ಇಲ್ಲಿ ಚುನಾವಣೆಯಲ್ಲಿ ಮತ ನೀಡುವ ಮತದಾರರ ಚುನಾವಣೆ ಜರುಗುತ್ತದೆ. ಇಲ್ಲಿ ಆಯ್ಕೆಯಾದ ಪ್ರತಿನಿಧಿಗಳು ಡಿಸೆಂಬರ್ ತಿಂಗಳ ಎರಡನೇ ಬುಧವಾರದ ನಂತರದ

ಮೊದಲ ಸೋಮವಾರದಂದು ತಮ್ಮ ರಾಜ್ಯದ ರಾಜಧಾನಿಯಲ್ಲಿ ಸಭೆ ಸೇರಿ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವ ಉಮೇದುವಾರರಿಗೆ ಮತ ನೀಡುತ್ತಾರೆ. ಈ ಮತದಾನದ ವಿವರಗಳನ್ನು ಅಮೇರಿಕಾದ ಪ್ರತಿಯೊಂದು ರಾಜ್ಯವು ಸೆನೆಟ್‌ನ ಅಧ್ಯಕ್ಷನಿಗೆ ಸಲ್ಲಿಸುತ್ತದೆ. ಮುಂದೆ ಜನೇವರಿ ತಿಂಗಳ 6 ನೇ ದಿನಾಂಕದಂದು ಕೇಂದ್ರ ಶಾಸಕಾಂಗವಾದ ಕಾಂಗ್ರೆಸ್ಸಿನ ಪ್ರತಿನಿಧಿಗಳ ಸಭೆ ಮತ್ತು ಸೆನೆಟ್ ಜಂಟಿಯಾಗಿ ಅಧಿವೇಶನಗೊಂಡು ಮತಗಳನ್ನು ಎಣಿಕೆ ಮಾಡುತ್ತವೆ. ಚಲಾವಣೆಗೊಂಡ ಒಟ್ಟು ಮತಗಳಲ್ಲಿ ಬಹುಮತ ಅಂದರೆ ಅರ್ಧಕ್ಕಿಂತ ಹೆಚ್ಚು ಮತಗಳನ್ನು ಗಳಿಸಿದ ಅಧ್ಯಕ್ಷೀಯ ಸ್ಪರ್ಧಾಳುವನ್ನು ಅಧ್ಯಕ್ಷನ ಚುನಾವಣೆಯಲ್ಲಿ ಜಯಶಾಲಿ ಎಂದು ಘೋಷಿಸಲಾಗುತ್ತದೆ. ಯಾವುದೇ ವ್ಯಕ್ತಿ ಬಹುಮತ ಗಳಿಸಲು ವಿಫಲಗೊಂಡರೆ ಹೆಚ್ಚು ಮತ ಪಡೆದಿರುವ ಮೂವರು ಉಮೇದುವಾರರಲ್ಲಿ ಒಬ್ಬನನ್ನು ಪ್ರತಿನಿಧಿಗಳ ಸಭೆಯು ಅಧ್ಯಕ್ಷನನ್ನಾಗಿ ಚುನಾಯಿಸಲು ಅಧಿಕಾರ ಪಡೆಯುತ್ತದೆ. ಹೀಗೆ ಚುನಾಯಿತಗೊಂಡ ಅಮೇರಿಕಾದ ಅಧ್ಯಕ್ಷನು ಜನೇವರಿ 20 ರಂದು ಅಧ್ಯಕ್ಷನಾಗಿ ಪ್ರಮಾಣ ವಚನ ಸ್ವೀಕರಿಸುತ್ತಾನೆ. ಪರೋಕ್ಷ ಚುನಾವಣೆಯ ಮೂಲಕ ಅಮೇರಿಕಾದ ಅಧ್ಯಕ್ಷ ಆಯ್ಕೆಗೊಳ್ಳುತ್ತಿದ್ದು ಪ್ರಸ್ತುತ ಈ ಚುನಾವಣೆಯು ಮೇಲ್ನೋಟಕ್ಕೆ ಪ್ರತ್ಯಕ್ಷ ಚುನಾವಣೆಯಾಗಿ ಪರಿಗಣಿಸಲ್ಪಡುತ್ತಿದೆ.

**[B.] ಕಾಂಗ್ರೆಸ್‌ನ ಸದಸ್ಯರ ಚುನಾವಣಾ ಪ್ರಕ್ರಿಯೆ [Election Process of Congress Members]:**

ಅಮೇರಿಕಾ ಸಂವಿಧಾನದ ಮೊದಲನೇ ವಿಧಿಯು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್‌ನ ರಚನೆಯನ್ನು ವಿವರಿಸುತ್ತದೆ. ಕಾಂಗ್ರೆಸ್ (Congress) ಅಮೇರಿಕಾದ ಕೇಂದ್ರ ಶಾಸಕಾಂಗವಾಗಿದ್ದು ಪ್ರತಿನಿಧಿಗಳ ಸಭೆ (House of Representatives) ಎಂಬ ಕೆಳಮನೆಯನ್ನು ಮತ್ತು ಸೆನೆಟ್ (Senate) ಎಂಬ ಮೇಲ್ಮನೆಯನ್ನು ಒಳಗೊಂಡಿದೆ. ಅಮೇರಿಕಾವು ಕಾಂಗ್ರೆಸ್‌ನ ಉಭಯ ಸದನಗಳ ರಚನೆಗೆ ಅಂದರೆ ಸದಸ್ಯರ ನೇಮಕಕ್ಕೆ ತನ್ನದೇಯಾದ ಚುನಾವಣಾ ಪ್ರಕ್ರಿಯೆಯನ್ನು ಅಳವಡಿಸಿಕೊಂಡಿದ್ದು ಆ ವಿವರಗಳನ್ನು ಕೆಳಗೆ ನೀಡಲಾಗಿದೆ.

ಕಾಂಗ್ರೆಸ್‌ನ ಕೆಳಮನೆಯಾದ ಪ್ರತಿನಿಧಿಗಳ ಸಭೆಯ ಸದಸ್ಯರನ್ನು ಅಮೇರಿಕಾದಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯಂತೆ ಜನರೇ ನೇರವಾಗಿ ಚುನಾಯಿಸುತ್ತಾರೆ. ಈ ಉದ್ದೇಶಕ್ಕಾಗಿ ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಪ್ರತಿ ರಾಜ್ಯವನ್ನು ಆ ರಾಜ್ಯವು ಪ್ರತಿನಿಧಿಗಳ ಸಭೆಯಲ್ಲಿ ಹೊಂದಿರುವಷ್ಟು ಸ್ಥಾನಗಳ ಸಂಖ್ಯೆಯ ಏಕ ಸದಸ್ಯ ಮತಕ್ಷೇತ್ರಗಳಾಗಿ (single member district) ವಿಂಗಡಿಸಲಾಗುತ್ತಿತ್ತು. ಮುಂದುವರಿದು ಆಯಾ ರಾಜ್ಯದ ಏಕ ಸದಸ್ಯ ಮತಕ್ಷೇತ್ರಗಳು ಸಮಾನ ಸಂಖ್ಯೆಯ ಮತದಾರರನ್ನು ಹೊಂದುವುದು ಮತ್ತು ನಿರಂತರವಾಗಿರುವುದು ಕಡ್ಡಾಯವಾಗಿತ್ತು. ಆದರೆ, 1929 ರಲ್ಲಿ ಜಾರಿಗೊಂಡ ಕಾಯಿದೆಯೊಂದು ಮತಕ್ಷೇತ್ರಗಳ ಸಮಾನ ಮತದಾರರನ್ನು ಹೊಂದುವ ಹಾಗೂ



ನಿರಂತರವಾಗಿರುವ ತತ್ವವನ್ನು ರದ್ದುಗೊಳಿಸಿತು. ಫಲವಾಗಿ ಆಡಳಿತದಲ್ಲಿರುವ ಪಕ್ಷವು ತನ್ನ ಅನುಕೂಲಕ್ಕೆ ತಕ್ಕಂತೆ ಹಾಗೂ ವಿರೋಧ ಪಕ್ಷಕ್ಕೆ ಅನಾನುಕೂಲವಾಗುವಂತೆ ಏಕ ಸದಸ್ಯ ಮತಕ್ಷೇತ್ರಗಳನ್ನು ರಚಿಸುವ ಪರಿಪಾಠ ಬೆಳೆದು ಬಂದಿದ್ದು ಅದನ್ನು ಜರಿಮ್ಯಾಂಡರಿಂಗ್ (Gerrymandering) ಎಂದು ಕರೆಯಲಾಗುತ್ತದೆ.

ಆಸಕ್ತಿದಾಯಕ ಅಂಶವೇನೆಂದರೆ ಭಾರತದಲ್ಲಿರುವಂತೆ ಚುನಾವಣೆಗಳ ನಿರ್ವಹಣೆಗೆ ಸ್ವತಂತ್ರ ಚುನಾವಣಾ ಆಯೋಗವು ಅಮೇರಿಕಾದಲ್ಲಿಲ್ಲ. ಚುನಾವಣಾ ಸಂಬಂಧಿತ ನಿರ್ಧಾರ ಮತ್ತು ನಿರ್ವಹಣೆಯು ಆಯಾ ರಾಜ್ಯಗಳಿಗೆ ನೀಡಲ್ಪಟ್ಟಿದೆ. ಒಟ್ಟಾರೆ 1970 ರ ಫೆಡರಲ್ ವೋಟಿಂಗ್ ಕಾಯಿದೆಯನ್ವಯ 18 ವರ್ಷ ಪೂರೈಸಿದ ಅರ್ಹ ಮತದಾರರು ಎರಡು ವರ್ಷಕ್ಕೊಮ್ಮೆ ನವೆಂಬರ್ ತಿಂಗಳ ಮೊದಲ ಸೋಮವಾರದ ನಂತರ ಬರುವ ಮಂಗಳವಾರದಂದು ಮತ ಚಲಾಯಿಸಿ 2 ವರ್ಷಕ್ಕೊಮ್ಮೆ ಪ್ರತಿನಿಧಿಗಳ ಸಭೆಯ ಸದಸ್ಯರನ್ನು ಚುನಾಯಿಸುವರು. ಏಕ ವ್ಯಕ್ತಿ ಏಕ ಮತ ಮತ್ತು ರಹಸ್ಯ ಮತದಾನ ತತ್ವದಂತೆ ಈ ಚುನಾವಣೆಯು ದೇಶದಾದ್ಯಂತ ಏಕ ಕಾಲದಲ್ಲಿ ಜರುಗುತ್ತದೆ. ಗಮನಾರ್ಹ ಅಂಶವೇನೆಂದರೆ ಮತದಾನಕ್ಕೆ ಹಾಜರಾಗಲು ಸಾಧ್ಯವಾಗದವರು ಈಮೇಲ್ ಮತ್ತು ಮನೆಯಲ್ಲಿದ್ದೇ ಇತರ ಮಾಧ್ಯಮದ ಮೂಲಕ ಮತದಾನ ಮಾಡಬಹುದಾಗಿದೆ.

ಕಾಂಗ್ರೆಸ್‌ನ ಮೇಲ್ಮನೆಯಾದ ಸೆನೆಟ್‌ನ ಸದಸ್ಯರನ್ನು ಆರಂಭದಲ್ಲಿ ರಾಜ್ಯ ಶಾಸಕಾಂಗಗಳ ಸದಸ್ಯರು ಮತ ನೀಡುವ ಮೂಲಕ ಚುನಾಯಿಸುತ್ತಿದ್ದರು. ಆಗ ಸೆನೆಟ್‌ನ ಸದಸ್ಯರು ಜನರಿಂದ ನೇರವಾಗಿ ಆಯ್ಕೆಯಾಗದೇ ಜನರು ಈಗಾಗಲೇ ಚುನಾಯಿಸಿರುವ ಆಯಾ ರಾಜ್ಯ ಶಾಸಕಾಂಗದ ಪ್ರತಿನಿಧಿಗಳಿಂದ ಮತ ಗಳಿಸಿ ನೇಮಕಗೊಳ್ಳುತ್ತಿದ್ದರಿಂದ ಅವರ ಚುನಾವಣೆಯು ಪರೋಕ್ಷ ಚುನಾವಣೆಯಾಗಿತ್ತು. ಕೇಂದ್ರ ಹಾಗೂ ರಾಜ್ಯಗಳ ಸುಮಧುರ ಸಂಬಂಧ ಮತ್ತು ಅನುಭವಿಗಳ ನೇಮಕದ ಸಾಧ್ಯತೆಯ ಕಾರಣಕ್ಕೆ ಈ ರೀತಿಯ ಪರೋಕ್ಷ ಚುನಾವಣೆಯ ಮೂಲಕ ಸೆನೆಟ್‌ನ ಸದಸ್ಯರನ್ನು ಚುನಾಯಿಸಲು ಅಮೇರಿಕಾದ ಸಂವಿಧಾನ ರಚನಾಕಾರರು ಬಯಸಿದ್ದರು. ಆದರೆ, ಸೆನೆಟ್‌ನ ಸದಸ್ಯರ ಚುನಾವಣೆಯು ಪಕ್ಷ ರಾಜಕೀಯದಿಂದ ಪ್ರಭಾವಿತಗೊಂಡು ಸಂವಿಧಾನ ರಚನಾಕಾರರ ಆಶಯಕ್ಕೆ ಧಕ್ಕೆಯುಂಟಾಗುವ ಬೆಳವಣಿಗೆಗಳು ಘಟಿಸಿದವು. ಅನುಭವವಿಲ್ಲದ ಶ್ರೀಮಂತರು, ಪ್ರಭಾವಿಗಳು, ನೇರ ಚುನಾವಣೆಯಲ್ಲಿ ಜಯ ಗಳಿಸಲು ಸಾಮರ್ಥ್ಯವಿಲ್ಲದವರು ಸೆನೆಟ್‌ನ ಸದಸ್ಯತ್ವ ಪಡೆಯತೊಡಗಿದರು. ಫಲವಾಗಿ ಸೆನೆಟ್‌ನ ಪರೋಕ್ಷ ಚುನಾವಣೆಯ ಬದಲು ಪ್ರತ್ಯಕ್ಷ ಚುನಾವಣೆಗೆ ಅಮೇರಿಕಾದಲ್ಲಿ ಹೋರಾಟಗಳು ಜರುಗಿದವು. ಅಂತಿಮವಾಗಿ ಸಂವಿಧಾನಕ್ಕೆ 1912 ರಲ್ಲಿ 17 ನೇ ತಿದ್ದುಪಡಿ ತರುವ ಮೂಲಕಸೆನೆಟ್‌ನ ಸದಸ್ಯರನ್ನು ಪ್ರತ್ಯಕ್ಷ ಚುನಾವಣೆಯ ಮೂಲಕ ಚುನಾಯಿಸಲು ನಿರ್ಧರಿಸಲಾಯಿತು. ಹೀಗೆ ಆರಂಭದಲ್ಲಿ ಪರೋಕ್ಷ ಚುನಾವಣಾ ವಿಧಾನದ ಮೂಲಕ ರಾಜ್ಯ ಶಾಸಕಾಂಗದ ಸದಸ್ಯರಿಂದ

ಆಯ್ಕೆಯಾಗುತ್ತಿದ್ದ ಸೆನೆಟ್ ಸದಸ್ಯರು ಪ್ರಸ್ತುತ ಜನರಿಂದ ಪ್ರತ್ಯಕ್ಷವಾಗಿ ಚುನಾಯಿತಗೊಳ್ಳುತ್ತಿದ್ದಾರೆ. ಇದರೊಡನೆ ಪ್ರತಿ ಎರಡು ವರ್ಷಕ್ಕೊಮ್ಮೆ ಸೆನೆಟ್‌ನ ಮೂರನೇ ಒಂದರಷ್ಟು ಸ್ಥಾನಗಳಿಗೆ ಚುನಾವಣಾ ಪ್ರಕ್ರಿಯೆ ಜರುಗುವುದು ಗಮನಾರ್ಹ ಸಂಗತಿ.

## [II.] ಬ್ರಿಟನ್ನಿನಲ್ಲಿನ ಚುನಾವಣಾ ಪ್ರಕ್ರಿಯೆ [Election Process in Briton]:

ಬ್ರಿಟನ್ ಸಂಸದೀಯ ಮಾದರಿ ಸರ್ಕಾರವನ್ನು ಅಳವಡಿಸಿಕೊಂಡಿದ್ದು ರಾಜಪ್ರಭುತ್ವವನ್ನು ಮೈಗೂಡಿಸಿಕೊಂಡಿರುವ ಪ್ರಜಾಪ್ರಭುತ್ವ ರಾಷ್ಟ್ರ ದೇಶದ ಮುಖ್ಯಸ್ಥರಾದ ರಾಜ ಅಥವಾ ರಾಣಿ ಚುನಾವಣೆಯ ಮೂಲಕ ಆಯ್ಕೆಗೊಳ್ಳದೇ ಅನುವಂಶೀಯವಾಗಿ ನೇಮಕಗೊಳ್ಳುವುದರಿಂದ ಬ್ರಿಟನ್ ಗಣರಾಜ್ಯವೆಂದು ಪರಿಗಣಿಸಲ್ಪಟ್ಟಿಲ್ಲ. ಬ್ರಿಟನ್ನಿನ ಸಂಸದೀಯ ಮಾದರಿ ಸರ್ಕಾರದಲ್ಲಿ ರಾಜ ಅಥವಾ ರಾಣಿ ಕಾರ್ಯಾಂಗದ ನಾಮ ಮಾತ್ರ ಮುಖ್ಯಸ್ಥರಾಗಿದ್ದು ಪ್ರಧಾನಿ ನಾಯಕತ್ವದ ಮಂತ್ರಿ ಮಂಡಲವು ನೈಜ ಕಾರ್ಯಾಂಗವಾಗಿರುತ್ತದೆ. ಜೊತೆಗೆ ಬ್ರಿಟನ್ ಸರ್ಕಾರದ ಶಾಸಕಾಂಗವಾದ ಪಾರ್ಲಿಮೆಂಟ್ ಹೌಸ್ ಆಫ್ ಕಾಮನ್ಸ್ ಎಂಬ ಜನತಾ ಪ್ರತಿನಿಧಿಗಳ ಕೆಳಮನೆ ಮತ್ತು ಹೌಸ್ ಆಫ್ ಲಾರ್ಡ್ಸ್ ಎಂಬ ಗಣ್ಯರ ಮೇಲ್ಮನೆಯನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಚುನಾವಣೆಗೆ ಸೀಮಿತ ಅವಕಾಶಗಳಿದ್ದರೂ ಸಂಕೀರ್ಣ ಚುನಾವಣಾ ಪ್ರಕ್ರಿಯೆಯನ್ನು ಬ್ರಿಟನ್ ಅನುಸರಿಸುತ್ತಿದೆ. ಸ್ಕಾಟಿಷ್ ಪಾರ್ಲಿಮೆಂಟ್, ವೇಲ್ಸ್ ಸೆನೆಟ್, ಉತ್ತರ ಐರ್ಲ್ಯಾಂಡಿನ ಶಾಸನ ಸಭೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಜರುಗುವ ಚುನಾವಣೆಗಳು ಪ್ರಸ್ತುತ ಬ್ರಿಟಿಷ್ ಚುನಾವಣಾ ಪ್ರಕ್ರಿಯೆಯನ್ನು ವೈವಿಧ್ಯಮಯಗೊಳಿಸಿವೆ. ಬ್ರಿಟನ್ನಿನ ಚುನಾವಣಾ ಪ್ರಕ್ರಿಯೆಯನ್ನು ಈ ಕೆಳಗಿನ ವಿವರಣೆಯಿಂದ ಸಂಕ್ಷೇಪ್ತವಾಗಿ ಅರ್ಥೈಸಿಕೊಳ್ಳಲು ಪ್ರಯತ್ನಿಸೋಣ.

18 ವರ್ಷ ಪೂರೈಸಿದ ಬ್ರಿಟಿಷ್ ಪ್ರಜೆಗಳು ಮತ್ತು 15 ವರ್ಷದಿಂದ ಬ್ರಿಟನ್ನಿನಲ್ಲಿಯೇ ನೆಲೆಸಿರುವ ಕಾಮನ್ವೆಲ್ತ್ ರಾಷ್ಟ್ರಗಳ ವಯಸ್ಕ ಪ್ರಜೆಗಳು ಬ್ರಿಟನ್ನಿನಲ್ಲಿ ಮತದಾನದ ಹಕ್ಕು ಪಡೆದಿರುತ್ತಾರೆ. ಮತದಾನದಂದು ಬೆಳಗ್ಗೆ 7 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಮತದಾರರು ಮತ ನೀಡಲು ಅವಕಾಶವಿರುತ್ತದೆ. ಗಮನಾರ್ಹ ಅಂಶವೇನೆಂದರೆ 18 ವರ್ಷಗಳನ್ನು ಪೂರೈಸಿದ್ದರೂ ಅಪರಾಧಿಗಳು, ಮತಿ ವಿಕಲರು, ದಿವಾಳಿಗಳು ಮತದಾನಕ್ಕೆ ಅನರ್ಹರಾಗಿರುತ್ತಾರೆ. ಆಸಕ್ತಿದಾಯಕ ಅಂಶವೇನೆಂದರೆ 1970 ರವರೆಗೆ ಬ್ರಿಟನ್ನಿನಲ್ಲಿಯೂ ಮತದಾನದ ವಯೋಮಿತಿ 21 ವರ್ಷಗಳಾಗಿದ್ದು ಪ್ರಸ್ತುತ 18 ಕ್ಕೆ ನಿಗಧಿಪಡಿಸಲಾಗಿದೆ.

ಬ್ರಿಟಿಷ್ ಸಂಸತ್ತಿನ ಕೆಳಮನೆಯಾದ ಹೌಸ್ ಆಫ್ ಕಾಮನ್ಸ್‌ಗೆ ನಿಗಧಿಪಡಿಸಲಾದ ಸ್ಥಾನಗಳಷ್ಟು ಅಂದರೆ 650 ರಷ್ಟು ಸಂಖ್ಯೆಯ ಭೌಗೋಳಿಕ ತಳಹದಿಯ ಮತಕ್ಷೇತ್ರಗಳಾಗಿ



ಯುನೈಟೆಡ್ ಕಿಂಗ್‌ಡಮ್ ವಿಂಗಡಿಸಲ್ಪಡುತ್ತದೆ. ಪ್ರತಿ ಜನಗಣತಿಯ ಬಳಿಕ ಪ್ರತಿಯೊಂದು ಮತಕ್ಷೇತ್ರವೂ ಸಮಾನ ಪ್ರಾತಿನಿಧ್ಯ ಹೊಂದುವಂತಾಗಲು ಮತಕ್ಷೇತ್ರಗಳ ಗಡಿಗಳನ್ನು ಪುನರ್‌ರಚಿಸಲಾಗುತ್ತದೆ. ಈ ಮತಕ್ಷೇತ್ರಗಳು ಏಕ ಸದಸ್ಯ ಮತಕ್ಷೇತ್ರವಾಗಿದ್ದು ಒಬ್ಬನೇ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳಲು ಆಯಾ ಮತಕ್ಷೇತ್ರದ ಮತದಾರರಿಗೆ ಸಾಧ್ಯವಿರುತ್ತದೆ. ಆಯಾ ಮತಕ್ಷೇತ್ರಕ್ಕೆ ಸೇರಿದ ವಯಸ್ಕರರು ಅಂದರೆ 18 ವರ್ಷಗಳ ವಯೋಮಿತಿಯನ್ನು ಪೂರೈಸಿದ ಸ್ತ್ರೀ ಮತ್ತು ಪುರುಷರು ಮತ ನೀಡಿ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿಕೊಳ್ಳುತ್ತಾರೆ. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯಡಿ ಮತದಾನದ ಹಕ್ಕನ್ನು ಪಡೆದ ಆಯಾ ಮತಕ್ಷೇತ್ರದ ಸ್ತ್ರೀ ಮತ್ತು ಪುರುಷ ಮತದಾರರು ಚಲಾಯಿಸಿದ ಒಟ್ಟು ಮತಗಳಲ್ಲಿ ಹೆಚ್ಚು ಮತಗಳಿಸಿದವರು ಆ ಕ್ಷೇತ್ರದ ಸಾಮಾನ್ಯರ ಸಭೆಯ ಪ್ರತಿನಿಧಿಯಾಗಿ ಆಯ್ಕೆಗೊಳ್ಳುತ್ತಾರೆ. ಈ ಬಗೆಯ ಚುನಾವಣಾ ವ್ಯವಸ್ಥೆಯನ್ನು ಫಸ್ಟ್ ಪಾಸ್ಟ್ ದಿ ಪೋಸ್ಟ್ ಸಿಸ್ಟಂ ಎನ್ನಲಾಗುತ್ತದೆ.

ಬ್ರಿಟಿಷ್ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನಕ್ಕೆ ಅನರ್ಹರಾದವರು ಹೌಸ್ ಆಫ್ ಕಾಮನ್ಸ್‌ನ ಸದಸ್ಯತ್ವಕ್ಕೆ ಸ್ಪರ್ಧಿಸಲು ಅನರ್ಹರಾಗಿರುತ್ತಾರೆ. ಮುಂದುವರಿದು ಇಂಗ್ಲೆಂಡ್, ವೇಲ್ಸ್, ಸ್ಕಾಟ್‌ಲ್ಯಾಂಡಿನ ಪೀರರು ಈ ಸದನದ ಸದಸ್ಯತ್ವಕ್ಕೆ ಅನರ್ಹರು. ಜೊತೆಗೆ ಸರ್ಕಾರದೊಡನೆ ಒಪ್ಪಂದ ಮಾಡಿಕೊಂಡವರು, ವಿವಿಧ ಚರ್ಚಿನ ಮುಖ್ಯಸ್ಥರು ಮತ್ತು ಅರಸನ ಅಧೀನದ ಸಾರ್ವಜನಿಕ ಹುದ್ದೆಯಲ್ಲಿರುವವರು ಹೌಸ್ ಆಫ್ ಕಾಮನ್ಸ್‌ನ ಸದಸ್ಯತ್ವಕ್ಕೆ ಅನರ್ಹರು. ಇಲ್ಲಿ ಪ್ರಸ್ತಾಪಿತ ಅನರ್ಹತೆ ಹೊಂದಿರದ ಬ್ರಿಟಿಷ್ ಪ್ರಜೆಗಳು ಮಾತ್ರವೇ ಹೌಸ್ ಆಫ್ ಕಾಮನ್ಸ್‌ನ ಸದಸ್ಯತ್ವ ಹೊಂದಲು ಅರ್ಹರಾಗಿರುತ್ತಾರೆ.

ಗಮನಾರ್ಹ ಅಂಶವೇನೆಂದರೆ, ಬ್ರಿಟಿಷ್ ಚುನಾವಣಾ ಪ್ರಕ್ರಿಯೆಯು ಹೌಸ್ ಆಫ್ ಕಾಮನ್ಸ್ ಸದನದ ಚುನಾವಣೆಗಳನ್ನು ಮಾತ್ರವಲ್ಲದೇ ಸ್ಥಳೀಯ ಸರ್ಕಾರಗಳ ಚುನಾವಣೆ ಸೇರಿದಂತೆ ಯುರೋಪಿಯನ್ ಪಾರ್ಲಿಮೆಂಟಿನ ಚುನಾವಣೆಗಳವರೆಗೆ ವ್ಯಾಪಿಸಿದೆ. ಬ್ರಿಟನ್ನಿನಲ್ಲಿ ಫಸ್ಟ್ ಪಾಸ್ಟ್ ದಿ ಪೋಸ್ಟ್ ಸಿಸ್ಟಂ ಸೇರಿದಂತೆ ವಿವಿಧ ಚುನಾವಣೆಗಳ ವೇಳೆ ಆಲ್ಟರ್ನೇಟಿವ್ ವೋಟಿಂಗ್, ಪ್ರಿಪರೆನ್ಷಿಯಲ್ ವೋಟಿಂಗ್, ಸಿಂಗಲ್ ಟ್ರಾನ್ಸ್‌ಫರಬಲ್ ವೋಟಿಂಗ್ ಎಂಬ ಭಿನ್ನ ಮತದಾನ ಪದ್ಧತಿಯನ್ನು ಅನುಸರಿಸಲಾಗುತ್ತಿದೆ.

## [III.] ಚೀನಾದಲ್ಲಿನ ಚುನಾವಣಾ ಪ್ರಕ್ರಿಯೆ [Election Process in China]:

ಚೀನಾವು ತನ್ನನ್ನು ಚೀನಾದ ಜನತಾ ಗಣರಾಜ್ಯವೆಂದು ಕರೆದುಕೊಂಡಿದೆ. ಫಲವಾಗಿ ಪ್ರಜಾಸತ್ತಾತ್ಮಕ ತತ್ವಗಳು ಸಹಜವಾಗಿ ಚೀನಾದಲ್ಲಿ ಕಂಡು ಬರುತ್ತವೆ. ಆದರೆ, ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷದ ಏಕಸ್ವಾಮ್ಯದ ಪರಿಣಾಮ ಪ್ರಜಾಸತ್ತಾತ್ಮಕ ಕೇಂದ್ರೀಕರಣ ಚೀನಾವು ಅಸ್ತಿತ್ವದಲ್ಲಿದ್ದು ಚುನಾವಣಾ ಪ್ರಕ್ರಿಯೆಯು ವಿಭಿನ್ನತೆ ತಾಳುವಂತಾಗಿದೆ.

ಏಕೀಕೃತ ಹಾಗೂ ಶ್ರೇಣಾತ್ಮಕ ಸ್ವರೂಪದ ಆಡಳಿತ ಘಟಕಗಳನ್ನು ಹೊಂದಿದ್ದು ಆಯಾ ಘಟಕಗಳ ಮಟ್ಟದಲ್ಲಿ ರಾಜಕೀಯ ಹುದ್ದೆಗಳನ್ನು ಸೃಷ್ಟಿಸಿಕೊಂಡಿದೆ. ರಾಷ್ಟ್ರ ಮಟ್ಟದಲ್ಲಿ ರಾಷ್ಟ್ರೀಯ ಜನತಾ ಕಾಂಗ್ರೆಸ್, ಪ್ರಾಂತ್ಯ ಮಟ್ಟದಲ್ಲಿ ಪ್ರಾಂತೀಯ ಜನತಾ ಕಾಂಗ್ರೆಸ್, ಪ್ರಾಂತ್ಯಗಳ ಅಧೀನದಲ್ಲಿ ಮುನಿಸಿಪಲ್ ಜನತಾ ಕಾಂಗ್ರೆಸ್, ಕೌಂಟಿ ಅಂದರೆ ಜಿಲ್ಲಾ ಮಟ್ಟದಲ್ಲಿ ಕೌಂಟಿ ಜನತಾ ಕಾಂಗ್ರೆಸ್ ಹಾಗೂ ಪಟ್ಟಣಗಳ ಮಟ್ಟದಲ್ಲಿ ಟೌನ್ ಜನತಾ ಕಾಂಗ್ರೆಸ್ ಎಂಬ ಐದು ಹಂತದ ರಾಜಕೀಯ ಸಂಘಟನೆ ಚೀನಾದಲ್ಲಿ ಜಾರಿಯಲ್ಲಿದೆ. ಈ ಐದು ಹಂತದ ಪ್ರಾತಿನಿಧಿಕ ಸಂಸ್ಥೆಗಳಿಗೂ ಚೀನಾದಲ್ಲಿ ಚುನಾವಣೆ ಜರುಗುತ್ತವೆ.

ಚೀನಾದ ಶಾಸಕಾಂಗವಾಗಿರುವ ರಾಷ್ಟ್ರೀಯ ಜನತಾ ಕಾಂಗ್ರೇಸ್‌ನ ಚುನಾವಣೆ ಕುರಿತಂತೆ ಅದರ ಸಂವಿಧಾನ ಮೌನವಾಗಿದೆ. ಕಾಲಕಾಲಕ್ಕೆ ಅಸ್ತಿತ್ವದಲ್ಲಿರುವ ಕಾನೂನಿನಂತೆ ಚೀನಾದಲ್ಲಿ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಸದಸ್ಯರ ಅಂದರೆ ಡೆಪ್ಯುಟಿಗಳ ಚುನಾವಣೆ ಜರುಗುತ್ತದೆ. ಕೇಂದ್ರ ಸರ್ಕಾರ ಹಾಗೂ ಮಿಲಿಟರಿ ಪಡೆಗಳ ನೆರವಿನಿಂದ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಸ್ಥಾಯಿ ಸಮಿತಿಯು ಚುನಾವಣೆಗಳನ್ನು ಆಯೋಜಿಸುತ್ತದೆ. ಈ ವೇಳೆಯಲ್ಲಿ ಚೀನಾದ ವಿವಿಧ ಪ್ರಾಂತ್ಯಗಳು, ಸ್ವಾಯತ್ತ ಪ್ರದೇಶಗಳು ಮತ್ತು ನಗರಪಾಲಿಕೆಗಳಿಂದ ಡೆಪ್ಯುಟಿಗಳು ಆಯ್ಕೆಗೊಳ್ಳುವಂತೆ ಕ್ರಮ ಕೈಗೊಳ್ಳಲಾಗುತ್ತದೆ. ಜೊತೆಗೆ ಅಲ್ಪಸಂಖ್ಯಾತ ಸಮುದಾಯಗಳಿಗೆ ಪ್ರಾತಿನಿಧ್ಯ ದೊರಕುವಂತೆ ಗಮನ ಹರಿಸಲಾಗಿರುತ್ತದೆ. ಗಮನಾರ್ಹ ಅಂಶವೇನೆಂದರೆ, ಅಮೇರಿಕಾ ಮತ್ತು ಭಾರತದಲ್ಲಿ ಕಂಡು ಬರುವಂತೆ ಚುನಾವಣೆಯಲ್ಲಿ ರಣೋತ್ಸಾಹ ಕಂಡುಬಾರದೇ ನೀರಸ ವಾತಾವರಣದಲ್ಲಿ ಚೀನಾದ ಚುನಾವಣೆಗಳು ಜರುಗುತ್ತವೆ.

18 ವರ್ಷಗಳ ವಯೋಮಿತಿ ಪೂರೈಸಿದ ಪ್ರತಿಯೊಬ್ಬ ಚೀನಾದ ಪ್ರಜೆ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಪಡೆದಿರುತ್ತಾನೆ. ಯಾವುದೇ ಜಾತಿ, ಲಿಂಗ, ಧರ್ಮ, ಜನಾಂಗ, ಸ್ಥಾನಮಾನಗಳ ಆಧಾರದ ಮೇಲೆ ತಾರತಮ್ಯವನ್ನು ತೋರದೇ ಈ ರಾಜಕೀಯ ಹಕ್ಕನ್ನು ಕಾನೂನಿನನ್ವಯ ಸರ್ವರಿಗೂ ನೀಡಲಾಗಿದೆ. ಏಕ ವ್ಯಕ್ತಿ ಏಕ ಮತ ತತ್ವವನ್ನು ಚೀನಾ ಪಾಲಿಸುತ್ತಿದೆ. ಗಮನಾರ್ಹ ಅಂಶವೇನೆಂದರೆ, ಮತದಾರ ಸ್ಪರ್ಧಾಳುವಿನ ಪರವಾಗಿ ಅಥವಾ ವಿರುದ್ಧವಾಗಿ ಮತ ಚಲಾಯಿಸಲು ಅವಕಾಶ ಪಡೆದಿರುತ್ತಾನೆ. ಜೊತೆಗೆ ಒಟ್ಟು ಮತಗಳಲ್ಲಿ ಅರ್ಧದಷ್ಟು ಮತದಾನವಾದಲ್ಲಿ ಮಾತ್ರ ಚುನಾವಣೆಯನ್ನು ಚೀನಾದಲ್ಲಿ ಮಾನ್ಯ ಮಾಡಲಾಗುತ್ತದೆ. ಅಂತೆಯೇ ಇತರ ಸ್ಪರ್ಧಾಳುಗಳಿಗಿಂತ ಅಧಿಕ ಮತಗಳನ್ನು ಪಡೆದ ವ್ಯಕ್ತಿಯನ್ನು ಜಯಶಾಲಿ ಎಂದು ಘೋಷಿಸಲಾಗುತ್ತದೆ. ಚುನಾವಣೆಯ ವೆಚ್ಚವನ್ನು ಚೀನಾದಲ್ಲಿ ಸರ್ಕಾರದ ಬೊಕ್ಕಸದಿಂದಲೇ ಸ್ಪರ್ಧಾಳುಗಳಿಗೆ ನೀಡಲಾಗುತ್ತದೆ.

ಚೀನಾದ ಮತದಾರರು ಮೇಲೆ ಪ್ರಸ್ತಾಪಿಸಲಾದ ಐದು ಹಂತದ ಹುದ್ದೆಗಳ



ಬದಲು ಕೊನೆಯ ಎರಡು ಹಂತಗಳಾದ ಟೌನ್ ಜನತಾ ಕಾಂಗ್ರೇಸ್ ಮತ್ತು ಕೌಂಟಿ ಜನತಾ ಕಾಂಗ್ರೇಸ್‌ನ ಸದಸ್ಯರನ್ನು ಅಥವಾ ಡೆಪ್ಯುಟಿಗಳನ್ನು ಮಾತ್ರ ಚುನಾಯಿಸುತ್ತಾರೆ. ಉಳಿದಂತೆ ನಾಲ್ಕನೇ ಹಂತದ ಕೌಂಟಿ ಜನತಾ ಕಾಂಗ್ರೇಸ್‌ನ ಡೆಪ್ಯುಟಿಗಳು ಮುನಿಸಿಪಲ್ ಜನತಾ ಕಾಂಗ್ರೇಸ್‌ನ ಡೆಪ್ಯುಟಿಗಳನ್ನು, ಮುನಿಸಿಪಲ್ ಜನತಾ ಕಾಂಗ್ರೆಸ್‌ನ ಡೆಪ್ಯುಟಿಗಳು ಮತ ಚಲಾಯಿಸಿ ಪ್ರಾಂತೀಯ ಜನತಾ ಕಾಂಗ್ರೇಸ್‌ನ ಡೆಪ್ಯುಟಿಗಳನ್ನು ಮತ್ತು ಪ್ರಾಂತೀಯ ಜನತಾ ಕಾಂಗ್ರೇಸ್‌ನ ಡೆಪ್ಯುಟಿಗಳು ಮತ ಚಲಾಯಿಸಿ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಡೆಪ್ಯುಟಿಗಳನ್ನು ಚುನಾಯಿಸುತ್ತಾರೆ. ಆಸಕ್ತಿದಾಯಕ ಅಂಶವೇನೆಂದರೆ, ಕೊನೆಯ ಎರಡು ಹಂತದ ಅಂದರೆ ಜನರಿಂದ ಆಯ್ಕೆಗೊಳ್ಳುವ ಟೌನ್ ಮತ್ತು ಕೌಂಟಿ ಜನತಾ ಕಾಂಗ್ರೆಸ್‌ನ ಡೆಪ್ಯುಟಿಗಳು ತಮ್ಮ ಅಧ್ಯಕ್ಷರನ್ನೂ ಚುನಾಯಿಸಿಕೊಳ್ಳಬಹುದಾಗಿದೆ. ಉಳಿದ ಮೂರು ಉನ್ನತ ಹಂತದ ಪೈಕಿ ಮುನಿಸಿಪಲ್ ಹಾಗೂ ಪ್ರಾಂತೀಯ ಜನತಾ ಕಾಂಗ್ರೆಸ್‌ನ ಅಧ್ಯಕ್ಷರನ್ನು ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಡೆಪ್ಯುಟಿಗಳೇ ಚುನಾಯಿಸುತ್ತಾರೆ. ಜೊತೆಗೆ ರಾಷ್ಟ್ರೀಯ ಜನತಾ ಕಾಂಗ್ರೇಸ್ ತನ್ನ ಅಧ್ಯಕ್ಷನನ್ನು ತನ್ನ ಡೆಪ್ಯುಟಿಗಳಿಂದಲೇ ಚುನಾಯಿಸಿಕೊಳ್ಳುತ್ತದೆ. ಹೀಗೆ ಚೀನಾದಲ್ಲಿ ಐದು ಹಂತದ ರಾಜಕೀಯ ಹುದ್ದೆಗಳಲ್ಲಿ ಕೊನೆಯ ಎರಡು ಹಂತದಲ್ಲಿ ಮಾತ್ರ ಜನರಿಂದ ನೇರ ಚುನಾವಣೆ ಜರುಗಿದರೆ ಉಳಿದ ಮೂರು ಉನ್ನತ ಹಂತಗಳ ಹುದ್ದೆಗೆ ಪರೋಕ್ಷ ಚುನಾವಣೆಗಳು ಜರುಗುತ್ತವೆ.

ಒಟ್ಟಾರೆ ಜನತಾ ಗಣರಾಜ್ಯವೆನಿಸಿರುವ ಚೀನಾದಲ್ಲಿ ಪ್ರಜಾಸತ್ತಾತ್ಮಕ ಮೂಲಾಂಶವಾದ ಚುನಾವಣಾ ಪ್ರಕ್ರಿಯೆ ಜಾರಿಯಲ್ಲಿರುವುದು ಸುಸ್ಪಷ್ಟ. ಆದರೆ, ಸ್ಪರ್ಧಾಳು ಚೀನಾದ ಕಮ್ಯುನಿಸ್ಟ್ ಪಕ್ಷದ ಸಮ್ಮತಿಯೊಡನೆ ಸ್ಪರ್ಧಿಸಬೇಕೆಂಬ ನಿಯಮ, ಎಲ್ಲ ಹುದ್ದೆಗಳಿಗೆ ಮತದಾನದ ಅವಕಾಶವಿಲ್ಲದಿರುವುದು, ಅಧ್ಯಕ್ಷನ ನೇಮಕದಲ್ಲಿ ಪ್ರಭಾವಶಾಲಿ ಪಾತ್ರ ನಿರ್ವಹಿಸಲು ಜನತಾ ಪ್ರತಿನಿಧಿಗಳಿಗೆ ಆಸ್ಪದವಿಲ್ಲದಿರುವುದು ಚೀನಾದ ಚುನಾವಣಾ ಪ್ರಕ್ರಿಯೆಯ ಮಿತಿಗಳೆನಿಸಿವೆ. ಆಶಾದಾಯಕ ಅಂಶವೇನೆಂದರೆ, ಕಳೆದೆರಡು ದಶಕಗಳಿಂದ ಚೀನಾವು ಗ್ರಾಮೀಣ ಹಂತದಲ್ಲಿ ಸುಧಾರಣೆ ಜಾರಿಗೊಳಿಸಲು ಪ್ರಯತ್ನಿಸುತ್ತಿದೆ.

## ಮಾದರಿ ಪ್ರಶ್ನೆಗಳು [Model Questions]:

[A.] ಎರಡು ಅಂಕದ ಪ್ರಶ್ನೆಗಳು:

1. ಚುನಾವಣೆಯ ಮೂರು ಪ್ರಯೋಜನಗಳನ್ನು ಬರೆಯಿರಿ.
2. ಅಮೇರಿಕಾದಲ್ಲಿ ಎಲೆಕ್ಟೋರಲ್ ಕಾಲೇಜನ್ನು ಯಾರು ಮತ್ತು ಏಕೆ ಚುನಾಯಿಸುತ್ತಾರೆ?
3. ಅಮೇರಿಕಾದ ಸೆನೆಟ್‌ನ ಸದಸ್ಯರ ಚುನಾವಣೆಯಲ್ಲಾದ ಬದಲಾವಣೆಯನ್ನು ತಿಳಿಸಿರಿ.
4. ಬ್ರಿಟನ್ನಿನಲ್ಲಿ ಯಾರು ಮತದಾನಕ್ಕೆ ಅರ್ಹರಾಗಿರುತ್ತಾರೆ?

5. ಫಸ್ಟ್ ಪಾಸ್ಟ್ ದಿ ಪೋಸ್ಟ್ ಸಿಸ್ಟಂ ಎಂದರೇನು? ಅದನ್ನು ಎಲ್ಲಿ ಕಾಣಬಹುದು?
6. ಬ್ರಿಟನ್ನಿನಲ್ಲಿರುವ ವಿವಿಧ ಮತದಾನ ಪದ್ಧತಿಗಳನ್ನು ಹೆಸರಿಸಿರಿ.
7. ಹೌಸ್ ಆಫ್ ಕಾಮನ್ಸ್‌ನ ಚುನಾವಣೆಗೆ ಸ್ಪರ್ಧಿಸಲು ಯಾರು ಅನರ್ಹರಾಗಿರುತ್ತಾರೆ?
8. ಚೀನಾದಲ್ಲಿ ಚುನಾವಣೆ ಜರುಗುವ ಐದು ಪ್ರಾತಿನಿಧಿಕ ಸಂಸ್ಥೆಗಳನ್ನು ಹೆಸರಿಸಿರಿ.
9. ಚೀನಾದ ಪ್ರಜೆಗಳು ಮತ ಚಲಾಯಿಸುವ ಎರಡು ಆಡಳಿತಾತ್ಮಕ ಸಂಸ್ಥೆಗಳನ್ನು ಹೆಸರಿಸಿರಿ.
10. ಚೀನಾದ ಚುನಾವಣಾ ಪ್ರಕ್ರಿಯೆಯ ಎರಡು ದೋಷಗಳನ್ನು ಬರೆಯಿರಿ.

[B.] ಐದು ಅಂಕದ ಪ್ರಶ್ನೆಗಳು:

1. ಅಮೇರಿಕಾದ ಅಧ್ಯಕ್ಷೀಯ ಚುನಾವಣಾ ಪ್ರಕ್ರಿಯೆ ಕುರಿತು ಟಿಪ್ಪಣಿ ಬರೆಯಿರಿ.
2. ಬ್ರಿಟಿಷ್ ಚುನಾವಣಾ ಪ್ರಕ್ರಿಯೆಯನ್ನು ವಿವರಿಸಿರಿ.
3. ಚೀನಾದ ಚುನಾವಣಾ ಪ್ರಕ್ರಿಯೆಯ ವಿಶೇಷತೆಗಳನ್ನು ಪಟ್ಟಿ ಮಾಡಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಅಮೇರಿಕಾದ ಕಾಂಗ್ರೆಸ್‌ನ ಚುನಾವಣಾ ಪ್ರಕ್ರಿಯೆಯನ್ನು ವಿವರಿಸಿರಿ.
2. ಚೀನಾದ ಜನತಾ ಗಣರಾಜ್ಯದ ಚುನಾವಣಾ ಪ್ರಕ್ರಿಯೆಯನ್ನು ಚರ್ಚಿಸಿರಿ.



## ಗ್ರಂಥ ಋಣ


1. Ghai K. K., Theory and Practice of International Politics, Ludhiana - New Delhi: Kalyani Publishers, 2013.
2. Ghosh Peu, International Relations, Delhi: Phi Learning Private Limited, 2020.
3. Pushpesh Pant, International Relations in the 21st Century, New Delhi: Tata McGraw Hill Education Private Limited 2011.
4. Dr. Krishnaveni Muthiah, International Relations, Munbai: Himalaya Publishing House, 2001.
5. Khanna V. N., International Relations, New Delhi: Vikas Publishing House, 2001.
6. Prakash Chander and Prem Arora, International Relations and Comparative Politics, Gurgaon, Cosmos Bookhive Private Limited, 2005.
7. Narang A.S., Comparative Government and Politics, New Delhi: Gitanjali Publishing House, 1999.
8. Anup Chand Kapur and Misra K. K., Select Constitutions, New Delhi: S. Chand & Company Ltd, 2001.
9. Khanna V., Comparative Study of Government and Politics, New Delhi: R. Chand & Co. Publishers, 1999.
10. Vidya Bhushan, Comparative Politics, New Delhi: atlantic Publishers, 2019.
11. Vishnoo Bhagwan and Vidya Bhushan, World Constitutions, New Delhi: Sterling Publishers Private Limited, 1998.